ಸಂಪುಟ ೮
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

೧೯೭೬

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೩

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೮   ಸಂಚಿಕೆ : ೩

ಜನವರಿ ೧೯೭೬

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸೋಮಶೇಖರ ಆಕಳವಾಡಿ

ಮನೋಹರ ಮುದ್ರಣಾಲಯ, ಧಾರವಾಡ

ಪರಿವಿಡಿ

ಅಖಿಲ ಕರ್ನಾಟಕ ತೃತೀಯ ಜಾನಪದ ಸಮ್ಮೇಲನ



ಅಧ್ಯಕ್ಷೀಯ ಭಾಷಣ

ಕುಲಪತಿ ಡಾ. ಆರ್. ಸಿ. ಹಿರೇಮಠ, ಡಾ. ದೇ. ಜವರೇಗೌಡ, ಡಾ. ಎಂ. ಎಸ್. ಸುಂಕಾಪುರ



ಪ್ರೇಕ್ಷಕರ ಒತ್ತಾಯಕ್ಕೆ ಮಣಿದು, ಜಾನಪದ ವೇಷದಲ್ಲಿ

ಸ್ವಾಗತಾಧ್ಯಕ್ಷ : ಡಾ. ಎಂ. ಎಸ್. ಸುಂಕಾಪುರ, ಕುಲಪತಿ : ಆರ್. ಸಿ. ಹಿರೇಮಠ, ಸಮ್ಮೇಲನಾಧ್ಯಕ್ಷ : ಡಾ. ದೇ. ಜವರೇಗೌಡ

ಎಲೆ ಬದುಕೆ

ಬಿ. ಎಂ. ರಮೇಶ್

ನೀನಿಲ್ಲದ ನನ್ನ ಕೃತಕ ಇರವಿಗೆ
ವಿವೇಚನೆಯ ಗರಿಗಟ್ಟಿ
ಸಹಿಸಿಕೊಳ್ಳುತ್ತೇನೆ–
ಉಳಿಡುವ ಖಾಲಿತನವ.
ನಿನ್ನ ಮೇಲೆ ಕಾವು ಕೂತು ನಿನ್ನ ಬರುವಿನ
ಕ್ಷಣಕ್ಕೆ ಕಾತರಿಸಿದಷ್ಟೂ ಮಿಸುಕಾಡದ
ನಿನ್ನ ಪರಿಗೆ ಸೋತಿಲ್ಲ– ಅಂಟಿಕೊಂಡೇ ಇದ್ದೇನೆ.
ಪಾಚುಗಟ್ಟಿದ ಹಗಲು ಇರುಳಲ್ಲಿ ನಿನ್ನ ಅಪ್ಪುಗೆಯಲ್ಲಿ
ಬೆಚ್ಚಗಾದೇನೆಂಬ ಬಿಸಿಖುಷಿಯಲ್ಲಿ
ಕಣ್ಣಲ್ಲಿ ಮಣ್ಣೆರಚಿಕೊಂಡು ಕಾಯುತ್ತಿದ್ದೇನೆ
ಆಹ, ನಿನ್ನೊಂದಿಗೆ ಬಂದೀತು
ಸ್ವಂತಿಕೆಯ ಇರುವು. ಕನಸಿಗೆ ನನಸಿನ ನೆಲೆ
ಅಮೂರ್ತಕ್ಕೆ ಮೂರ್ತರೂಪ
–ಎಂದು
ಅತ್ತ ಸಾಯದೆ
ಇತ್ತ ಬದುಕದೆ
ಇದ್ದೇನೆ.

ಭೈರಪ್ಪನವರ ಕಾದಂಬರಿಗಳಲ್ಲಿ ಪ್ರಕೃತಿ ಪ್ರತೀಕ

ಮಹದೇವ ಕಣವಿ

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗೂ ಕಣ್ಣಾಗಿ ಒಳಗಿಹುದು.
—ಬೇಂದ್ರೆ

ಸೌಂದರ್ಯಕ್ಕೆ ಇರುವ ಎರಡು ಮುಖಗಳನ್ನು ಬೇಂದ್ರೆಯವರ ಹೇಳಿಕೆಯು ಸೂಚಿಸುತ್ತದೆ. ಸೌಂದರ್ಯ, ಮನಸ್ಸಿನ ವ್ಯಾಪಾರವೆಂಬುದನ್ನು ಒಪ್ಪಿಕೊಂಡರೂ ಅದಕ್ಕೆ ಬಾಹ್ಯಪ್ರಕೃತಿಯೇ ಪ್ರೇರಕವೆನ್ನುವುದೂ ಅಷ್ಟೇ ಸತ್ಯ. ಸೌಂದರ್ಯವೆಂದರೇನು ಎಂಬ ಪ್ರಶ್ನೆಗೆ ಉತ್ತರ ಸರಿಯಾಗಿಲ್ಲ. ಒಟ್ಟಾರೆ ಯಾವುದು ಆನಂದದಾಯಕವೋ ಅದೆಲ್ಲ ಸುಂದರವಾದುದೆಂದು ಒಪ್ಪಿಕೊಳ್ಳುತ್ತಾರೆ.

ಮಹಾಕವಿ ವಾಲ್ಮೀಕಿಯಿಂದ ಇಂದಿನವರೆಗೂ ಪ್ರಕೃತಿಯನ್ನು ಉಪಾಸಿಸದ, ಪ್ರೇರಣೆ ಪಡೆಯದ ಕವಿಯಿಲ್ಲ, ಬರೆಯದ ಸಾಹಿತಿಯಿಲ್ಲ. ಅವಳ ಅನಂತ ವಿನ್ಯಾಸಗಳನ್ನು ಯಾವ ಕಣ್ಣಿನಿಂದಲೂ ದೃಷ್ಟಿಕೋನದಿಂದಲೂ ನೋಡಿದರೂ ಅಷ್ಟೇ. ಉಪನಿಷತ್ತಿನ ಕಾಲದ ಋಷಿಗಳು ಪ್ರಕೃತಿಯನ್ನು ಆರಾಧಿಸಿದರು. ದೇಶ–ಕಾಲಗಳ ಪರಿಧಿಯನ್ನು ಮೀರಿಯೂ ಈ ಉಪಾಸನೆ ಇಂದಿಗೂ ಇದೆ. ಭೈರಪ್ಪನವರ ಕಾದಂಬರಿಗಳಲ್ಲಿ ಬರುವ ಪ್ರಕೃತಿಯನ್ನು ಕುರಿತ ವಿವೇಚನೆ, ಈ ಪ್ರಬಂಧದ ಉದ್ದೇಶ.

"ನಿಸರ್ಗವೆಂದರೆ ಮಾನವನಲ್ಲಿಯೇ ಹುಟ್ಟಿ ಬೆರೆತು ಬೆಳೆದ ಹಲವಾರು ಆಸೆ ಆಕಾಂಕ್ಷೆಗಳ ಪ್ರೇರಕಶಕ್ತಿಯೆಂದೂ ಆಗಬಹುದು. ಮಾನವನಿಂದ ಹೊರತಾಗಿದ್ದೂ ಪ್ರಕೃತಿಯಾಗಬಹುದು" ಎಂದು ಎಸ್. ಅನಂತನಾರಾಯಣರು ಕೊಡುವ ವಿವರಣೆಯು ಮನುಷ್ಯ ಪ್ರಕೃತಿಗೆ ಇರುವ ಅವಿಭಾಜ್ಯ ಸಂಬಂಧವನ್ನು ಸೂಚಿಸುತ್ತದೆ. ನಿಸರ್ಗ, ಆತನಿಗೆ ಪೋಷಣೆಯನ್ನು ನೀಡುತ್ತದೆ. ಅದೇ ಮಣ್ಣಿನ ಅಂಶವಾದುದರಿಂದ ವಾಸನಾತ್ಮಕವಾದ ಲೈಂಗಿಕಪ್ರವೃತ್ತಿ, ಪ್ರೀತಿಯ ವಿವಿಧ ಸ್ತರಗಳು, ಸಂತೋಷ-ಅಸಂತೋಷಗಳು ಒಳ್ಳೆಯ ಗುಣಕ್ಕಾಗಿ ನಮ್ಮನ್ನೇ ಮಾರುಗೊಡುವುದು ಮುಂತಾದ ಅನಿಸಿಕೆಗಳು ಅನಿವಾರ್ಯವೆಂದೇ ಹೇಳಬೇಕು.

ಪ್ರಕೃತಿಯೊಡನೆ ಒಂದಾಗುವ ಸಾಹಿತಿಗಳಲ್ಲಿ ಒಬ್ಬರು ಕುವೆಂಪು. ಇನ್ನೊಬ್ಬರು

ಕಾರಂತರು. ಪುಟ್ಟಪ್ಪನವರು ಮಲೆನಾಡಿನ ಮಗ. ಪ್ರಧಾನವಾಗಿ ಅವರೊಬ್ಬ ಪ್ರಕೃತಿ ಕವಿ. ನಿಸರ್ಗದಲ್ಲಿ ಲೀನವಾಗಿ ರೋಮಾಂಚನಗೊಂಡು ತನ್ಮಯತೆಯನ್ನು ಪಡೆಯುವ ಶುದ್ಧ ಸೌಂದರ್ಯೋಪಾಸಕರು. ಅವಳ ಸೌಮ್ಯಶ್ರೀ ಹಾಗೂ ರೌದ್ರತೆಯ ಎರಡೂ ರೂಪಗಳನ್ನವರು ಸೆರೆಹಿಡಿದಿದ್ದಾರೆ. ಅವರ ಸೌಂದರ್ಯೋಪಾಸನೆಯು ಶಿವಮಯವೂ ಹೌದು, ಇಲ್ಲವಾದರೆ ಅದು ಶವದ ಮುಖವಾದೀತು ಎನ್ನುತ್ತಾರೆ. ಸತ್ಯ-ಶಿವಗಳ ಸಾಕಾರಕ್ಕೆ ಅದು ಪ್ರತೀಕ.

ಕಾದಂಬರಿಕಾರ ಕಾರಂತರಿಗೂ ಕಡಲಿಗೂ ಎಲ್ಲಿಲ್ಲದ ನಂಟು. ಅಷ್ಟೇಕೆ ಅವರ ವಿಶಾಲಜೀವನಕ್ಕೆ ಸಮುದ್ರವೇ ಆದರ್ಶವೇನೋ ! ಅವರ ಬರಹದಲ್ಲೆಲ್ಲ ಕಡಲು ಗಂಭೀರವಾಗಿ ಮೊರೆದಿದೆ. ಕಾರಂತರು ಬಾಳನ್ನೂ ನಿಸರ್ಗವನ್ನೂ ಬೇರ್ಪಡಿಸುವುದೇ ಇಲ್ಲ. ಸರಸೋತಿ, ಪಾರೋತಿ, ರಾಮೈತಾಳ ಎಷ್ಟೊಂದು ಸಲ ಅವರ ಮೊರೆತವನ್ನು ಕೇಳಿಲ್ಲ ? ರಾಮೈತಾಳನ ತಾಯಿ "ಸಮುದ್ರದಲ್ಲಿ ನಿನ್ನೊಡನೆ ಯಾರು ಮಾತನಾಡು ತ್ತಾರೆ ?" ಎಂದು ಕೇಳಿದರೆ 'ಸಮುದ್ರ' ಎನ್ನುತ್ತಾನೆ.

"ಅದು ಮಾತನಾಡುತ್ತದೆಯೋ ಅಣ್ಣ ನಿನ್ನ ಹತ್ತಿರ ?" ಎಂದರೆ 'ಹೌದು ಅದಕ್ಕೂ ನನಗೂ ಪ್ರೀತಿ. ನನ್ನ ಹತ್ತಿರ ಆದಕ್ಕೆ ತುಂಬ ಕೋಡಾಟ' 'ಬಾ ಅಮ್ಮ ಹೋಗುವ' ಎನ್ನುತ್ತಾನೆ. ಪ್ರಕೃತಿಯೊಂದಿಗಿನ ಮನುಷ್ಯನ ಹೋರಾಟ, ಇದ್ದ ಅವಿ ನಾಶಿಯಾದ ಸಂಬಂಧವನ್ನು ಅವರಂತೆ ಬೇರೆ ಯಾರು ಬಣ್ಣಿಸಿಯಾರು ?

ಭೈರಪ್ಪನವರ ಕಾದಂಬರಿಗಳಲ್ಲಿ ಬರುವ ಪ್ರಕೃತಿಯ ವರ್ಣನೆಯ ರೀತಿಯೇ ಬೇರೆ. ಅವರ ಹೆಚ್ಚಿನ ವರ್ಣನೆಗಳು ಪ್ರಕೃತಿ-ಪುರುಷರ ಸಂಬಂಧವನ್ನು ಸೂಚಿಸುವ ಪ್ರತೀಕಗಳಾಗಿವೆ. ಇನಾಂದಾರರ 'ನವಿಲು ನೌಕೆ'ಯನ್ನು ಬಿಟ್ಟರೆ ಕನ್ನಡ ಕಾದಂಬರಿ ಗಳಲ್ಲಿ ಈ ತೆರನಾದ ವರ್ಣನೆಗಳು ಕಾಣುವುದು ವಿರಳ. ಪುರಾಣಕಾಲದ ಕಲ್ಪನೆ ಯಂತೆ ಸೃಷ್ಟಿಕರ್ತನು ಪುರುಷ, ಆತನಿಂದ ನಿರ್ಮಿತವಾದುದು ಪ್ರಕೃತಿ. ಆ ಕಲ್ಪನೆಯೇ ಕಿರಿದಾಗಿ. ಗಂಡು ಪುರುಷ- ಹೆಣ್ಣು ಪ್ರಕೃತಿ ಎಂಬರ್ಥದಲ್ಲಿ ಬಳಕೆಯಾಗು ತ್ತದೆ. ಅದೇ ಕಲ್ಪನೆಯನ್ನು ಕಾದಂಬರಿಗಳಲ್ಲಿ ಪ್ರತೀಕವಾಗಿ ಕಾದಂಬರಿಕಾರರು ಕಂಡು ಕೊಂಡಿದ್ದಾರೆ.

ಪ್ರತೀಕವೆಂದರೇನು ಎನ್ನುವುದನ್ನು ಸವಿಸ್ತಾರವಾಗಿ ಚರ್ಚಿಸುವುದು ಈ ಲೇಖ ನದ ವ್ಯಾಪ್ತಿಗೆ ಮೀರಿದ ವಿಷಯ. ಭೈರಪ್ಪನವರ ಸಾಹಿತ್ಯ ಮತ್ತು ಪ್ರತೀಕದಿಂದಲೇ ಆಯ್ದುಕೊಂಡ ಮಾತುಗಳನ್ನು ಉದಾಹರಿಸಬಹುದು. "ಒಂದು ವಸ್ತುವನ್ನು ವರ್ಣಿಸುವಾಗ ಬೇರೊಂದು ವಸ್ತುವಿನ ಗುಣವನ್ನು ಅದಕ್ಕೆ ಆರೋಪಿಸಿ ವರ್ಣಿಸುವುದು ಹೆಚ್ಚು ಸ್ಪಷ್ಟವೂ ಸಮಂಜಸವೂ ಆಗುವಂತಿದ್ದರೆ, ಆ ಗುಣವನ್ನೇ ಆರೋಪಿಸಿ ವರ್ಣನೆ

ಯನ್ನು ಪೂರ್ಣಮಾಡುವುದು ಭಾಷೆಯ ಗುಣ". ಭಾಷೆ, ವ್ಯಕ್ತಿಯ ಅಭಿವ್ಯಕ್ತಿಗೂ ಆಲೋಚನೆಗಳ ಚಿಂತನೆಗೂ, ಮಾಧ್ಯಮವೂ ಆದುದರಿಂದ ವ್ಯಕ್ತಿಯನ್ನೂ ಭಾಷೆಯನ್ನೂ ಬೇರ್ಪಡಿಸುವಂತಿಲ್ಲ. ಪುರಾಣಕಾಲದಿಂದಲೇ ಬಂದ ಮೂಲಕಲ್ಪನೆಗಳಿಗೆ ನಮ್ಮ ಕಣ್ಣಮುಂದಿರುವ ವಸ್ತುಗಳನ್ನು ಸಮಂಜಸವಾಗಿ ಆರೋಪಿಸುವುದು ಕಾವ್ಯವನ್ನಾಗಲೀ ಕಾದಂಬರೀಯನ್ನಾಗಲೀ ಹೆಚ್ಚು ಸತ್ವಯುತವನ್ನಾಗಿ ಮಾಡುವಲ್ಲಿ ತುಂಬ ಸಹಾಯಕಾರಿಯಾಗುತ್ತದೆ. ಭೈರಪ್ಪನವರ ಕಾದಂಬರಿಗಳಲ್ಲಿ ಬರುವ ಪ್ರತೀಕಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಿದ್ದೇನೆ.

ಪ್ರಕೃತಿ, ಮಾನವನ ಆಸೆ–ಆಕಾಂಕ್ಷೆಗಳ ಪ್ರೇರಕಶಕ್ತಿಯೂ ಹೌದು. 'ವಂಶವೃಕ್ಷ'ದ ಶ್ರೀನಿವಾಸ ಶ್ರೋತ್ರಿಗಳು ಶಿಸ್ತಿನ, ಸಂಯಮದ ಜೀವನವನ್ನು ನಡೆಸಿದವರು. ಕಪಿಲೆಯೊಡನೆ ಶ್ರೋತ್ರಿಗಳ ಮೈತ್ರಿ ಅನೇಕ ವರ್ಷಗಳದ್ದು. ಅದು ಅವರ ದೃಷ್ಟಿಯಲ್ಲಿ ಕೇವಲ ಹೊಳೆಯಲ್ಲ. ಮಗನನ್ನು ನುಂಗಿ ನೀರು ಕುಡಿದರೂ ಹಾಹಾಕಾರವನ್ನುಂಟು ಮಾಡಿದರೂ ಅವರಿಗೆ ಕೋಪವಿಲ್ಲ. ಅನ್ನವಿತ್ತವಳೂ ಅವಳೇ ತಾನೇ ಎಂದು ಮುಳುಗು ಹಾಕಿ 'ಗಂಗೇಚ' ಎಂದು ಹೇಳುತ್ತಾರೆ. ನದಿಯಂತೆಯೇ ಸದಾ ಕಾಲ ಅವರ ಜೀವನ ನದಿ ಹರಿಯುತ್ತದೆ. ಯಾವುದಕ್ಕೂ ಅತಿಯಾಗಿ ಅಂಟಿಕೊಳ್ಳದೆಯೇ ನಿಂತವರು ಆಚಾರ್ಯರು. ಪ್ರಕೃತಿಯ ದಬ್ಬಾಳಿಕೆಯನ್ನು ಧೈರ್ಯದಿಂದ ಎದುರಿಸಿ ಪರ್ವತಸದೃಶವಾಗಿ ಬೆಳೆದು ನಿಂತ ವ್ಯಕ್ತಿ. ಮಗ ದುರಂತಕ್ಕೀಡಾದಾಗ, ಅಧಃಪತವನ್ನು ಕಂಡುಕೊಳ್ಳಬೇಕಾಗಿದ್ದ ಲಕ್ಷ್ಮಿಯ ಪ್ರಸಂಗ, ತಮ್ಮ ಜೀವನದ ಅಸ್ತಿತ್ವವನ್ನೇ ಕಳೆದುಕೊಂಡಾಗಲೂ ಪ್ರಕೃತಿಯೇ ಅವರಿಗೆ ತಲೆಬಾಗುತ್ತದೆಯೇ ಹೊರತು ಶ್ರೋತ್ರಿಗಳು ನಿಶ್ಚಲವಾಗಿ ನಿಂತ ನಿರ್ಭಾವಿ. ಅದಕ್ಕೆ ವ್ಯತಿರಿಕ್ತವಾಗಿ ಪ್ರಕೃತಿಯ ಸೆಳೆತಕ್ಕೆ ಸಿಕ್ಕು ಪ್ರವಾಹದ ವಿರುದ್ಧ ಈಸದೆಯೇ ಕೈಸೋತವನು 'ನಿರಾಕರಣ'ದ ನರಹರಿ. ಮನೆತೊರೆದು ಸನ್ಯಾಸಿಯಾಗಿ ಹಿಮಾಲಯ–ಕಾಶಿ–ಬನಾರಸಗಳನ್ನೆಲ್ಲ ಸುತ್ತಿ, ಕಾಶಿಯಲ್ಲಿ ವೇಶ್ಯೆಯರ ಮನೆಗೆ ಹೋಗಿ, ತನ್ನ ದುರ್ಬಲತೆಯನ್ನು ತಾನೇ ಗುರುತಿಸಿಕೊಳ್ಳುತ್ತಾನೆ. "ಸನ್ಯಾಸ ನುಗ್ಗಿಯ ಟೊಂಗೆಯಲ್ಲ" ಎಂಬುದನ್ನು ಮನಗಂಡಾಗ, ಆತನಿಗೆ ಮರೆತು ಹೋದ ಮಕ್ಕಳ ನೆನಪು ಮರಕಳಿಸುತ್ತದೆ. ಮಮಕಾರದಿಂದ ಮತ್ತೆ ಮುಂಬಯಿಗೆ ಮರಳುತ್ತಾನೆ. ತನ್ನ ಕಂದಮ್ಮಗಳನ್ನು ಕಂಡು ಸಂತೋಷಿಸುತ್ತಾನೆ. ಆಂತರ್ಯವನ್ನು ಜಯಿಸಲಾರದ ಪ್ರಕೃತಿಗೆ ತಲೆಬಾಗಿದ ವ್ಯಕ್ತಿ, ನರಹರಿ.

ಶ್ರೋತ್ರಿಯರ ಸೊಸೆ ಕಾತ್ಯಾಯನಿಯದು ನಿಸರ್ಗದ ಒತ್ತಡದ ಮುಂದೆ ಸಂಪೂರ್ಣ ಶರಣಾಗತಿ. ತನ್ನ ಜೀವನದ ವಸಂತದಲ್ಲಿಯೇ ಸೌಭಾಗ್ಯವನ್ನು ಕಳೆದುಕೊಂಡವಳು. ಕಾಲೇಜಿನ ಮೆಟ್ಟಲನ್ನು ತುಳಿದಾಗ, ರಾಜಾರಾಯನಿಂದ ಆಕರ್ಷಿತಳಾಗುತ್ತಾಳೆ. ಪತಿಯ ಮನೆಯ ಹೊಸ್ತಿಲನ್ನು ದಾಟಬಾರದೆಂದು ನಿಶ್ಚಯಿಸಿ, ಕೊನೆಗೂ

ಸೋಲನ್ನೊಪ್ಪಿ, ಪ್ರಕೃತಿಯ ಕರೆಗೆ ಓಗೊಟ್ಟು ರಾಜಾರಾಯನನ್ನು ಮದುವೆಯಾಗುತ್ತಾಳೆ. ಮೂಲಧರ್ಮಕ್ಕೆ ಮೋಸವನ್ನೆಸಗದೆ, ರಾಜನ ಪತ್ನಿಯಾಗಿ ಅವಳು ಸಂತೋಷದಿಂದಿರಬೇಕಿತ್ತು. ಇನ್ನೊಂದು ರೀತಿಯಲ್ಲಿಯೂ ಸೋಲನ್ನು ಕಂಡುಕೊಂಡ ದುರ್ದೈವಿ ಅವಳು. ಪೃಥ್ವಿಯನ್ನು ಕಂಡ ನಂತರ ಚೀನಿಯು ಅವಳ ಚಿತ್ತವನ್ನು ಕಲಕುತ್ತಾನೆ. ಅವಳ ಮಾತೃಹೃದಯ, ಮಗುವಿಗಾಗಿ ಪರಿತಪಿಸುತ್ತದೆ. ಮಗುವಿನ ವಾತ್ಸಲ್ಯದ ಆ ಸೆಳೆತವಾದರೂ ಎಂತಹದು ! ಕಾಲೇಜಿನಲ್ಲಿ ಆತನಿಂದ ತಿರಸ್ಕೃತಳಾದ ಮೇಲಂತೂ ಕಾತ್ಯಾಯನಿಯು ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾಳೆ. ಅದೇ ಕೊರಗಿನಲ್ಲಿಯೇ ಕೊನೆಯುಸಿರೆಳೆಯುತ್ತಾಳೆ.

'ದೂರ ಸರಿದರು' ಕಾದಂಬರಿಯಲ್ಲಿಯ ರಮೆಯದೂ ಒಂದು ರೀತಿಯ ಸೋಲು. ಅವಳೊಬ್ಬ ಭಾವನಾಜೀವಿ. ಕೇವಲ ಲೈಂಗಿಕ ಆಕರ್ಷಣೆಗೆ ಒಳಗಾಗಿ, ಪ್ರೊ. ನರೋತ್ತಮರ ಕಾಮಕ್ಕೆ ತುತ್ತಾದವಳಲ್ಲ; ಆತನ ಕ್ರೌರ್ಯಕ್ಕೆ ಬಲಿಪಶುವಾದವಳು. ಅನಾಥಪ್ರಜ್ಞೆಯು ಅವಳನ್ನು ಆನಂದನ ಮುಂದೆ ಪ್ರೇಮಭಿಕ್ಷೆಗಾಗಿ ಕೈಯೊಡ್ಡುವಂತೆ ಮಾಡುತ್ತದೆ. ಆತನಿಂದ ತಿರಸ್ಕೃತಳಾದ ಮನಸ್ಥಿತಿಯಲ್ಲಿಯೇ ಅವಳು ನರೋತ್ತಮನಿಂದ ವಂಚಿತಳಾದುದು. ಸಂಬುಗೆಯು ಅವಳನ್ನು ಮೋಸಗೊಳಿಸುತ್ತದೆ. ಆನಂದನ ಬಗೆಗೆ ಅವಳಿಗಿದ್ದ ಪ್ರೀತಿ, ಪ್ರಕೃತಿಯ ಆಕರ್ಷಣೆ. ನರೋತ್ತಮನ ಸ್ನೇಹ ಬೆಳೆಸಿದುದು, ಸಾಂತ್ವನ ಬಯಸಿದ ದುರ್ಬಲ ಮನಸ್ಸು. ಆ ಸೆಳೆತದ ಮುಂದೆ ಅವಳು ಕೈಚೆಲ್ಲುತ್ತಾಳೆ.

✿ ✿ ✿ ✿

ಕಣ್ಣಿನ ಚೆಲುವು, ನಿಸರ್ಗದ ಬಲು ದೊಡ್ಡ ಮೋಡಿ. ಮನುಷ್ಯನು ಸಂತೋಷ–ದುಃಖಗಳು ಉಂಟಾದಾಗಲೆಲ್ಲ ಪ್ರಕೃತಿಯ ಸನ್ನಿಧಿಯನ್ನು ಬಯಸುತ್ತಾನೆ. ಆನಂದ, ವಿನತೆಯರು 'ದೂರ ಸರಿದರು' ಕಾದಂಬರಿಯ ಪ್ರಮುಖ ಪಾತ್ರಗಳು. ವಿನತೆಯ ನಿಸ್ಸಹಾಯಕತೆ, ಮನೋದೌರ್ಬಲ್ಯವನ್ನು ಕಂಡು ಆನಂದನಿಗೆ ತುಂಬ ಕೋಪ. ಈ ನಿರಾಶೆಯನ್ನು ಹೋಗಲಾಡಿಸಲು ಪ್ರೇಮಮಯಿ ಪ್ರಕೃತಿಯೇ ಸಮರ್ಥಳೆಂದು ಬಾಬಾ-ಬುಡನ್ ಬೆಟ್ಟಕ್ಕೆ ನಡೆಯುತ್ತಾನೆ. ಕಾಡು–ಮೇಡುಗಳಲ್ಲಿ ಸ್ವಚ್ಛಂದವಾಗಿ ಅಲೆಯುತ್ತಾನೆ. ತನ್ನ ಅನುಭವಗಳನ್ನು ಕಾಗದದ ತುಂಡಿನಲ್ಲಿ "ಪ್ರಕೃತಿಯನ್ನು ಪ್ರೀತಿಸುವಲ್ಲಿ ನಿರಾಶೆಗೆ ಒಳಗಾಗುವ ಭೀತಿ ಕಡಿಮೆ. ಅವಳು ನಿತ್ಯ ನೂತನಳು. ಅವಳ ನಗುವಿನಲ್ಲಿ ಮನಸ್ಸನ್ನು ಮುಗ್ಧಗೊಳಿಸುವ ಸ್ನಿಗ್ಧತೆಯಿದೆಯೇ ವಿನಃ ನಮ್ಮನ್ನು ಮೋಹದಲ್ಲಿ ಸಿಲುಕಿಸುವ ಪ್ರಲೋಭನೆ ಇಲ್ಲ. ತನ್ನನ್ನು ಪ್ರೀತಿಸುವವರನ್ನು ಅವಳು ಪ್ರೀತಿಸುವಷ್ಟು ಆಳವಾಗಿ ಮತ್ತೆ ಯಾರೂ ಪ್ರೀತಿಸುವದಿಲ್ಲ" ಎಂದು ಬರೆಯುತ್ತಾನೆ.

ಮನಸ್ಸಿನ ಕುದಿಯನ್ನು ಕಡಿಮೆ ಮಾಡಲು ನಿಸರ್ಗದ ಮಡಿಲಲ್ಲಿ ಆತ ಲೀನನಾಗುತ್ತಾನೆ. ಅವಳ ಸನ್ನಿಧಿಯಲ್ಲಿ ಕೆಲವು ದಿನಗಳನ್ನು ಕಳೆದು, ಹೊಸ ಮನುಷ್ಯನಾಗುತ್ತಾನೆ. ಜೀವನದಲ್ಲಿ ಪ್ರೀತಿಸಲು ಅರ್ಹವಾದ ವಸ್ತು, ಕೇವಲ ಹೆಣ್ಣೊಂದೇ ಅಲ್ಲ, ಬೇರೆ ವಸ್ತುಗಳಿವೆಯೆಂದು ಮನಸ್ಸಿಗೆ ಹೇಳಿಕೊಂಡರೂ ಆತನ ಸಾಹಿತ್ಯಸೃಷ್ಟಿ ಮಾತ್ರ ನಿಂತು ಹೋಗುತ್ತದೆ. ಅದು ವಿನತೆಯನ್ನು ಮರೆಯಲು ಮಾಡಿದ ಸೆಣಸಾಟ ಮಾತ್ರ.

ಆನಂದ–ವಿನತೆಯರು ಈ ದಿನ ತಲಕಾಡಿನ ಪವಿತ್ರ ಕಾವೇರಿಯ ಮಡಿಲಲ್ಲಿ ಇದ್ದಾರೆ. ಪ್ರೇಮಿಗಳಿಬ್ಬರೂ ಸಂತೋಷದಿಂದ ದಟ್ಟವಾದ ಕಾಡಿನ ಒಳಭಾಗಕ್ಕೆ ಸೇರುತ್ತಾರೆ. ತಾನೇ ತಾನಾಗಿ ಬೆಳೆದುನಿಂತ ವನ್ಯಸಾಮ್ರಾಜ್ಯ. ಮಾತಿಗೆ ಸಿಲುಕದ ಮನೋಭಾವ. ಮರದ ಮೇಲೆ ತಮ್ಮ ಹೆಸರುಗಳನ್ನು ಕೆತ್ತುತ್ತಾರೆ. ಅದನ್ನೇ ಪೂಜಿಸಿ, ಬಾನು–ಭುವಿಗಳ ಸಾಕ್ಷಿಯಾಗಿ ಮದುವೆಯಾಗುತ್ತಾರೆ. ಸಂಜೆಯ ಬಸ್ಸು ತಪ್ಪಿ ಮನೆಗೆ ಬದಲಾಗಿ ಮತ್ತೆ ಕಾಡಿಗೇ ಬಂದರು. ತಮ್ಮ ಹೆಸರು ಕೆತ್ತಿದ ಮರ ಅವರಿಗೆ ಸಿಗಲೇ ಇಲ್ಲ. "ಬಾನಿನಲ್ಲಿ ಬೆಳದಿಂಗಳು ತಾನೇ ತಾನಾಗಿ ಹರಡಿಕೊಂಡಿತ್ತು. ಪ್ರಕೃತಿ, ಪುರುಷನೊಡನೆ ಚಿನ್ನಾಟ–ಸಲ್ಲಾಪ ನಡೆಸಿದ್ದಳು. ಸೌಂದರ್ಯಾನುಭವವು ಉತ್ಕಟಾವಸ್ಥೆಗೆ ಏರಿದಾಗ ಸೌಂದರ್ಯಮೀಮಾಂಸೆ ಹೇಗೆ ಸಾಧ್ಯ ? ರಾತ್ರಿ ಹನ್ನೆರಡು ಗಂಟೆ ನಿಸರ್ಗರಮಣಿ ಹೆಚ್ಚು ಮೋಹಕಳಾದಳು. ಗದ್ಯದ ಗಡಸು, ಪದ್ಯದ ಸ್ನಿಗ್ಧತೆಯಲ್ಲಿ ಕರಗಿಹೋಗುತ್ತಿದ್ದ ಆ ಸುಂದರ ನಿಶೆಯಲ್ಲಿ ಪ್ರಕೃತಿ–ಪುರುಷರೆಂಬ ದ್ವೈತವು, ಅದ್ವೈತದಲ್ಲಿ ಪರಿಣಮಿಸಿತ್ತು. ಅರಿವನ್ನು ಮೀರಿದ ಅದ್ವೈತದಲ್ಲಿ ಜಗತ್ತು, ಸ್ಮೃತಿ, ಭೂತದ ಭಯ, ಭವಿಷ್ಯದ ಹೆದರಿಕೆ ಯಾವವೂ ಇಲ್ಲವಾಗಿದ್ದವು. ಅನುಭವದ ಉತ್ಕಟತೆಯಲ್ಲಿರುವಾಗ ದೇಹವನ್ನು ಮನಸಿನ ಮಿಳನದಿಂದ ಹೊರಗಿಟ್ಟು ವಿಭಜನೆಯನ್ನು ಸಾಧಿಸುವದು ದೇಹ– ಮನಸ್ಸುಗಳೆರಡಕ್ಕೂ ಕ್ರೂರವೆನಿಸಿತು.''

'ಗದ್ಯದ ಗಡಸು ಪದ್ಯದ ಸ್ನಿಗ್ಧತೆಯಲ್ಲಿ ಕರಗಿಹೋಗುತ್ತಿತ್ತು. ದೇಹವನ್ನು ಮನಸ್ಸಿನಿಂದ ಬೇರ್ಪಡಿಸುವದು ಕ್ರೂರವೆನಿಸಿತು' ಎನ್ನುವ ಗದ್ಯಪದ್ಯಪ್ರತೀಕ ಆನಂದ ವಿನತೆಯರ ಪುರುಷನ ರೌದ್ರತೆ– ಸ್ತ್ರೀಯ ಕೋಮಲತೆಯನ್ನು ಚೆನ್ನಾಗಿ ಪ್ರತಿಬಿಂಬಿಸಿದೆ. ಹೆಣ್ಣಿನ ಯಾವ ಅಂಗಾಂಗಗಳ ವರ್ಣನೆಯೂ ಇಲ್ಲಿ ಇಲ್ಲ. ಚೇಷ್ಟೆ ಇಲ್ಲ. ಎಲ್ಲ ವರ್ಣನೆಯನ್ನೂ ನುಂಗಿಹಾಕಿದ ಪ್ರತೀಕ, ವರ್ಣನೆಯನ್ನು ಮಾಡಿದ್ದರೆ ಸಪ್ಪೆಯಾಗಬಹುದಾದುದನ್ನು ಆನಂದ-ವಿನತೆಯರ ಪ್ರಥಮ ಮಿಲನ ಸೂಚಿಸುತ್ತದೆ.

ಸೌಂದರ್ಯದ ಸ್ವರೂಪವನ್ನು ಒಂದು ಮಾತಿನಲ್ಲಿ ಹೇಳುವುದು ಕಷ್ಟ. ಮನಸ್ಸು ಉಲ್ಲಾಸಗೊಂಡಿರುವಾಗ ಸಕಲವೂ ಸುಂದರವಾಗಿ ಕಾಣುತ್ತದೆ. ಮುದಡಿದ ಮನಸ್ಸಿಗೆ ಎಂತಹ ಸೌಂದರ್ಯವೂ ಕಣ್ಣಿಗೆ ಮುಳ್ಳಾಗುತ್ತದೆ. ಆನಂದ–ವಿನತೆಯರು ಬೆಳಗಿನಿಂದ ಪ್ರಕೃತಿಯ ಸನ್ನಿಧಿಯಲ್ಲಿದ್ದಾರೆ. ಅವರಿಬ್ಬರ ಮನಸ್ಸು ಸಂತೋಷದಿಂದ ಬೀಗಿ

ಹೋಗಿದೆ. ನಿಸರ್ಗ ಅದಕ್ಕೆ ಪುಷ್ಟಿಯಿತ್ತಿದೆ. ಗಿಡದ ಮೇಲೆ ಹೆಸರು ಕೆತ್ತಿದುದಾಗಿ ಪ್ರಕೃತಿಯು, ಅವರ ಅಮರ ಪ್ರೇಮದ ಕುರುಹನ್ನು ಸಾರುವ ಸಂಕೇತವಾಗಿದೆ. ಮರ ಸಿಕ್ಕಲಿಲ್ಲವಾಗಿ ಅದು ಅವರ ಮುಂದಿನ ಅಗಲುವಿಕೆಯನ್ನು ಸೂಚಿಸುತ್ತದೆ. ಮರಕ್ಕೆ ಪ್ರದಕ್ಷಿಣೆಹಾಕುವ ಮಂಗಲಮಯಸಮಯದಲ್ಲಿ ಅದು ಪುರೋಹಿತನ ಪಾತ್ರವಹಿಸಿ, ಅವರಿಬ್ಬರನ್ನೂ ಹರಸಿದ ಶಕ್ತಿಯಾಗಿದೆ. ಬೆಳುದಿಂಗಳಿನಿಂದ ಭಾವಿಗೆ ಮತ್ತೇರಿದಂತೆ, ಪ್ರೇಮಿಗಳಿಬ್ಬರೂ ಭಾವೋನ್ಮಾದದಲ್ಲಿ ಮುಳುಗಿಹೋಗುತ್ತಾರೆ. ಪ್ರೀತಿಯ ವರ್ಧನೆಯಲ್ಲಿ ಅದರ ಪಾತ್ರ ಮಹತ್ವದ್ದೆಂದು ತೋರುತ್ತದೆ. ತಲಕಾಡಿನ ಮರುಳು, ಅವರ ಪಾಲಿಗೆ ರಾಜೋಚಿತ ಶಯ್ಯೆಯಾಗಿದೆ. ಸಮಾಜದ ಯಾವ ಕಟ್ಟುಪಾಡೂ ಇಲ್ಲದೆ ಪ್ರೇಮಿಗಳ ಮಿಲನವಾಗುತ್ತದೆ.

ವಂಶವೃಕ್ಷದ ರಾಜ, ಒಬ್ಬ ಒಳ್ಳೆಯ ನಟ-ನಾಟಕಕಾರ. ಆತನ ನಾಟಕದ ವಸ್ತುವಾದರೂ ಇದೇ. ಪ್ರಕೃತಿ ಶುದ್ಧ ಹಸಿರು. ವನದ ನಡುವೆ ಸಂಚರಿಸುತ್ತ ದೊಡ್ಡ ಮಾಲೆಕಟ್ಟಿ ನಲಿಯುತ್ತಾಳೆ. ಪುರುಷನ ಸನ್ನಿಧಿಯಿಂದ ಆಕರ್ಷಿತಳಾದ ಅವಳು ಸಲ್ಲಾಪದಿಂದ ಅವನನ್ನು ಸಮೀಪಿಸುತ್ತಾಳೆ. ಕೊರಳಿಗೆ ಮಾಲೆ ಹಾಕುವುದರಲ್ಲಿದ್ದಾಳೆ. ಅವಳ ಕೈಹಿಡಿಯಲು ಪುರುಷನೂ ಕೈಚಾಚಿದ್ದಾನೆ. ಅಷ್ಟರಲ್ಲಿ ಸಿಡಿಲಿನ ಗರ್ಜನೆ, ಕತ್ತಲೆ. ಮುಂದಿನ ದೃಶ್ಯ, ದೇವರಾಜನ ನ್ಯಾಯಸ್ಥಾನ. ದೇವಗುರುವಿನೆದುರು ಬಂಧಿತಳಾದ ಪ್ರಕೃತಿ. ಅವಳ ಮೇಲೆ ಧರ್ಮಚ್ಯುತಿಯ ಆರೋಪ. ತಾನು ಮಾಡಿದ ಧರ್ಮಲೋಪ ಯಾವುದೆಂದವಳು ಕೇಳಿದಾಗ, ಅವಳು ಬೇರೊಬ್ಬ ಪುರುಷನ ಸಂಸರ್ಗದಲ್ಲಿದ್ದಳೆಂದೂ ಆತ ಜ್ಞಾನೋದಯವಾದ ಮೇಲೆ ಮುಕ್ತಿಯನ್ನು ಪಡೆದು ಹೊರಟುಹೋದ. ಈಗವಳು ವಿಧವೆ. ಮತ್ತೊಬ್ಬನಿಗೆ ಮಾಲೆ ಹಾಕುವುದು, ಧರ್ಮನಿಷಿದ್ಧವೆಂದಾತ ಹೇಳುತ್ತಾನೆ. ಆಗ ಪ್ರಕೃತಿ "ಚಿರನೂತನಳೂ ಚಿರಚೇತನಳೂ ಆದ ಪ್ರಕೃತಿಗೆ ಕೃತಕಧರ್ಮದ ಕಟ್ಟನ್ನು ಹಾಕುವದು ಅಧರ್ಮವಲ್ಲವೇ ದೇವಗುರು ? ನನ್ನ ಮೂಲಗುಣವೇ ಚೇತನಾಮಯವಾದುದು. ಪ್ರಕೃತಿಯ ಸಂಸರ್ಗದಿಂದಲೇ ಪುರುಷನಿಗೆ ಮುಕ್ತಿ. ಅವಳಿಗೆ ವೈಧವ್ಯದ ಮೈಲಿಗೆಯನ್ನು ತಗುಲಿಸಿದರೆ ಇನ್ನೂ ಮುಕ್ತಿಯನ್ನು ಪಡೆಯದ ಅನಂತ ಕೋಟಿ ಪುರುಷಗಳ ಗತಿ ಏನು ? ಮುಕ್ತಿಯನ್ನು ತಡೆಯುವ ನಿಮ್ಮ ಧರ್ಮ, ಕೃತಕವಾದುದಲ್ಲವೇ ?" ಎಂದವಳು ಕೇಳಿದಾಗ ದೇವಗುರು ಮೂಕರಾಗುತ್ತಾರೆ. ಆಗ ಪುನಃ ಪ್ರಕೃತಿ "ವಸ್ತುತತ್ವದ ಮೂಲಗುಣವನ್ನು ಕೃತಕವಾಗಿ ತಡೆಹಿಡಿಯುವ ಧರ್ಮ, ನೀತಿ, ರಾಜಶಾಸನ, ಸಮಾಜದ ನಿಯಮ, ಜನತೆಯ ಆರೋಪ ಇವೆಲ್ಲ ಅಸತ್ಯದ ಮುಖಗಳು. ಪ್ರಕೃತಿ ಚಿರಯೌವ್ವನೆ. ಅವಳ ಸುಂದರ ಸ್ವರೂಪವನ್ನು ಅಳಿಯಲೆತ್ನಿಸುವ ಧರ್ಮವು ತನಗೆ ತಾನೇ ನಾಶವಾಗುತ್ತದೆ." ಪುನಃ ಸಿಡಿಲಿನ ಗರ್ಜನೆಯೊಂದಿಗೆ ರಂಗದಲ್ಲಿ ಬೆಳಕು, ದೇವರಾಜ, ದೇವಗುರು ಹೆಳವರಾಗಿ ಬಂದಿದ್ದಾರೆ. ಪುರುಷನು ಪ್ರಕೃತಿಯ ಹತ್ತಿರ ಸುಳಿಯುತ್ತ "ಪ್ರಕೃತೀ ನೀನು ವಿಧವೆಯಲ್ಲ. ಚಿರಸುಮಂಗಲಿ"

ಎನ್ನುತ್ತಾನೆ. ಪ್ರಕೃತಿ ಮಾಲೆಹಾಕುತ್ತಾಳೆ. ಹೆಳವರಾಗಿ ಬಿದ್ದ ದೇವರಾಜ ದೇವಗುರು ಅವರ ಕೃಪೆಯನ್ನು ಪಡೆದು ಕಾಲಿಗೆರಗಿದಾಗ ಅವಳು ಅಭಯ ಹಸ್ತವನ್ನು ನೀಡುತ್ತಾಳೆ.

ಕಾತ್ಯಾಯಿನಿ, ಪ್ರಕೃತಿಯ ಪಾತ್ರವನ್ನು ವಹಿಸಿದ್ದಾಳೆ. ಅವಳ ಪಾತ್ರವನ್ನು ಕಂಡ ಪ್ರಿನ್ಸಿಪಾಲರು ಅದ್ಭುತವೆನ್ನುತ್ತಾರೆ. ಹುಡುಗಿಯರನ್ನು ತಲೆಯೆತ್ತಿ, ನೋಡದ ರಾಜ ಅವಳಿಗೆ ಮನಸೋತು ಅವಳನ್ನು ಮದುವೆಯಾಗಲು ಕೇಳುತ್ತಾನೆ. ಸಂಪ್ರದಾಯ-ವಂತ ತಂದೆ-ತಾಯಿಗಳು, ಮಾವ-ಅತ್ತೆಯರ ಆವರಣದಲ್ಲಿ ಬೆಳೆದ ಕಾತ್ಯಾಯಿನಿ– ಅವನ ಸೂಚನೆಯನ್ನು ಹೇಗೆ ಒಪ್ಪಿಕೊಂಡಾಳು ? ಸಾಮಾಜಿಕ ಕಟ್ಟುಪಾಡುಗಳು, ವಂಶ, ಸ್ಥಾನಮಾನಗಳ ಬಗೆಗೆ ಅವಳು ಮಾತನಾಡುತ್ತಾಳೆ. ರಾಜ, ನಾಟಕದ 'ಮೂಲತತ್ವ'ದ ವಿವರಣೆ ಕೊಡುತ್ತಾನೆ. ಕೈಹಿಡಿದು ಕೇಳಿದಾಗ 'ನಿಮ್ಮನ್ನು ಬಿಟ್ಟು ಬದುಕಲಾರೆ' ಎನ್ನುತ್ತಾಳೆ ಕಾತ್ಯಾಯಿನಿ. ಆದರೆ ಮನೆಯಲ್ಲಿ ಮನಸ್ಸು ಅಲ್ಲೋಲಕಲ್ಲೋಲ ತಲೆ ರಣಾಂಗಣ. ನಡುರಾತ್ರಿಯಲ್ಲಿ ಕಿಟಕಿಯಿಂದ ಹೊರಕ್ಕೆ ದೃಷ್ಟಿ ತೂರಿದರೆ, ತುಂಬಿದ ಬೆಳದಿಂಗಳಲ್ಲಿ ಮಲ್ಲಿಗೆಯ ಬಳ್ಳಿಯು ನಗುತ್ತ ಕೆಂಡಮಾವಿನ ಮರವನ್ನಪ್ಪಿ ನಿಂತಿದೆ. ಮರುದಿನ ವನಶ್ರೀಯ ಮಧ್ಯೆ, ಕಾತ್ಯಾಯಿನಿ ರಾಜನ ಕೊರಳಲ್ಲಿ ಜಾಲಿಯ ಮಾಲೆಯನ್ನು ಹಾಕುತ್ತಾಳೆ. ಪ್ರಕೃತಿಗೆ ಈಗ ಯಾವ ಕಟ್ಟುಪಾಡೂ ಇಲ್ಲ. ಕನಸಿನಲ್ಲಿ ಕಂಡ ನನ್ನ ಸ್ತ್ರೀ, ಕಾತ್ಯಾಯನಿಯೇ ಎಂದವನು ತಿಳಿದಿದ್ದಾನೆ. ರಾಜನ ತೋಳುಗಳ ಆಶ್ರಯ ಅವಳಿಗೆ. ಪ್ರಕೃತಿ–ಪುರುಷರಲ್ಲಿ ಯಾವ ಭೇದ–ಭಾವವೂ ಇಲ್ಲ. ಎಲ್ಲವೂ ಅವರದೇ ಸಾಮ್ರಾಜ್ಯ.

ಪ್ರತೀಕ– ನಾಟಕದ ಸೂತ್ರವನ್ನು ಹಿಡಿದೇ ನಾವು ಮುಂದೆಸಾಗಿದರೆ ಸಮಸ್ಯೆಯೊಂದನ್ನು ಎದುರಿಸಬೇಕಾಗುತ್ತದೆ. ಚಿರನೂತನಳಾದ ಪ್ರಕೃತಿ ಅಂದು ನಲಿಯುತ್ತಾಳೆ. ಕಾತ್ಯಾಯಿನಿ, ರಾಜನೊಂದಿಗೆ ಹೊಸ ಭಾಗ್ಯವನ್ನು ಪಡೆದುಕೊಂಡಳು. ಆದರೆ ಅದರಿಂದ ಅವಳು ಸುಖಿಯೆ ? ಮಗುವಿಗಾಗಿ ಹಂಬಲಿಸಿ, ಮಾವನವರ ಭವ್ಯ ವ್ಯಕ್ತಿತ್ವದ ಮುಂದೆ ಅಪರಾಧಿಯೆನಿಸಿ, ಮನಸ್ಸಿನಲ್ಲಿ ಕೊರಗಿ, ರಾಜನನ್ನು ದುಃಖಸಾಗರದಲ್ಲಿ ಮುಳುಗಿಸಿ ಹೋಗುತ್ತಾಳೆ. ಚಿರಚೇತನಳು ಪ್ರಕೃತಿಯೆಂದಾದರೆ, ಅವಳೇಕೆ ಆ ಮಾನಸಿಕ ತೊಳಲಾಟದಲ್ಲಿ ಸಿಲುಕಿಕೊಂಡಳು ? ಅದು ಸಂಪ್ರದಾಯದ, ಬೆಳೆದು ಬಂದ ಪರಿಸರದ ಪ್ರಭಾವವೆಂದಾದರೆ ಅದನ್ನು ಮೆಟ್ಟಿಹಾಕಲು ಪ್ರಯತ್ನಿಸಿ ವಿಫಲಳಾದಳು. ಎಂದರೆ ಪ್ರತೀಕ ನಾಟಕದ ಔಚಿತ್ಯವೇನು ? ಅದು ಅವಳ ಮನಸ್ಸನ್ನು ಪ್ರೇರೇಪಿಸಿದುದು ತಾತ್ಕಾಲಿಕವಾಗಿಯೇ ? ತಾನು ಮಾಡಿದ ಕಾರ್ಯಕ್ಕಾಗಿ ಕೊನೆಕೊನೆಗೆ ಅವಳು ಪಶ್ಚಾತ್ತಾಪಪಟ್ಟುಕೊಳ್ಳುತ್ತಾಳೆ. ಮೂಲಧರ್ಮಕ್ಕೆ ಕಟ್ಟುಹಾಕುವುದು ಅಧರ್ಮವೆಂದಾದರೆ, ಪಾಪಪ್ರಜ್ಞೆ ಅವಳಲ್ಲಿ ಮೂಡುವುದು ಆಶ್ಚರ್ಯ. ಪ್ರತೀಕ ನಾಟಕದ ಸಫಲತೆ ಎಷ್ಟು ಎನ್ನುವುದು ಉಳಿದ ಪ್ರಶ್ನೆ.

ನೆಲ, ಬಿಸಿಲಿನ ಬೇಗೆಯಿಂದ ಬೆಂದುಹೋಗುತ್ತದೆ. ಬಾಯಾರಿ ಮುಗಿಲಿನತ್ತ ಮುಖ ಮಾಡುತ್ತದೆ. ಅದು ಸಹಜಧರ್ಮ. ತಾಪಕ್ಕೆ ತಂಪನ್ನೆರೆಯುತ್ತದೆ ಮಳೆ. ಮುಗಿಲು ನೆಲಗಳು ಒಂದಾದಾಗ, ನೆಲದ ಹೃದಯದ ಕುದಿ ಕಡಿಮೆಯಾಗುತ್ತದೆ. ಪರಿಣಾಮವಾಗಿ ಭೂಮಿ ಚೈತನ್ಯಮಯವಾಗುತ್ತದೆ. ಅವಳಿಗೆ ಸಂತಾನಪ್ರಾಪ್ತಿ. ಸಹಜಸೃಷ್ಟಿಯ ಈ ವ್ಯಾಪಾರವನ್ನು, ಪ್ರತೀಕವಾಗಿ ಔಚಿತ್ಯಪೂರ್ಣವಾಗಿ ಭೈರಪ್ಪನವರು ಬಳಸಿಕೊಂಡಿದ್ದಾರೆ. ವಾಚ್ಯವಾಗಿದ್ದರೆ ಅವಾಚ್ಯವೆನಿಸುತ್ತಿದ್ದ, ಬಿಚ್ಚಿಹೇಳಿದರೆ ಅಶ್ಲೀಲವಾಗುತಿದ್ದ ಪ್ರಸಂಗ, ಕಾದಂಬರಿಯಲ್ಲಿ ಕಲಾತ್ಮಕವಾಗಿ ಚಿತ್ರಿತವಾಗಿದೆಯೆಂದು ಹೇಳಬೇಕು. ಕಾತ್ಯಾಯಿನಿ ಈಗಾಗಲೇ ಜೀವನದ ಸುಖ ಕಂಡವಳು. ಬಲುಬೇಗನೇ ಅದರಿಂದ ವಂಚಿತಳಾದವಳು. ಸುಪ್ತವಾದ ಅವಳ ಬಯಕೆಗಳೆಲ್ಲ ಈಗ ರಾಜನ ಸನ್ನಿಧಿಯಲ್ಲಿ ಮತ್ತೆ ಜಾಗೃತವಾಗಿವೆ. ರಾಜನೋ ಯಾವ ಅನುಭವವೂ ಇಲ್ಲದ ಮೀಸಲು ಮನುಷ್ಯ. ಅವರಿಬ್ಬರ ಮಿಲನವನ್ನು ಕಾದಂಬರಿಕಾರ "....ತನಗೆ ಮಳೆ ಬೇಕೆಂದು ಕೇಳುವದು ಭೂಮಿಯ ಸ್ವಭಾವವಲ್ಲ. ಮೋಡವು ಕೆಳಗೆ ಬಂದು ಭೂಮಿಯನ್ನು ಸ್ಪರ್ಶಿಸದೇ ಬಿಗುಮಾನದಿಂದಲೋ ಸಂಕೋಚದಿಂದಲೋ ಮೇಲೆಯೇ ತೂಗುತ್ತಿತ್ತು. ಭೂಮಿಗೂ ಮೋಡಕ್ಕೂ ಒಂದು ವ್ಯತ್ಯಾಸವಿತ್ತು. ಭೂಮಿಗೆ ಹಿಂದೆ ತೃಪ್ತಿಯಾಗುವಷ್ಟು ಮಳೆಯಾಗಿತ್ತು. ಅದು ಜಲದಲ್ಲಿ ನೆನೆದು ಸಂತುಷ್ಟವಾಗಿತ್ತು. ಮಳೆ ನಿಂತು ಕೆಲದಿನದ ಮೇಲೆ ಪುನಃ ಆಕಾಶವನ್ನು ನೋಡುತ್ತಿತ್ತು. ಆದರೆ ಈಗ ಆಕಾಶವನ್ನು ತುಂಬಿರುವದು ಮೊದಲಬಾರಿಗೆ ಜಲವಾಗುತ್ತಿರುವ ಪರಿಪಾಕ ಮುಟ್ಟುತ್ತಿರುವ ಹೊಸ ಮೋಡ...."

ಗಂಡು, ಆಧಾರ. ಹೆಣ್ಣು, ಅದಕ್ಕಂಟಿಕೊಳ್ಳುವ ಆಧಾರವನ್ನು ಪಡೆದು ಹಬ್ಬಿ ಹಂದರವಾಗುವ ಲತೆ. ಕಾತ್ಯಾಯನಿ ತುಂಬ ಬೇಸರಗೊಂಡು, ಮಹಡಿಯಿಂದಿಳಿದು ಹಿತ್ತಲಿನ ಕಡೆಗೆ ಬಂದಿದ್ದಾಳೆ. ಅಲ್ಲಿ ಅವಳಿಗೆ ಕಂಡುದು ಮಾವಿನಮರ. ಆದರೆ ಅದು ಒಣಗಿಹೋಗಿದೆ. ಅದನ್ನು ಆಧರಿಸಿ ಮಲ್ಲಿಗೆ ನಿಂತಿದೆ. ಅದನ್ನು ಕಂಡ ಶ್ರೋತ್ರಿಗಳು ಉಪಾಯವಾಗಿ ಒಣ ಮಾವಿನಮರವನ್ನು ಕಡಿಯಿಸಿ, ಬದಲಾಗಿ ಹೊಸ ಮಾವಿನ ಟೊಂಗೆ ಹಚ್ಚಿರುತ್ತಾರೆ. ಕೆಲದಿನಗಳಲ್ಲಿಯೇ ಅದು ಚಿಗಿಯುತ್ತದೆ. ಕಾತ್ಯಾಯನಿ, ನಂಜುಂಡ ಶ್ರೋತ್ರಿಯ ಆಸರೆಯನ್ನು ಕಳೆದುಕೊಂಡ, ಅಜೇತನ ಮರಕ್ಕಂಟಿದ್ದ ಬಳ್ಳಿಯಾಗಿದ್ದವಳು, ಇದನ್ನು ಕಂಡೊಡನೆ ರಾಜನ ನೆನಪಾಗುತ್ತದೆ. ಮನದಲ್ಲಿ ಮೊಳೆಯುತ್ತಿದ್ದ ಆಸೆ ಮೊಳೆಯಲು ಅದು ಸಹಾಯವಾಗುತ್ತದೆ. ರಾಜನನ್ನು ಮರೆಯಲಾರದೆ, ಮಗುವನ್ನು ತೊರೆಯಲಾರದೆ ನಿದ್ದೆ ತೊರೆದು ಕಳವಳಿಸಿ, ನಡುರಾತ್ರಿಯಲ್ಲಿ ಕಿಟಕಿಯಿಂದ ಹೊರಕ್ಕೆ ದೃಷ್ಟಿ ತೂರಿದರೆ, ತುಂಬಿದ ಬೆಳುದಿಂಗಳಲ್ಲಿ ಮಲ್ಲಿಗೆಬಳ್ಳಿ ನಗುತ್ತ ಕೆಂಡಮಾವಿನ ಮರವನ್ನಪ್ಪಿ ನಿಂತಿದೆ. ಹೀಗೆ ಪ್ರತಿ ಹೆಜ್ಜೆಗೂ ಕಾತ್ಯಾಯನಿಯನ್ನು ಮರಳಿ ಮದುವೆಯ ಹೊಸಜೀವನಕ್ಕೆ ಪ್ರೇರೇಪಿಸುವಲ್ಲಿ, ಪ್ರಕೃತಿ ಎಷ್ಟೊಂದು

ಪರಿಣಾಮಕಾರಿಯಾದ ಪಾತ್ರವನ್ನಾಡಿದೆಯೆಂಬುದನ್ನು ಇಲ್ಲಿಯ ಪ್ರತೀಕಗಳಲ್ಲಿ ಕಾಣುತ್ತೇವೆ. ತನ್ನ ನಿರ್ಣಯವನ್ನು ಬದಲಾಯಿಸಿದಾಗಲೆಲ್ಲಾ ಪ್ರಕೃತಿ ಅವಳಿಗೆ ಪ್ರೇರಣೆ ನೀಡುತ್ತಲೇ ಬಂದಿದೆ. ಈ ಪ್ರೇರಣೆಯೇ ಮುಂದೆ ಅವಳ ಜೀವನದಲ್ಲಿ ಯಾಕೆ ಉಳಿಯುವುದಿಲ್ಲ ಎಂಬುದು ಶೇಷಪ್ರಶ್ನೆ.

ಗೃಹಭಂಗದಲ್ಲಿಯೂ ಅಷ್ಟೇ. ನಂಜಮ್ಮ, ಮಕ್ಕಳನ್ನು ಕಳೆದುಕೊಂಡು ತುಂಬ ದುಃಖಿತೆಯಾಗಿದ್ದಾಳೆ. ಶೃಂಗೇರಿಗೆ ಹೋಗಿ ಶಾರದಾಮಾತೆಯ ದರ್ಶನವನ್ನಾದರೂ ಮಾಡಿಕೊಂಡು ಬರಬೇಕೆಂದು ಅವಳ ಬಯಕೆ. ಮೊದಲಿನಿಂದಲೂ ಮುತ್ತುಗದ ಎಲೆಯನ್ನು ತರಲು ಕಾಡಿಗೆ ಹೋಗುವಾಗಿನಿಂದಲೂ ಅವಳಿಗೆ ಕಾಡಿನ ಬಗೆಗೆ ಅಲೌಕಿಕ ಆಕರ್ಷಣೆ. ಮಗುವಿನೊಡನೆ ಶೃಂಗೇರಿಯತ್ತ ಹೆಜ್ಜೆಹಾಕುತ್ತಿರುವಾಗ ಭಾರೀ ಭಾರೀಯಾದ ಹೆಮ್ಮರಗಳ ಕಾಡನ್ನು ಕಂಡು ಮನಸ್ಸು ಮುದಗೊಂಡರೆ, ಮರಕ್ಷಣದಲ್ಲೇ ಕಳೆದುಕೊಂಡ ಮಕ್ಕಳ ನೆನಪನ್ನೂ ತರುತ್ತಿತ್ತು. ಕಾಡಿನ ಹಸಿರು ನೋಡಿ ಅವಳ ನೆನಪಿನ ಪರದೆಯಲ್ಲಿ ಪಾರ್ವತಿಯ ಚಿತ್ರ ಮೂಡುತ್ತಿತ್ತು. ಭಾರಿಯಾದ ಹೆಮ್ಮರಗಳು ಬಿದ್ದುಹೋಗುತ್ತವೆ. ಬೆಳೆಯಬೇಕಾಗಿದ್ದ ಬಳ್ಳಿಗಳೂ ತೊತ್ತಳದುಳಿತಕ್ಕೆ ಸಿಕ್ಕು ನಾಶವಾಗುತ್ತವೆ. ನಾಶ, ಪುನರ್‌ಸೃಷ್ಟಿ ಇದು ಪ್ರಕೃತಿಯ ನಿಯಮ. ನಾವೂ ಹಾಗೆಯೇ. ಪಾರ್ವತಿಯು ಬಾಡಿದ ಇಂತಹ ಬಳ್ಳಿ. ಅವಳ ಸುಖಮಯ ಸಂಸಾರವನ್ನು ಕಣ್ಣಾರೆ ಕಾಣಬೇಕೆಂದಿದ್ದವಳಿಗೆ ಆ ಭಾಗ್ಯವಿರಲಿಲ್ಲ.

ಕಲೆಗೂ ಪ್ರಕೃತಿಗೂ ಇರುವ ಸಂಬಂಧ, ಪರಮೇಶ್ವರ ಪಾರ್ವತಿಗೆ ಇರುವಂತಹದು. ಕಲೆ, ಚಿತ್‌ಶಕ್ತಿಯ ಒಂದು ಮುಖ. ಸತ್ಯದ ಕಾಣ್ಕೆಯು ಆತನ ಗುರಿ. ಶಿವದರ್ಶನವೇ ಕಲಾಕಾರನ ಪರಮ ಉದ್ದೇಶ. ಕಲಾವಿದನದೂ ಸೃಷ್ಟಿ ಶಕ್ತಿಯೇ ಹೌದು. ಕಲಾಕೃತಿ, ಆತನ ಮಗು. ಕಲಾವಿದನದೂ ಸೃಷ್ಟಿ ಕರ್ಮವಾದರೆ, ಕಲಾವಿದನಿಗೆ ನಿಸರ್ಗ ಮಾಧ್ಯಮವಾಗುತ್ತದೆ. 'ಜಲಪಾತ'ದ ಕಲಾವಿದ ಶ್ರೀಪತಿ, ಆತನ ಹೆಂಡತಿ ವಸುಂಧರಾ ಅವಳೂ ಕಲಾವಿದೆ. ಹೊಟ್ಟೆಯ ಪಾಡಿಗಾಗಿ ಜಾಹೀರಾತಿನ ಡಿಜೈನಗಳನ್ನು ಬರೆಯುತ್ತಿದ್ದರೂ ಮುಂಬಯಿಯ ಕೃತ್ರಿಮಜೀವನಕ್ಕೆ ರೋಸಿಕೊಂಡು ಕೆಲದಿನಗಳ ಮಟ್ಟಿಗೆ ಅವರು ಜೋಗಕ್ಕೆ ಬಂದಿದ್ದಾರೆ. ಹಾಲು ಬೆಳದಿಂಗಳಿನಲ್ಲಿ ಜಲಧಾರೆಯ ಸೌಂದರ್ಯ ಬೆರೆತುಕೊಂಡಿದೆ. ಕಲಾವಿದರಿಬ್ಬರೂ ಅದರಲ್ಲಿ ಲೀನವಾಗಿದ್ದಾರೆ. ಸಂಗೀತದಲ್ಲಿ ಪರಿಶ್ರಮವುಳ್ಳ ವಸುವಿಗೆ ಜಲಪಾತದ ಧ್ವನಿಯು ತಂಬೂರಿಯ ಶ್ರುತಿಯಂತೆ ಕೇಳಿಸುತ್ತದೆ. ಆದರೆ ಆನಂದದ ಲಹರಿಯ ಕೊನೆಯ ಘಟ್ಟದಲ್ಲಿ ಹೊರಟುದು ಅಪಸ್ವರ. ಶ್ರೀಪತಿಯೋ 'ಜಲಪಾತ'ದ ದೃಶ್ಯವನ್ನು ಚಿತ್ರಿಸಲು ಯತ್ನಿಸಿ ವಿಫಲನಾಗುತ್ತಾನೆ. ಜಲವು ನೆಲದ ಮೇಲೆ ಪಾತವಾಗುವ ರುದ್ರ ಸೌಂದರ್ಯ, ಆತನ ಮನಸ್ಸನ್ನು ಸೆಳೆದರೂ ಆತನು ಅಶಕ್ತ ಕಲಾವಿದನಾಗಿದ್ದಾನೆ. ಶ್ರೀಪತಿ, ಸೋರೆಕಾಯಿ; ವಸು, ತಂತಿ. ಸುಸ್ರಾವ್ಯ ಸಂಗೀತಕ್ಕಾಗಿ ಎರಡರ ಮಧುರ ಜೋಡಣೆ ಸಮ್ಮಿಳನ ಅತೀ ಅವಶ್ಯ. ಇಲ್ಲವಾದರೆ

ಅದು ಅಪಸ್ವರವಾಗುತ್ತದೆ. ಶ್ರೀಪತಿ-ವಸುವಿನ ಮಿಲನವು ಇಂದು ಮಿಲನವೆನಿಸದೇ ಕೇವಲ ದೈಹಿಕವ್ಯವಸ್ಥೆಯಾಗಿದೆ. ಮುಂಬಯಿಯ ಯಾಂತ್ರಿಕಜೀವನಕ್ಕೆ ಹೊಂದಿ ಕೊಂಡು ಹೋಗುವುದಕ್ಕಾಗಿ ಅದರ ಕೃತ್ರಿಮತೆಯನ್ನು ಅಳವಡಿಸಿಕೊಂಡು ಇಬ್ಬರೂ ಅತೃಪ್ತಜೀವಿಗಳಾಗಿದ್ದಾರೆ. ಅಂತೆಯೇ ಅದು ಕೇವಲ Adjustment ಆಗಿದೆಯೇ ಹೊರತು, ಪ್ರೇಮದ ಭಾವನೆಗಳ ಉದ್ದೀಪನೆಯು ಅಲ್ಲಿ ಕಂಡುಬರಲಾರದು. ಸಂಗೀ ತಕ್ಕೆ ಬೇಕಾದ ಸಾಂಗತ್ಯ, ಚಿತ್ರಕಲೆಗೆ ಬೇಕಾದ ಬಣ್ಣಗಳ ಮಿಲನಗಳಂತೆಯೇ ಎರಡೂ ಮನಸ್ಸುಗಳ ಸಾಂಗತ್ಯ ದೇಹಗಳಿಗಿಂತ ಮುಖ್ಯ. ಅದು ಬೇಡಿದೊಡನೆ ಸಿಗುವ ವಸ್ತುವೂ ಅಲ್ಲ. ತಂಬೂರಿಯಿಂದ ಸ್ವರಮೇಳವಾಗಿ ಸಂಗೀತ ಹೊಮ್ಮುವುದು ಸಿನಿ ಮಾದ ಗೀತೆಯಷ್ಟು ಸುಲಭವಲ್ಲ.

"ತಾಳ-ರಾಗಕ್ಕಿಂತ ಭಿನ್ನವಾದುದಲ್ಲ. ತಬಲವು ತಂಬೂರಿಗಿಂತ ಬೇರೆಯಾದ ವಾದ್ಯವಲ್ಲ. ತಂಬೂರಿಯೊಂದೇ ಸತ್ಯ. ಜಗತ್ತಿನಲ್ಲಿ ಹೆಣ್ಣು-ಗಂಡುಗಳೆಂಬ ಭೇದವು ಕೇವಲ ವ್ಯಾವಹಾರಿಕ ಮಿಥ್ಯ. ಅವೆರಡರ ಏಕತೆಯು ಸಾಧಿತವಾಗಿರುವ ಅನಂತ ಕ್ಷಣ ದಲ್ಲಿ ಆ ಭೇದವೇ ಇರುವದಿಲ್ಲ. ಹೆಣ್ಣು-ಗಂಡಾಗಿ, ಗಂಡು-ಹೆಣ್ಣಾಗಿ ಅವೆರಡೂ ಇಲ್ಲವಾಗಿ, ಇಬ್ಬರೂ ಸತ್ತು, ಏಕತೆಯು ಸಾಧಿಸಿರುವ ಕ್ಷಣದ ಮಾನದಿಂದ ನೋಡಿದರೆ ಭಿನ್ನತೆಯ ಮಿಥ್ಯತ್ವವು ಅಳಿಯುತ್ತದೆ. ಇದಾಗದಿದ್ದರೆ ರಸಾಭಾಸ."

'ಜಲಪಾತ' ಪ್ರಭಾಯುತವಾದ ಮತ್ತೊಂದು ಪ್ರತೀಕ. ಶ್ರೀಪತಿಯು ಚಿತ್ರ ವನ್ನು ಬರೆಯಲು ಇಟ್ಟುಕೊಂಡ ಮೂಲಕಲ್ಪನೆ, ನೆಲಕ್ಕೆ ಬೀಳುವ ನೀರಿನ ಅಪರಿಮಿತ ಶಕ್ತಿಯು ಸೃಷ್ಟಿಯಾಗಿ ಪ್ರಕಟವಾಗಬೇಕೆನ್ನುವುದು. ಚಿತ್ರದಲ್ಲಿ ಊನವಾಗಿ ಉಳಿದ ಗೆರೆಯು ಅಂತರ ಆತನನ್ನು ಅಸುಖಿಯಾಗಿಸಿದೆ. ನೆಲಕ್ಕೆ ಬೀಳುವ ನೀರು ಯಾವ ಸೃಷ್ಟಿ ಯನ್ನೂ ಉಂಟುಮಾಡದಿದ್ದರೆ, ಅದರಿಂದುಂಟಾಗುವ ಅಪ್ರಯೋಜಕತೆಯೇ ತಮ್ಮ ಮಗುವಿನ ಪ್ರಾಣಹರಣದ ಕ್ರಿಯೆಯಲ್ಲಿದೆ. ಈ ಲೋಕಕ್ಕೆ ಬರಬೇಕಾದ ಜೀವವೊಂದು ಬೆಳಕನ್ನು ಕಾಣುವ ಪೂರ್ವದಲ್ಲಿಯೇ ನಾಶವಾಗಿ ಹೋಗುತ್ತದೆ. ವಿಶ್ವನಿಗೆ ಬೇಗನೇ ಬರಲಿದ್ದ ತಮ್ಮನೋ, ತಂಗಿಯೋ ಅವರಿಗೆ ಬೇಡವಾಗಿ ಅದನ್ನು ನಿವಾರಿಸಿಕೊಳ್ಳು ವದಕ್ಕೆ ಕೃತ್ರಿಮಸಾಧನಗಳನ್ನವರು ಬಳಸಿದ್ದಾರೆ. ಅದರಿಂದಾಗಿ, ಮೂಲಶಕ್ತಿಯ ಪಾತವಾಗಿದೆ. ಪರಿಣಾಮವಾಗಿ ಸುಂದರವಾದ ಬೆಳದಿಂಗಳಿನ ಇಂತಹ ಉದ್ದೀಪನೆಯ ವೇಳೆಯಲ್ಲಿ ಅವರಿಬ್ಬರೂ ಅದ್ವೈತತೆಯನ್ನು ಪಡೆಯದೆ ಅತೃಪ್ತಿಯಿಂದ ತೊಳ ಲಾಡುತ್ತಿದ್ದಾರೆ. ಜಲಪಾತದ ಎಲ್ಲ ಸೀಳುಗಳೂ ಕೂಡಿಕೊಂಡು ಬೆಳ್ನೊರೆಯನ್ನು ಸೂಸುತ್ತ, ನಾದದೊಂದಿಗೆ ರಭಸದೊಂದಿಗೆ ಭೂಮಿಗೆ ಬೀಳುತ್ತದೆ. ಅಲ್ಲಿ ಭೂಮಿ ಯನ್ನು ಕೂಡಲು ತವಕ, ಆತುರವಿದೆ. ಆದರೆ ಶ್ರೀಪತಿ, ವಸು ನಿಸ್ಸಹಾಯಕರು.

"ಕೆಳಗೆ ಧುಮುಕುವ ನೀರು ಒಂದು ತೆರನಾದ ಆವಿಯ ತೆರೆಯ ಮೇಲೆ ನಿಂತಂತೆ ಕಾಣುತ್ತದೆ. ನೆಲವು ಸಿಕ್ಕದು. ರಾತ್ರಿಯ ಚಂದ್ರನ ಮಂದಬೆಳಕಿನಲ್ಲಿ ಭೂಮಿಯು ಕಾಣಿಸದೋ ಅಥವಾ ವಸ್ತುಸ್ಥಿತಿಯ ವ್ಯವಸ್ಥೆಯಲ್ಲಿಯೇ ಭೂಮಿಗೆ ಪಾತವನ್ನು ಸ್ವೀಕರಿಸಲಾಗದ ಶಾಪವಿದೆಯೋ.... ಸ್ವರ್ಗದಿಂದ ನರಕಕ್ಕೆ ಅಪ್ಪಳಿಸಿ ಎಸೆದಂತಾಯಿತು." ಅಲ್ಲಿ ಯಾವ ಸಂವೇದನೆಯಿಲ್ಲ, ರಭಸವಿಲ್ಲ. ಭೂಮಿಯನ್ನು ನೀರು ಮುಟ್ಟುವಲ್ಲಿ ಕಾಣುವ ಅಂತರವನ್ನೇ ವಸುಮತಿಯೊಡನೆ ಕಳೆದ ಕ್ಷಣಗಳಲ್ಲಿ ಶ್ರೀಪತಿ ಅನುಭವಿಸುತ್ತಾನೆ. ಚಿತ್ರ, ಅಸಫಲವಾದರೆ ಕಲಾವಿದನಿಗೆ ಉಂಟಾಗುವ ನೋವು, ಹೆಣ್ಣುಮಂಗಳು ಹಲೆಯುಳಿದಂತೆ. ಕಲಾವಿದನ ಭಾವನಾತ್ಮಕ ಶ್ರದ್ಧೆಯ ಅಭಿವ್ಯಕ್ತಿ, ಜಲಪಾತದ ಪ್ರತೀಕದಲ್ಲಿ ಸಾರ್ಥಕ; ಅದರ ಅರ್ಥವನ್ನು ಹಿಗ್ಗಿಸಿ ಹಿಂಜಿ ನೋಡಲು ಹೊರಡದಿದ್ದರೆ ಮಾತ್ರ.

ಮನಸ್ಸಿನಲ್ಲಿ ಉಳಿದ ಕಲ್ಮಶವನ್ನು ತೊಡೆದುಹಾಕಲು, ತಡೆಯನ್ನು ಇಲ್ಲವಾಗಿರಿಸಲು ಕೆಲದಿನಗಳ ವರೆಗೆ ದಂಪತಿಗಳು ಬ್ರಹ್ಮಚರ್ಯವನ್ನು ಪಾಲಿಸುತ್ತಾರೆ. ಬೇಸಿಗೆ ಕಳೆದು ಒಂದೇ ಸಮನಾಗಿ ಮಳೆ ಹೊಡೆದಿದೆ. "ಸಮುದ್ರ ಕಾಠಿಣ್ಯವನ್ನು ಕಳೆದುಕೊಂಡು ಲಾಸ್ಯದಿಂದ ತೊನೆಯುತ್ತಿತ್ತು. ಹಾಲಿನಂತೆ ಉಕ್ಕಿ ಮೇಲಿನ ಆಕಾಶವನ್ನೇ ತನ್ನಲ್ಲಿ ಮುಳುಗಿಸುಕೊಳ್ಳುವಷ್ಟು ಏರಿ ಬಂದಿತು. ಭೂಮಿಯೇ ಆಕಾಶದಲ್ಲಿ ಒಂದಾಗಲು ಮೇಲೆ ಎದ್ದು ಬರುತ್ತಿತ್ತು ...." ಈ ಉಬ್ಬರ, ಈ ಭೂಮ್ಯಾಕಾಶಗಳ ಸಂಗಮ ಒಂದೇ ಸತ್ಯ. ಅದನ್ನು ತಡೆಯಲು ಕಟ್ಟಿದ ಕೃತಕಗೋಡೆ ಉಳಿಯುವುದಿಲ್ಲ. ಬ್ರಹ್ಮಚರ್ಯ ಅತಿಯಾದರೆ ಅದು ಸಂಸಾರಿಯಲ್ಲಿ ಅಹಂಕಾರವನ್ನು ಹುಟ್ಟಿಸುತ್ತದಂತೆ. ಶ್ರೀಪತಿ–ವಸು ಉತ್ಕಟತೆಯಲ್ಲಿದ್ದಾಗ, ವಸು ತಮ್ಮಿಬ್ಬರ ನಡುವಿನ ತೆರೆ ಹೋಗಬೇಕು ಎನ್ನುತ್ತಾಳೆ. ಕಳೆದುಕೊಂಡಿದ್ದ ಒಬ್ಬರನ್ನೊಬ್ಬರು ಮತ್ತೆ ಕಂಡುಕೊಳ್ಳುತ್ತಾರೆ. ಸಮುದ್ರದ ಭೋರ್ಗರೆತ ಶಾಂತವಾಗಿದೆ. ಮರುದಿನ ಸಮುದ್ರದ ಮರಳಿನ ಮೇಲೆ ಅವರು ಮಕ್ಕಳಂತೆ ನಲಿಯುತ್ತಾರೆ. ಗಂಡು–ಹೆಣ್ಣೆಂಬ ಭೇದವಳಿದು ಅದ್ವೈತತೆಯೊಂದೇ ಅಲ್ಲಿ ಉಳಿದಿರುವ ಭಾವ. ಲೈಂಗಿಕಕ್ರಿಯೆಯು ಮನಸ್ಸಿನ ಸಂತೋಷ ಇಲ್ಲದೆಯೇ ಕೇವಲ ದೇಹಗಳ ಅವಶ್ಯಕತೆಯಾದಾಗ, ಸಾಂಗತ್ಯವಿಲ್ಲದಾಗ ಅವರು ಅನುಭವಿಸಿದ ಹಿಂಸೆಯು ಕಳೆದುಹೋಗಿದೆ.

ರೆಬೆಲೋಳ ಮನೆಗೆ ಹೋಗಿ ಬಂದಾಗಲೆಲ್ಲಾ, ಶ್ರೀಪತಿಗೆ ಉಂಟಾಗುವದು ಮಾನಸಿಕ ಅತೃಪ್ತಿ ಮಾತ್ರ. ಉದ್ದೇಶರಹಿತವಾದ ಲೈಂಗಿಕಕ್ರಿಯೆ, ಮನಸ್ಸುಗಳ ಉದ್ದೀಪನೆಗೆ ಸಂತೋಷಕ್ಕೆ ಸಾಧನವಾಗಲಾರದು. ಅದು ಒಣ ನೆಲದಲ್ಲಿ ಬೀಜ ಬಿತ್ತಿದಂತೆ. ಸುಮ್ಮನೇ ತಂಬೂರಿ ಮೀಟುವದರ ಪರಿಣಾಮ, ಅರ್ಥರಹಿತ ಸಪ್ಪಳದ ಸಮೂಹವನ್ನು ಪಡೆಯುವುದು ಮಾತ್ರ. ತಂಬೂರಿ ತಂತಿಗಳ ಪ್ರತೀಕ, ಇಲ್ಲಿ ಪ್ರಭಾಯುತವಾದ

ರೀತಿಯಲ್ಲಿ ವ್ಯಕ್ತವಾಗಿದೆ. ಅದೇ ರೆಬೆಲ್ಲೋಳನ್ನು ಕಾದಂಬರಿಕಾರ "ಅವಳು ಒಂದು ಹಾರ್ಮೋನಿಯಂ ಇದ್ದಂತೆ. ತಂಬೂರಿಯನ್ನಾದರೆ ಶೃತಿಮಾಡಲು ಗಂಟೆಗಟ್ಟಲೆ ಕಾಲವೇ ಹಿಡಿದೀತು. ಎಷ್ಟೋ ದಿನ ಎಷ್ಟು ಯತ್ನಿಸಿದರೂ ತಂಬೂರಿಯು ಶೃತಿ ಮಾಡುವದೇ ಇಲ್ಲ. ಒಮ್ಮೆ ಶೃತಿಯಾಗಿ ನಾದವನ್ನು ಸೃಜಿಸಲು ಮೊದಲು ಮಾಡಿದರೆ ಅದು ಅನಾದಿ ಅನಂತರಗಳ ಭಾವವನ್ನೇ ಕೊಡುತ್ತದೆ. ಹಾರ್ಮೋನಿಯಂಗೆ ಶೃತಿ ಮಾಡುವ ಅಗತ್ಯವಿಲ್ಲ. ತಿದಿ ಒತ್ತಿದ ತಕ್ಷಣ ಹಾಡುತ್ತದೆ. ಅದರ ಧ್ವನಿಯಲ್ಲಿ ಬಲವಿದೆ, ಭರಾಟೆಯಿದೆ, ಉದ್ವೇಗ ಉದ್ದೇಶಗಳಿವೆ.'' ಎಂಬುದಾಗಿ ವರ್ಣಿಸುವಾಗ ಅಲ್ಲಿಯ ಹೋಲಿಕೆಯೂ ಔಚಿತ್ಯ ಪೂರ್ಣವಾಗುತ್ತದೆ.

ವಸುಂಧರಾ ಈಗ ಬಸುರಿ. ಕೇವಲ ಡಿಜೈನುಗಳನ್ನೇ ಬರೆದು ಬೇಸತ್ತು ಹೆಂಡತಿ ಮಕ್ಕಳನ್ನು ಕರೆದುಕೊಂಡು ಕಲಾವಿದ ಖಂಡಾಲಕ್ಕೆ ಬರುತ್ತಾನೆ. ಸುತ್ತಲಿನ ಪ್ರಕೃತಿ, ರೌದ್ರತೆ-ಸುಂದರತೆಗಳ ಸಂಗಮ. ಹಸಿರು ವನರಾಜಿಯು ಪ್ರಕೃತಿಯ ಕೋಮಲತೆಯನ್ನು ಪ್ರಕಟಿಸಿದರೆ, ಕಲ್ಪನೆಯನ್ನು ನಡುಗಿಸುವ ಎತ್ತರಗಳು ಅದರ ಗಾಂಭೀರ್ಯವನ್ನು ಸೂಚಿಸುತ್ತವೆ. ಸೃಷ್ಟಿಯ ಬಲೆಯಲ್ಲಿ ಸಿಲುಕಿದ ಕಲಾವಿದನಿಗೆ ಅವಳದೇ ಮತ್ತೊಂದು ರೂಪವಾದ ಸೌಂದರ್ಯದ ಸೌಮ್ಯರೂಪ ವಸು, ಮನಃಪಟಲದ ಮೇಲೆ ನಿಲ್ಲುತ್ತಾಳೆ. ಆಕ್ಷಣವೇ ಆತನಿಗೆ ಚಿತ್ರವನ್ನು ಬರೆಯ ಬೇಕೆನ್ನುವ ಕಲ್ಪನೆ ಮೂಡುತ್ತದೆ. ಚಿತ್ರವನ್ನು ಬರೆಯುತ್ತಾನೆ. ಬೆಟ್ಟಗಳ ಹಸುರಿನ ಹಿನ್ನೆಲೆಯಲ್ಲಿ ಹುಲ್ಲಿನ ಮೇಲೆ ನಮಗೆ ಬೆನ್ನು ಮಾತ್ರ ಕಾಣುವಂತೆ ಕುಳಿತ ಹೆಂಗಸು; ಅವಳು ವನದೇವತೆಯ ರೂಪದಲ್ಲಿದ್ದಾಳೆ. ಬೆನ್ನಿನಮೇಲೆ ವಸ್ತ್ರ ಮಾತ್ರ ಇಲ್ಲ.

'ಪ್ರಕೃತಿಗೆ ಸಾವು ಇಲ್ಲ, ಬದಲಾವಣೆ ಮಾತ್ರ ಇದೆ'. ಪ್ರಕೃತಿಯಲ್ಲಿನ ಋತು ಬದಲಾವಣೆಗಳು, ಚಿತ್ರದ ವಸ್ತು. ಒಂದು ಋತುವಿನ ನಂತರ ಮತ್ತೊಂದು. ಮಳೆಗಾಲದಲ್ಲಿ ತೃಪ್ತಿಯಿಂದ ಬೀಗುವ ವನರಾಜ. ಅದರ ವಿಕಾಸದ ವಿವಿಧ ಹಂತಗಳು ಕುಡಿಯೊಡೆದು ಬಳ್ಳಿಯಾಗಿ ಹರಡಿ, ಮೊಗ್ಗಾಗಿ ಅರಳಿ, ಹೂವಾಗಿ ಉದುರಿ ಹೀಚಾಗಿ, ಕಾಯಾಗಿ ಮಾಗಿ ಹಣ್ಣಾಗುವ ವಿವಿಧ ಹಂತಗಳು. ವಸುಂಧರೆಯನ್ನು ನಾಲ್ಕೈದು ಸಲ ಖಂಡಾಲ ಘಟ್ಟಕ್ಕೆ ಶ್ರೀಪತಿ ಕರೆದೊಯ್ಯುತ್ತಾನೆ. ಪ್ರಕೃತಿಯ ಸಚೇತನ ರೂಪವಾದ ಅವಳು ಪೂರ್ಣಗರ್ಭಿಣಿಯಾಗುವ ವರೆಗಿನ ಅಂದರೆ ಒಂದೊಂದು ಮಾಸದಲ್ಲಿ ಕಂಡು ಬರುವ ಸೂಕ್ಷ್ಮ ಬದಲಾವಣೆಯನ್ನು ಕಲಾತ್ಮಕವಾಗಿ ಚಿತ್ರಿಸುತ್ತಾನೆ. ಹಸಿರುಟ್ಟ ಪ್ರಕೃತಿಯು ಫಲವತಿಯಾದ ರೀತಿಯಲ್ಲಿಯೇ ಗರ್ಭಿಣಿಯಾದ ವಸುವಿನ ತಾಯ್ತನದ ವಿವಿಧ ಅವಸ್ಥೆಗಳನ್ನು ಬರೆಯುತ್ತಾನೆ. ರೇಖಾವಿನ್ಯಾಸದಲ್ಲಿ, ವರ್ಣಸಂಯೋಜನೆಯಲ್ಲಿ ಆತ ಅತ್ಯಂತ ದಕ್ಷತೆಯಿಂದ ಕಾರ್ಯಮಾಡಿದ್ದಾನೆ. ಬೆನ್ನಿನ ಬೆತ್ತಲೆಯಾದ ಭಾಗವು ಮಣ್ಣಿನ ಬಣ್ಣದಂತೆ, ನಡುವಿನ ವಸ್ತ್ರ, ಕಾಡಿನೆಲೆಗಳ ಬಣ್ಣದಂತೆ ಸೊಂಟದಿಂದ

ಅಗಲವಾಗುತ್ತ ಬೆಳೆದ ಬೆನ್ನುಕಟ್ಟೂ ಒಂದೇ, ಕಾಂಡದ ಊರ್ಧ್ವಮುಖದ ಆಕಾರವೂ ಒಂದೇ. ಸೃಷ್ಟಿಕ್ರಿಯೆಯಲ್ಲಿ ಸ್ತ್ರೀಗೂ ಪ್ರಕೃತಿಗೂ ಎರಡಕ್ಕೂ ಅಷ್ಟೇ ಸ್ಥಾನ. ಸ್ತ್ರೀಯಾದರೆ ಬೃಹತ್‌ರೂಪದ ಒಂದು ಚಿಕ್ಕ ಅಂಶ ಅಷ್ಟೇ. ಪರಿವರ್ತನಶೀಲೆಯಾದ ಪ್ರಕೃತಿಯಲ್ಲಿ, ವಿವಿಧ ಋತುಗಳಲ್ಲಿ ಕಂಡುಬರುವ ಬದಲಾವಣೆಗಳೇ ಪ್ರಕೃತಿಯ ಅಂಶವಾದ ವಸುವಿನಲ್ಲಿಯೂ ಕಂಡುಬರುತ್ತವೆ.

ಪ್ರಕೃತಿಯು ಒಂದು ಪರಿವರ್ತನೆ. ನಮ್ಮ ಬಾಳೂ ಜೀವನವೂ ಹಾಗೆಯೇ. ಸೃಷ್ಟಿಯನ್ನು ನಾವು ಅನುಕರಿಸುವುದನ್ನು ನಿರಾಕರಿಸುವುದು ಸಾಧ್ಯವೂ ಇಲ್ಲ. ಕಲಾವಿದ ಚಿತ್ರ ಬರೆಯುವುದು ಬಣ್ಣ ಕೆಡಿಸುವುದಕಲ್ಲ. ಹಾಗೆಯೇ ತಂಬೂರಿಯು ಟಾಯಿಮ್‌ಪಾಸ ಸಾಧನವೂ ಅಲ್ಲ. ಸಾಹಿತಿಯ ವಿಷಯದಲ್ಲಿಯೂ ಅಷ್ಟೇ. ಅವೆಲ್ಲ ಸೌಂದರ್ಯ; ಅದರ ಮೂಲಕ ಗೋಚರವಾಗುವ ಸತ್ಯದ ಸಾಧನಗಳು. ಸಾಹಿತಿ ಅದನ್ನು ಬಳಸಿಕೊಳ್ಳುವ ರೀತಿ ಆತನ ಕಲ್ಪನೆಗೆ, ಬುದ್ಧಿಗೆ, ಯೋಗ್ಯತೆಗೆ ಸೇರಿದ್ದು.

■ ■

ಅಂತರ

ಮಹಿಮ

ಇಲ್ಲಿ ಬದುಕಿಗೂ ವಿಚಾರಕ್ಕೂ
ಮಧ್ಯ ಬೆಸುಗೆ ಬಿಟ್ಟಿದೆ.
ಅವಿಭಾಬಾದಂತೆ
ಒಂದು ಮತ್ತೊಂದಾಗುವ ಬದುಕಿನ
ಜೀವರಸ ಚೆಲ್ಲಾಪಿಲ್ಲಿಯಾಗಿದೆ.
ವಿಚಾರಗಳೋ
ಮಾಸಕೊಮ್ಮೆ ಗರ್ಭಕಟ್ಟದೆ
ಹೊರಬರುವ ಅವಳ ಅಂಡಾಣುಗಳಾಗಿವೆ.
ಇಲ್ಲಿ ಸಮಸ್ಯೆಗೂ
ಪರಿಹಾರಕ್ಕೂ ಪೂರ್ವ–ಪಶ್ಚಿಮಗಳ
ಅಂತರ ಏರ್ಪಟ್ಟಿದೆ.
ಏರಲಾಗದ ಇಳಿಯಲಾಗದ
ಈ ಸ್ಥಳದಲ್ಲಿ
ಅಂತರದ ಬಿರುಕುಬಿಟ್ಟಿದೆ
ಬಹಳ ದಿನಗಳಿಂದ
ನಾನೂ ನನ್ನಂಥವರೂ ಸರಿಪಡಿಸುತಿದ್ದೇವೆ.
ಇಲ್ಲ; ಸರಿಪಡಿಸುವ ಸೋಗುಹಾಕಿದ್ದೇವೆ.

ಕನ್ನಡದಲ್ಲಿ ನಾಮಗುಣವಾಚಕ

ವಿಲ್ಯಂ ಮಾಡ್ತ

ನಾಮಗುಣವಾಚಕ (Adjective) ಕನ್ನಡದಲ್ಲಿ ಮಾತ್ರವಲ್ಲ ದ್ರಾವಿಡಭಾಷೆಗಳಲ್ಲಿಯೇ ಒಂದು ಸಮಸ್ಯೆಯಾಗಿದೆ. ಕೆಲವು ದ್ರಾವಿಡಭಾಷಾವಿಜ್ಞಾನಿಗಳು ದ್ರಾವಿಡ ಭಾಷೆಗಳಲ್ಲಿ ನಾಮಗುಣವಾಚಕವನ್ನು ಅಲ್ಲಗಳೆದರೆ, ಮಿಕ್ಕವರು ಅದರ ಅಸ್ತಿತ್ವವನ್ನು ಎತ್ತಿ ಹಿಡಿದಿದ್ದಾರೆ.

ದ್ರಾವಿಡ 'ನಾಮಗುಣವಾಚಕಗಳು' ಗುಣವಾಚಕ (Qualitative) ಅಥವಾ ಸಂಬಂಧವಾಚಕನಾಮಗಳೇ ವಿನಃ ಶುದ್ಧನಾಮಗುಣವಾಚಕಗಳಲ್ಲ. ಅವುಗಳನ್ನು ವಿಶೇಷ್ಯದ ಪೂರ್ವಸ್ಥಾನದಲ್ಲಿ ಸೇರಿಸಿದಾಗ, ನಾಮಗುಣವಾಚಕದ ಅರ್ಥವನ್ನು ಅವು ಸೂಚಿಸುತ್ತವೆಂದು ರೆ. ಕಾಲ್ಡ್‌ವೆಲ್‌ರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸಿ, ನಾಮಗುಣವಾಚಕಗಳ ಅಸ್ತಿತ್ವವನ್ನು ಸಮಗ್ರ ದ್ರಾವಿಡದಲ್ಲಿಯೇ ಅಲ್ಲಗಳೆದಿದ್ದಾರೆ[1] ತಮ್ಮ ಅಭಿಪ್ರಾಯವನ್ನು ಖಚಿತಗೊಳಿಸುವುದಕ್ಕಾಗಿ ಅವರು ತಮಿಳಿನಿಂದ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ : **ಪೊನ್ ಅರಿದು** 'ಹೊನ್ನು ದುರ್ಲಭ', **ಪೊನ್ ಮುಡಿ** 'ಹೊನ್ನ ಮುಡಿ (ಕಿರೀಟ)'. ಈ ಉದಾಹರಣೆಗಳಲ್ಲಿ ಮೊದಲನೆಯ ಸಲ **ಪೊನ್ನ** 'ಹೊನ್ನು' ಎಂಬುದು ನಾಮಪದವಾದರೆ, ಎರಡನೆಯ ಸಲ ಅದು ಗುಣವಾಚಕದಂತೆ ವರ್ತಿಸುತ್ತದೆ. ಆದರೆ ತನ್ನ ರೂಪದಲ್ಲಿ ಅದು ಯಾವ ಬದಲಾವಣೆಯನ್ನೂ ಪಡೆಯುವುದಿಲ್ಲ.

ರೆ. ಕಿಟೆಲ್‌ರು[2] ನಾಮಗುಣವಾಚಕಗಳನ್ನು ನಾಮಪದದ ಒಂದು ಉಪವರ್ಗ (Sub-Class)ವನ್ನಾಗಿ ತಿಳಿದುಕೊಂಡಿದ್ದರಿಂದ ತಮ್ಮ ಶಬ್ದ ನಿಘಂಟು[3]ವಿನಲ್ಲಿಯೂ

---

1. "Dravidian adjectives, properly as called like those of Scythian tongues, are nouns of quality or relation, which acquire the signification of adjectives merely by being prefixed to substantive nouns without declensional change......" Robert Caldwell, *A Comparative Grammar of Dravidian Languages*, 1961, Madras 3rd ed., p. 308. *See* also p. 309, 1st ed. 1856.
2. F. Kittel, *A Grammar of Kannada Language*, 1903, Mangalore, pp 242-51
3. *A Kannada English Dictionary*, 1894, Mangalore.

ನಾಮವಾಚಕವೆಂಬ ಪ್ರತ್ಯೇಕ ವರ್ಗವನ್ನು ಅವರು ಸೂಚಿಸಿಲ್ಲ. ಯೂಲ್ಸ್‌ಬ್ಲೊಕನೂ[೪] ನಾಮಗುಣವಾಚಕಗಳ ಬಗ್ಗೆ ಕಿಟೆಲರ ಅಭಿಪ್ರಾಯವನ್ನೇ ಎತ್ತಿಹಿಡಿದಿದ್ದಾನೆ. ನಾಮ ಗುಣವಾಚಕಗಳು ಇಂಗ್ಲಿಷಿನಲ್ಲಿ ಸ್ವಭಾವತಃ ಅವ್ಯಯಗಳು. ಕನ್ನಡದಲ್ಲಿ ಈ ರೀತಿಯ ನಾಮಗುಣವಾಚಕಗಳಿಲ್ಲ. ಕಾರಣ, ಕನ್ನಡದಲ್ಲಿ ನಾಮಗುಣವಾಚಕಗಳೇ ಇಲ್ಲವೆಂದು ಹೆರಲ್ಡ್ ಸ್ಪೆನ್ಸರನು ತನ್ನ ಖಚಿತ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾನೆ.[೫]

ಇಲ್ಲಿಯ ವರೆಗೆ ನಾಮಗುಣವಾಚಕ ವರ್ಗದ ವಿರೋಧ ಮಂಡಿಸಿದ ಕೆಲವು ಅಭಿ ಪ್ರಾಯಗಳನ್ನು ನೋಡಿದೆವು. ಈಗ ಅದರ ಪರವಾಗಿ ಮುಂದೆ ಬಂದ ಕೆಲವು ಅಭಿ ಪ್ರಾಯಗಳನ್ನು ಗಮನಿಸೋಣ. ಟಿ. ಬರೊ[೬] ಇವರ ಅಭಿಪ್ರಾಯದಂತೆ ದ್ರಾವಿಡ ಭಾಷೆಗಳಲ್ಲಿ ನಾಮಪದಕ್ಕಿಂತ ಭಿನ್ನವಾದ ನಾಮಗುಣವಾಚಕವೆಂಬ ಒಂದು ಪ್ರತ್ಯೇಕ ವರ್ಗವಿದೆ. ಮಾಸ್ಟರ್[೭] ಎಂಬಾತನೂ ನಾಮಗುಣವಾಚಕಗಳನ್ನು ನಾಮಪದಗಳಿಂದ ಪ್ರತ್ಯೇಕಿಸಿದ್ದಾನೆ. ಅರ್ಥದೃಷ್ಟಿಯಿಂದ ನೋಡಿದಾಗ ದ್ರಾವಿಡ ಭಾಷೆಗಳಲ್ಲಿ ನಾಮ ಗುಣವಾಚಕಗಳು ನಾಮಪದಗಳಿಂದ ಭಿನ್ನವೆಂಬುದು ಸ್ಪಷ್ಟವಾಗುತ್ತದೆಂದು ಸ್ವೆಲೆಬಿಲ್[೮] ವಾದಿಸಿದ್ದಾನೆ. ನಾಮಪದದಲ್ಲಿ ಹಲವಾರು ಗುಣಗಳು ಅಡಕವಾಗಿರುತ್ತವೆ. ಆದರೆ ನಾಮಗುಣವಾಚಕಗಳಲ್ಲಿ (ಉದಾ: **ಸಿಲ್** 'ಸಣ್ಣ', **ಪೆರ್** 'ಹಿರಿಯ') ಒಂದೇ ಗುಣ ಗಳು ಅಡಕವಾಗಿರುತ್ತದೆಂದು ಅವರ ಮತ. ನಾಮಗುಣವಾಚಕದ ಅಸ್ತಿತ್ವ ಒಪ್ಪುವ ಪಂಥಕ್ಕೆ ಸೇರಿದ ಇತರ ವಿದ್ವಾಂಸರಲ್ಲಿ ಈ ಕೆಳಗಿನವರು ಪ್ರಮುಖರು : ವಿನ್‌ಫೀಲ್ಡ್, ಬ್ರ್ಯಾಟ್, ಶೇಖರ್, ಎಮಿನೊ, ನರಸಿಂಹಾಚಾರ್, ನರಸಿಂಹಯ್ಯ ಹಾಗೂ ಗಾಯಿ.

---

೪. Jules Bloch, *The Grammatical structure of Dravidian Languages*, tr. by R. G. Harshe, 1954, Poona, p. 42

೫. "If by adjectives we understand, as in English, a class of indeclinable words in order to attribute qualities or other distinguishing features to the objects indicated by then, then Kanarese has, strictly speaking, no adjectives." Herold Spencer, *A Kanarese Grammar*, Revised by W. Preston, 1950, Mysore, p. 239.

೬. T. Burrow, "Review of structure grammaticale des langues dravidiennes par Jules Bloch", *BSOAS*, 12-1-1947, pp. 254-5.

೭. A. Master, "Review of structure grammaticale des langues dravidiennes par Jules Bloch", *JRAS*, 1949, p. 107.

೮. K. Zvelebil, "Review of Bloch's structure of Dravidian Languages", *Archive Orienta lini*, 1956, 24, p. 167; "Review of M. Andronov's Tamil Language", *Op. cit*, 29, 1961, pp.286-7 and "More about adverbs and adjectives in Tamil", *Tamil Culture*, 9-3-1961, pp. 286-7.

೯. ಅವರ ಅಭಿಪ್ರಾಯಗಳ ಬಗೆಗಿನ ವಿವರ ತಿಳಿದುಕೊಳ್ಳಲು ಅವರ ಗ್ರಂಥಗಳನ್ನೇ ಓದಿರಿ; ಅವುಗಳಿಗಾಗಿ ಲೇಖನದ ಕೊನೆಯಲ್ಲಿರುವ ಗ್ರಂಥಋಣವನ್ನು ನೋಡಿರಿ.

ಈಗ ಕೆಲವು ವಾಕ್ಯಗಳನ್ನು ಗಮನಿಸುವ :

೧. ಸಣ್ಣ ಹುಡುಗಿ ಕುಣಿಯುತ್ತಾಳೆ.

೨. ಸಣ್ಣ ಹುಡುಗ ಆಡುತ್ತಾನೆ.

೩. ಸಣ್ಣ ನಾಯಿಮರಿ ಆಡುತ್ತದೆ.

ಮೇಲಿನ ೧–೩ ವಾಕ್ಯಗಳಲ್ಲಿ ಕ್ರಮವಾಗಿ **ಸಣ್ಣ ಹುಡುಗಿ, ಸಣ್ಣ ಹುಡುಗ** ಮತ್ತು **ಸಣ್ಣ ನಾಯಿಮರಿ** ಎಂಬ ಪದಪುಂಜಗಳು ಬರುತ್ತವೆ. ಇವುಗಳಲ್ಲಿ **ಹುಡುಗಿ, ಹುಡುಗ** ಮತ್ತು **ನಾಯಿಮರಿ** ಎಂಬ ಪ್ರಧಾನಾಂಗಗಳಿಗೆ ಆಧೀನವಾಗಿ **ಸಣ್ಣ** ಎಂಬ ಪದ ಬರುತ್ತದೆ.

ಈ **ಸಣ್ಣ** ಎಂಬ ಪದ ಮೂಲತಃ **ಸಣ್ಣವಳು** ಎಂದಿದ್ದು ಒಂದು ರೂಪಾಂತರ (transformation)ದಿಂದಾಗಿ ಪ್ರಸ್ತುತ ರೂಪ ಪಡೆದಿದೆಂಬುದನ್ನು ಮರೆಯುವಂತಿಲ್ಲ.

ಹುಡುಗಿ ಕುಣಿಯುತ್ತಾಳೆ. + ಅವಳು ಸಣ್ಣವಳು (ಆಗಿದ್ದಾಳೆ). → ಸಣ್ಣ ಹುಡುಗಿ ಕುಣಿಯುತ್ತಾಳೆ. ಕಾರಣ ಮೂಲಸ್ಥಿತಿಯಲ್ಲಿ— ಮೂಲವಾಕ್ಯ[10]ಗಳಲ್ಲಿ— ದ್ರಾವಿಡ ಭಾಷೆಗಳಲ್ಲಿ [ಆದ್ದರಿಂದ ಕನ್ನಡದಲ್ಲಿಯೂ] ನಾಮಗುಣವಾಚಕಗಳಿಲ್ಲ; ಅರ್ಥಾತ್ ಅವು ಸ್ವಭಾವತಃ ನಾಮಪದಗಳೇ. ಇದೇ ಕಾರಣದಿಂದಾಗಿ ತಮಿಳಿನ ವ್ಯಾಕರಣ ಸಂಪ್ರದಾಯದಲ್ಲಿಯೂ ನಾಮಗುಣವಾಚಕ ವರ್ಗಕ್ಕೆ ಸ್ವತಂತ್ರ ಅಸ್ತಿತ್ವ ಇಲ್ಲ. ನಾಮಪದಗಳಿಂದ ನಾಮಗುಣವಾಚಕಗಳು ಸಾಧಿತಗೊಂಡಿವೆಯೆಂದೇ ಅವರು ವಿವರಣೆಯನ್ನಿತ್ತಿದ್ದಾರೆ.[11] ಉದಾ: **ಚೆಮ್** 'ಕೆಮ್' < **ಚೆಮ್ಮೆಯ್** (ನಾಮಪದ) **ಚಿಱಿ** 'ಕಿರು' < **ಚಿಱಿಮೆಯ್** (ನಾಮಪದ).

ಕೇಶಿರಾಜ ತನ್ನ **ಶಬ್ದಮಣಿದರ್ಪಣ**[12]ದ ೭೩ನೆಯ ಸೂತ್ರದಲ್ಲಿ ಕೆಲವು ತುಕಾರಾಂತ ದುಕಾರಾಂತ ರೂಪಗಳನ್ನಿತ್ತು ವಿಕಲ್ಪದಿಂದ ಅವಕ್ಕೆ ದ್ವಿತ್ವ ಉಂಟೆಂದು ಹೇಳಿ ಅವನ್ನು ಗುಣವಾಚಿ ಎಂದು ಸ್ಪಷ್ಟವಾಗಿ ಕರೆದಿದ್ದಾನೆ :

ಒಳ್ಳಿತು ಮೆಲ್ಲಿತು ಬೆಟ್ಟಿತು
ತೆಳ್ಳಿತು ಬಿಸಿದಸಿದು ಕಡಿದು ನಿಡಿದಿನಿದೆಂಬ

೧೦. ಮೂಲ ವಾಕ್ಯವೆಂದರೇನು ? ನೋಡಿ : ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು, ೧೯೭೩, ಪು. ೯೩–೯೪.

೧೧. A. C. Sekhar, *Evolution of Malayalam* 1953, Poona, foot note 1. p. 93.

೧೨. ಕೇಶಿರಾಜ, ಶಬ್ದಮಣಿದರ್ಪಣಂ, (ಸಂ.) ಫ. ಕಿಟೆಲ್, ೧೮೭೧. ಮಂಗಳೂರು, ಪು. ೯೫.

ತುಳ್ಳುವು ತು ದು ಕಡೆಯೆನೆಕ್ಕೆ
ಕೊಳ್ಳಿಂ ಗುಣವಾಚಿ ಮೇಣ್ ತುಕಾರಂ ದ್ವಿತ್ವಂ

ಆ ಮೇಲೆ ಪ್ರಯೋಗದಲ್ಲಿ ಈ ಕೆಳಗಿನಂತೆ ಉದಾಹರಣೆ ಕೊಟ್ಟಿದ್ದಾನೆ :

ತುಕಾರಾಂತಕ್ಕೆ :

ಶಬ್ದ	ಅರ್ಥ[೧೩]
ಬಟ್ಟಿತು, ಬಟ್ಟಿತ್ತು	'that which is round'
ತೋರಿತು, ತೋರಿತ್ತು	'that which is big'
ನೇರಿತು, ನೇರಿತ್ತು	'that which is straight, fit, proper or right'
ಕೂರಿತ್ತು	'that which is sharp'
ಉದ್ದಿತ್ತು	'that which is high'
ನುಣ್ಣಿತ್ತು	'that which is smooth'
ತಣ್ಣಿತ್ತು	'that which is cold'
ಗುಂಡಿತ್ತು	'that which is deep'
ಅಗಲಿತ್ತು	'that which is extensive'
ದೊಡ್ಡಿತ್ತು	'that which is large'
ಬಲ್ಲಿತ್ತು	'that which is strong'
ಬಿಣ್ಣಿತ್ತು	'that which is stout, big or heavy'

ದುಕಾರಾಂತಕ್ಕೆ :

ಕರಿದು	'that which is black'
ಬಿಳಿದು	'that which is white'
ಪಳದು	'that which is old'
ಬಿಸಿದು	'that which is hot'
ಅಸಿದು	'that which is thin'
ಕಡಿದು	'that which is great, firm, strong etc.'

ಮೇಲಿನ ರೂಪಗಳನ್ನು ವಿಶ್ಲೇಷಿಸಿದಾಗ ಆದಿಯಲ್ಲಿ ಪ್ರಕೃತಿ ಅದಕ್ಕೆ -ತು / -ತ್ತು / -ದು ಪ್ರತ್ಯಯ ಸೇರಿಕೊಂಡಿದೆ ಎಂದು ತಿಳಿದುಬರುತ್ತದೆ. ಕರಿಯನ್,

೧೩. ಅರ್ಥವನ್ನು ಕಿಟೆಲ್‌ರ ನಿಘಂಟುವಿನಿಂದ ಕೊಟ್ಟಿದ್ದೇನೆ. ನೋಡಿ, ಅಡಿಟಿಪ್ಪಣಿ. ೩

ಕರಿಯಳ್ ಎಂಬ ರೂಪಗಳನ್ನು ಕರಿದು ಎಂಬ ರೂಪದೊಡನೆ ಹೋಲಿಸಿದಾಗ –ಅನ್, –ಅಳ್ ಮತ್ತು –ದು ಪ್ರತ್ಯಯಗಳು ಕ್ರಮವಾಗಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳನ್ನು ಸೂಚಿಸುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ಲಿಂಗ ಪ್ರತ್ಯಯಗಳು ದ್ರಾವಿಡ ಭಾಷೆಗಳಲ್ಲಿ ಸೇರುವುದು ನಾಮಪ್ರಕೃತಿಗಳಿಗೆ ಮಾತ್ರ. ಅಷ್ಟೇ ಅಲ್ಲದೆ ಮೇಲಿನ 'ಗುಣವಾಚಿ'ಗಳಿಗೆ ವಿಭಕ್ತಿ ಪ್ರತ್ಯಯಗಳನ್ನೂ ಸೇರಿಸಬಹುದು. ವಿಭಕ್ತಿ ಪ್ರತ್ಯಯಗಳು ಸ್ವೀಕರಿಸುವ ಪ್ರಕೃತಿಗಳು ನಾಮಪದ ಗಣಕ್ಕೆ (Noun form class) ಸೇರಿದವುಗಳು. ಕಾರಣ ಕೇಶಿರಾಜನ ಗುಣವಾಚಿ ಗಳು ಸ್ವಭಾವತಃ ನಾಮಪದಗಳು; ನಾಮಗುಣವಾಚಕಗಳಲ್ಲ.

ಆರ್. ನರಸಿಂಹಾಚಾರ್, ಜಿ. ಎಸ್. ಗಾಯಿ ಮೊದಲಾದವರು ಒಳ್, ಮೆಲ್, ನಲ್, ತೆಳ್, ನೇರ್. ಕೂರ್, ಇನ್, ಕೆನ್ ಮೊದಲಾದ ಬದ್ಧಾಕೃತಿಮಾಗಳು[೧೪] ಕನ್ನಡದ ನಾಮಗುಣವಾಚಕಗಳೆಂದು ಅಭಿಪ್ರಾಯ ಪಡುತ್ತಾರೆ. ಈ ವಿಷಯದ ಬಗ್ಗೆ ಖಚಿತ ಅಭಿಪ್ರಾಯಪಡಬೇಕಾದರೆ ಕನ್ನಡ ಆಕೃತಿಮಾಗಳ ವರ್ಗೀಕರಣ ತಿಳಿದು ಕೊಳ್ಳಬೇಕಾಗುತ್ತದೆ.


ಕನ್ನಡ ಆಕೃತಿಮಾಗಳನ್ನು ಪ್ರಕೃತಿ, ಅವ್ಯಯ ಮತ್ತು ಪ್ರತ್ಯಯಗಳೆಂದು ಸ್ಥೂಲ ವಾಗಿ ವರ್ಗೀಕರಿಸಬಹುದು. ಪ್ರತ್ಯಯಗಳನ್ನು ಸ್ವೀಕರಿಸಬಲ್ಲ ಆಕೃತಿಮಾಗಳೇ ಪ್ರಕೃತಿ ಗಳು; ಉಳಿದವುಗಳು ಅವ್ಯಯಗಳು. ಪ್ರತ್ಯಯಗಳಲ್ಲಿ ಆಖ್ಯಾತ ಮತ್ತು ತದ್ಧಿತ ಗಳೆಂದು ದ್ವಿವಿಧ. ಪ್ರಕೃತಿಯ ರೂಪಗಣ (form class) ವನ್ನು ಸೂಚಿಸಿ ಅರ್ಥ ವಿಶೇಷವನ್ನು ತೋರಿಸಲು ಅದಕ್ಕೆ ಸೇರುವ ಬದ್ಧಾಕೃತಿಮಾಗಳೇ ಆಖ್ಯಾತ ಪ್ರತ್ಯಯ ಗಳು. ಪ್ರಕೃತಿಯ ರೂಪಗಣವನ್ನು ಬದಲಾಯಿಸಿ ಅರ್ಥವಿಶೇಷವನ್ನು ತೋರಿಸುವ ಪ್ರತ್ಯಯಗಳೇ ತದ್ಧಿತ.[೧೫] ಪ್ರಕೃತಿಯಲ್ಲಿ ಬದ್ಧ ಮತ್ತು ಮುಕ್ತವೆಂದು ಎರಡು ತೆರ. ಸ್ವತಂತ್ರವಾಗಿ ಇರಬಲ್ಲಂತಹ ಪ್ರಕೃತಿಗಳು ಮುಕ್ತ; ಮಿಕ್ಕವು ಬದ್ಧ. ವಿಭಕ್ತಿ ಪ್ರತ್ಯಯ ಗಳನ್ನು ಸ್ವೀಕರಿಸಬಲ್ಲ ಮುಕ್ತಾಕೃತಿಮಾಗಳು ನಾಮಪ್ರಕೃತಿಗಳಾದರೆ ಕಾಲ ಪ್ರತ್ಯಯ ಗಳನ್ನು ಸ್ವೀಕರಿಸಬಲ್ಲವು ಕ್ರಿಯಾಪ್ರಕೃತಿಗಳು.

---

೧೪. ಆಕೃತಿಮಾವೆಂದರೆ ಮಾತಿನ ಅರ್ಥಪೂರ್ಣವಾದ ಅವಿಭಾಜಕ ಘಟಕ. ಸ್ವತಂತ್ರವಾಗಿ ಬಳಸಬಹುದಾದ ಆಕೃತಿಮಾಗಳೇ ಮುಕ್ತಾಕೃತಿಮಾಗಳು; ಇತರ ಆಕೃತಿಮಾಗಳು ಬದ್ಧ.
ಮುಕ್ತಾಕೃತಿಮಾಗಳು : ದನ, ಮರ, ಹಳ್ಳಿ, ಕಾಣ್, ಒಳಗೆ......
ಬದ್ಧಾಕೃತಿಮಾಗಳು : –ಗಳು, –ರು, –ಗೆ, –ಇಂದ, –ಇನ್, –ಕೆನ್ ಇತ್ಯಾದಿ.

೧೫. ಆಖ್ಯಾತ ಮತ್ತು ತದ್ಧಿತ ಪ್ರತ್ಯಯಗಳ ವಿಶ್ಲೇಷಣೆಗೆ ನೋಡಿ : ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು, ೧೯೬೫, ಪು. ೫೩–೬೫.

ಅವ್ಯಯಗಳಲ್ಲಿ ಗುಣವಾಚಕ ಮತ್ತು ಗುಣವಾಚಕೇತರಗಳೆಂದು ಎರಡು ವರ್ಗ. ಪದಪುಂಜದಲ್ಲಿ ಆಧೀನವಾಗಿ ಬರತಕ್ಕ ಅವ್ಯಯಗಳೇ ಗುಣವಾಚಕಗಳು. ನಾಮರೂಪಕ್ಕೆ ಆಧೀನವಾಗಿ ಬರತಕ್ಕವುಗಳು ನಾಮಗುಣವಾಚಕಗಳಾದರೆ ಕ್ರಿಯಾರೂಪಕ್ಕೆ ಆಧೀನವಾಗಿ ಬರತಕ್ಕವು ಕ್ರಿಯಾಗುಣವಾಚಕಗಳು. ಗುಣವಾಚಕೇತರಗಳಲ್ಲಿ ವಿಭಕ್ತ್ಯಕ ಮತ್ತು ವಿಭಕ್ತ್ಯಕೇತರಗಳೆಂದು ಎರಡು ಗುಂಪು. ವಿಭಕ್ತ್ಯಕ ಅವ್ಯಯಗಳ ಪೂರ್ವದಲ್ಲಿ ಬರುವ ನಾಮರೂಪಕ್ಕೆ ವಿಭಕ್ತಿ ಪ್ರತ್ಯಯ ಕೂಡಿದರೆ ವಿಭಕ್ತ್ಯೇತರ ಅವ್ಯಯಗಳ ಪೂರ್ವ ಸ್ಥಾನದಲ್ಲಿ ಬರುವ ನಾಮರೂಪಗಳಿಗೆ ಅವು ಹತ್ತುವುದಿಲ್ಲ.



ಬದ್ಧ ಪ್ರಕೃತಿಗಳಿಗೆ ಸ್ವತಂತ್ರ ಅಸ್ತಿತ್ವ ಹಾಗೂ ಕ್ರಿಯೆ ಇಲ್ಲದುದರಿಂದ ಅವು ಯಾವ ಪದ ವಿಭಜನೆ(Part of speech)ಯನ್ನೂ ಸೇರುವುದಿಲ್ಲ. ಮೇಲಿನ ವೃಕ್ಷಚಿತ್ರ (Tree-diagram) ಇದನ್ನು ಸ್ಪಷ್ಟೀಕರಿಸುತ್ತದೆ. ಕಾರಣ ಇನ್, ಕೆನ್, ತಣ್ ಮೊದಲಾದ

ಬದ್ಧಾಕೃತಿಮಾಗಳು ನಾಮಗುಣವಾಚಕವೆಂಬ ಪದವಿಭಜನೆಯನ್ನು– ವ್ಯಾಕರಣವರ್ಗ ಅರ್ಥಾತ್ ರೂಪಗಣವನ್ನು– ಸೇರಲಾರವು.[೧೬]

ಇಂಗ್ಲೀಷಿನಲ್ಲಿ ಬದ್ಧ ಪ್ರಕೃತಿಗಳಿಗೆ ಆದಿ ಪ್ರತ್ಯಯಗಳು ಸೇರಿ ಹೊಸ ಮುಕ್ತ ಪ್ರಕೃತಿಗಳು ಸಾಧಿತಗೊಳ್ಳುವಂತೆ ಕನ್ನಡದಲ್ಲಿಯೂ ಬದ್ಧ ಪ್ರಕೃತಿಗಳಿಗೆ ಅಂತ್ಯ ಪ್ರತ್ಯಯಗಳು ಸೇರಿ ಮುಕ್ತ ಪ್ರಕೃತಿಗಳು ಸಾಧಿತಗೊಳ್ಳಬಹುದು.

ಇಂಗ್ಲೀಷಿಗೆ ಉದಾಹರಣೆ : { de, per, con } + ceive ——→ { deceive, preceive, canceive }

ಕನ್ನಡಕ್ಕೆ : { ಇನ್, ಕೆನ್, ತಣ್ } + ಪು ———→ { ಇಂಪು, ಕೆಂಪು, ತಂಪು }

ಮೇಲೆ ತೋರಿಸಿದ ಉದಾಹರಣೆಗಳಲ್ಲಿ – ceive ಅಂತೆಯೇ ಕೆನ್, ಇನ್, ತಣ್ ಎಂಬೀ ರೂಪಗಳನ್ನು ಬದ್ಧಾಕೃತಿಮಾಗಳೆಂದು ಕರೆಯಬಹುದೇ ಹೊರತು ಅವನ್ನು ನಾಮಪದಗಳೆಂದಾಗಲಿ, ನಾಮಗುಣವಾಚಕವೆಂದಾಗಲಿ ವರ್ಗೀಕರಿಸುವುದು ಸಾಧುವಲ್ಲ. ಅವು ಸ್ವಭಾವತಃ ಬದ್ಧ ಸ್ವರೂಪದ ಅವರ್ಗೀಯ ಮೂಲರೂಪಗಳು ಅಷ್ಟೇ.

ಬಡ ಮತ್ತು **ಬಡತನ** ಈ ಎರಡು ಶಬ್ದಗಳನ್ನು ನಾವು ಗಮನಿಸಿದರೆ ಅವೆರಡರಲ್ಲಿಯು ಒಂದೇ ಗುಣ ಅಡಕವಾಗಿದ್ದರೂ **ಬಡತನ**ವೆಂಬುದನ್ನು ಕನ್ನಡ ನಾಮಗುಣವಾಚಕವೆಂದು ಯಾರೂ ಕರೆಯಲಾರರು. ಆದ್ದರಿಂದ ಸ್ವೆಲೆಬಿಲನ ವಾದ ಒಪ್ಪಲಿಕ್ಕಾಗುವುದಿಲ್ಲ.

ಹೊಸಗನ್ನಡದಲ್ಲಿ **ಎಳೆ (ಯ), ಒಳ್ಳೆ (ಯ), ಚಿಕ್ಕ, ದೊಡ್ಡ, ಒಣ** ಮೊದಲಾದ ರೂಪಗಳು ದೊರಕುತ್ತವೆ. ಇವು ಪದಪುಂಜದಲ್ಲಿ ನಾಮಪದಕ್ಕೆ ಆಧೀನವಾಗಿ ಬರುವ ಅವ್ಯಯರೂಪದ ಮುಕ್ತಾಕೃತಿಮಾಗಳು. ಕನ್ನಡದ ಬಹಿರ್ರಚ

---

೧೬. M. S. Adronov, "Notes on the Nature and Origin of the Adjective in Tamil" *I. J. D. L.*, June 1972, Vol. I. No. II, Trivandrum : University of Kerala, p. 2.

ನೆಯ[೧೭] ವಿಶ್ಲೇಷಣೆಯಲ್ಲಿ ಇವನ್ನು ನಾವು **ನಾಮಗುಣವಾಚಕ**ಗಳೆಂದು ಕರೆಯಬಹುದು.

ಕನ್ನಡಭಾಷೆ, ಕುಂಟ ಅಧ್ಯಾಪಕ, ನೂರು ವಿದ್ಯಾರ್ಥಿಗಳು ಎಂಬೀ ಪದಪುಂಜಗಳಲ್ಲಿ ಬರುವ **ಕನ್ನಡ, ಕುಂಟ, ನೂರು** ಎಂಬ ಘಟಕಗಳು ಪೂರ್ವ ಪದಗಳನ್ನು ವಿಶೇಷಿಸುತ್ತವೆ. ಕಾರಣ ಅವು ನಾಮವಿಶೇಷಣೆ (noun qualifier) ಗಳಾದರೂ ಸ್ವತಃ ವಿಭಕ್ತಿ ಪ್ರತ್ಯಯಗಳನ್ನು ಸ್ವೀಕರಿಸಬಲ್ಲವುಗಳಾದುದರಿಂದ ಅವು ನಾಮಗುಣವಾಚಕಗಳಲ್ಲ.

ಮಾಡದ ಕೆಲಸ, ಕುಡಿದ ಹಾಲು, ಬುದ್ಧಿಯುಳ್ಳ ಪ್ರಾಣಿ ಈ ರೀತಿಯ ಪದಪುಂಜಗಳಲ್ಲಿ ಬರುವ **ಮಾಡದ, ಕುಡಿದ,** ಮತ್ತು **ಬುದ್ಧಿಯುಳ್ಳ** ಎಂಬ ಪದಗಳು ಅವುಗಳ ಪೂರ್ವದಲ್ಲಿ ಬರುವ ನಾಮಪದಗಳನ್ನು ವಿಶೇಷಿಸುವುದರಿಂದ ಅವು ನಾಮವಿಶೇಷಣಗಳು; ಅಷ್ಟೇ ಅಲ್ಲ. ಅವು ಅವ್ಯಯದ ನಾಮವಿಶೇಷಣಗಳಾದುದರಿಂದ ನಾಮಗುಣವಾಚಕಗಳೂ ಹೌದು. ಅವು ಬೇರೆ ರೂಪಗಣಗಳಿಂದ (ಉದಾ : ಕ್ರಿಯಾಪದಗಳಿಂದ) ಸಾಧಿತಗೊಂಡವುಗಳಾದುದರಿಂದ ಅವನ್ನು ಸಾಧಿತ ನಾಮಗುಣವಾಚಕಗಳೆಂದು ಕರೆಯುತ್ತೇವೆ.

ಕನ್ನಡದ ನಾಮಗುಣವಾಚಕಗಳು ತರತಮ ಪ್ರತ್ಯಯಗಳನ್ನು ಸ್ವೀಕರಿಸುವುದಿಲ್ಲ. ಇದು ಕನ್ನಡದ ಮಾತ್ರವಲ್ಲ ದ್ರಾವಿಡ ಭಾಷೆಗಳ ವೈಶಿಷ್ಟವೆಂದೇ ಹೇಳಬಹುದು. ತರವಾಕ್ಯಗಳನ್ನು ಉತ್ಪಾದಿಸಲು ಹೋಲಿಸುವ ನಾಮಪದದ ಚತುರ್ಥಿವಿಭಕ್ತಿಯನ್ನೊಳಗೊಂಡ ಪ್ರಕೃತಿಗೆ – **ಇಂತ** ಎಂಬ ಪ್ರತ್ಯಯವನ್ನು ಸೇರಿಸುತ್ತೇವೆ: **ಕುದುರೆ ನಾಯಿಗಿಂತ** (< **ನಾಯಿ–ಗೆ + ಇಂತ**) **ದೊಡ್ಡದು.** ತಮವಾಕ್ಯಗಳನ್ನು ಉತ್ಪಾದಿಸಲು **ಎಲ್ಲಾ/ಮಿಕ್ಕ/ಉಳಿದ** ಎಂಬ ಪದವನ್ನು ಸಾಮಾನ್ಯವಾಗಿ ತರವಾಕ್ಯದ ಆದಿಭಾಗದಲ್ಲಿ ಕೂಡಿಸಬೇಕು. **ಎಲ್ಲಾ ಕುದುರೆಗಳಿಗಿಂತ ಈ ಕುದುರೆ ದೊಡ್ಡದು.**


ಇಂಗ್ಲೀಷಿನಲ್ಲಿ ನಾಮಗುಣವಾಚಕಗಳಿಗೆ ತರತಮ ಪ್ರತ್ಯಯಗಳು ಹತ್ತುತ್ತವೆ. ಆದರೆ ಕನ್ನಡದಲ್ಲಿ ಅವು ಹತ್ತುವುದಿಲ್ಲ. ಕಾರಣ ಕನ್ನಡದಲ್ಲಿ ನಾಮಗುಣವಾಚಕಗಳೇ ಇಲ್ಲ ಎಂದು ವಾದಿಸುವುದು ಭಾಷಾವೈಜ್ಞಾನಿಕ ದೃಷ್ಟಿಯಿಂದ ತಪ್ಪಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಕನ್ನಡದಲ್ಲಿ ನಾಮಗುಣವಾಚಕಗಳೆಂಬ ವರ್ಗ

---

೧೭ ನೋಡಿ : ಅ. ಟಿ. ೧೮

ಅಂತರ್ರಚನೆ [೧೮] (Deep structure) ಗೆ ಸೇರದೆ ಬಹಿರ್ರಚನೆ (Surface structure) ಗೆ ಸೀಮಿತವಾಗಿದೆ.[೧೯] ಎರಡನೆಯದಾಗಿ, ಕೇಶಿರಾಜ ಸೂಚಿಸಿದ ಗುಣವಾಚಿಗಳು ನಾಮಪದಗಳೇ ಹೊರತು ನಾಮಗುಣವಾಚಕಗಳಲ್ಲ. ಮೂರನೆಯದಾಗಿ, **ಒಳ್, ಕೆನ್, ತಣ್** ಮೊದಲಾದ ಬದ್ಧರೂಪಗಳು ಕನ್ನಡದ ಶುದ್ಧ ಗುಣವಾಚಕಗಳಲ್ಲ; ಅವು ಅವರ್ಗೀಯ ಬದ್ಧರೂಪಗಳು. ನಾಲ್ಕನೆಯದಾಗಿ ಸ್ವೆಲೆಬಿಲನು ನಾಮಗುಣವಾಚಕ ಪರವಾಗಿ ಮಂಡಿಸಿದ ವಾದ ಈಗಾಗಲೇ ಕೊಟ್ಟ ಕಾರಣಗಳಿಂದಾಗಿ ಒಪ್ಪತಕ್ಕದ್ದಲ್ಲ. ಕೊನೆಯದಾಗಿ ಹೊಸಗನ್ನಡದ [೨೦] ಬಹಿರ್ರಚನೆಯಲ್ಲಿ ಪ್ರಕೃತಿ ಮತ್ತು ಅವ್ಯಯ ಸ್ವರೂಪದ ನಾಮವಿಶೇಷಣಗಳನ್ನು ನಾವು ಗುರುತಿಸಬಹುದು. ಪ್ರಕೃತಿಸ್ವರೂಪದ ನಾಮವಿಶೇಷಣಗಳು ಸ್ವಭಾವತಃ ನಾಮಪದಗಳಾದರೆ ಅವ್ಯಯ ಸ್ವರೂಪದವುಗಳು ನಾಮಗುಣವಾಚಕ ಎಂಬ ವ್ಯಾಕರಣವರ್ಗಕ್ಕೆ ಸೇರಿದವುಗಳು; ಇವುಗಳಲ್ಲಿ ಸರಳ ಮತ್ತು ಸಾಧಿತವೆಂದು ಎರಡು ತೆರ. ಇದರ ಸ್ಪಷ್ಟ ಚಿತ್ರಣಕ್ಕೋಸ್ಕರ ಕೆಳಗೆ ನಮೂದಿಸಿದ ವೃಕ್ಷಚಿತ್ರವನ್ನು ನೋಡಬಹುದು.



೧೮. ಮೂಲ ವಾಕ್ಯ (Basic sentence) ಗಳಿಂದ ಕೂಡಿದ ರಚನೆಯೆ ಅಂತರ್ರಚನೆಯಾದರೆ ಸಾಧಿತ ವಾಕ್ಯ (Derived sentence) ಗಳಿಂದ ಕೂಡಿದುದು ಬಹಿರ್ರಚನೆ. ನೋಡಿ: ಅ. ಟಿ. ೧೦.

೧೯. ಸಣ್ಣ > ಸಣ್ಣವಳು (ಆಗಿದ್ದಾಳೆ) ಎಂಬುದರ ಬಗ್ಗೆ ಆದ ಚರ್ಚೆಯನ್ನು ಓದಿರಿ.

೨೦ ನಾಮಗುಣವಾಚಕಗಳು ಹಳೆಗನ್ನಡದ ಬಹಿರ್ರಚನೆಯಲ್ಲಿ ಇಲ್ಲದುದರಿಂದ ಅದು ಹೊಸಗನ್ನಡವನ್ನು ಹಳೆಗನ್ನಡದಿಂದ ಪ್ರತ್ಯೇಕಿಸುವಲ್ಲಿ ಉಪಯುಕ್ತವಾದ ಒಂದು ಅಂಶ.

ಗ್ರಂಥಋಣ

Kittel. F. (Ed.) 1871 : *Śabdamaṇidarpaṇaṁ*, Mangalore : Basel Mission Book and Tract Depository.

Kittel. F. 1894 : *A Kannada-English Dictionary*, Mangalore : Basel Mission Book and Tract Depository.

Kittel. F. 1903 : *A Grammar of the Kannada Language*, Mangalore : Basel Mission Book and Tract Depository.

Winfield, W. W. 1928 : *A Grammar of the Kui Language*, Calcutta : Asiatic Society of Bengal.

Narasimhacharya, R. 1934 : *History of Kannada Language* Mysore : Government Branch Press.

Narasimhiah, A. N. 1941 : *A Grammar of the Oldest Kanarese, Inscriptions*, Mysore : University of Mysore.

Spencer, Herold 1950 : *A Kanarese Grammar*, Mysore : Wesley Press.

Sekhar, Anantaramayyar Chandra 1953: *Evolution of Malyalam*, Poona : Deccan College.

Ziegler 1953 : *A Practical Key to the Kanarese Language*, Mangalore : Basel Mission Book Depot.

Bloch, Jules, Harshe, Ramakrishna Ganesh (Trans.) 1954 : *Thc Grammatical Structure of Dravidian Languages*, Poona : Deccan College.

Emeneau M. B. 1955 : *Kolami*, Berkley : University of California.

Bright, William 1958 : *An Outline of Colloquial Kannada*, Poona : Deccan College.

Caldwell, Robert 1961 : *A Comparative Grammar of Dravidian Languages (3rd Edn.)*, Madras : University of Madras.

Kulkarni, P. G. 1967 : *Kannada Bhāseya Carite* (Kannada), Belgaum : P. G. Kulkarni, Hindwadi.

Emeneau, M. B. and Burrow, T. (1961- 1968) : *A Dravidian' Etymological Dictionary*, Oxford.

Andronov, M. 1969 : *Kannada Language*, Moscow : "NAUKA' Publishing House.

Narasimhacharya, R. 1969 : *History of Kannada Language*, Mysore : Prasaranga, University of Mysore.

Leibert, Burt. 1971 : *Linguistics and the New English Teacher*, Newyork : The Macmillan Company.

Nadkarni, Mangesh V. 1971 : "The Nature of Adjectives in Kannada", *Indian Linguistics*, Vol. 32, No. 3, Poona : Deccan College.

Andronov, M. 1972 : "Notes on the Nature and Origin of the Adjectives in Tamil", *International Journal of Dravidian Linguistics*, Vol. 1, No. 2, Trivendrum : University of Kerala.

Upadhyaya, U. P. and Krishnamurthy, N.D. 1972 : *Colloquial Kannada* (A Microware Approach), Dharwar : Bhāratîya Sāhitya Mandira.

■ ■

ರೂಪಾಂತರ

ದೊಡ್ಡರಂಗೇಗೌಡ

ಸುಳಿಗಾಳಿ ಜೋರಾಗಿ ಚಳಿ ಚಳಿಯಾಗಿ ಪೂರಾ
ಬದಲಾಗಿ ಥಂಡಿ ವಿಪರೀತವಾಗಿ
ರಾತ್ರಿ ಕತ್ತಲೆ ಮುಂಜಾವಿನ ಮಬ್ಬಾಗಿ
ಕೊಂಚ ಕೊಂಚವೇ ಕರಗಿ ಅದೃಶ್ಯವಾಗಿ
ಬೆಳಕಿನ ಬಂಗಾರ ಕಿರಣ ತೂರಿ ಬಂದಾಗ–ಕಡೆಗೆ
ಹನ್ನೊಂದು ದೀಪಾವಳಿ ಕಳೆದು
ಮಾನಸಿಕ ಕಡಲಲ್ಲಿ ಮುಳುಗಿ ಸತ್ತುಹೋದವನು
ಉತ್ಸಾಹ ಜೀವ ತಳೆದು
ಮತ್ತೆ ಬಂದಿದ್ದೇನೆ ನಿನ್ನ ಮಡಿಲಿಗೆ–ಕುದಿದ
ಅಲೆಯಬ್ಬರ ಶಾಂತವಾಗುತ್ತಿರಬೇಕೆಂಬ ಅನ್ನಿಸಿಕೆ ಒಳಗೊಳಗೆ

ಅಂದು ಮೊಗ್ಗಾಗಿದ್ದೆ ಮೋಹಕವಾಗಿದ್ದೆ ಮುಗ್ಧನಾಗಿದ್ದೆ
ಇಂದು ಎಷ್ಟೊಂದು ಬದಲಾಗಿರುವೆ ನೀನು

ಇಷ್ಟು ನೇರ ಮಾತು ಸಾಲದು ನಿನ್ನ ಚೆಲುವಿಗೆ
ನಿನ್ನ ಒಡಲಿನ ಒನಪಿನ ಬಗೆಗೆ;

ನೀನು ನೀನೇ ಎಂದು ಖಾತರಿಯಾಗುತ್ತಿಲ್ಲ ನನಗೆ
ವೈಯಾರಿ ನಿನ್ನ ಕಿಶೋರಾವಸ್ಥೆ ಗರಿಗಟ್ಟಿ
ಅಂಗುಲಂಗುಲದಲ್ಲಿ ಶೃಂಗಾರ ಕೆದರಿ
ಆ ಮೌನ ಆ ಪ್ರಫುಲ್ಲ ಲವಲವಿಕೆ ಚದುರಿ
ಈಗ ಯೌವನ ವಿಹಾರಿ–ಹಂಸ ಹಾರಿದ ಪರಿ
ನೀನು ನಿನ್ನ ನಡಿಗೆ; ನೋಡುತ್ತ ನೋಡುತ್ತ
ನಿನ್ನ ರೂಪ ನನ್ನ ಕಾಡುತ್ತ
ಕಣ್ಣಲ್ಲಿ ಕಾಮನೆ–ಉರಿ.

ನಾನಂತೂ ಹಾಗೇ ಇದ್ದೇನೆ—
ಗಿಡ್ಡನಾಗಿ ದಡ್ಡನಾಗಿ
ನೃಪತುಂಗ ಬೆಟ್ಟದ ಹಾಗೆ; ವಡ್ಡೊಡ್ಡಾಗಿ;
ಮೊದಲಿನಷ್ಟೇ ಆಕಾರ–ವಿಕಾರ
ಆದರೆ ಹೊರ ವೇಷ ಸುಮ್ಮನೆ
ಕಾಲ ಬದಲಾದ ಹಾಗೆ
ವಸಿ ನಾಗರಿಕನಾಗಿರಬಹುದು;
ನೀನು ನನ್ನ ಹಾಗಲ್ಲ
ನಿನ್ನ ಬೆಳೆ–ಬಾಳೆಯ ಹಾಗೆ
ಇಷ್ಟೆಲ್ಲ ಹೇಳಿದರೂ ನೀನು ಅಷ್ಟೇ ಆಗಿಲ್ಲ.

ಏನೆಲ್ಲ ನೀನು ಬದಲಾಗಿದ್ದರೂ
ಈಗಲೂ ನಿನ್ನ ಮೈಯಲ್ಲಿ ಆಗಿನಂಥ ವಾಸನೆ
ಅದೇ ಸೊಗಡು;
ನಿನ್ನ ಬಳಿ ಮಾತಾಡಿದಷ್ಟೂ ಅದೇ ಗಮ್ಮತ್ತಿನ
ದೇಸಿ ನುಡಿ ಚಲಾವಣೆ ಕವಣೆ ಬೀರಿದ ಹಾಗೆ
ಆ ಹೊತ್ತಿನ ವಾತ್ಸಲ್ಯದ ಒಕ್ಕಣೆ
ಈ ಹೊತ್ತಿಗೆ ನಲ್ಮೆ ಮೀರಿದ ನಡಿಗೆ ಜೋಡಣೆ

ನೀನು ಹೊರಗೆ ಬದಲಾದ ಹಾಗೆ ನಾನು ಒಳಗೆ ಬದಲಾಗ ಹೋಗಿ
ಗಾರಾಗಿದೆ ನನ್ನ ಜೀವ
ನಮ್ಮ ನಡುವಿನ ಕಂದರವೂ ವಿಸ್ತಾರವಾಗಿ
ಸಂಪರ್ಕ ಸೇತುವೆ ಮುರಿದಂಥ ಭ್ರಮೆ.
ಕಂಬಳಿ ಹುಳ ಚಿಟ್ಟೆಯಾಯಿತೇ ?

ನಿನ್ನಾಣೆ ನನಗರಿವಾಗದು ಪೂರಾ–
ನಿನ್ನ ತನವೆಲ್ಲ ನಿನ್ನ ಹೃದಯದಲ್ಲಿ ನಾಲಗೆಯಲ್ಲಿ ಅಡಗಿ
ಹೊರಗೆ ತುಂಬಿಕೊಂಡಿತೇ ಬೆಡಗಿನ ಲಿಲಾವು ?

ಹೇಳಲಾರೆಯಾ ? ಜಾಣೆ ನಾನು ಹೆಡ್ಡ
ಅರಿವಾಗದು ನಿನ್ನ ನಿಲುವು.

ನಿನ್ನ ನಗೆ ಅಲೆ ಅಲೆ ತೇಲಿ ನನ್ನೊಳಗಿನ
ಕನಸಿನ ಕಡಲುಕ್ಕಿದೆ–ಹಕ್ಕಿಯ ಹಾಗೆ
ಹಾಡದೆ ಉಳಿಯುವುದು ಹೇಗೆ ?

■ ■

ಸರ್ವಜ್ಞ, ವಿರತಮಹಾಲಿಂಗದೇವ ಗುರು-ಶಿಷ್ಯರಲ್ಲ

ಡಾ. ವಿ. ಶಿವಾನಂದ

ಡಾ. ಎಲ್. ಬಸವರಾಜು ಅವರು 'ಪ್ರಬುದ್ಧ ಕರ್ನಾಟಕ' ಸಂಪುಟ ೫೪, ಸಂಚಿಕೆ ೩ ರಲ್ಲಿ 'ಸರ್ವಜ್ಞನಿಗೊಬ್ಬನೇ ಒಬ್ಬ ಲೇಖಕ ಶಿಷ್ಯ' ಎಂಬ ವಿಚಾರವಾಗಿ ಬರೆಯುತ್ತ,[೧] 'ವಿರತ ಮಹಾಲಿಂಗದೇವ' ಎಂಬವನು ಬರೆದಿರುವ 'ಗುರು ಬೋಧಾಮೃತ' ವೆಂಬ ತ್ರಿಪದಿಯ ಕಾವ್ಯ ಉಪಲಬ್ಧವಿದೆ. ಅದರ ಕೊನೆಗೆ ಕವಿಯು–

ಗುರು ಸರ್ವಜ್ಞನ ಕೃಪೆಯಿಂ ಪರಮಾಮೃತವೆನಿಸಿ
ಮೆರೆವ ಗುರುಬೋಧೆಯನಿದಂ ವಿರತ ಮಹಾಲಿಂಗದೇವರು
ವಿರಚಿಸಿದನು ಹರನ ನುತಿಸಿ ಪೂಜಿಸುವರಿಗಂ (೫–೧೨೭)

ಎನ್ನುತ್ತ ತನ್ನ ಗುರು ಸರ್ವಜ್ಞನೆಂಬುದನ್ನು ಹೇಳಿಕೊಂಡಿದ್ದಾನೆ ಎಂದು ನಿರ್ಣಯಿಸ ಹೋಗಿದ್ದಾರೆ. ಅವರು ಇದಕ್ಕೆ ಸಾಧಾರ ರೂಪವಾಗಿ ಇದೇ ಕಾವ್ಯದ ಇತರ ಕಡೆಗಳಲ್ಲಿ ಬರುವ 'ಸರ್ವಜ್ಞ'ನ ಉಲ್ಲೇಖ ಮಾಡಿದ್ದಾರೆ.

ಸ್ಮರಹರನೆ ದುರಿತಹರ ಪುರಹರ ಪುರಾತನರನು
ಹೊರೆವ ಸರ್ವಜ್ಞಗುರುವರನೆ ನಿಮ್ಮ ಶ್ರೀ
ಚರಣಕ್ಕೆ ಶರಣು ಶರಣಾರ್ಥಿ (೫–೧೨೬)

ಶ್ರೀ ಸದಾಶಿವ ಮಹೇಶ್ವರ
ಶಾಶ್ವತ ಸರ್ವಗುರುವರೇಣ್ಯ ಕೃಪಾಕರ
ಈಶಾ ಎನ್ನಯ ನಿಜಕರ
ವಾಸಾ ಸರ್ವೇಶ್ವರ ರಕ್ಷಿಸಿದೆನ್ನನಭವ (೫–೧೨೮)

ಅವರು ಕೊಟ್ಟಿರುವ ಮೇಲಿನ ಈ ಮೂರೂ ಪದ್ಯಗಳ ಪಾಠ ಪರಿಷ್ಕರಣ ಅಶುದ್ಧ ವಾಗಿದೆ. ಮೊದಲನೆಯದು ನಿಜವಾಗಿ ಕಂದ ಪದ್ಯ. ಉಳಿದ ಎರಡು ಪದ್ಯಗಳ

---

* ಈ ವಿಚಾರ ತಮಗೂ ಹೊಳೆದಿತ್ತೆಂದು ತಿಳಿಸಿ ತಮ್ಮಲ್ಲಿರುವ ಗುರುಬೋಧಾಮೃತದ ಅಮೂಲ್ಯ ಹಸ್ತಪ್ರತಿಯನ್ನು ನನ್ನ ಅವಲೋಕನೆಗೆ ಕೊಟ್ಟ ಮಾನ್ಯ ಡಾ. ಎಂ.ಜಿ. ಬಿರಾದಾರ ಅವರಿಗೆ ಕೃತಜ್ಞತೆಗಳು.

೧. ಪ್ರ. ಕ. ೫೪–೩, ಪು. ೧೨೭.

ಪಾಠವೂ ಸಮರ್ಪಕವಾಗಿಲ್ಲ. ಇದನ್ನು ಅವರೇ ಒಪ್ಪಿದ್ದಾರೆ. ಆದರೆ ಇಲ್ಲಿ ಪಾಠ ಸಮಸ್ಯೆಯ ಚರ್ಚೆ ಅಪ್ರಸ್ತುತ. ಇಲ್ಲಿ ಬಂದಿರುವ 'ಸರ್ವಜ್ಞಗುರು' ಎಂಬವನು ಕನ್ನಡದ ಕಬೀರ, ತಿರುವಳ್ವರ್, ವೇಮನ ಎಂದು ಮುಂತಾಗಿ ಪ್ರಸಿದ್ಧನಾದ ತ್ರಿಪದಿಯ ಸಾರ್ವಭೌಮ ಕವಿಯಾದ ಸರ್ವಜ್ಞನೇ ಆಗಿರುವನೋ ಅಥವಾ ಪರವಸ್ತು-ಪರಶಿವ ತತ್ವವನ್ನೇ ಕವಿ ಮಹಾಲಿಂಗದೇವ ಗುರುವೆಂದು, ಇಷ್ಟಲಿಂಗವೆಂದು ಪರಿಭಾವಿಸಿ 'ಗುರು ಬೋಧಾಮೃತ' ದಲ್ಲಿ ಗುರುತತ್ವವನ್ನು ಪ್ರತಿಪಾದಿಸಿರುವನೋ ಎಂಬುದನ್ನು ನಿಶ್ಚಯಿಸ ಬೇಕು. ಬಸವರಾಜು ಅವರು, 'ಗುರು ಸರ್ವಜ್ಞನ ಕೃಪೆಯಿಂ' ಎಂಬ ಮೊದಲ ಪದ್ಯ ದಲ್ಲಿ ಸರ್ವಜ್ಞ-ಕವಿವ್ಯಕ್ತಿಯ ಸ್ಪಷ್ಟ ಹೆಸರಿರುವುದೆಂದೂ, 'ಪುರಾತನರನು ಹೊರೆವ ಸರ್ವಜ್ಞಗುರುವರನೆ' 'ಶಾಶ್ವತ ಸರ್ವಗುರುವರೇಶ' ಎಂಬೀ ಕಡೆಗಳಲ್ಲಿ ಸರ್ವಜ್ಞಕವಿ ಯನ್ನು ಶಿವನೊಡನೆ, ಇಷ್ಟಲಿಂಗದೊಡನೆ ಶ್ಲೇಷಿಸಿ ಹೇಳಿರುವನೆಂದೂ ಅರ್ಥಮಾಡಿ ದ್ದಾರೆ.[೨] ಇವೆರಡು ಕಡೆಗಳಲ್ಲಿ ಶ್ಲೇಷೆಯನ್ನು ಮನ್ನಿಸುವ ಸಂಶೋಧಕರು 'ಗುರು ಸರ್ವಜ್ಞ' ಎಂಬಲ್ಲಿ ಮಾತ್ರ ಅದನ್ನು ಪ್ರತ್ಯೇಕಿಸುತ್ತಿರುವುದಕ್ಕೆ ಬೇರೆ ಆಧಾರಗಳನ್ನೇನೂ ಕೊಟ್ಟಿಲ್ಲ. ಹಾಗೆ ನೋಡಿದರೆ 'ಗುರುಸರ್ವಜ್ಞ' (೫-೧೨೬), 'ಸರ್ವಗುರುವರೇಣ್ಯ' (೫-೧೨೮), 'ಸರ್ವಜ್ಞ ಗುರುವರನೆ' (೫-೧೨೬) ಇವಿಷ್ಟೂ ಕಡೆಯಲ್ಲಿ ಸಮಾನ ಸಂಬೋಧೆಯೇ ಇದ್ದು ಸರ್ವಜ್ಞಕವಿವ್ಯಕ್ತಿಗೆ ಸಂಬಂಧಿಸಿದ್ದಿರಬೇಕು ಇಲ್ಲದಿದ್ದರೆ ಸ್ಪಷ್ಟ ವಾಗಿ ಶಿವನಿಗೆ ಅನ್ವರ್ಥಕವಾಗಿರಬೇಕು. ವಸ್ತುತಃ ಮತ್ತು ತತ್ವತಃ ವಿರತ ಮಹಾಲಿಂಗ ದೇವ ತನ್ನ 'ಗುರುಬೋಧಾಮೃತ'ದಲ್ಲಿ ಶಿವತತ್ವವನ್ನೇ 'ಗುರು' ವೆಂದು ಭಾವಿಸಿದ್ದಾನೆ. ಗುರುವಿಂದಲ್ಲದೆ ಶಿವತತ್ತ್ವಸಾಕ್ಷಾತ್ಕಾರವಾಗದೆಂದು, ಗುರುಮುಖೇನ ಶಿಷ್ಯನಿಗೆ ಈ ಬೋಧೆ ಮಾಡಲಾಗಿದೆ. ಪರಮಾರ್ಥ ತತ್ವವನ್ನು ಗುರುಮುಖದಿಂದ ತಿಳಿಯಬೇಕೆಂಬ ವಿಚಾರ ಸನಾತನವಾದುದು. ಉಪನಿಷತ್ತುಗಳು ಗುರು-ಶಿಷ್ಯರ ಪ್ರಶ್ನೋತ್ತರ ರೂಪ ದಲ್ಲಿವೆ. ನಿಜಗುಣರ (ಕ್ರಿ. ಶ. ಸು. ೧೫೦೦) ಅನುಭವಸಾರ, ವೀರಶೈವ ವೇದಾಂತ ವನ್ನು ಇದೇ ಮಾದರಿಯಲ್ಲಿ ನಿರೂಪಿಸುತ್ತದೆ. ಗುರುಬಸವನ (ಕ್ರಿ. ಶ. ೧೪೩೦) 'ಮನೋವಿಜಯ ಕಾವ್ಯ'ದಲ್ಲಿ ಸುವಿವೇಕನೆಂಬ ಶಿಷ್ಯನು ಗುರುವಿನ ಬಳಿಗೆ ಬಂದು ಪರಿಪೂರ್ಣ, ಪರಬ್ರಹ್ಮ ಸ್ವರೂಪವನ್ನು ತಿಳಿಯುವದಾಗಿ ಹೇಳಿದೆ. ಇಂತಹ ಕೃತಿ ಪದ್ಧತಿಯಲ್ಲಿ ವಿರತ ಮಹಾಲಿಂಗದೇವನ 'ಗುರುಬೋಧಾಮೃತ' ಒಂದಾಗಿರುವದರಿಂದ ಇಲ್ಲಿ 'ಗುರುಸರ್ವಜ್ಞ' ಎಂಬ ಪ್ರಯೋಗ ಕಂಡಕೂಡಲೆ ಇದು ಕವಿ ಸರ್ವಜ್ಞನಿಗೆ ಸಂಬಂಧಿಸಿದ್ದಾಗಿದೆಯೆಂದು ನಿರ್ಣಯಿಸಿಬಿಡುವದು, ಮಹಾಲಿಂಗದೇವ ಬೋಧಿಸ ಹೊರಟಿರುವ ವಿಷಯಕ್ಕೇ ಅಪಚಾರ ಮಾಡಿದಂತೆ. 'ಗುರುಸರ್ವಜ್ಞ' ಎಂದಾಗಲಿ 'ಸರ್ವಜ್ಞಗುರು'ವೆಂದಾಗಲಿ ಈ ಪ್ರಯೋಗಗಳು ವಿರತ ಮಹಾಲಿಂಗದೇವನಲ್ಲಷ್ಟೇ ಏಕೆ ? ಇತರ ವೀರಶೈವ ಕವಿಗಳಲ್ಲೂ ಕಾಣುತ್ತವೆ. ಹಾಗಾದರೆ ಕಾಲ-ದೇಶಗಳ

---

೨. ಪ್ರ. ಕ. ಅದೇ ಪು. ೧೫.

ಅಂತರವಿಲ್ಲದೆ ಇವರೆಲ್ಲರೂ ಸರ್ವಜ್ಞಕವಿಯ ಶಿಷ್ಯನೆಂದು ಲೇಖಕರು ಸಂಭಾವಿಸು ವರೋ ಏನೋ!

ಗುರುವಿಂ ಸರ್ವಜ್ಞನಾದೆಂ – ಹರಿಹರನ ರಕ್ಷಾಶತಕ-೯೫.
ಗುರುವೇ ಸರ್ವಜ್ಞ ನೀಂ ಪರಮಗುರು – ಶಿವತತ್ವಚಿಂತಾಮಣಿ, ೨೯-೧೦.
ಅತಿಶಯ ಸಾಮಗಾನಾಮೃತಸಾರ ಸಂ
ಗತವಾದ ಸರ್ವಜ್ಞಮೂರ್ತಿಯ। – ತ್ರಿಭುವನತಿಲಕ ೧-೩೭.

೧. ಸರ್ವಜ್ಞನ ಸುಭಾಷಿತ ಕೃತಿಗೆ ರೂಢವಾದ ಹೆಸರು 'ಪರಮಾರ್ಥ'ವೆಂಬುದು 'ಗುರುಬೋಧಾಮೃತ'ದಲ್ಲಿ ಅರ್ಥವತ್ತಾದ ಆಯಕಟ್ಟಿನ ಜಾಗೆಯಲ್ಲಿ ಬಂದಿರುವುದರಿಂದ ಈತ ಸರ್ವಜ್ಞನ ಶಿಷ್ಯನಾಗಿದ್ದನೆಂದೂ, ೨. ಸರ್ವಜ್ಞನಂತೆ ಶಕಟರೇಫ ಪ್ರಾಸವನ್ನು ಪಾಲಿಸಿರುವನೆಂದೂ ೩. ಸರ್ವಜ್ಞನ ತ್ರಿಪದಿಗಳಲ್ಲಿನ ನುಡಿಗಟ್ಟನ್ನು ಹೋಲುವ ಹಲವಾರು ನುಡಿಗಟ್ಟನ್ನು ಇವನಲ್ಲಿ ಕಾಣಬಹುದೆಂದೂ ಹೇಳಿ ಇವರಿಬ್ಬರ ಗುರು-ಶಿಷ್ಯ ಸಂಬಂಧವನ್ನು ಎಲ್. ಬಸವರಾಜು ಅವರು ಮತ್ತಷ್ಟು ಬಿಗಿ ಮಾಡಹೋಗಿದ್ದಾರೆ. ಆದರೆ ಇವನ್ನು ಇತರ ಕಡೆಗಳಲ್ಲಿ ಸಾಧಿಸಬಹುದು. ಆಧ್ಯಾತ್ಮಗ್ರಂಥಗಳಲ್ಲಿ 'ಪರಮಾರ್ಥ' ಪದ ಸಾವಿರುಗಟ್ಟಲೆ ಪ್ರಯೋಗವಾಗಿರಬಹುದು. ನಿಜಗುಣರು ತಮ್ಮ ಕೃತಿಗೆ 'ಪರಮಾರ್ಥಸಾರ'ವೆಂದು ಹೆಸರಿಟ್ಟುದೇ ಇದಕ್ಕೆ ಸಾಕ್ಷಿ. ಗುರುಬಸವನ 'ಮನೋವಿಜಯ' ಪ್ರಕರಣ ೫, ಪದ್ಯ ೩ರಲ್ಲಿ 'ನೀನೀಕ್ಷಿಸುವದತಿಶಯಂದ ಪರಮಾರ್ಥಸಾರದಲ್ಲಿ' ಎಂಬ ಉಲ್ಲೇಖವಿದೆ.[3] ಇದು ಕನ್ನಡ ವೇದಾಂತಗ್ರಂಥಗಳಲ್ಲಿ ಬರುವ ಸಾಮಾನ್ಯಪದವಾಗಿರುವದನ್ನು ಗಮನಿಸಬೇಕು ಇನ್ನು ಕೆಲವು ಕವಿಗಳು ನಡುಗನ್ನಡದಲ್ಲಿಯೂ ಶಕಟರೇಫ ಪ್ರಾಸವನ್ನು ಪಾಲಿಸಿರುವ ಸಂಗತಿ ಹೊಸದೇನಲ್ಲ. ಲೇಖಕರು ಹೇಳಿರುವ ನುಡಿಗಟ್ಟು, ಧಾಟಿ ಮುಂತಾದ ವಿಚಾರದಲ್ಲಿ ತ್ರಿಪದಿ ಕವಿಗಳಲ್ಲಿ ಸಾಮಾನ್ಯವಾದ ಹೋಲಿಕೆ ಕಂಡರೂ ಅವು ಹೊರಮೈ ಹೋಲಿಕೆಗಳೇ ಹೊರತು ಸರ್ವಜ್ಞನನ್ನೇ ಅಲ್ಲಿ ಅನುಸರಿಸುವುದಕ್ಕೆ ಅಂತಃಪ್ರಮಾಣಗಳೇನೂ ಇಲ್ಲ. ಇಲ್ಲಿ ಹೀಗೆ ಸಾಮ್ಯತೆಗಳಿದ್ದರೂ ಸರ್ವಜ್ಞ-ವಿರತಮಹಾಲಿಂಗರಲ್ಲಿ ವೈಷಮ್ಯಗಳೇ ಹೆಚ್ಚು. ಸರ್ವಜ್ಞನ ಜೀವನ, ತತ್ತ್ವಪ್ರಣಾಲಿ, ಕಾವ್ಯಮಾರ್ಗ ಉದ್ದೇಶಗಳೇ ಬೇರೆ. ಮಹಾಲಿಂಗದೇವನ ಜೀವನ ಮತ್ತು ತತ್ತ್ವದಿರವುಗಳೇ ಬೇರೆ. ಸರ್ವಜ್ಞ ವೀರಶೈವನಾದರೂ ಖಾತಿವಾತ. ಪಂಥ ಕಟ್ಟಳೆಗಳನ್ನು ಮೀರಿದವನು. ಮಹಾಲಿಂಗದೇವ, ವೀರಶೈವ ವಿರಕ್ತ ಮಾರ್ಗದ ಚೌಕಟ್ಟಿನಲ್ಲಿ ಬದುಕಿ ಅದನ್ನೇ ಬೋಧಿಸಿದವ. ಬಸವಾದಿ ಪ್ರಮಥರ ನಡೆ-ನುಡಿಗಳನ್ನು ಹೆಜ್ಜೆ-ಹೆಜ್ಜೆಗೂ ಸ್ತುತಿಸುತ್ತಹೋಗಿದ್ದಾನೆ ಮಹಾಲಿಂಗದೇವ. ಸರ್ವಜ್ಞನಲ್ಲಿ ಈ ಸಂಸ್ತುತಿಮಾಲೆ ಇಲ್ಲವೇ ಇಲ್ಲ. ಈ ಉಭಯರ ಕಾವ್ಯೋದ್ದೇಶಗಳೂ ಬೇರೆ. ಇಬ್ಬರ ಜಾಡಿಗೂ ಅಜಗಜಾಂತರ. ಸರ್ವಜ್ಞನ ತ್ರಿಪದಿಯಲ್ಲಿ ಕಥೆಯಿಲ್ಲ.

೩. ಮ. ವಿ. ೫-೩, ಸಂ. ಮ. ಅ. ನಾರಾಯಣಶಾಸ್ತ್ರಿ, ೧೯೨೪.

ಲೌಕಿಕ–ಅಲೌಕಿಕ ಜೀವನದ ಅನುಭವ ಅಲ್ಲಿ ಬಿಡಿಬಿಡಿಯಾಗಿ ನೇರ ಸಂಗ್ರಹಿತವಾಗಿದೆ. ವಿರತ ಮಹಾಲಿಂಗದೇವನ ಗುರುಬೋಧಾಮೃತದಲ್ಲಿ 'ಶಿವತತ್ತ್ವ ಸಾಕ್ಷಾತ್ಕಾರ' ಅರ್ಥಾತ್ 'ಷಟ್‌ಸ್ಥಲ ಬ್ರಹ್ಮತತ್ತ್ವ' ಮತ್ತು ವೈರಾಗ್ಯವಿಷಯಂಗಳು ಗುರು–ಶಿಷ್ಯರ ಸಂವಾದರೂಪದಲ್ಲಿ ಬೋಧಿಸಲ್ಪಟ್ಟಿವೆ. 'ಅನುಭವಿಯ ವೇದವೇ ವೇದ' ವೆಂದು ಸಾರಿದ ಸರ್ವಜ್ಞನಿಗೆ ಯಾವದೇ ಗ್ರಂಥಪ್ರಮಾಣಗಳ ಹಂಗಿಲ್ಲ. ಆದರೆ ಮಹಾಲಿಂಗ ದೇವ ಯಥೇಷ್ಟವಾಗಿ ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸಿರುವನು. ತನ್ನ ಕೃತಿಯಲ್ಲಿ ೫ ಸ್ಥಲ, ೮೭ ಗ್ರಂಥ, ೨೧ ವೃತ್ತ, ೩೫ ವಚನ ಹಾಗೂ ಒಟ್ಟು ೧೧೬೬ ತ್ರಿಪದಿ ಪದ್ಯಗಳು ಸಂಕಲಿತವಾಗಿವೆಯೆಂದು ಅವನೇ ಹೇಳಿದ್ದಾನೆ.[೪] ಪ್ರಭುದೇವ, ಚೆನ್ನ ಬಸವಣ್ಣನವರ ವಚನಗಳನ್ನು ಉದಾಹರಿಸುವ ಈತ ತನ್ನ ಗುರು ಸರ್ವಜ್ಞನಾಗಿದ್ದಲ್ಲಿ ಅವನ ಒಂದಾದರೂ ವಚನವನ್ನೂ ಸಾಂದರ್ಭಿಕವಾಗಿ ಹೇಳದಿರುತ್ತಿದ್ದನೇ ?

ಎಲ್. ಬಸವರಾಜು ಅವರು 'ಮಹಾಲಿಂಗನಾಗಲಿ, ಅವನ ಗುರುವಾದ ಸರ್ವಜ್ಞನಾಗಲಿ ಇಬ್ಬರೂ ಕ್ರಿ. ಶ. ೧೫೬೦ ರಿಂದ ೧೬೦೦ ರೊಳಗೆ ಬದುಕಿ ಬಾಳಿದ್ದಾರೆಂಬುದಕ್ಕೆ ಯಾವ ಆತಂಕವೂ ಇಲ್ಲ ಎಂದು ಹೇಳಿ ಇದಕ್ಕೆ ಮಹಾಲಿಂಗದೇವನು 'ಬಿಟ್ಟಮಂಡೆಯ ಪ್ರಭು'ವನ್ನು ಸ್ತುತಿಸುವುದರಿಂದ[೫] ಆ (ಬಿಟ್ಟಮಂಡೆಯ) ಪ್ರಭು ದೇವನು ಗುಬ್ಬಿಯ ಮಲ್ಲಣ್ಣನ ಕಾಲದವನಾದುದರಿಂದ (ಕ್ರಿ. ಶ. ೧೫೩೦) ಮಹಾಲಿಂಗ, ಅಲ್ಲಿಂದ ತಲೆಮಾರಿನ ಕಾಲ(೩೦ ವರುಷ)ದಷ್ಟಾದರೂ ಈಚಿನವ ಎಂದರೆ ಕ್ರಿ. ಶ. ೧೫೬೦ರಲ್ಲಿದ್ದವನಾಗಿರಬೇಕು[೬] ಎಂದಿದ್ದಾರೆ. ಅಧಿಕೃತ ಆಧಾರಗಳನ್ನು ಮಂಡಿಸದೆ, ಊಹನಾತ್ಮಕ ಸತ್ಯಗಳಿಂದ ಗೆರೆಕೊರೆದಂತೆ ಹೀಗೆ ಕಾಲನಿರ್ಣಯ ಮಾಡಹೊರಟಿರುವ ಲೇಖಕರ ಅಭಿಪ್ರಾಯ ಸಮ್ಮತವೆನಿಸುವುದಿಲ್ಲ. ಏಕೆಂದರೆ ಮಹಾಲಿಂಗದೇವ ಬಿಟ್ಟ ಮಂಡೆಯ ಪ್ರಭುದೇವನನ್ನು ಮಾತ್ರ ಅಷ್ಟೇ ಏಕೆ ನೂರೊಂದು ವಿರಕ್ತರಲ್ಲಿ ಆದಿಯೂ ಅತಿ ಪ್ರಸಿದ್ಧನೂ ಆದ ಕರಸ್ಥಲದ ನಾಗಿದೇವನನ್ನೂ ಉಲ್ಲೇಖಮಾಡಿದ್ದಾನೆ.

ಒರೆಗಲ್ಲನೊರೆದು ಕೇಳ್ ಮರುಳೆಯೊಪ್ಪವನಿಟ್ಟು
ಸರಗೊಳಿಸಿದಂತೆ ಕರಸ್ಥಲಾನಾಗಗಂ
ವಿರತಿಯಾಯಿತೇನನುಸುರ್ವೆ[೭]

---

೪. ಕವಿಚರಿತೆಕಾರರಿಗೆ ದೊರೆತ ಪ್ರತಿಯಲ್ಲಿ ತ್ರಿಪದಿಗಳ ಸಂಖ್ಯೆ ೧೨೭೧ ಆಗಿವೆ. ಕ. ಚ. ಭಾ. ೨. ಪು. ೮೭.

೫. ಗುರುಬೋಧಾಮೃತ, ಡಾ. ಬಸವರಾಜು ಅವರ ಪ್ರತಿ ೩–೧೫೩ ಡಾ. ಎಂ. ಜಿ. ಬಿರಾದಾರ ಪ್ರತಿ ೩–೨೦೩.

೬. ಪ್ರ. ಕ. ಪು. ೧೩೦.

೭. ಗು. ಬೋ. ೩–೨೦೫.

'ಸ್ವಯಂವಾಯ್ತು ವಿರತಿ ಆ ಬಯಲ ಪ್ರಭುವಿಂಗೆ ಕೇಳ್' ಎಂಬ ತ್ರಿಪದಿಯ ಮುಂದು ಗಡೆಯ ಈ ಪದ್ಯ, ಲೇಖಕರ ಕಣ್ಣಿಗೆ ಅದು ಹೇಗೆ ಗೋಚರಿಸಲಿಲ್ಲವೋ ಆಶ್ಚರ್ಯ. ಕರಸ್ಥಲದನಾಗಿದೇವನ ವಿರತಿಯ ವಿಲಕ್ಷಣ ಬಗೆಯನ್ನು ' ಒರೆಗಲ್ಲನೊರೆದು ಕೇಳ್ ' ಎಂದು ಖಂಡಿತ ಭಾವದಿಂದ ಹೇಳುವ ಈ ಪದ್ಯದ ಆಧಾರದ ಮೇಲಿಂದ ವಿರತ ಮಹಾಲಿಂಗದೇವ ನೂರೊಂದುವಿರಕ್ತರ ತರುವಾಯದ ಕ್ಷಿಪ್ರಕಾಲದಲ್ಲಿಯೇ ಬದುಕಿ ವೈರಾಗ್ಯ ಬೋಧಕವಾದ ತ್ರಿಪದಿಯನ್ನು ಬರೆದು ' ವಿರತ ' ಎಂಬ ವಿಶಿಷ್ಟಅಭಿಧಾನಕ್ಕೆ ಪಾತ್ರನಾಗಿದ್ದಾನೆ. ಕಾಲ-ಪರಿಸರಗಳ ಪ್ರಭಾವದ ದ್ಯೋತಕವಾಗಿ ಆ ಶತಕದಲ್ಲಿಯೇ ವಿರಕ್ತಿಬೋಧಕವಾದ ಈ ಕೃತಿಯಿಂದ ೧೦೧ ವಿರಕ್ತರಿಗೆ ಸಂದ 'ವಿರತ' ಉಪಾಧಿ ಇವ ನಿಗೂ ಒಪ್ಪವಿಟ್ಟಂತಾಗಿದೆ. ಈ ದೃಷ್ಟಿಯಿಂದ ಕವಿಚರಿತೆಕಾರರು ಕೊಟ್ಟಿರುವ ಮಹಾ ಲಿಂಗದೇವನ ಕಾಲ ಕ್ರಿ. ಶ. ೧೫೦೦ ಎಂಬುದೇ ಹೆಚ್ಚು ಸೂಕ್ತ. ಡಾ. ಬಸವರಾಜು ಅವರು ಇವನ ಕಾಲಗಡುವನ್ನು ಇದಕ್ಕೂ ಮುಂದೆ ಎಳೆದದ್ದು ವೈಯಕ್ತಿಕವೆನಿಸುತ್ತದೆ. ಮೇಲಾಗಿ ಸರ್ವಜ್ಞನ ಕಾಲದಲ್ಲಾದರೂ ಎಲ್ಲಿ ಒಂದು ನಿಶ್ಚಿತತೆ ಇದೆ ? ಇವನ ಕಾಲ ಕ್ಕಿರುವ ಒಂದೇ ಒಂದು ಅಧಿಕೃತ ಆಧಾರ ಈ ವರೆಗೆ ಸಿಕ್ಕದು, ಎಳಮಲೆಯ ಗುರು ಶಾಂತದೇವ(ಕ್ರಿ. ಶ. ೧೫೬೫), ನ ಶಿಷ್ಯ ಸಂಪಾದನೆಯಸಿದ್ಧವೀರಣಾಚಾರ್ಯ (ಕ್ರಿ. ಶ. ೧೬೦೦ರಲ್ಲಿ) ಸರ್ವಜ್ಞನ ತ್ರಿಪದಿಗಳನ್ನು ಮೊತ್ತಮೊದಲಿಗೆ ಸಂಕಲನ ಮಾಡಿದನೇಂಬುದು, ಕವಿಚರಿತೆಕಾರರು ಇದೇ ಹಿನ್ನೆಲೆಯಿಂದ ಸರ್ವಜ್ಞ ಅದಕ್ಕೂ ಹಿಂದಿರಬಹುದೆಂಬುದನ್ನು ಸೂಚಿಸಿದ್ದಾರೆ. ವಿರತಮಹಾಲಿಂಗದೇವ ಕ್ರಿ. ಶ. ಸು. ೧೫೦೦ ರಪ್ಟೊತ್ತಿಗೆ ಕೃತಿ ರಚಿ ಸಿರಬೇಕು. ಸರ್ವಜ್ಞ ೧೫-೧೬ನೆಯ ಶತಮಾನದ ಮಧ್ಯಕಾಲದಲ್ಲಿ ತನ್ನ ವಚನಗಳನ್ನು ಬರೆದಿರಬಹುದು. ಇದರಿಂದ ಇಬ್ಬರಿಗೂ ಕಾಲದ ಅಂತರ ಇರುವುದರಿಂದ ಈ ಉಭಯ ವ್ಯಕ್ತಿಗಳು ಪರಸ್ಪರ ಗುರು-ಶಿಷ್ಯರಾಗಿ ಒಂದು ಸಂಪ್ರದಾಯಕ್ಕೇರಿದ್ದರೆಂಬ ದನ್ನು ನಂಬಲು ಸಾಧ್ಯವೇ ಇಲ್ಲ, ಇದು ಕೇವಲ ಊಹೆಯ ಮಾತಷ್ಟೇ ಅಲ್ಲ; 'ಗುರು ಬೋಧಾಮೃತ'ದಲ್ಲಿ ಪ್ರಯೋಗವಾದ 'ಗುರುಸರ್ವಜ್ಞ' ಎಂಬುದು ಎಲ್ಲಿಯೂ ಕವಿ ಸರ್ವಜ್ಞನಿಗೆ ಸಂಬಂಧಿಸಿಲ್ಲ. ಶಿವತತ್ತ್ವ ಹಾಗೂ ವೀರಶೈವರ ಉಪಾಸ್ಯವಸ್ತುವಾದ ಇಷ್ಟಲಿಂಗಕ್ಕೇನೇ ನೇರವಾಗಿ ಅನ್ವಯಿಸುತ್ತದೆಯೆಂಬುದಕ್ಕೆ ಈ ಕೆಳಗಿನ ಪ್ರಾಚ್ಯ ಹಸ್ತ ಪ್ರತಿಯಲ್ಲಿರುವ ಸಾಕ್ಷೀ ಪದ್ಯಗಳನ್ನು ವಾಚಕರು ಗಮನಿಸಬೇಕು.

ಸ್ಥಲ : ೧

'ಗುರುಬೋಧಾಮೃತ'ದ ಆರಂಭದ ತ್ರಿಪದಿ, 'ಮದ್ದುಗಿರು-ಮಹಾದೇವ'.

ಶ್ರೀವರಜ ಸುರವಂದ್ಯ ಪಾವಕಾಂಬಕ ಸಕಲ
ದೇವಾಧಿದೇವ ಪ್ರಮಥರೊಡೆಯ ಮದ್ದುಗಿರು ಮಹಾ
ದೇವದೇವೇಶ ಶರಣಾಗು ೧

ಗುರುವೇ ಪರತತ್ತ್ವ :

ಗುರುವಿನಿಂದಲ್ಲದೆ ತೆರಳದೀ ಭವಪಾಶ
ಗುರುವೆನಿಸಿಕೊಂಬ ಪರತತ್ತ್ವದಡಿಗೆ ವಿ
ಸ್ತರಿಸಿ ಬಿನ್ನಹವನುಸುರ್ವೆನು ೧–೨೪

ಶಿವನಿಗೇ ಗುರು ಸಂಬೋಧನೆ :

ಸದ್ಗುರುವೆ ಶಿವನೆ ನಿಮ್ಮಾಣೆ ಅಳುಕೆನು ೧–೧೯೦
ಗುರುವೆ ನೀನಲ್ಲದೆ ಪೆಱರುಂಟೆ ತ್ರಿಜಗದೊಳು ೧– ೨೭
ಕೇಳ್ ಸದ್ಗುರುವೆ ಶಿವನೆ ನಿಮ್ಮಾಣೆ ಅಳುಕೆನು ೧–೧೪೦
ಗುರುವೆ ಮಾರಾರಿ ನೀನೆ ಕೃಪೆಯಾಗು ೧–೧೯೭
ಅರಿತಿಹೆನೆಂಬಗರಿದು ನಿನ್ನಿರವು ತಾ ಗುರುವೆ ೧–೨೦೦

ಸ್ಥಲ : ೨

ಪರಮಶಾಂತಿಯನೆಯ್ದು ಗುರುರೂಪಿನಿಂದಲಿ
ಚರಿಸಿ ಮರ್ತ್ಯರನು ಹೊರೆಯಲಿಕೆ ಪರಶಿವನು
ಧರೆಗಿಳಿದನೆಂದು ಶ್ರುತಿಸಾರೆ ೨–೧೯

ಗುರುತತ್ತ್ವ–ಪರತತ್ತ್ವ :

ಗುರುಕೃಪಾಮೃತವಿದು ಪರತತ್ತ್ವದಿರವು ಸು
ಸ್ಥಿರಚಿತ್ತ ಬುದ್ಧಿಯಲಿ ಓದಿ ಕೇಳುವ
ಗಿರದೆ ಸೌಭಾಗ್ಯ ಶಿವಸುಖ ೨–೨೭೦

ಸ್ಥಲ : ೩

ಗುರು– ಇಷ್ಟಲಿಂಗ ಸ್ವರೂಪ :

ಗುರುಕೊಟ್ಟ ಪರಬ್ರಹ್ಮ ಕರದೊಳಗಿರುತಿರೆ ೩– ೩೭
ಇಷ್ಟವೆ ಗುರುರೂಪು ೩–೧೨೧

ಸ್ಥಲ ೫ರಲ್ಲಿ ಬರುವ ‘ಅಭವ’ ಅಂಕಿತದ ಇದೇ ಅರ್ಥದ ಕಂದಪದ್ಯ.

ಶ್ರೀ ಸದಾಶಿವ ಮಹೇಶ್ವರ
ಶಾಶ್ವತ ಸರ್ವಗುರುವರೇಣ್ಯ ಕೃಪಾಕರ
ಈಶಾ ಎನ್ನಯ ನಿಜಕರ
ವಾಸಾ ಸರ್ವೇಶ್ವರ ರಕ್ಷಿಸೆನ್ನನಭವ ೫–೧೨೮

ಗುರು-ಇಷ್ಟಲಿಂಗ-ಶಿವ, ಸರ್ವಜ್ಞ ಪದಗಳಿಗೆ ಪರ್ಯಾಯ ಸಂಬೋಧೆ

ಸ್ಥಲ : ೪

ಗುರು-ಇಷ್ಟಲಿಂಗ :

ಶೂನ್ಯಾದಿಶೂನ್ಯ ಮಹಾಶೂನ್ಯವಾಗಿಹ ಬ್ರಹ್ಮ
ತಾನೆ ತನ್ನತಿಗಯೊಳು ಅಂಗ-ಲಿಂಗವಾಯಿ
ತ್ತೇನೆಂಬೆನಿದರ ಮಹಿಮೆಯ ೩-೩೭

ಗುರು ಸಕಲಲಿಂಗ ನಿಷ್ಕಲಲಿಂಗವೆರಡುರೂಪಾಗಿ
ಧರಿಸಿ ಚರಿಸುತ್ತಲಿಹಪರ ಚರಲಿಂಗ
ಪರತತ್ತ್ವಡಿಗೆ ನಮೊ ನಮೊ ೪-೨೭೨

ಆ ಮಹಾಲಿಂಗವನು ಪ್ರೇಮದಿಂದಲಿ ತಂದು
ನೇಮಿಸಿಯೆನ್ನ ಕರದೊಳುಯಿರಿಸಿದ
ಶ್ರೀ ಮಹಾಗುರುವೆ ಶರಣಾಗು ೫-೮೨

ಗುರು-ಪರಶಿವ :

ಸುರಸಿಂಧು ಚಂದ್ರಮೌಳಿ ಮನೋಜಹರ
ಹರಗುರುವರೇಣ್ಯ ಜಯ ಜಯ ೪-೪

ಮನ್ನಾಥಮದ್ಗುರು ಜಗನ್ನಾಥ ಚಿತ್ಸುಖದ
ಭಿನ್ನಬೋಧೆಯನು ಮಿಗೆ ಬೋಧಿಸಿದ ಕೃಪ ಪ್ರ
ಸನ್ನ ಸದ್ಗುರುವೆ ಜಯ ಜಯತು ೪-೫

ಗುರು-ಸರ್ವಜ್ಞ :

ಸರ್ವಮಯ ಸರ್ವತೋಚಕ್ಷು ಸರ್ವಕುಟುಂಬಿ
ಸರ್ವವೆಲ್ಲವನು ನಖದ ಕೊಸಿಯೊಳು ತಳೆ
ಸರ್ವಜ್ಞ ಗುರುವೆ ಕೃಪೆಯಾಗು ೪-೬

ಸ್ಥಲ : ೫

ಗುರು-ಶಿವ-ಸರ್ವಜ್ಞಗುರು :

ಸ್ಮರಹರನೆ ದುರಿತಹರ ಪುರಹರ ಪುರಾತನರನು
ಪೊರೆವ ಸರ್ವಜ್ಞಗುರುವರನೆ ನಿಮ್ಮ ಶ್ರೀ
ಚರಣಕ್ಕೆ ಶರಣು ಶರಣಾರ್ಥಿ ೫-೧೪೫

ಕಂದ ॥ ಗುರುಸರ್ವಜ್ಞನ ಕೃಪೆಯಿಂ
ಪರಮಾಮೃತವೆನಿಸಿ ಮೆರೆವ ಗುರುಬೋಧೆಯನಿದ
ವಿರತಮಹಾಲಿಂಗದೇವ
ವಿರಚಿಸಿದನು ಹರನ ಸ್ತುತಿಸಿ ಪೂಜಿಸುವರಿಗಂ ೫-೧೪೬

ಗುರುಬೋಧೆ-ಶಿವತತ್ತ್ವಬೋಧೆ :

ಗುರುಬೋಧೆಯೆಂದೆಂಬ ಪರಮಾಮೃತವನೀಂಟಿ
ಪರಿಪೂರ್ಣಸುಖವಡೆದು ತಚ್ಛಿಷ್ಯ
ಗುರುಪದದೊಳೈಕ್ಯವಡದಾನು ೫-೧೦೦

ನಿರ್ವ್ವಯಲಲೀಲೆಯಿಂದೀರ್ವರಾದರು ಮತ್ತೆ
ಈರ್ವರೊರ್ವರೆಯಾಗಿ ಮರಳಿಯೆ ಬ್ರಹ್ಮದೊಳು
ಈರ್ವರೆಂದೆಂಬ ಪೆಸರಿಲ್ಲ ೫-೧೦೫

ವಿರತಮಹಾಲಿಂಗದೇವರು ಪ್ರಯೋಗಿಸಿರುವ 'ಗುರು' ಎಂಬುದು ಸರ್ವಜ್ಞತ್ವವುಳ್ಳ ಶಿವನಿಗೆ ಸಂಬಂಧಿಸಿರುವುದೆಂಬುದನ್ನು ಮೇಲಿನ ಪದ್ಯಗಳ ಆಧಾರದ ಮೇಲಿಂದ ಖಚಿತಪಡಿಸುವುದಕ್ಕೆ ಯಾವ ಸಂಕೋಚವೂ ಇಲ್ಲ; ಇರಕೂಡದು. ಕೊನೆಯದಾದ ಒಂದೇ ಒಂದು ಕಂದಪದ್ಯವನ್ನು ಬಲವತ್ತರವಾಗಿಸಿ ಇಡೀ ಕಾವ್ಯದುದ್ದಕ್ಕೂ ಬಂದ ಪ್ರಯೋಗಗಳನ್ನು ಗಾಳಿಗೆ ತೂರಿ, ಇದು ಕವಿ ಸರ್ವಜ್ಞನೇ ಗುರುವೆಂಬುದಕ್ಕೆ ಪ್ರಮಾಣವೆಂದು ಹೇಳುವುದು ಅನುಚಿತ ಮತ್ತು ಆಭಾಸದ ಅತಿರೇಕ. ಮಹಾಲಿಂಗದೇವ ಸಮಗ್ರ ಕಾವ್ಯದಲ್ಲಿ ಪರಶಿವತತ್ತ್ವಕ್ಕೆ ಆ ಪದವನ್ನು ಮೀಸಲಿಟ್ಟು ಪ್ರಕ್ಷಿಪ್ತವಾಗಿ, ಗೂಢವಾಗಿ, ಶ್ಲೇಷಾತ್ಮಕವಾಗಿ ತನ್ನ ಗುರುವಾದ ಆ ಮಹಾಕವಿ ವ್ಯಕ್ತಿಯನ್ನು, ಹೀಗೆ ಕಾವ್ಯದ ಕೊನೆಯಲ್ಲಿ ಮರೆಮಾಡಿ ಹೊಗಳಿರುವುದಂತೂ ಸಾಧ್ಯವಿಲ್ಲ, ಮೇಲಾಗಿ ವೀರಶೈವಕವಿಗಳು ತಮ್ಮತಮ್ಮ ಒಡಂಬಟ್ಟ ಗುರುಸ್ತುತಿಯನ್ನು ಕಾವ್ಯಾರಂಭದಲ್ಲಿ ಮಾಡುತ್ತಾರಲ್ಲದೆ ಅವರಿಗೆ ಅಂತಿಮಸ್ತುತಿ ಪ್ರಾಶಸ್ತ್ಯ ನೀಡುವುದಿಲ್ಲ. ಈ ಕಾವ್ಯದ ಆರಂಭದ ತ್ರಿಪದಿ ಪದ್ಯದಲ್ಲಂತೂ 'ಮದ್ಗುರು ಮಹಾದೇವದೇವೇಶ ಶರಣಾಗು' ಎಂದಿದ್ದು ಅದು ಶಿವ ಸರ್ವಜ್ಞವಾಚಿಯನ್ನು ಸಮರ್ಥಿಸುತ್ತಿದೆಯಲ್ಲದೆ ಕವಿಸರ್ವಜ್ಞವಾಚಿಗೆ ಸಂಬಂಧಿಸಿಲ್ಲ. ಅಲ್ಲದೆ ಈ ಕಾವ್ಯದ ಕೊನೆಕೊನೆಯ ನುಡಿಗಳಲ್ಲಿ 'ಚಿತ್ತಲಿಂಗದಲಿ ಬೆರೆವ ಗುರುಬೋಧೆ' (೫-೧೩೪) 'ಅಸಮನೇತ್ರನನು ಬೆರೆವ ಗುರುಬೋಧೆ' (೫-೧೩೩) 'ಪರಶಿವನತತ್ತ್ವವಿದಲಸದೆ ಕೇಳಿ ಶರಣರು' (೫-೧೩೪) ಎಂದು ಗುರುಬೋಧಾಮೃತವನ್ನು ಶಿವತತ್ತ್ವದೊಡನೆ ಅಭಿನ್ನವಾಗಿಸಿದ್ದಾನೆ. ಗುರುವೆನಿಸಿಕೊಂಬವನು ಪರತತ್ತ್ವವಲ್ಲದೆ ಕರಣಾದಿ ವಿಷಯದೊಳು ತೊಳಲಿ ಸಾವವನು ಗುರುವೆನೆಸಿಕೊಳ್ಳಲರಿಯನು (೨-೨೧೫) ಇತ್ಯಾದಿ ಉದಾಹರಣೆಗಳು ಇದಕ್ಕೆ ಉಪಷ್ಟಂಭಕವಾಗಿವೆ.

ತತ್ತ್ವಾಭಿಮುಖವಾದ ಮಹಾಲಿಂಗದೇವ, ಪೂರ್ಣಶಿವತತ್ತ್ವವನ್ನು ಗುರು-ಶಿಷ್ಯ ಸಂವಾದ ರೂಪಕ್ಕಿಳಿಸಿದ್ದಾನೆ. ಶಾಶ್ವತವೂ ಸಕಲ-ನಿಷ್ಕಲತೀತವೂ ಪರತತ್ತ್ವ, ಪರಶಕ್ತಿ, ಪರಿಪೂರ್ಣಸ್ವರೂಪವೂ ಆದ ಪರಬ್ರಹ್ಮತತ್ತ್ವಕ್ಕೆ (೧-೧), ಸರ್ವಮಯನೂ ಸರ್ವತೋಚಕ್ಷುವೂ ಸರ್ವಜ್ಞನೂ ಆದ ಪರಮಾತ್ಮನಿಗೆ (೪-೬) ಈ ಕಾವ್ಯವನ್ನು

ಅಂಕಿತ ಮಾಡಿರುವುದಲ್ಲದೆ ಅವನ ಕೃಪೆಯಿಂದಲೇ ಕೃತಿ ರಚನೆ ಮಾಡಿರುವುದಾಗಿ ಆರಂಭ ಮತ್ತು ಮುಕ್ತಾಯ ಪದ್ಯಗಳಲ್ಲಿ ಸ್ಪಷ್ಟಪಡಿಸಿದ್ದಾನೆ.

ವಿರತಮಹಾಲಿಂಗದೇವನ ಇಡೀ ಕಾವ್ಯದ ವಸ್ತು, ಉದ್ದೇಶಗಳನ್ನು ಸೂಕ್ಷ್ಮಾವಲೋಕನೆ ಮಾಡಿ ಅಲ್ಲಿನ ತಾತ್ತ್ವಿಕವಿಷಯ ಸಿದ್ಧಾಂತಗಳ ಮೇಲಿಂದ ಹೇಳುವುದಾದರೆ ಈ ಕವಿ ಸರ್ವಜ್ಞನ ಶಿಷ್ಯನಾಗಿದ್ದನೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಪೂರ್ವಾಪರಗಳನ್ನು ಲಕ್ಷಿಸದೆ ಅವಸರ ಮತ್ತು ಆವೇಶಗಳಲ್ಲಿ ಲೇಖಕರು ಹೀಗೆ ಯೋಚಿಸಿದ್ದಾರೆಂದು ತೋರುತ್ತದೆ. ಸರ್ವಜ್ಞನಂತಹ ಸ್ವತಂತ್ರವ್ಯಕ್ತಿ, ವೀರಶೈವ ವಿರಕ್ತನಿಗೆ ಸಾಂಪ್ರದಾಯಿಕವಾಗಿ ಗುರುವಾಗಿದ್ದನೆಂಬ ಡಾ. ಎಲ್. ಬಸವರಾಜು ಅವರ ಹೇಳಿಕೆಯೇ ಅಗ್ರಾಹ್ಯವೆನಿಸುತ್ತದೆ.

■ ■

ಬುಲಾಯಿ ಹಾಡುಗಳು

ಶಶಿಕಲಾ ವಸ್ತ್ರದ

'ಬುಲಾಯಿ ಹಾಡುಗಳು' ಬೀದರ ಜಿಲ್ಲೆಯ ವಿಶೇಷ ಜಾನಪದಸಂಪತ್ತು. ಉಳಿದ ಯಾವ ಭಾಗದಲ್ಲೂ ಕಾಣದ ಈ ಬುಲಾಯಿಹಾಡುಗಳನ್ನು ಬೀದರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಾಡುತ್ತಾರೆ. 'ಬುಲಾಯಿ' ಎನ್ನುವ ಪದ, ಬಹುಶಃ ಹಿಂದಿ–ಉರ್ದುಗಳ ಪ್ರಭಾವ ಹೆಚ್ಚಾಗಿರುವ ಈ ಭಾಗದಲ್ಲಿ 'ಬೋಲನಾ' ಎನ್ನುವ ಹಿಂದಿ ಶಬ್ದದಿಂದ ಬಂದಿರಬೇಕು. ಈ ಬುಲಾಯಿಹಾಡುಗಳನ್ನು ಕೇವಲ ಸ್ತ್ರೀಯರು ಮಾತ್ರ ಹಾಡುತ್ತಾರೆ.

ಈ ಹಾಡುಗಳನ್ನು ಹೆಚ್ಚಾಗಿ ನಾಗರಪಂಚಮಿಯ ಹಬ್ಬದಲ್ಲಿ ಹಾಡುತ್ತಾರೆ. ಹಬ್ಬ ಇನ್ನೂ ತಿಂಗಳಿರುವಾಗ ಪ್ರತಿದಿನವೂ ರಾತ್ರಿ ಮನೆಗೆಲಸ, ಊಟಗಳನ್ನು ಮುಗಿಸಿ ಸಿದ್ಧರಾಗುತ್ತಾರೆ. ಯಾರಾದರೊಬ್ಬರ ಮನೆಯ ವಿಶಾಲವಾದ ಅಂಗಳದಲ್ಲಿ ಆ ಓಣಿಯ ಹೆಣ್ಣುಮಕ್ಕಳೆಲ್ಲ ಸೇರುತ್ತಾರೆ. ಹತ್ತರಿಂದ ಇಪ್ಪತ್ತು ಜನರ ವರೆಗೆ ವರ್ತುಲಾಕಾರವಾಗಿ ಪ್ರತಿಯೊಬ್ಬರೂ ಕೈ ಕೈ ಹಿಡಿದುಕೊಂಡು ನಿಲ್ಲುತ್ತಾರೆ. ಹಾಡು ಪ್ರಾರಂಭವಾದೊಡನೆ ನಿಧಾನವಾಗಿ ಸುತ್ತಲು ಪ್ರಾರಂಭಿಸುತ್ತಾರೆ. ಇಬ್ಬರು ಹೆಣ್ಣು ಮಕ್ಕಳು ಮೊದಲು ಹಾಡು ಹೇಳುತ್ತಾರೆ. ಅದರ ಕೊನೆಯ ಒಂದು ಅಥವಾ ಎರಡು ಸಾಲುಗಳನ್ನು ಉಳಿದವರೆಲ್ಲ ಹೇಳುತ್ತಾರೆ. ಮೊದಲು ಹೇಳುವವರು ತಮ್ಮ ನುಡಿ ಮುಗಿಯುವವರೆಗೆ ಒಂದೇ ಸ್ಥಳದಲ್ಲಿ ನಿಂತು ಸ್ವಲ್ಪ ಮುಂದೆ ಬಾಗಿ ಹೇಳುತ್ತಾರೆ. ಹಾಡು ಮುಗಿದೊಡನೆ ಸುತ್ತಲು ಪ್ರಾರಂಭ. ಉಳಿದವರು ಹಾಡುತ್ತಲೇ ಸುತ್ತು ಹಾಕುತ್ತಾರೆ. ಹಾಡಿನ ಕೊನೆಯಲ್ಲಿ ಕೋಲೆನ್ನ ಕೋಲೆ ಎಂದಿದ್ದರೂ ಯಾರೂ ಕೋಲು ಹಾಕುವುದಿಲ್ಲ. ಈಗ ೬–೭ ವರ್ಷಗಳ ಹಿಂದೆ ಕೋಲು ಹಾಕಿಯೇ ಹಾಡುತ್ತಿದ್ದರಂತೆ. ಒಂದೊಂದು ಹಾಡು ಒಂದು ಅಥವಾ ಎರಡು ತಾಸುಗಳಷ್ಟು ದೀರ್ಘವಾಗಿರುತ್ತದೆ. ಉತ್ಸಾಹಿಹಾಡುಗಾರರು ಬೆಳಗಿನವರೆಗೂ ಹಾಡುತ್ತಾರೆ. ಮಧ್ಯ ವಿಶ್ರಾಂತಿಗೆಂದು ಕುಳಿತಾಗ, ಆ ಮನೆಯ ಯಜಮಾನಿ ಚಹವನ್ನೂ ಒದಗಿಸುವುದುಂಟು. ಹೆಚ್ಚಾಗಿ ವಯಸ್ಸಾಗಿರುವ ಹೆಣ್ಣುಮಕ್ಕಳಿಗೆ ಈ ಹಾಡುಗಳು ಬರುತ್ತವೆ. ಈಚಿನವರು ಕೊನೆಯ ಸಾಲುಗಳನ್ನು ಮಾತ್ರ ಹೇಳಬಲ್ಲವರಾಗಿದ್ದಾರೆ.

ಈ ಹಾಡುಗಳಲ್ಲಿ ವಿಶೇಷವಾಗಿ ರಜಾಕರ ಹಾವಳಿಯ ದುರಂತಕಥೆಗಳೇ ಬರುತ್ತವೆ. ಜಾನಪದಕಥೆಗಳೂ ಉಂಟು. ಪರದಾರಸೋದರನೆಂದು ಬಿರುದು ಪಡೆದ ಕುಮಾರರಾಮನ ಕಥೆಯೂ ಇದೆ. ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರರ ಕಥೆ ಇದೆ. ಜಾನಪದಕತೆಗಳಲ್ಲಿ ಪ್ರಸಿದ್ಧವಾಗಿರುವ ನೀಲಕಂಠರಾಜರ ಕಥೆ ಇದೆ. ಹೇಮರಡ್ಡಿ ಮಲ್ಲಮ್ಮನ ಕಥೆಯೂ ಇದೆ. 'ಶಾಲಿವಾನಂತಾ ಹೆಸರಿಟ್ಟಾ' ಎನ್ನುವ ಮೊದಲಪದ್ಯದ ಕೊನೆಯ ಸಾಲಿನಿಂದ ಐತಿಹಾಸಿಕಪುರುಷ ಶಾಲಿವಾಹನನ ಜನ್ಮರಹಸ್ಯದ ಬಗ್ಗೆ ಇಲ್ಲಿ ಒಂದು ಪ್ರಚಲಿತ ಕಥೆ ಇದೆಯೆಂಬುದೂ ಗೊತ್ತಾಗುತ್ತದೆ.

ಬೀದರದ ಕನ್ನಡ, ಉರ್ದು-ಹಿಂದಿ-ಮರಾಠಿ, ಸ್ವಲ್ಪಮಟ್ಟಿಗೆ ತೆಲುಗಿನ ಪ್ರಭಾವದಿಂದ ಎಲ್ಲ ಸೇರಿ ಕೋಸಂಬರಿಯಾಗಿದೆ. ಕನ್ನಡದ ಕೆಲವು ಮಾತುಗಳು, ಶಬ್ದಗಳು ಅರ್ಥವೇ ಆಗುವುದಿಲ್ಲ. ಶುದ್ಧಕನ್ನಡಮಾತು ಕಡಿಮೆ. ಅದರಲ್ಲೂ ಈ ಜಾನಪದ ಹಾಡುಗಳಲ್ಲಿ ಹಳ್ಳಿಯವರ ಬಾಯಿಂದ ಇನ್ನೂ ಅರ್ಥಗಳು ಅಸ್ಪಷ್ಟವಾಗುತ್ತವೆ. ಅದಕ್ಕೆಂದೇ ವಾಚಕರ ಅನುಕೂಲಕ್ಕಾಗಿ ಆಯಾ ಪದ್ಯಗಳಲ್ಲಿ ಬಂದಿರುವ ಇಂಥ ಪದಗಳಿಗೆ ಕೊನೆಯಲ್ಲಿ ಅರ್ಥವನ್ನು ಕೊಟ್ಟಿದೆ.

ಇತ್ತೀತ್ತಲಾಗಿ ಈ ಹಾಡುಗಳನ್ನು ತಿಂಗಳವರೆಗೆ ಯಾರೂ ಹಾಡುವುದಿಲ್ಲ. ಪಂಚಮಿ ಇನ್ನೆರಡು ದಿನಗಳಿರುವಾಗ ಸಾಯಂಕಾಲ ಹಾಡುತ್ತಾರೆ. ಒಂದೊಂದು ಹಾಡಿನ ಧಾಟಿ ತುಂಬ ಇಂಪಾಗಿರುತ್ತದೆ. ಒಂದು ಶೋಕತಪ್ತ ಹಾಡನ್ನು ಮುದುಕಿಯೊಬ್ಬಳು ಭಾವೋದ್ರೇಕದಿಂದ ಹಾಡುವಾಗ ಕೆಲವರ ಕಣ್ಣಲ್ಲಿ ನೀರು ಕಂಡದ್ದೂ ಉಂಟು. ಈ ಹಾಡುಗಳನ್ನು ಕೇಳುತ್ತ ಕುಳಿತರೆ ಸಮಯ ಸರಿದದ್ದೇ ತಿಳಿಯುವುದಿಲ್ಲ. ಆದರೆ ಇತ್ತೀತ್ತಲಾಗಿ ನಶಿಸುತ್ತಿರುವ ಈ ವಿಶೇಷಸಂಪತ್ತನ್ನು ಬರೆಹದಲ್ಲಿ, ಟೇಪರಿಕಾರ್ಡನಲ್ಲಿ ಸಂಗ್ರಹಿಸುವ ಕಾರ್ಯ ಅತೀ ಅಗತ್ಯವಾಗಿದೆ.*

ಬುಲಾಯಿ ಹಾಡುಗಳು

೧

ಕೋವಂಡಪುರದೊಳು ಹಾರುನ ಮಗಳಿದ್ದ ಶೇಶುಸತಿಯು
ಶ್ರೀ ಗೋವರಿ ಕೋಲೆನ್ನ ಕೋಲೆನ್ನ ಕೋಲ ॥
ನಾಗಯ್ಯನ ಹಬ್ಬ ಅರಳ ತಾಬಂಡಿ ತಾರೇ
ನಾಗಯ್ಯಗೆ ಎಡೆಯ ಮಾಡನ ಬಾರೆ ಕೋಲೆನ್ನ.... ॥

* ಈ ಹಾಡುಗಳನ್ನು ಸಂಗ್ರಹಿಸುವ, ಕೇಳುವ ಕಾರ್ಯದಲ್ಲಿ ನೆರವಾದ ಅಕ್ಕಮಹಾದೇವಿ ಕಾಲೇಜಿನ ನನ್ನ ವಿದ್ಯಾರ್ಥಿನಿಯರಿಗೆ ಋಣಿಯಾಗಿದ್ದೇನೆ,

ಹಪ್ಪಳ ಸೆಂಡಿಗಿ ಬುರಬೂರಿ ಸೊಂಗಿ
ಸೋಸಿಟ್ಟಳ ಸುರಳಿ ಹೋಳಗಿ ಕೋಲೆನ್ನ... ॥

ನಾಗಯ್ಯನ ಪಾದ ಹಾಲಲ್ಲಿ ತೊಳದಾಳೆ
ಪೂಜಿ ಮಾಡೆಳೆ ಕುಂಕುಮದಿಂದ ಕೋಲೆನ್ನ.... ॥

ನಾಗಯ್ಯನ ಮುಂದ ಬೆಂಕಿಕೆಂಡವನಿಟ್ಟು
ಒಡೆದು ಹಾಕೆಳ ಗುಂಗ್ಗಳಾ ಕೋಲೆನ್ನ.... ॥

ಒಯಿಂದುನೇ ಹಾಕೆಳೆ ಹಂಗನೂಲ ಶ್ರೀ ಗೋವರಿ
ಶಿರಬಾಗಿ ಶರಣ ಮಾಡೆಳೆ ಕೋಲೆನ್ನ.... ॥

ಶಿರಬಾಗಿ ಶರಣ ಮಾಡಾಂತ ಯೆಳೆದಲ್ಲಿ
ಏಳು ಹೆಡಿ ಸರ್ಪ ಮಾತನಾಡಿ ಕೋಲೆನ್ನ.... ॥

ಅಂಜುಲಾ ಅಳಕುಲಾ ಹೆದರುತ ಬೆದರುತ
ಬಂದ ಕುಂತಳ ಗೋವರಿ ತೊಡೆಯು ಮೇಲೆ ಕೋಲೆನ್ನ.... ॥

ಹಿಂದ ಸರಿ ರಾತ್ರಿ ಮುಂದ ಸರಿ ರಾತ್ರಿ
ಧನ ಪರರಾತ್ರಿ ಅಲ್ಲಿ ಯೇಜಲಾಗಿ ಕೋಲೆನ್ನ.... ॥

ಮುಂಜನೇಳಿ ಎದ್ದು ತಾಯಿಗೆ ಒಬ್ಬಳು ಮಗಳು
ಪ್ರೀತಿ ಮಾಡವಳೆ ಮನಿಯೊಳಗ ಕೋಲೆನ್ನ.... ॥

ತಾಯಿಮಗಳು ಕೂಡಿ ಉಡಿರಲೆಂದೇರ
ಕನ್ನಡಿ ಹಿಡಿದು ಮುಖನೋಡೆ ಕೋಲೆನ್ನ.... ॥

ಗನ್ನವಡಿ ಹಿಡಿದು ಮುಖ ನೋಡಿ ಅನಂತಾಳೆ
ಗರ್ಭದ ಚಿನ್ನಾ ನನಗಾಗಿ ಕೋಲೆನ್ನ.... ॥

ಇದೇ ಎಂಬ ಶಬ್ದ ಕೇಳ್ಯಾಳೆ ಹಡದಮ್ಮ
ಗಡಸೇಳಿ ಗೋವರಿ ದವಡಿ ವಡಿ ಕೋಲೆನ್ನ.... ॥

ಹೊಡಿಯಬೇಡಯನಗೆ ಬಡಿಯಬೇಡಯನಗೆ
ಯಾರಿಗ ಮಾಡಿಲ್ಲ ಹಾದರ ಕೋಲೆನ್ನ.... ॥

ಯಾರಿಗ ಮಾಡಿಲಂತಿ ಗರ್ಭಾರ ಮೂಡೇದಂತಿ
ಪತಿಗೇಳಿ ಕಿತ್ತಿಸೆ ನಿನ್ನಾ ಹಲ್ಲು ಕೋಲೆನ್ನ.... ॥

ನಾಗಯ್ಯ ನನ್ನ ಗುಂಡಿಗಿ ಪೂಜಿಗಿ ಹೋದರ
ನಾಗಯ್ಯ ಮಾಡದ ಇದೇ ಸುಡಗಿ ಕೋಲೆನ್ನ.... ॥

ಕಲ್ಲಿನದೇವರದಿಂದ ಹಾಗೆಂಗ ಆಗುವುದು
ಪರಪುರುಷರಿಂದ ಆಗುವುದು ಕೋಲೆನ್ನ.... ॥

ಹೋಳಗಿ ಹೊಯಮಚಾರಿ ತುಪ್ಪಕ ಭೀಮಚಾರಿ
ಬಿಟ್ಟ ಬರಿ ಗೋವರಿನ ಅರಣದಲ್ಲಿ ಕೋಲೆನ್ನ.... ॥
ಹೋಳಗಿ ಹೋಮಚಾರಿ ತುಪ್ಪಕ ಭೀಮಚಾರಿ
ಬಿಟ್ಟ ಬಂದರ ಗೋವರಿನ ಅರಣದಲ್ಲಿ ಕೋಲೆನ್ನ.... ॥
ಹಕ್ಕಿ ಪಕ್ಕಿಗಳ ದೂರ್ರ್‍ಯಾಕ ನೋಡತೀರಿ
ತಿಂದ ಬಿಡರಿ ನನಗೆ ಕ್ಷಣದಲ್ಲಿ ಕೋಲೆನ್ನ.... ॥
ನಾವೇಕೆ ತಿಂಬರಿ ನೀನಾದರು ಮಗಳಮ್ಮ
ನೀ ಹೇಳಿದ್ದ ಸೇವ ಮಾಡುವರು ಕೋಲೆನ್ನ.... ॥
ಹುಲಿಕರಡಿಗಳೆ ದೂರ್ರ್‍ಯಾಕ ಸರಿತೀರಿ
ತಿಂದ ಬಿಡಿರಿ ನನಗೆ ಕ್ಷಣದಲ್ಲಿ ಕೋಲೆನ್ನ.... ॥
ನಾವೇಕೆ ತಿಂಬರಿ ನೀನಾದರೂ ಸೊಸೆಯೇ
ನೀ ಹೇಳಿದ ಮಾತು ಮಾಡುವರು ಕೋಲೆನ್ನ.... ॥
ಇರಲಕ ಜಾಗ ಕೊಡುವೆ ಹಡಿಲಕ ಕೋಲಿ ಕೊಡುವೆ
ಸರ್ವಯುಚಯೆಲ್ಲಾ ತಂದು ಕೊಡುವೆ ಕೋಲೆನ್ನ.... ॥
ಕಂಬರವುತ್ತ್ಯಾ ಮಣ್ಣರ ತರುತಿದ್ದ
ಅದಕಾಗಿ ಮಣ್ಣರ ತುಳಿಯುತಿದ್ದ ಕೋಲೆನ್ನ.... ॥
ನಿನಗ ತಾಯಿ–ತಂದಿಲ್ಲಾ ನನಗ ಮಕ್ಕಳಿಲ್ಲಾ
ನಮ್ಮ ಮಗಳಾಗಿ ಇರು ನಡಿಯೆ ಕೋಲೆನ್ನ.... ॥
ಮನಿಗರ ಹೋಗೆಳೆ ಹಡುದ್ಯಾಳೆ ಗೋವರಿ
ಮುದ್ದಾದ ಗಂಡಸಮಗನ ಕೋಲೆನ್ನ.... ॥
ಹಾರೂಗ ಕರಸ್ಯಾರ ಹೊತ್ತಾಗಿ ತಗಸ್ಯಾರ
ಹೊತ್ತಗ್ಯಾಗ ಹಾರುವ ಏನೇನ ಹೇಳಿದಾ
ಶಾಲಿವಾನಂತಾ ಹೆಸರಿಡರಿ ಕೋಲೆನ್ನ.... ॥
ಮುತ್ತಿನ ಹರುವ್ಯಾಗ ಮುತ್ತಿನ ಗುಗ್ಗರಿ ಹಾಕಿ
ಮುತ್ತೈದೇರೆ ಬರ್‍ರೇ ಹೆಸರಿಡುರೇ
ಶಾಲಿವಾನಂತಾ ಹೆಸರಿಟ್ಟಾ ಕೋಲೆನ್ನ.... ॥

ಕಠಿನ ಪದಗಳ ಅರ್ಥ

ಗೋವರಿ – ಗೌರಿ, ತಾಬಂಡಿ – ತಾಟು, ತಟ್ಟೆ. ಯೆಳಿವಲ್ಲಿ – ವೇಳೆಯಲ್ಲಿ, ಸಮಯದಲ್ಲಿ, ಗಡಸೇಳಿ – ಕೋಪ ಬಂದು, ದವಡಿ ಪಡ – ದವಡಿಗೆ ಹೊಡೆ, ತಿಂಬರಿ – ತಿನ್ನೋಣ, ಸರ್ವಯುಚ – ಬಾಣಂತಿಯು ಎಚ್ಚ, ಹಾರೂಗ – ಬ್ರಾಹ್ಮಣನಿಗೆ, ಹೊತ್ತಾಗಿ – ಹೊತ್ತಿಗೆ, ಸೇವ – ಸೇವೆ.

೨

ದಶರಥರಾಜನ ಕೆರಿಯೇ ಅಸರಂತ ಜೈನರು
ದಶರಥಲೊಬ್ಬ ಸಾಹುಕಾರ ಕೋಲೆನ್ನ ಕೋಲ ॥
ದಶರಥ ಅಲ್ಲಿ ಒಬ್ಬ ಸಾಹುಕಾರ ಹೊಟ್ಟೇಲಿ
ಮಲ್ಲಿಕಾರ್ಜುನೆಂಬ ಮಗ ಹುಟ್ಟಿ ಕೋಲೆನ್ನ.... ॥
ಊರಿಗಾ ಅಲ್ಲೊಬ್ಬ ಸರಿ ಜೋಡಿ ಬೀಗರು
ಹೆಣ್ಣ ಕೊಡುಂ ನಮ್ಮ ಮಗನೀಗಿ ಕೋಲೆನ್ನ.... ॥
ಖಂಡಗಲಿ ಅಕ್ಕಿಟ್ಟು ಮಾಡಿ ಮಂಡ ಜಂಗಮರಿಗುಣಿಸಿ
ಮಗಳೇ ನಿನ್ನುಡಿಯು ತುಂಬಿಸಿದ ಕೋಲೆನ್ನ.... ॥
ಹಾದಿಗಿ ಹಂದರಾಕಿ ಬೀದಿಗಿ ಚಳಿಯು ಕೊಟ್ಟು
ಲಗ್ಗನ ಮಾಡ್ಯಾರೆ ಸಾವುಕಾರ ಕೋಲೆನ್ನ.... ॥
ಮಾತಮಾತಿಗಾಗಿ ರೀತುಳ್ಳ ಬೀಗರಿಗಿ
ಕದನ ಹೂಡ್ಯಾವೆ ಅವರಿಗೆ ಕೋಲೆನ್ನ.... ॥
ದುಡ್ಡ ಇದ್ದವನಂತ ದೊಡ್ಡಮಾತ ಆಡಲಿಬ್ಯಾಡೋ
ಇರಲ್ಹೋಗೋ ಮಗಳು ಮನಿದಾಗ ಕೋಲೆನ್ನ.... ॥
ಹೆಣ್ಣು ಇದ್ದವನಂತ ಹೆಮ್ಮೆನಾಡಲಿ ಬೇಡೋ
ಇದರಂತಹ ಹೆಣ್ಣ ತರುವೇನು ಕೋಲೆನ್ನ.... ॥
ಮಾಡಿಯುಮನಿದಾಗ ಮಡದಿಯು ಸೆಳಮಂಚ
ಮಾತಾಡೆನೆಂಬ ಮನನಾಗಿ ಕೋಲೆನ್ನ.... ॥
ನಾನು ಬರತೇನೆ ಸತಿಯು ಕೇಳ ನಿಮ್ಮ
ತಂದಿಗೆ ಮಾಡಿನೊಳಹಾಕೆ ಸೆಳಮಂಚ ಕೋಲೆನ್ನ.... ॥
ಪುರುಷರು ಬರುತಾರಂತ ಕೇಳಂದರ ನಿಮ್ಮಗ
ಏನೆಂತೋ ನನ್ನ ಹಡದಪ್ಪ ಕೋಲೆನ್ನ.... ॥
ಅಳಿಯು ಬರುವುದು ಸುದ್ದ ದಾರಿಗಿ ಇಲ್ಲ
ಬದ್ಧಾಗಿ ಇರರಿ ಮನದಾಗೆ ಕೋಲೆನ್ನ.... ॥
ಅಳಿಯು ಬರುವುದು ಅರಂತೆ
ಅಂಗಳ ಹುಗುವುದು ಆರತಿ ಬಲಗಾಲ ಹಾಕಿ
ಬಳಿಯಾಕ ಬರುವಾಗ ಅತ್ತಿಮಾವರಿಗಿ ಬಲುಖುಷಿ ಕೋಲೆನ್ನ.... ॥
ಸೆಟ್ಟಿ ಮನ್ನೇರ ಮಗ ಉಪ್ಪರಿಗಿ ಏರುವಾಗ
ಇಪ್ಪತ್ತು ಸಾವಿರದ ಗಿಳಿಹಿಂಡು ಕೋಲೆನ್ನ.... ॥

ಇಪ್ಪತ್ತು ಸಾವಿರದ ಗಿಳಿಹಿಂಡು ಮಾತಾಡ್ಯಾವೊ
ಪುತ್ರನ ಪಡಿಯೋ ಧೊರಿಮಗ ಕೋಲೆನ್ನ.... ॥

ಸಾಲ ಆಯಾರಿ ಮಾಡಿ ಸಾವಂತಿಗ ಹೂ ಮುಡಿಸಿ
ಸೆರಗ ಕಟ್ಯಾಕಿ ಶರಣಂದ ಕೋಲೆನ್ನ.... ॥

ಸೆರಗ ಗಂಟ್ಹಾಕಿ ಶರಣಂದ ಅಳಿಯನ
ಮುತ್ಯಾಕೋ ಮಾವಂ ಶರಣೆಂದಿ ಕೋಲೆನ್ನ.... ॥

ಕಠಿಣ ಪದಗಳ ಅರ್ಥ

ಮಾಡಿಯ ಮನಿದಾಗ – ಮಹಡಿಯ ಮನೆಯಲ್ಲಿ, ಅರಂತೆ – ಇರುವರಂತೆ,
ಆಯಾರಿ – ಆಹೇರಿ, ಓದಿಸುವುದು.

೩

ದಾವದೇಶದ ಮ್ಯಾಲ ಫೀರಂಗ ಬಂದನಿಂದು ನಡುಊರ
ಡೇರ್ಯಾ ಹೊಡಸ್ಯಾರ ಕೋಲೆನ್ನ ಕೋಲೆ ॥

ಬೆಗ್ಗಡೆಂತ ಮಂಗಳು ಬ್ಯಾಡವ್ವ ಹೋರಿಯಾಗ
ನಡುಊರ ಮ್ಯಾಲೆ ನಿನ್ನ ಬೆಳಗೆ ಕೋಲೆನ್ನ.... ॥

ನಾಕುಮಂದಿ ಗೆಳತೇರು ಕೂಡಿ ಹೋಗತೇವ
ತಾಯಿ ದೂರಿಂದೆ ನೋಡಿ ಬರುತೇವೆ ತಾಯಿ ಕೋಲೆನ್ನ.... ॥

ನಾಕುಮಂದಿ ಗೆಳತೇರು ಮುಂದ್ಹಾರ, ಪದ್ಮಣಿ
ಹಿಂದಾಳ ಕೊನಿಸೆರಗ ಹಿಡಿದು ಎಳಿತಾನೋ ರಾಜಾ ಕೋಲೆನ್ನ.... ॥

ನನ್ನ್ಯಾಕ ಹಿಡಿತೀರಿ ನನ್ನ್ಯಾಕ ಸೆಳಿತೀರಿ
ನಮ್ಮವ್ವಗ ಹೇಳಿ ಬರತೇನೋ ರಾಜಾ ಕೋಲೆನ್ನ.... ॥

ಅಲ್ಲಿಂದ ಪದ್ಮಣಿ ಮನಿಗಾರೆ ಬಂದಾಳೆ ಕೊನಿಸೆರಗ
ಮೋರಿಮಾಡಿ ಅಳುತಾಳೋ ಪದ್ಮಣಿ ಕೋಲೆನ್ನ.... ॥

ಯಾರೇನಂದರ ಮಗ ನಿನಗ ಯಾರೇ ನೋಡ್ಯಾರ
ಮಗನಿನಗ ಯಾರೇನಂದರ ಪದ್ಮಣಿ ನಿನಗ ಕೋಲೆನ್ನ.... ॥

ಯಾರೇನಂದಿಲ ತಾಯಿ ಯಾರೇ ನೋಡಿಲ ತಾಯಿ
ದುಷ್ಟ ಮುಂಡೇಮಗ ದೃಷ್ಟಿಷ್ಟು ನೋಡ್ಯಾನು ಕೋಲೆನ್ನ.... ॥

ದುಷ್ಟ ಮುಂಡೇಮಗ ದೃಷ್ಟಿಷ್ಟು ನೋಡ್ಯಾನ
ಪಾಪಿಯ ಮುಂಡೇಮಗ ಪಾಪೀಲೆ ಹೋಯ್ತಾನ ಕೋಲೆನ್ನ.... ॥

ನಾಕುಮಂದಿ ಗೆಳತೇರು ಬಂದಾರ ಕೇಳುತಾರೆ
ಯಾರೇನಂದರ ಪ್ರೇಮದ ಗೆಳತಿ ಕೋಲೆನ್ನ.... ॥
ಯಾರೇನಂದಿಲ ಗೆಳದಿ ಯಾರೇ ನೋಡಿಲ ಗೆಳದಿ
ನಾ ಹೊಯ್ಯತೆ ನನ್ನ ಕೈಲಾಸಪುರಕ ಕೋಲೆನ್ನ.... ॥
ಮುಂದ ಬರುವದು ಪಂಚಮಿಯ ಅಮವಾಸೆ
ಹೆಣ್ಣು ಮಕ್ಕಳಿಗಿ ನೋಡೆಂದ ಅಳಬ್ಯಾಡೆ ತಾಯಿ ಕೋಲೆನ್ನ.... ॥
ಮುಂದ ಬರುವದು ದೀಪಾವಳಿ ಅಮವಾಸಿ
ಅಣ್ಣತಮ್ಮರಿಗೀ ನೋಡೆಂದ ಅಳಬ್ಯಾಡೆ ತಾಯಿ ಕೋಲೆನ್ನ.... ॥
ಬಾಳಿಯು ಕಟ್ಟಿವ್ಯಾಲ ಮಲ್ಲಿಗಿಗಿಡ ಹಚ್ಚಿ
ದಿನ್ನಕದಿನ್ನ ನೀರ ಹೊಯ್ಯೇ ತಾಯಿ ಕೋಲೆನ್ನ.... ॥
ದಿನ್ನಕದಿನ್ನಕ ನೀರ ಹೊಯ್ಯೇ ತಾಯಿ
ಹೂವ ಬಾಡಿದರ ಸತ್ತಳಂತ ತಿಳಿಯೇ ಕೋಲೆನ್ನ.... ॥

ಕಠಿನ ಪದಗಳ ಅರ್ಥ

ಪದ್ಮಣಿ – ಪದ್ಮಿನಿ, ಮಗ – ಮಗಳೇ, ಮಗು. ಬೀದರ ಜಿಲ್ಲೆಯಲ್ಲಿ ಮಕ್ಕಳನ್ನು ಪ್ರೀತಿಯಿಂದ ಬೇಟಾ ಎನ್ನುತ್ತಾರೆ, ಮಗಾ ಎನ್ನುತ್ತಾರೆ (ಹೆಣ್ಣಿದ್ದರೂ). ಹೋಯ್ಯಾನ – ಹೋಗುತ್ತಾನೆ. ಹೊಯ್ಯತೆ – ಹೋಗುವೆನು, ದಿನ್ನಕದಿನ್ನ – ದಿನಾಲು, ದಿನವೂ.

೪

ನೀಲಕಂಠರಾಜರು ತಾಯಿ ಮುಂದೆ ಕೂತಿದಾರು
ಏನಂತ ನುಡಿದಿದಾರು ಕೋಲೆನ್ನ ಕೋಲೆನ್ನ ಕೋಲೆ ॥
ನಮ್ಮಪ್ಪರಾಜರು ದಾನಧರ್ಮ ಮಾಡತ್ತಿದ್ದರು
ಮಾಡಿ ಇವರು ಕಟಿಸಿಯಾರು ಕೋಲೆನ್ನ ಕೋಲೆನ್ನ.... ॥
ನಿಮ್ಮಪ್ಪ ರಾಜೆಯರು ಸಮುದ್ರಕ್ಕೆ ಹೋಗಿದಾರು
ಹೆರಮುತ್ತ ತಂದಿದಾರು ಕೋಲೆನ್ನ.... ॥
ಹೆರಮುತ್ತ ತಂದಾರು ಮಾರಾಟ ಮಾಡಿದಾರು
ಮಾಡಿವರು ಕಟಿಸ್ಯಾರು ಕೋಲೆನ್ನ.... ॥
ಎಲೇ ಎಲೇ ಹಡದವ್ವಾ ಗಳಸಲ್ಲಿ ಹೋಗುತೇನೆ
ಮಡದಿ ನೀಲಾಗೆ ಭಾಳ ಜೋಕೆ ಕೋಲೆನ್ನ....॥

ಜೋಳ ಏನು ಬ್ಯಾಳಿ ಏನು ಮೆತ್ತಿಗರ ಹಾಕಲೇನ
ಎಲೇ ಎಲೇ ಹಡದಮ್ಮ ಗಳಿಸಲ್ಲಿ ಹೋಗುತೇನೆ ಕೋಲೆನ್ನ.... ॥
ಮಡದಿ ನೀಲಗಂಗಾಗ ಭಾಳ ಜೋಕಿ
ದನವನು ಕರುವನು ಹಗ್ಗ ಹಚ್ಚಿ ಕಟ್ಟಲೇನು ಕೋಲೆನ್ನ.... ॥
ಮಡದಿ ನನ್ನ ನೀಲಗಂಗಾ ಗಳಿಸಲ್ಲಿ
ಹೋಗತೇನೆ ಆರತಿಂಗಳ, ಬರಲೇನೆ ಕೋಲೆನ್ನ.... ॥
ಆರತಿಂಗಳ ಬರಣೆಲ್ಲ ಮಾಡೇ ನೀನು
ಇಳಿಯಬೇಡ ಕೆಳಗರ ಬರಬೇಡ ಕೋಲೆನ್ನ....॥
ಹೇಳಕೋತ ಕೇಳಕೋತ ನೀಲಾಕುದರಿಯ
ಏರಿದರು **ಬಾರಾಹರಿ** ಹೋಗಿದಾರೊ ಕೋಲೆನ್ನ.... ॥
ನೀಲಾಕುದರಿ ಏರಿದಾರೊ ಬಾರಾಹರಿ ಹೋಗಿದಾರೊ
ಸಮುದ್ರಕ್ಕ ಹೋಗಿದಾರೊ ಕೋಲೆನ್ನ.... ॥
ಸಮುದ್ರದ ದಂಡಿಯಲ್ಲಿ ನಂದೆಲಾದ **ಗಿಡನಾದ**
ಗಿಡದ ಬುಡದೊಳು ಇಳಿದಾರೊ ಕೋಲೆನ್ನ....॥
ಕುದರಿಯ ಕಟ್ಟಿದಾರು ಕಂಬಳಿ ಹಾಸಿದರು
ಕಂಬಳಿ ಮ್ಯಾಲ ಮಲಗಿದಾರು ಕೋಲೆನ್ನ....॥
ಹೆಣ್ಣಪಕ್ಷಿ ಗಂಡಪಕ್ಷಿ ಗಿಡದ ಮ್ಯಾಲ ಕುಂತಿದಾವು
ಏನಂತ ನುಡಿದಿದಾವು ಕೋಲೆನ್ನ.... ॥
ಹಿಂತಾನೆ ವೇಳೆಯಲ್ಲಿ ನೀಲಕಂಠರಾಜಾರು
ಮನಿಯಲ್ಲಿ ಇದ್ದಿದಾರ ಜಯಸಿಂಗರಾಜ
ಎಂಬ ಮಗ ಹುಟ್ಟುತ್ತಿದ್ದ ಕೋಲೆನ್ನ.... ॥
ಮನಿಯಾದ ಬಾರಾಹರಿ ನಾನಿದ್ದ ಬಾರಾಹರಿ
ಜಯಸಿಂಗರಾಜನೆಂಬ ಮಗ ಹೆಂಗ ಹುಟ್ಟುತಿದ್ದ ಕೋಲೆನ್ನ.... ॥
ಹೆಣ್ಣಪಕ್ಷಿ ಗಂಡಪಕ್ಷಿ ಕೆಳಗರ ಬಂದಾವು
ಬೆನ್ನಮ್ಯಾಲ ಕೂಡಿಸಿಕೊಂಡು ಬಾರಾಹರಿ ಹೋಗಿದಾವು ಕೋಲೆನ್ನ.... ॥
ನೀಲಕಂಠರಾಜಾರು ಮ್ಯಾಲ ಮಾಡದಮ್ಯಾಲ ಇಳಿದಿದಾರು
ಮಡದಿ ನನ್ನ ನೀಲಗಂಗಾ **ತಟ್ಟೆರ** ತೆರಿ ಬಾರೆ ಕೋಲೆನ್ನ....॥
ಕೀಲಿ ಕುಲುಪವ ತೆಗಿರೆ
ಹಿಂತಾನೆ ಯಾಳೆದಲ್ಲಿ ಹಿಂತಾನೆ ರಾತ್ರಿಯಲ್ಲಿ ಕೋಲೆನ್ನ.... ॥
ಯಾ ಕಳ್ಳರು ಬಂದಾರೆ ಶಿವನೆ
ಕಳ್ಳನಲ್ಲ ಸುಳ್ಳನಲ್ಲ **ನಾಯಿದ್ದ** ನೀಲಕಂಠರಾಜ ತಟ್ಟಿನಾರ ತೆರಿಬಾರೆ
ಕೋಲೆನ್ನ.... ॥

ನಮ್ಮ ಮನಿ ಅರಸರು ಹೋಗಿ ಇಂದಿಗಿ ತಿಂಗಳಾಯ್ತು
ಇನ್ನಾರು ತಿಂಗಳು ಬರಣೆಲ್ಲ ಕೋಲೆನ್ನ.... ॥
ಕಳ್ಳನಲ್ಲ ಸುಳ್ಳನಲ್ಲಿ ನಾಯಿದ್ದ ನೀಲಕಂಠರಾಜ
ಉಂಗುರ ಕುಡತ ಖೂನ ಹಿಡಿಯೆ ಕೋಲೆನ್ನ.... ॥
ಹಿಂತಾನೇ ಉಂಗುರಗೋಳ ಊರಾಗ ಇಲ್ಲೇನು
ಯಾ ಕಳ್ಳರು ಬಂದಾರೊ ಶಿವನೆ ಕೋಲೆನ್ನ.... ॥
ಪುರುಷ ನನ್ನ ನೀಲಕಂಠರಾಜ ಖರೆ ಅವರು
ಇದ್ದಿದಾರ ಕೀಲಿಕುರುಪು ತಾನೆ ತೆರಿಲಿ ಕೋಲೆನ್ನ.... ॥
ಕೀಲಿಕುರುಪು ತಾನೆ ತೆರಿತು ಪಂಚಸನುಯಿ
ತಾನೆ ಎರಿದು, ಬಳಗರ ಹೋಗಿದಾರೊ ಕೋಲೆನ್ನ.... ॥
ಒಳಗರ ಹೋಗಿದಾರು ಮಂಚದಮ್ಯಾಲ ಕುಂತಿದಾರು
ಎಲಿ ಅಡಕಿ ಮೆಲ್ದಿದಾರು ಕೋಲೆನ್ನ.... ॥
ನಿಮ್ಮನಿ ಮಗ ಬಂದಿದಾಂತ ನಮ್ಮವ್ವಗ ಹೇಳಬ್ಯಾಡ
ನಮ್ಮಪ್ಪಗ ಹೇಳಬ್ಯಾಡ ಕೋಲೆನ್ನ.... ॥
ಗರ್ಭಿಣಿ ಆಗಿದರ ಹೊಡಿಬಡಿ ಮಾಡುತಾರ
ಮನಿಹೊರಗ ಹಾಕುತಾರ ಕೋಲೆನ್ನ.... ॥
ಹೊಡಿಬಡಿ ಮಾಡಣೆಲ್ಲ ಮನಿಹೊರಗ ಹಾಕಣೆಲ್ಲ
ಉಂಗುರ ಕೊಡತ ಖೂನ ತೋರಿಸ ಕೋಲೆನ್ನ.... ॥
ಹೇಳಕೋತ ಕೇಳಕೋತ ಪಕ್ಷಿಮ್ಯಾಲ ಕುಂತಿದಾರು
ಬಾರಾಹರಿ ಹೋಗಿದಾರು ಕೋಲೆನ್ನ.... ॥
ಮಗ ನನ್ನ ನೀಲಕಂಠ ಹೋಗಿ ಇಂದಿಗಿ ತಿಂಗಳಾಯ್ತು
ನೀಲಗಂಗಾಗ ನೀರಹೊಯ್ಯು ಕೋಲೆನ್ನ.... ॥
ನೀಲಾನ ಅತ್ತಿ ಮಾಡ್ಯಾರೆ ಏರಿದಳು
ನೀಲಾ ಬಾರೆಂದು ಕರೆದಳು ಕೋಲೆನ್ನ.... ॥
ಕುಪ್ಪುಸ ಕಳದಾಳು ಹಿಂಡಲು ಬಿಚ್ಚಿದಾಳು
ಬಣ್ಣನಿಂದು ಬ್ಯಾರೆ ಬ್ಯಾರೆ ಕೋಲೆನ್ನ.... ॥
ಯಾರಿಗೆ ಹೋಗಿದೆ ಹೆಣ್ಣ ಯಾರಿಗೆ ಬಸರಾದೆ ನೀಲಾ
ಯಾರಿಗಿ ಆಗಿಲ್ಲ ಯಾರಿಗಿ ಹೋಗಿಲ್ಲ ಕೊಲೇನ್ನ.... ॥
ಉಂಗುರ ಕುಡತ ಖೂನರ ಹಿಡಿರಿ
ಹಿಂತಾನೆ ಉಂಗುರಗೋಳು ಊರಾಗೆ ಇಲ್ಲೇನು ಕೋಲೆನ್ನ.... ॥

ನೀಲಾ ಪಂಚುಗಾರಗೆ ಬಸುರಾದೆ ನೀಲಾ
ಕಡಾಯಿ ತರಸ್ಯಾರ ಕೊಡ ಎಣ್ಣೆ ಸುರದಾರ ಕೊಲೆನ್ನ.... ॥
ಇಳಿ ಅಂತ ಹೊಡಿತಾರ ನೀಲಗಂಗಾಗ
ಪುರುಷ ನನ್ನ ನೀಲಕಂಠರಾಜ ಯಾವದೇಶಕ ಕೋಲೆನ್ನ.... ॥
ಹೋಗಿದಾರು ಯಾವ ಮುಲಕಿಗಿ ಹೋಗಿದಾರು
ಈ ಶಬ್ದ ನುಡಿದಾಳೊ ಎಣ್ಣಿಗಿ ಭೀಟಿದಾಳೊ ಕೋಲೆನ್ನ.... ॥
ಹಿಡಿಗಲ್ಲು ಕಾಸಿದಾರೊ ಹಿಡಿಯಂತ ಕೊಟ್ಟಿದಾರೊ
ಹಿಡಿಯಂತ ಬೆಟದಿದಾರೊ ಕೋಲೆನ್ನ.... ॥
ಪುರುಷ ನನ್ನ ನೀಲಕಂಠರಾಜ ಯಾವ ದೇಶಕ್ಕೆ ಹೋಗಿದಾರೊ
ಈ ಶಬ್ದ ನುಡಿದಿದಾಳೊ ಹಿಡಿಗಲ್ಲು ಹಿಡಿದಿದಾಳೊ ಕೋಲೆನ್ನ.... ॥
ನೀಲಮ್ಮನ ಎಲೆ ಮಾವ ನೀಲಮ್ಮನ ಕರಕೊಂಡು
ತವರಿಗಿ ಹೋಗ್ಯಾರ ಕೋಲೆನ್ನ.... ॥
ನೀಲಾನ ತವರಿಗಿ ಹೋಗಿದಾರೊ ಬೀದ್ಯಾಗ ನಿಂತಿದಾರೊ
ನೀಲಾನ ತಂದಿಗಿ ಕರಸ್ಯಾರೊ ಕೋಲೆನ್ನ.... ॥
ನಿನ್ನ ಮಂಗಳು ನೀಲಗಂಗಾ ಒಂದ ಮಾತ ಮಾಡಿದಾಳು
ನಮ್ಮ ಮಾನ ಕಳೆದಿದಾಳೊ ಕೋಲೆನ್ನ.... ॥
ಹಿರಿಮಗ ರಾಮಲಿಂಗ ನೀಲಾಗ ಬೈಯ್ಯಬೇಕು
ನೀಲಾನ ತಲಿ ಹೊಡಿಬೇಕು ಕೋಲೆನ್ನ.... ॥
ತಂಗಿ ನೀಲಾಗ ಬೈಯ್ಯಾಣೆಲ್ಲ ಆಕಿನ ತಲಿ ಹೊಡ್ಯಾಣೆಲ್ಲ
ಸಣ್ಣಮಂಗ ಭೀಮಸೇನ ತಂಗಿ ನೀಲಾಗ ಬೈಯ್ಯಬೇಕು
ನೀಲಾನ ತಲಿ ಹೊಡಿಬೇಕು ಕೋಲೆನ್ನ.... ॥
ತಂಗಿ ನೀಲಾಗ ಕರಕೊಂಡು ಅರಣಕ ಹೋಗಿದಾರು
ನೀಲಾನ ಸುರತು ನೋಡಿ ಏನಂತ ಹೊಡಿಯಾಲಿ
ಬಿಟ್ಟರಾ ಬಂದಿದಾರು ಕೋಲೆನ್ನ.... ॥
ಅಟ್ಟಾನೆ ಅರಣದಾಗ ಸಣ್ಣದೊಂದು ಹಳ್ಳನಾದ
ಶರಣಪ್ಪನ ಗುಡಿನಾದ ಕೋಲೆನ್ನ.... ॥
ಅಳಕೋತ ಕರಕೋತ ಗುಡಿಗಾರ ಹೋಗಿದಾಳು
ಕಟ್ಟಿಮ್ಯಾಲರ ಕುಂತಿದಾಳು ಕೋಲೆನ್ನ.... ॥
ಮಂರದಾಗಿನ ಜಂಗಮರು ಪೂಜಿ ಮಾಡಲಿ ಬರುತಾರ
ನೈವೇದ್ಯ ತೋರಲು ಬರುತಾರ ಕೋಲೆನ್ನ.... ॥

ಪೂಜಿಮಾಡುದ ಬಿಟ್ಟು ನೈವೇದ್ಯ ತೋರುದ ಬಿಟ್ಟು
ನೀಲಾನ ಮ್ಯಾಲೆ ಮನಸಿಟ್ಟು ಕೋಲೆನ್ನ.... ॥
ಯಾವ ರಾಜೇರು ಮಗಳಿದ್ದಿ ಯಾವ ರಾಜೇರು ಸೊಸಿಯುನಿದ್ದಿ
ಹಿಂಗ್ಯಾಕ ಬಂದೀದೀ ನೀ ಕೋಲೆನ್ನ.... ॥
ನಮ್ಮನಿ ಅರಸರು ಹೋಗಿ ಇಂದಿಗಿ ಆರು
ತಿಂಗಳಾಯ್ತು ಹುಡುಕೋತ ಬಂದಿದ ಕೋಲೆನ್ನ.... ॥
ಹಿಂತಾನೆ ಊರೊಳಗ ಹಿಂತಾನೆ ಕೇರಿಯೊಳಗ
ಇರಬ್ಯಾಡದ ನೀ ನಮ್ಮನಿಗಿ ನಡಿಯೆ ಕೋಲೆನ್ನ.... ॥
ಎಷ್ಟಾನೆ ಹೇಳಿದರ ಕೇಳಣೆಲ್ಲ ಜಂಗವಂರು
ಒಯ್ದಿದರ ಮಠಕ್ಕ ಕೋಲೆನ್ನ.... ॥
ಮಠದಾಗಿನ ಜಂಗಮರು ಮೈಮುಟ್ಟಲು
ಬರುತಾರ ಕೈ ಮುಟ್ಟಲು ಬರುತಾರ ಕೋಲೆನ್ನ.... ॥
ನಮ್ಮನಿ ಅರಸರು ಹೋಗಿ ಇಂದಿಗಿ ಆರುತಿಂಗಳಾಯ್ತು
ನಾ ಒಂದು ವರ್ಷ ತಪನಿದ್ದ ಕೋಲೆನ್ನ.... ॥
ಮಠದಾಗ ಉಳದಾಳ ಮರದಾಗ ಹಡದಾಳ
ಗಣಸಮಗ ಹುಟ್ಟಿದಾನ ಕೋಲೆನ್ನ.... ॥
ಖಿಲಖಿಲ ನಕ್ಕರ ಹವಳರ ಎದುರತಾವ
ಖಿಲಖಿಲ ಅತ್ತರ ಮುತ್ತರ ಉದರತಾವ ಕೋಲೆನ್ನ.... ॥
ನೀಲಕಂಠರಾಜರಿಗಿ ಮಗನಾರ ಹುಟ್ಟಿದಾನೊ
ಮಳಿಸುರಿದಾದ ಹವಳ ಮಳಿ ಸುರಿದಾದ ಕೋಲೆನ್ನ.... ॥
ನೀಲಕಂಠರಾಜರು ಮುತ್ತರ ತುಂಬಿದಾರು
ನೀಲಾಕುದರಿ ಏರಿದಾರು ಕೋಲೆನ್ನ.... ॥
ನೀಲಾ ಕುದರಿ ಏರಿದಾರು ಬಾರಾಹರಿ ಓಡಿದಾರು
ಮಾಡೆದಲ್ಲಿ ಇಳಿದಿದಾರು ಕೋಲೆನ್ನ.... ॥
ಮಾಡ್ಯಾರ ಇಳಿದಿದಾರು ತಟ್ಟೆರ ತೆರದಾರು
ಮಂಚಯೆಲ್ಲ ಖಾಲಿನಾದ ಕೋಲೆನ್ನ.... ॥
ಎಲೆ ಎಲೆ ಹಡೆದವ್ವ ಮಡದಿ ನೀಲಾನ ಸಪ್ಪಳಿಲ್ಲ
ನೀನೇನು ಹೋಗಿದಮ್ಯಾಲ ಒಂದ ಮಾತು ಕೋಲೆನ್ನ.... ॥
ಮಾಡ್ಯಾಳಲ್ಲ ಮಾನನಾದರ ಕಳದಾಳಲ್ಲ
ನಾನೇನು ಹೋಗಿದಮ್ಯಾಲ ಬಾಳತಾಪ ಕೊಟ್ಟರೇನು ಕೋಲೆನ್ನ.... ॥

ಬಾಳ ಕಷ್ಟಾ ಕೊಟ್ಟರೇನು
ಉಂಗುರಾ ಖೂನ ತೋರಿಸಿಲ್ಲೇನು ಕೋಲೆನ್ನ.... ॥
ನೀಲಾಗ ಕರಕೊಂಡು ನೀಲಾನ ತವರಿಗಿ ಹೋಗಿದಾರು
ಬಿಟ್ಟಾರ ಬಂದಿದಾರು ಕೋಲೆನ್ನ.... ॥
ನೀಲಕಂಠರಾಜರು ಅತಗೋತ ಕರಕೋತ
ಮನಿಹೊರಗ ಹೋಗಿದಾರು ಕೋಲೆನ್ನ.... ॥
ಹಿರಿಭಾವ ರಾಮಲಿಂಗ ಮಡದಿ ನೀಲಾನ ಸಪ್ಪಳಿಲ್ಲ ಕೋಲೆನ್ನ.... ॥
ನಮ್ಮ ತಂಗಿ ನೀಲಗಂಗಾ ಒಂದಮಾತ ಮಾಡ್ಯಾಳಂತ
ನಿಮ್ಮ ಮಾನಾ ಕಳೆದಾಳಂತ ಕೋಲೆನ್ನ.... ॥
ನೀಲಾಗ ಕರಕೊಂಡು ಆರಣಕ ಹೋಗಿದೆವು
ಆರಣದಾಗ ಬಿಟ್ಟು ಬಂದಿದೇವು ಕೋಲೆನ್ನ.... ॥
ಅತಗೋತ ಕರಕೋತ ಆರಣದ ಹಾದಿ
ಹಿಡಿದಿದಾರ ಅರಣಕ ಹೋಗಿದಾರ ಕೋಲೆನ್ನ.... ॥
ಅಟ್ಟಾನೆ ಅರಣದಾಗ ಸಣ್ಣದೊಂದು ಹಳ್ಳನಾದ
ಶರಣಪ್ಪನ ಗುಡಿನಾದ ಕೋಲೆನ್ನ.... ॥
ಅತಗೋತ ಕರಕೋತ ಗುಡಿದಾಗ ಹೋಗಿದಾರು
ಕಟ್ಟಿಮ್ಯಾಲ ಕುಂತಿದಾರು ಕೋಲೆನ್ನ.... ॥
ಮೈಮ್ಯಾಲಿನ ಪೋಷಾಕ ತೆಗಿದು ಗುಡಿದಾಗ
ಇಟ್ಟಿದಾರು ಗೋಸಾಯಿ ಆಗಿದಾರ ಕೋಲೆನ್ನ.... ॥
ಊರೆಲ್ಲ ತಿರಗ್ಯಾರ ಕೇರೆಲ್ಲಾ ತಿರುಗ್ಯಾರ
ಮಠಕಾರ ಹೋಗ್ಯಾರ ಕೋಲೆನ್ನ.... ॥
ಮಠದಾಗಿನ ಜಂಗಮರು ಕಟ್ಟಿಮ್ಯಾಲ ಕುಂತಿದಾರು
ರತಿನೀಲಾ ಧ್ಯಾನ ಹಿಡದು ಕೋಲೆನ್ನ.... ॥
ಅತಗೋತ್ಯಕರಕೋತ ಧ್ಯಾನರ ಹಿಡಿದಿದಾಳೊ
ಖೂನರ ಹಿಡಿದಿದಾಳೊ ಕೋಲೆನ್ನ.... ॥
ಖೂನರ ಹಿಡಿದಿದಾಳೊ ಕೊಳ್ಳಿಗರ ಬಿದ್ದಿದಾಳೊ
ಅತಗೋತ ನಿಂತಿದಾಳೊ ಕೋಲೆನ್ನ.... ॥
ಮಡದಿ ನನ್ನ ನೀಲಗಂಗಾ ಪತಿವರತಾ ಧರ್ಮಹೀಳು
ನೀವಾರ ಹೋಗಿದಮ್ಯಾಲ ಒಂದವರ್ಷಾ ತಪನಿದ್ದ
ಒಂದ ವರ್ಷಾ ಕಷ್ಟಾ ನೋಂದ ಕೋಲೆನ್ನ.... ॥
ಈ ಶಬ್ದ ನುಡಿಯೊಳಗೆ ತೊಟ್ಟಿಲಾಗಿನ ಕಂದ ಬಂದು
ತೊಡಿಮ್ಯಾಲ ಕುಂತಿದಾರು ಕೋಲೆನ್ನ.... ॥

ಮಡದಿಗಿ ಕರಕೊಂಡು ಕಂದನ ಎತಿಗೊಂಡು
ಗುಡಿಗರ ಬಂದಿದಾರು ಕೋಲೆನ್ನ.... ॥

ಮಡದಿ ನೀಲಾಗ ಕರಕೊಂಡು ಕಂದಗ ಎತಿಕೊಂಡು
ಮಡದಿ ನೀಲಾನ ತವರಿಗಿ ಬಂದಿದಾರು ಕೋಲೆನ್ನ.... ॥

ನೀಲಮ್ಮನ ಎಲೆ ತಂದಿ ಏನಂದ ಅಂದಿದಾರು
ತುತ್ತರೊಟ್ಟಿ ಉಣಬಾರೆ ಮುಕ್ಕ ನೀರು ಕುಡಿಬಾರೆ ಕೋಲೆನ್ನ.... ॥

ತುತ್ತರೊಟ್ಟಿ ಉಣನಿಲ್ಲ ಮುಕ್ಕನೀರು ಕುಡೆಣೆಲ್ಲ
ನಿಮ್ಮ ಮಾರಿ ನೋಡಣೆಲ್ಲ ಕೋಲೆನ್ನ.... ॥

ನೀಲಮ್ಮನ ಎಲೆ ತಾಯಿ ತುತ್ತರೊಟ್ಟಿ ಉಣಬಾರೆ
ತುತ್ತರೊಟ್ಟಿ ಉಣನಿಲ್ಲ ನಿಮ್ಮ ಮಾರಿ ನೋಡಣೆಲ್ಲ ಕೋಲೆನ್ನ.... ॥

ಮಂಡದಿಗಿ ಕರಕೊಂಡು ಮಗನಿಗಿ ಎತಿಕೊಂಡು
ಮಾಡೆದಾಗ ಇಳಿದಿದಾರು ಕೋಲೆನ್ನ.... ॥

ನೀಲಮ್ಮನ ಎಲೆ ಅತ್ತಿ ಮಾಡೆರ ಏರಿದಾಳು
ಕಂದಗ ತಕ್ಕೊಂಡು ಮುದ್ದಾಡಿದಾಳು ಕೋಲೆನ್ನ.... ॥

ನೀಲಮ್ಮನ ಎಲೆ ಮಾವ ಮಾಡೆರ ಏರಿದಾರು
ಕಂದಗ ತಕ್ಕೊಂಡು ಮುದ್ದಾಡತಾರ ಕೋಲೆನ್ನ.... ॥

ಹಾದಿಗಿ ಹುಟ್ಟಿದ ಕೂಸು ಬೀದಿಗಿ ಹುಟ್ಟಿದ ಕೂಸು
ಸಂಚಗಾರಗ ಹುಟ್ಟಿದ ಕೂಸು
ನೀವ್ಯಾಕ ಮುದ್ದಾಡ್ತೀರಿ ಕೋಲೆನ್ನ... ॥

ಎಲೆ ಎಲೆ ಪುರುಷರೆ ಎಂಥಾ ಮಾತು ಆಡ್ಯಾಳಲ್ಲ
ನಮ್ಮ ಮಾತು ನಮಗ ತಿರುಗಿ ಕೊಟ್ಟಾಳಲ್ಲ ಕೋಲೆನ್ನ.... ॥

ಕಠಿನಪದಗಳ ಅರ್ಥ

ಮಾಡಿ–ಮಹಡಿ, ಗಳಸಲ್ಲಿ–ಗಳಿಸಲು, ವ್ಯಾಪಾರ ಮಾಡಲು, ಬಾರಾಹರಿ–ಹನ್ನೆರಡು ಹರದಾರಿ, ಮೂರು ಮೈಲಿಗೆ ಒಂದು ಹರದಾರಿ. ತಟ್ಟೆರ– (ತಟ್ಟಿ : ಬಾಗಿಲು) ಬಾಗಿಲವನ್ನಾದರೂ ತೆಗೆ, ನಾಯಿದ್ದ–ನಾನೇ ಇದ್ದೇನೆ, ಕುಡುತ–ಕೊಡುತ್ತೇನೆ, ಖೂನ–ಗುರುತು, ಪರಿಚಯ. ಪಂಚ ಸಮಯಿ – ದೀಪ ಹಚ್ಚುವ ಸಮೆ, ಆಗಿದರ – ಆದದ್ದಾದರೆ, ಮಾಡಣೆಲ್ಲ – ಮಾಡುವದಿಲ್ಲ. ಹಿಂಡಲು–ಹೆರಳು, ತುರುಬು. ಭೀಟಿದಾಳು–ಒಗೆದಳು, ಬಿದ್ದಳು. ಸುರತು–ಸ್ಥಿತಿ, ಬಂದಿದ–ಬಂದಿದ್ದೇನೆ, ಗಣಸಮಗ–ಗಂಡುಮಗು. ಖಾಲಿನಾದ–ಖಾಲಿ ಇರುವದು, ಮುಕ್ಕ–ಸ್ವಲ್ಪ.

೫

ಕಾಶಿಬಾಯಿ ಹಡದೊರಸಿಗೆ ಕರಿಯಲಿ ಬಂದಾರ
ಕರದು ಕೇಳ್ಯಾರ ಮಾವುಗ ರನ್ನದೆ ಕೋಲಂ ಕೋಲೆ ॥
ಬ್ಯಾಸಿಗಿ ಬಿಸಿಲೊಳಂ ಕೂಸಿನ ತಾಳೊಳಂ
ಹ್ಯಾಂಗ **ಖಳುವಲಿ** ಈಯಾಳಿ ರನ್ನದೆ.... ॥
ಇದಿಷ್ಟು ಮಾತಿಗಿ ಮಾರಿ ಸಣ್ಣದ ಮಾಡಿ
ಮಾರಿನಾದರ ಸಣ್ಣದ ಮಾಡಿ ರನ್ನದೆ.... ॥
ಹಂಗನೆ ಅಂಬಯೂಳಿ ಕಾಶೀಬಾಯಿ ಜೀವ
ಕಸಿವಿಸಿ ತಾನಾಗಿ ರನ್ನದೆ.... ॥
ತಂದೆರ ಬಂದಾನ ತಂದಿಗಿ ಕೇಳ್ಯಾಳ
ಕೊಟ್ಟೂರಿಗಿ ನಾನು ಹೋಗತೇನೆ ರನ್ನದೆ.... ॥
ಸೀರಿ ಕುಬಸ ತಂದಿಲ್ಲ ತೊಟ್ಟಿಲ ಮಾಡಿಸಿಲ್ಲ
ಹ್ಯಾಂಗ ಖಳುವಲೆ ನಿನ್ನ ರನ್ನದೆ.... ॥
ಗಂಡ ಬಂದನೆಂದು ಮಿಂಡಿಯು ಬಾಯು
ತೆರೆದು ಹೊರಗೊಂಡ ಈಯಾಳಿ ರನ್ನದೆ.... ॥
ಅಲ್ಲಿಂದ ಕಾಶೀಬಾಯಿ ಕೂಸಿಗೆ ಎತ್ತಿಕೊಂಡು
ಟೇಸನ **ಹಾದಿ ಕಡಿಮೆಟ್ಟಿ*** ರನ್ನದೆ.... ॥
ದೂರಿಂದು ಮಾಸ್ತರ ಕಾಶೀಬಾಯಿ ರೂಪ
ನೋಡಿ ಗಾಡಿನಾದರ ಚಾಲೂ ಮಾಡಿ ರನ್ನದೆ.... ॥
ಮಾಸ್ತರನಾದರ ಹೇಳುತಾನ ಕಾಶೀಬಾಯಿಗಿ
ಬರಬೇಕ ನೀನು **ಬಂಗುಲ್ಯಾಕ** ರನ್ನದೆ.... ॥
ಆಲ್ಲಿಂದ ಕಾಶೀಬಾಯಿ ಬಂಗುಲ್ಯಾಕ ಬಂದಾಳ
ಬಂಗುಲ್ಯಾದ ಕೆಳಗ ನಿಂತಾಳ ರನ್ನದೆ.... ॥
ಗಾಡಿಯು ಬರುಲಾಕ ಬಾರಗಂಟೆವ **ಬೇಕ**
ಬರುಬೇಕೆ ನೀನು ಬಂಗುಲೆದೊಳಗ ರನ್ನದೆ.... ॥
ಅಲ್ಲಿಂದು ಕಾಶೀಬಾಯಿ ಬಂಗುಲ್ಯಾಕ ಬಂದಾಳ
ಬಂಗುಲ್ಯಾದ ಒಳಗ ನಿಂತಾಳ ರನ್ನದೆ.... ॥
ಗಾದಿ ನೋಡ ಜಮಖಾನಿ ಇದೆ ನೋಡ
ತವರಮನಿ ಇದ ನೋಡಿ ನೀನಿರಬೇಕ ರನ್ನದೆ.... ॥
ಹಡದ ತಾಯಿ–ತಂದಿನಲ್ಲ ಬಂಧು–ಬಳಗವನಲ್ಲ
ಹ್ಯಾಂಗಿರಲಿ ನಾನು ಎಳಿಕೂಸ ರನ್ನದೆ.. ॥

ಅಣಕ ಝುಣಕದ ಮಾತ ಆಡೂತ ನಿಂತಾನ
ತಿಳಿತ ಹಾರೂನ **ಮುಸಲಾತ** ರನ್ನದೆ.... ॥
ಕಾಶೀಬಾಯಿ ಪತಿವರತಿ ಮಾಡ್ಯಾಳ **ಚಲಕತಿ**
ಇರಕತಿ ಮಾಡಿ ಬರತೀನಿ ರನ್ನದೆ.... ॥
ಅಲ್ಲಿಂದ ಕಾಶೀಬಾಯಿ ಹೊರಕರ ಬಂದಾಳ
ತಟ್ಟಿಗಿ ಕೀಲಿ ಹಾಕ್ಯಾಳ ರನ್ನದೆ.... ॥
ಥಟ್ಟನೆ ಆಡಬ್ಯಾಡೆ ತಟ್ಟೆರ ತೆರಿ ನೀನು
ಇಷ್ಟೊಂದು ಪುಣ್ಯ ಪಡಿ ನೀನು ರನ್ನದೆ.... ॥
ಅಣಕ ಝುಣಕದ ಮಾತು ಆಡಬ್ಯಾಡೊ ಮಾಸ್ತರ
ಮಚ್ಚೀಲಿ **ಹೊಡೆದ** ರನ್ನದೆ.... ॥
ನಾನೀಗ ಸ್ವಚ್ಛಾಗಿ ಕೊಡೋ ಖೋಲ್ಯಾಗ ಕಾಶೀಯು
ಎಲೆಬಾಯಿ ಕೂಸಿನ ಎಲೆತಾಯಿ ಕರುಗಾಗೆ
ಲೀಸ ಬಂಗಾಲಿ (?) ರನ್ನದೆ.... ॥
ನಿನ್ನಿಂದೆ ಹೋಗತೆ **ನವಕೂರಿ** ಹೊಡಿತೇನೆ
ನೋಡೆ ಕೂಸಿನ ಪ್ರಾಣ ರನ್ನದೆ.... ॥
ಮುತ್ತೈದಿತಾನ ಥಣ್ಣಗ ಇದ್ದರ ಮತ್ತ
ಪಡದೇನ ಸಂತಾನ ರನ್ನದೆ.... ॥
ದೂರದರ ಮಾಸ್ತರ ಹಿಡುದಾನ ಚೂರಿರಾ
ಹಿಡದು ಹೊಡದಾನ ಕೂಸಿನ ಪ್ರಾಣ ರನ್ನದೆ.... ॥
ಅಲ್ಲಿಂದ ಕಾಶೀಬಾಯಿ **ಅಯದುಡಿ** ಎಲ್ಲಾ
ತಕ್ಕೊಂಡು ದುಃಖ ಮಾಡೂತ ಕುಂತಾಳ ರನ್ನದೆ.... ॥
ಗಾಡಿಯಾಳಿಯನಾಗೆ ಗಾಡಿಯು ಹೊಂಟಾದ
ದೂರಿಂದ ಮಾಸ್ತರ ನೋಡ್ಯಾನ ರನ್ನದೆ.... ॥
ಗಾಡಿಯು ಬಂದಾದ ಬಂದು ಕೇಳತಾನ
ದುಃಖ ಮಾಡುಂತ್ತ ಕುಂತಿದ್ದ ರನ್ನದೆ.... ॥
ಗಾಡಿಯು ಬರುಲಾಕ ಯಾಳ್ಯವ ತಪ್ಪಿತ್ತು
ಯಪ್ಪ ಹಾಳ ಮಾಡ್ಯಾನ ಮಾಸ್ತರ ರನ್ನದೆ.... ॥

ಕಠಿನಪದಗಳ ಅರ್ಥ

ಕಡಿಮೆಟ್ಟ – ಕಡ್ಡಿಮಟ್ಟ, **ಮೆಟ್ಟು** – ತುಳಿ, **ಖಳುವಲಿ** – ಕಳಿಸಲಿ, **ಹಂಗನೆ ಅಂಬು ಯಾಳ** – ಹಾಗೆ ಅನ್ನುವಾಗ. **ಹೊಡೆದ** – ಹೊಡೆಯುವೆ, **ಬಂಗುಲ್ಯಾಕ** – ಬಂಗಲೆಗೆ, **ಮುಸಲಾತ** –ಮುಸಲತ್ತು. **ನವಕೂರಿ** – ನೌಕರಿ

೬

ಸರಸ್ವತಿ ದಯಾ ನಮದು ಮರಿಲಾರೆ ಗುರುವಿನ ಪಾದ
ಆರ್ಯಧರ್ಮ ನಮ್ಮದಾದ ಕೋಲೆನ್ನ ಕೋಲೆ ॥
ಕಲ್ಯಾಣೆಬಂದೇ ಪ್ಯಾಟಿ ಅಲ್ಲಿ ಕಲಿಹುವಾರೋ ಲೂಟಿ
ಹುಡುಗರು ಇರುವುದು ಜಟ್ಟಿ ಕೋಲೆನ್ನ.... ॥
ಧರ್ಮಪ್ರಕಾಶ ಎಂಬ ವೀರಾ ಇದ್ದಿದಾನೊ ಭಾದುರಾ
ಲಾಟಿ ಕಲಸಾ ಮಾಸ್ತರಾ ಕೋಲೆನ್ನ.... ॥
ಆರ್ಯಧರ್ಮಾ ಆಗಿದ ಮಾತು ತುರಕರಿಗಿ ಬುದ್ಧಿಬಂತಾ
ಯಾವ ದಿನಾ **ಮಾಡಾರಿ** ಘಾತಾ ಕೋಲೆನ್ನ.... ॥
ಏಳೆಂಟುಮಂದಿ ತುರಕರು ಜತ್ತಾಮಾತ ಆಡತಾರಾ
ಏಕಾಂತ ಕುಂತಾ **ದುಖಾನದಾಗೆ** ಆಗ್ಯಾರ ಗಪ್ಪಾ ಕೋಲೆನ್ನ.... ॥
ಕತ್ತಾಲ ಕಾಳ ಅವನಾ ನೆನಸುತ್ತಿರ ಅಮಾಸಿದಿನಾ
ಕೆಳಕೊತ್ತಾ ಹೊಂಟಾರ ಅವನ ಕೋಲೆನ್ನ.... ॥
ಕೆಳಕೊತ್ತಾ ಹೋಂಟಾರ ಅವನ ಬಸವಣ್ಣ ಗುಡಿಯು ತಾನಾ
ಹೊಯಿತ್ತೆನರಿ ನಮ್ಮವರಿನ್ನಾ ಕೋಲೆನ್ನ.... ॥
ಏಳೆಂಟುಮಂದಿ ತುರಕರು ಜತ್ತಮಾತ ಆಡತಾರಾ
ಏಕಾಂತ ಕುಂತಾ **ಇರಧರ್ಮಗ** ಹಾಕ್ಯಾರ ಸುತ್ತಾ ಕೋಲೆನ್ನ.... ॥
ಕೈದಾಗ ಹಿಡಿದಾರೊ ಲಾಟಿ ಬರಗೂಡದಿಲ್ಲ ಒಬ್ಬರಿಗಿ
ದವಡಾ ಮಾಡ್ಯಾರೊ ಮಾದರ ಗಲ್ಲಿಗಿ ಕೋಲೆನ್ನ.... ॥
ಆಯಿತೆ ಇಲ್ಲೆ ತುರಕಾ **ನ್ಯಾನಿಯಿತಿ** ಇಲ್ಲೆ ಮುಲ್ಲಾ
ಮ್ಯಾಲಿಂದ ಬೀಳತಾವ ಕಲ್ಲಾ ಕೋಲೆನ್ನ.... ॥
ಜೀವಾ ಹೋದರಾ **ಪಾರಾವಿನಿಲ್ಲ** ಮುಲ್ಲಾ ನಾನು ನೆನೀದಿಲ್ಲಾ
ಆರ್ಯಧರ್ಮ ಬಿಡೂದಿಲ್ಲಾ ಕೋಲೆನ್ನ.... ॥
ಅಲ್ಲಿಂದೆ ಬಾರಿಚೆ ಪೆಟ್ಟಾ ಹೊಡಿತಾರೊ **ಬೇಕಾದಷ್ಟಾ**
ಹೋಯಿತ್ತೊ ಮುಲ್ಲಾಸಾ ಹೊಂಟಾ ಕೋಲೆನ್ನ.... ॥
ಇರಧರ್ಮಗ ಹೊಡಿದಿನ ಸುದ್ದಿ ಮಾದರ ರಾವಂ ಬಯಿದಾನ
ವರದಿ ಸುದ್ದಿ ಮುಟ್ಟಿತಲ್ಲಿ ಸಮಾಜಮಂದಿ ಕೋಲೆನ್ನ.... ॥
ಹೈದ್ರಾಬಾದಿಯ **ಶಾರಾ** ಸಸ್ತಾಪೂರಾ, ನೀಲಂಗಿ ಸುದ್ದಿ ಅಲ್ಲಿ
ಉದಗಿರಿ ಲಾತುರಾ ಸಸ್ತಾಪೂರಾ, ನೀಲಂಗಿ ಸುದ್ದಿ ಮುಟ್ಟಿತು ಪೂರಾ
ಕೋಲೆನ್ನ.... ॥

ಗೋಪಾಳರಾಯಾ ಸೈಕಲ್ ಬಿಟ್ಟಾ ಕಲಬುರ್ಗಿಗೆ ಹೊರಹೋಂಟಾ
ತಾರ ಮಾಡ್ಯಾರೊ ವಿಂಟಾ ಕೋಲೆನ್ನ.... ॥
ಓಡಿಬಂತೊ ಸಮಾಜಮಂದಿ ನೋಡಲಾಕೊ
ಕಡದಿನ ಪಿಂಡಾ ಮೋಹನ್‌ಸಿಂಗ ಬೆಂಕಿಯು ಕೆಂಡಾ ಕೋಲೆನ್ನ.... ॥
ಬೀದರ ಕೋಟಿಯಾ ಮಂದಿ ಬಾಗಿಲಲ್ಲಿ ಹಾಕ್ಯಾರ ಲಾಟ
ಮಣ್ಣಿಗಿ ಬಂದು ಇಳಿದಾರೊ ಘಟ್ಟಿ ಕೋಲೆನ್ನ.... ॥
ಹೆಣಕ ಒಯ್ದಿದಾರೊ ಡಾಗದಾರಖಾನಿಗಿ ಡಾಗದಾರ ನೋಡುತಾನ
ಬ್ಯಾನಿ, ಛತ್ತಿಸ ಪೆಟ್ಟಿಗಿ ಒಂದೆ ಹಾನಿ ಕೋಲೆನ್ನ....॥
ಹೊತ್ತು ಹೊಂಡಾ ಬುಧುವಾರ ದಿನಾ ಧ್ಯಾನ ಮಾಡಿ ತಯಾರಾ
ಹುಕುಮ ಕೊಟ್ಟಾ ಸರಕಾರ ಕೋಲೆನ್ನ.... ॥
ಕರಿಧರ್ಮಾ ಮಾರಿತಾ ಹೊಂಟಾ ಕೈದಲ್ಲಿ ಹಮರುಮಲಟ್ಟ
ಓಡಿಹೋದಾ ತಾಲುಕದಾರಾ ಕೋಲೆನ್ನ.... ॥
ಗುರಪ್ಪಾಶಾಸ್ತ್ರಿ ಮೋಹನಸಿಂಗಾ, ಎದೆ ಬಾಣಾ ವಕೀಲದಾಗ
ಹಿಂದುಮುಂದೆಲ್ಲಾ ಸಮಾಜದಾಗ ಕೋಲೆನ್ನ.... ॥
ವಕೀಲ ತಗದಾನೊ ದಪ್ಪಾ ಒಂದಕ್ಕ ಮಾಡಾರಿ **ಖಪ್ಪಾ**
ಎಲ್ಲಿಂದ ಅಲ್ಲೆ ಗಪ್ಪಚಿಪ್ಪಾ ಕೋಲೆನ್ನ.... ॥
ಇರಧರ್ಮನ ತಾಯಿತಂದೆ ಹೊರಳತಾರೊ ಭೂಮಿಮ್ಯಾಲೆ
ಬಿಟ್ಟ ನಡದ್ಯೊ ವೀರಭಾದುರಾ ಕೋಲೆನ್ನ.... ॥
ತಿಂಗಳಿಗಿ ಏಳನೂರ **ಯಾವಾರಾ** ತರತಿದೊ ಮಗಾ ವೀರಾ
ಬಿಟ್ಟ ನಡೆದೆನೊ ಬಾದುರಾ ವೀರಾ ಕೋಲೆನ್ನ.... ॥
ಈರಾಧರ್ಮಾ ಮೆರಿಯುತೆ ಹೊಂಟಾ ಶಾಪೂರ ಅಗಸಿಗೆ
ಹೆಣಾ ಬಂತಾ ಹೂಹಾಕಿ ಪರದಾ ಮುಚ್ಚುತಾ ಕೋಲೆನ್ನ.... ॥
ತುರಕರ ಮಾಸ್ತಿಮುಲ್ಲಾ ಎದುರಿಗೆ ಬರೂದಿಲ್ಲಾ
ಓಡಿಹೋಯಿತೊ ಸಮಾಜಮಂದಿ ಕೋಲೆನ್ನ.... ॥

ಕಠಿನ ಪದಗಳ ಅರ್ಥ

ಮಾಡಾರಿ – ಮಾಡೋಣ, ದುಖಾನ – ದುಕಾನ, ಅಂಗಡಿ, **ಕೆಳಕೊತ್ತಾ** – ಕೇಳುತ್ತ, ಹೊಯಿತ್ತೆವರಿ – ಹೋಗುತ್ತೇವ್ರಿ, ಇರಧರ್ಮಾ – ವೀರಧರ್ಮ, ಬಹುಶಃ ಧರ್ಮಪ್ರಕಾಶನನ್ನೇ ಹೀಗೆ ಕರೆದಿರಬಹುದು. ದವಡಾಮಾಡು – ದೌಡಾಯಿಸು, ಓಡಿಹೋಗು, ನ್ಯಾನಿಯಿತಿ – ಸ್ಮರಿಸುತ್ತ, ಪಾರಾಏನಿಲ್ಲ – ಪರವಾ ಇಲ್ಲ. ಹೊಡಿದಿನ – ಹೊಡೆದಂಥ, ಶಾರಾ – ಶಹರಾ, ಪಟ್ಟಣ, ಡಾಗದಾರಖಾನಿ – ಆಸ್ಪತ್ರೆ, ಯಾವಾರಾ – ವ್ಯವಹಾರ, ವ್ಯಾಪಾರ.

೭

ಗುರುವಿಗಿ ನೆನೆದಾರ ಮರಿಯೋಳೋ ಮನದೋಳೋ
ಅರುವು ನಾಲಯಾ ಮಂಟಪ ರನ್ನದ ಕೋಲುಕೋಲೆ ಹೂವಿನ
ಕೋಲುಕೋಲೆ ॥

ಅರುವುನೇ ನಾಲಯಾ ಮಂಟಪಮನದೊಳೂ
ಪರಶಿವನ ಕಂಡು ಬದುಕಿದಳೊ ರನ್ನದ.... ॥

ರಾಕ್ಷಿತ್ತ ಪಾವನಾಗಿ ಇದು ರೂಪಕ್ಕೆ ಬಂದು
ಕರುಣೇ ನೀ ಎಂದು ಕಾರಿ ಬಂದೆ ರನ್ನದ.... ॥

ಕರುಣೆಯು ನೀ ಎಂದು ಬಿರುದಾ ಕೊಂಡಾಡುತ್ತ
ಬಂದು ಧರಣೆಗಿ ಉಪಕಾರಾ ಗುರುರಾಯ ರನ್ನದ.... ॥

ಸತ್ಯಸತ್ಯ ಗುರುವಿನ ಹೊಂದಿ ಮತ್ತ ಸುಳ್ಳಾಡಿ
ನಿಜ್ಜಾ ಸುಳ್ಳಾಡಿ ದಿನಗಳದಿ ರನ್ನದ.... ॥

ಅಂತರಂಗಿನ ಪ್ಯಾಟಿ ಸುತ್ತಿಗಿ ಹೋದೆವಮ್ಮ
ಚಿಂತಿ ಇಲ್ಲದ ಕಂಡ ರತ್ನಮ್ಮ ರನ್ನದ.... ॥

ಚಿಂತಿನಿಲ್ಲದೇ ಕಂಡ ರತ್ನಮ್ಮನ ಬೆಳಗಿರಿ
ಕಾಂತಿ ನೋಡಮ್ಮ ಕಾತುರಾ ರನ್ನದ.... ॥

ಅಂಗಳ ಆತ್ಮರಾಮನ ಕಂಡಾ ಮಂಗಳ ಆತ್ಮರಾಮನ
ಕಂಡಾ ಗಂಗಿನ ಕಂಡಾ ಗವಿ ಹೊಕ್ಕ ರನ್ನದ.... ॥

ಕೆಳಊರು ಕಡೆಗಾಗಿ ಬಯಲೂರು ಬಾಜುಗಾಗಿ
ಭಾಳಹಳ್ಳದವರಾ ಬಾಳುಗುಮ್ಮಾ ರನ್ನದ.... ॥

ಗಂಗಿನ ಕಂಡಾ ಗವಿ ಹೊಕ್ಕಾ ಗುರುಪಾದಾ
ಎನ್ನ ಅಂಗಳ ಕಂಡಾ ಮೈಮರತಾ ರನ್ನದ.... ॥

ಭಾಳಾನೆ ಹಳ್ಳಿಯದ ಬಾಳುಗಾ ಸಾಧುರನಾ
ಕಂಡು ಬಯಲಿಗಿ ಇರುವಾರಿ ರನ್ನದ.... ॥

ಗುರುವಿನ ಗುಪ್ತಾದ ತಂಗಿ ಅಪ್ಪಾ ನೀಲಂಗುನ ಸೇರಿ
ಗುಪ್ತದ ಮಾಲಾ ಏರಿದಳೊ ರನ್ನದ.... ॥

ಗುಪ್ತಾದ ಮಾಲಾ ಏರಿದಾಳೊ ಪಂಚಾಕ್ಷರಿ
ಪರಭೂತ ಹೋದಲಿ ಪರಹಸ್ತ ರನ್ನದ.... ॥

೮

ಬಾಳಿಯು ಒಳತೊಟ್ಟಿ ಬಾಳಿಯು ಹೊರತೊಟ್ಟಿ
ಬಾಳಾನಿಲ್ಲಾದ ಊರೆ ಬರಮಾಪುರೆ ಕೋಲೆನ್ನ ಕೋಲೆ ॥
ಬಾಳಾನಿಲ್ಲಾದ ಊರೆ ಬರಮಾಪೂರಾ
ಊರಿನೋಳು ಅಣ್ಣಾತಂಗೇರ ಝುಗ್ಗಡಾ ಕೇಳಿರ್‍ಯಾನೆ ಕೋಲೆನ್ನ.... ॥
ನಿಂಬಿಯು ಒಳತೊಟ್ಟಿ ನಿಂಬಿಯು ಹೊರತೊಟ್ಟಿ
ನಂಬಿಗಿಲ್ಲದಾ ಊರಾ ಬರಮಾಪೂರ ಕೋಲೆನ್ನ.... ॥
ನಂಬಿಗಿಲ್ಲದಾ ಊರಾ ಬರಮಾಪೂರದೊಳು
ಅಣ್ಣಾತಂಗೇರ ಝುಗ್ಗಡಾ ಕೇಳಿರೇನ ಕೋಲೆನ್ನ.... ॥
ಮಾಯಿನಾ ಒಳತೊಟ್ಟಿ ಮಾಯಿನಾ ಹೊರತೊಟ್ಟಿ
ಮಾಯಾಗಿಲ್ಲದ ಊರ ಬರಮಾಪುರೆ ಕೋಲೆನ್ನ.... ॥
ಮಾಯಾನಿಲ್ಲಾದ ಊರ ಬರಮಾಪೂರ
ಊರದೋಳಊ ಅಣ್ಣಾತಂಗೇರ ಝುಗ್ಗಡ ಕೇಳಿರೇನು ಕೋಲೆನ್ನ.... ॥
ಕೈಯಲ್ಲಿ ಕುಂಚಗಿ ಕಾಲಲ್ಲಿ ಚಪ್ಪಲಿ
ನಡದಾಳ ಗಂಗಮ್ಮ ತವರಮನಿಗಿ ಕೋಲೆನ್ನ.... ॥
ತೌರಮನಿಗಿ ಹೋಗಿದಾಳೆ ಅಂಗಳಾಗೆ ಕುಂತಿದಾಳೆ
ಅಣ್ಣನ ಮಡದಿ ಎದುರಾಗಿ ಕೋಲೆನ್ನ.... ॥
ಅಣ್ಣನ ಇನ ಮಡದಿ ಎದುರಾಗಿ ಕೇಳುತಾಳೆ
ಕಣ್ಣ ಹೊಡದದು ಮಗಳಿಗಿ ಕರಿತಾಳೆ ಕೋಲೆನ್ನ.... ॥
ಕಣ್ಣ ಹೊಡದದ ಕರಿಲಾಕ ನಿನ್ನ ಹೆಣ್ಣ ಯಾರಿಗೆ
ಬೇಕೆ. ನಮ್ಮಣ್ಣ ಎಲ್ಲಿ ಹೋಗ್ಯಾರ ನನಗೇಳೆ ಕೋಲೆನ್ನ.... ॥
ಧಡಿ ಧೋತರ ಉಟ್ಟಿದಾರೆ ನೀಲವಂಗಿ ತೊಟ್ಟಿದಾರೆ
ಧರ್ಮಶಾಲೆಗಾ ಮಲಗ್ಯಾರೆ ಕೋಲೆನ್ನ.... ॥
ಏಳೇಳೋ ಅಣ್ಣಯ್ಯ ಎಷ್ಟುಹೊತ್ತ ಮಲಗಿದಿ
ಮಗಾ ಸೂರಿಜ ಮಗಳು ಕುಡವಳೋ ಕೋಲೆನ್ನ.... ॥
ಹೆಣ್ಣ ಬೇಕಾಗಿ ತಂಗಿ ನಿನ್ನ ಎಲ್ಲಿಗಿ ಹೋಗಿದಿ
ಮಡದಿ ತೌರವರು ರುಳಿಸರಗಿ ಕೋಲೆನ್ನ.... ॥
ರುಳಿಸರಗಿ ತಗಿರಣ್ಣಾ ಕರಿಮಣಿ ಕಟ್ಟಿರಣ್ಣಾ
ತಂಗಿ ಸೊಸಿನಂತಾ ಕರಿರಣ್ಣ ಕೋಲೆನ್ನ.... ॥
ರುಳಿಸರಿಗಿ ತೆಗೆಣೆಲ್ಲಾ ಕರಿಮಣಿ ಕಟ್ಟಣೆಲ್ಲ
ತಂಗಿ ಸೊಸಿನಂತಾ ಕರೆಣೆಲ್ಲಾ ಕೋಲೆನ್ನ.... ॥

ಕೈಯಲ್ಲಿ ಕುಂಚಿಗಿ ಕಾಲಲ್ಲಿ ಚಪ್ಪಲಿ
ನಡದಾಳ ಗಂಗಮ್ಮ ತನ್ನ ಮನಿಗಿ ಕೋಲೆನ್ನ.... ॥
ಗಂಗಮ್ಮನ ಮನೆಯಲ್ಲಿ ಗಂಜಿಬೆಲ್ಲ ಕೊಟ್ಟರಾ
ನಾನು ಇರಲಾರೆ ಅರಸು ಮನಿದಾಗ ಕೋಲೆನ್ನ.... ॥
ಆಕಿ ಹೋದ ಮೂರುದಿನಕಾ ಮಡದಿಗಿ ಉರಿಚಳಿ
ತೋರಿಸಲ್ಲಿ ಹೇಳಸಲ್ಲಿ ನಡದಾರೆ ಕೋಲೆನ್ನ.... ॥
ತೋರಿಸಿ ನೋಡಿದಾಗ ದೆವ್ವನಿಲ್ಲ ಭೂತನಿಲ್ಲ
ಮನಿ ಹೆಣ್ಣುಮಗಳಾ ಉಸರಹತ್ತಿ ಕೋಲೆನ್ನ.... ॥
ನೀಲಗುದರಿ ಏರಿದಾರೆ ಮ್ಯಾಲೆ ಛತ್ರಿ ಒಡಿದಿದಾರೆ
ತಂಗಿದ್ದ ಮನಿಗಿ ನಡಿದಿದಾರೆ ಕೋಲೆನ್ನ.... ॥
ಮನಿಗಾರೆ ಹೋಗಿದಾರೆ ಅಂಗಳಾಗ ನಿಂತಿದಾರೆ
ಝರಿ ತಮಗಿಲ್ಲ ಸೀರ ಕೊಟ್ಟಾಳ ಕೋಲೆನ್ನ.... ॥
ಝರಿ ತಮಗಿಲ್ಲ ಸೀರ ಕೊಟ್ಟಳಾ ಗಂಗಮ್ಮ
ಮಂಚನಾದರೆ ಹಾಕಿದಾಳ ಕೋಲೆನ್ನ.... ॥
ಯಾಕ ಯಾಕೊ ಅಣ್ಣಯ್ಯ ಮಕಾನಾರ ಬಾಡ್ಯಾವ
ಏನ ಸುದ್ದಿಯೋ ಹೇಳೋ ಅಣ್ಣಯ್ಯಾ ಕೋಲೆನ್ನ.... ॥
ನಾಳೆ ಬುಧುವಾರ ದಿನ ಜಂಬಳಗೇರು **ಬರುಹಾರ**
ಬರಬೇಕ ತಂಗೆಮ್ಮ ಮದುವಿಗಿ ಕೋಲೆನ್ನ.... ॥
ಹೆಂಡಿ ತೆಗೆವರು ಇಲ್ಲಾ ಗಂಗಳಾ ಬೆಳಗವರು ಇಲ್ಲಾ
ಬರಲಾರೆ ಅಣ್ಣಾ ಮದುವಿಗಿ ಕೋಲೆನ್ನ.... ॥
ಹೆಂಡಿ ತೆಗೆವರಿಗೆ ಕುಡುವೆ ಗಂಗಳಾ
ಬೆಳಗವರಿಗಿ ಕುಡುವೆ ಬರಬೇಕೆ ತಂಗಿ ಮದುವಿಗಿ ಕೋಲೆನ್ನ.... ॥
ಹಾಲು ಹಿಂಡವರಿಲ್ಲ ಹೆಪ್ಪ ಹಾಕವರು ಇಲ್ಲ
ಬರಲಾರೆ ಅಣ್ಣಾ ಮದವೀಗಿ ಕೋಲೆನ್ನ.... ॥
ಹಾಲ ಹಿಂಡವರಿಗಿ ಕುಡುವೆ ಹೆಪ್ಪ ಹಾಕವ್ರಿಗಿ ಕುಡುವೆ
ಬರಬೇಕ ತಂಗೆಮ್ಮ ಮದುವೀಗಿ ಕೋಲೆನ್ನ.... ॥
ಹತ್ತಿ ಹಿಂಜವರಿಲ್ಲ ಬಟ್ಟಿ ಮಾಡವರಿಲ್ಲ
ಬರಲಾರೆ ಅಣ್ಣಾ ಮದುವೀಗಿ ಕೋಲೆನ್ನ.... ॥
ಹತ್ತಿ ಹಿಂಜವ್ರಿಗಿ ಕುಡುವೆ ಬಟ್ಟಿ ಮಾಡವ್ರಿಗಿ ಕುಡುವೆ
ಬರಬೇಕ ತಂಗೆಮ್ಮ ಮದುವೀಗಿ ಕೋಲೆನ್ನ.... ॥

ಕಠಿನಪದಗಳ ಅರ್ಥ

ಝಗ್ಗಡಾ – ಜಗಳ, ಮಾಯಿನಾ – ಮಾಪಿನಾ, ಬರುಹಾರ – ಬರುವವರಿದ್ದಾರೆ.

೬

ಸಿದ್ಧಪುರದೊಳಂ ಇದ್ದರು ಹೇಮರಡ್ಡಿ
ಭಗತೀಲಿ ಬಾಳೆ ಭಾದುರ ಕೋಲೆನ್ನ ಕೋಲೆ ॥
ಹೇಮರಡ್ಡೆವರ ಸೊಸಿಯೆ ಇದ್ದಳು ಪತಿವರತಿ
ಆಕಿ ಮಲ್ಲಮ್ಮ ಹಿರಿಸೊಸಿ ಕೋಲೆನ್ನ.... ॥
ಅವಳ ಭಾವಕ್ಕ ನೋಡಿ ಮಲ್ಲಯ್ಯ ರೂಪತಾಳಿ
ಶಿವನು ಹೊರಟಾನೆ ಭಿಕ್ಷಾಕೆ ಕೋಲೆನ್ನ.... ॥
ನೋಡಿರೇನಂ ಹಿರಿಯ ಅತ್ತಿಗಿ ಹಣೆಯ ಮೇಲೆ ವಿಭೂತಿ
ಮನೆಯಲ್ಲಿ ಮಲ್ಲಮ್ಮ ಬಾಳೇ ಗರತಿ ಕೋಲೆನ್ನ.... ॥
ಹುಚ್ಚಗಂಡನ ಬಿಟ್ಟು ಮೆಚ್ಚಳ ಮಲ್ಲಯ್ಯನ
ಭಲೆ ಹುಚ್ಚಿ ಆಕಿ ಮನಿದೊಳಂ ಕೋಲೆನ್ನ.... ॥
ನಿಂದೆ ಆಡಿದರತ್ತಿ ನಿಮಗೇನು ಕುಂದಿಲ್ಲ
ಹಡೆದ ತಂದಿಯುಂ ಸರಿ ನಮಗ ಕೋಲೆನ್ನ.... ॥
ಮಲ್ಲಮ್ಮನ ಪಾಲಿಗಿ ಏಳಂ ಮಣವ ಜೋಳ
ಇಷ್ಟು ಜೋಳ ಬೀಸಂದ ಕೋಲೆನ್ನ.... ॥
ಬೀಸುತ್ತ ಮಲ್ಲಮ್ಮ ಗುರುವಿನ ನೆನದಾಳ
ದಣದಣದು ಮನಗ್ಯಾಳ ಕೋಲೆನ್ನ.... ॥
ಮಲ್ಲಯ್ಯ ತಾ ಬಂದು ಮಗಳ ಮಲಗ್ಯಾಳಂದು
ಬೀಸಿಕೊಡುವೆ ಇಷ್ಟು ದಾಣಿ ಕೋಲೆನ್ನ.... ॥
ಅಲ್ಲಿಂದ ಮಲ್ಲಯ್ಯ ಝಟ್ಟನೆ ಎದ್ದಾರ
ಈಬತ್ತಿ ಪಟ್ಟೆ ದರಸ್ಯಾರ ಕೋಲೆನ್ನ.... ॥
ಬ್ಯಾಸಗಿ ಬಿಸಿಲೊಳಂ ಹಸದು ಬಂದೆನಿ ತಾಯಿ
ಒಡಲಿಗಿ ಅನ್ನ ನೀಡೆಂದ ಕೋಲೆನ್ನ.... ॥
ಅವರ ಮನಿಗಿ ಹೊಗಲಾಕ ಮಾರಿ ಇಲ್ಲರಿ ಸ್ವಾಮಿ
ಹಿಟ್ಟು ನೀಡುವ ಕೈಯ ತುಂಬ ಕೋಲೆನ್ನ.... ॥
ದಾನ ಮಾಡದ ನೋಡಿ ನಾಗಮ್ಮ ಬಂದಾಳ ಓಡಿ
ನಿಂಗಮ್ಮ ಬಾಯಿ ಮಾಡಿದಾಳ ಕೋಲೆನ್ನ.... ॥
ಸಿಟ್ಟಿಲಿ ಬಂದಳ ಅತ್ತಿ ಎಡಗೈಲಿ ಬಡದಳ ನೆತ್ತಿ
ಪ್ರಪಂಚ ಮಾಡೂದ ಇದೇ ಏನ ರೀತಿ ಕೋಲೆನ್ನ.... ॥
ಛೇ ಹೋಗೆ ಬಂಗಲಿ ಮನಿದೊಳಗೆ ಅಂಬಲಿ
ದನಕರು ಕಾಯೆ ಅಡವಿಯಲ್ಲಿ ಕೋಲೆನ್ನ.... ॥

ಹಿತದಿಂದ ಮಲ್ಲಮ್ಮ ಅಂಬಲಿ ಎತ್ಯಾಳ
ಆರೆಣದ ಹಾದಿ ಹಿಡಿದಾಳ ಕೋಲೆನ್ನ.... ||
ನಾಗಮ್ಮ ನಿಂಗಮ್ಮ ಸದರ ಪಡಸಾಲ್ಯಾಗ
ಪಗಡಾಟ ಅವರು ಹೂಡಿದರ ಕೋಲೆನ್ನ.... ||
ಮಲ್ಲಯ್ಯ ತಾ ಬಂದು ನಡುವ ಅಂಗಳಗಿ ನಿಂತು
ಭಿಕ್ಷೆಂಬ ಶಬ್ದ ಭವ ಶಬ್ದ ಕೋಲೆನ್ನ.... ||
ಸೊಕ್ಕಿದ ಕೋಣನಂಗ ದಕ್ಕಿದೆಲೊ ಎಲೆ ಅಯ್ಯ
ಭಿಕ್ಷೆಂಬ ಶಬ್ದ ನಿನಗ್ಯಾಕ ಕೋಲೆನ್ನ.... ||
ತುತ್ತೊಂದು ನೀಡಂದರ ಹತ್ತೊಂದು ಮಾತ್ಯಾಕ
ತುತ್ತೊಂದು ನೀಡಿ ಖಳಬೇಕೆ ಕೋಲೆನ್ನ.... ||
ನಾಗಮ್ಮ ಕರಿದಾಗ ಅಮ್ಯಾಗ ಕರಿಬೇಕೆ
ಬೆಂಕಿ ನೀಡಿರಿ ಜೋಳಗ್ಯಾಗ ಕೋಲೆನ್ನ.... ||
ಬಾರಲೋ ಬಾ ಭಂಡ ಇಬ್ಬರು ನೆಗಣದೇರು
ಜೋಡ ಜೋಳಗ್ಯಾಗ ನೀಡ್ಯಾರ ಬೆಂಕಿ ಕೆಂಡ ಕೋಲೆನ್ನ.... ||
ಅಯ್ಯಾಗ ಬಿದ್ದಾವ ತಲಕೆ ಬಂದಾರ ಮಲ್ಲಮನ ಬಲಕೆ
ನಿಮ್ಮನಿಯಲ್ಲಿ ನೀಡ್ಯಾರ ಜೋಳಗ್ಯಾಗ ಬೆಂಕಿ ಕೋಲೆನ್ನ.... ||
ಬಂದಿದ ಬರಲೆಪ್ಪ ಅಂಬಲಿ ಸುರಿರೆಪ್ಪ
ಆಗs ಕಾರಣ ಆಗಲೆಪ್ಪ ಕೋಲೆನ್ನ.... ||
ಮಗಬಾರೊ ಬ್ರಹಮರೆಡ್ಡಿ ಮನದು ತೊಟ್ಟನು ಕೊಟ್ಟ
ಅವೆರಡ ಪ್ರಾಣ ಹೊಡಿಬೇಕೆ ಕೋಲೆನ್ನ.... ||
ಅಲ್ಲಿಂದ ಬ್ರಹ್ಮರೆಡ್ಡಿ ಸುರದಾರ ಅಂಬಲಿ ಸುರಕಿ
ಎತ್ಯಾರೆ ಕೊಡಲಿ ಮ್ಯಾಲಿಂದೆ ಕೋಲೆನ್ನ.... ||
ಅವರೆರಡು ಕಣ್ಣ ಗ್ವಾಡಿನಾಗೆ
ಮಲ್ಲಯ್ಯಗ ಮಲ್ಲಮ್ಮಗ ಬಾಯಿನಾಗ ನೆನೆದಾರು
ಕಣ್ಣ ಬಂದಾವು ಮ್ಯಾಲಕ್ಕೆ ಕೋಲೆನ್ನ.... ||
ನಾಗಮ್ಮಗ ನಿಂಗಮ್ಮಗ ತಲಿಗಿ ಏರಿತ್ತ ಸೊಕ್ಕ
ಅವರ ಮನಿಗಿ ಹತ್ತಿತ ಬೆಂಕಿ ಕೋಲೆನ್ನ.... ||
ಬೆಂಕಿ ಹತ್ತಿತಂತ ಮನಿಮುಂದಿ ಅಳತಾರ
ಮುಂದೇನ ಗತಿ ಹರಹರ ಕೋಲೆನ್ನ.... ||
ಮುಂದೇನ ಗತಿ ಭೂಮಿಗಿ ಬೀಜವಿಲ್ಲ
ಭೂಮಿಯ ಕವರು ಮೂಲೆ ಬಿತ್ತು ಕೋಲೆನ್ನ.... ||

ಹೇಮರಡ್ಡಿ ಹೇಳುತಾರ ಇದ್ದಾರ ಮನಿಮಂದಿ ಖೋಡಿ
ಹೋಗಿ ಮಲ್ಲಮ್ಮನ ಪಾದ ಹಿಡಿರಿ ಕೋಲೆನ್ನ.... ॥
ತಪ್ಪು ಆಯಿತು ಸತಿ ಅಪರಾಧಿ ನಮ್ಮಗ
ಇದೊಂದು ಮಾತು ಲಾಲಿಸು ಕೋಲೆನ್ನ.... ॥
ಕೂಡಿ ಹೊಕ್ಕಾರೆ ಊರ ಮನಿಮಾರು
ಊರಾಗ ಅವರು ಸಾವುಕಾರ ಕೋಲೆನ್ನ.... ॥

ಕಠಿನಪದಗಳ ಅರ್ಥ

ಈಬತ್ತಿಪಟ್ಟಿ–ವಿಭೂತಿಯ ಸಾಲು, ಬಂಗಲಿ–ಒಂದು ಬೈಗಳು, ತಲಕಿ–ತಲೆಗೆ, ಬಂದಿದ ಬರಲಿ–ಬಂದದ್ದು ಬರಲಿ, ಆಗ ಕಾರಣ ಆಗಲಿ–ಆಗುವದೆಲ್ಲ ಆಗಲಿ. ಬ್ರಹಮ, ಬ್ರಹ್ಮರೆಡ್ಡಿ–ಭರಮರೆಡ್ಡಿ, ಕಣ್ಣ ಗ್ವಾಡಿನಾಗೆ–ಕಣ್ಣು ಗೋಡೆಯಂತಾಗು, ಕಾಣದಾಗು. ಬಾಯಿನಾಗ–ಬಾಯಿಯಲ್ಲಿ, ಖೋಡಿ–ಕೆಟ್ಟ ಸ್ವಭಾವ.

೧೦

ಭಾರತಮಾತಾ ನಿಮ್ಮ ಸ್ಮರಣೆ ಚರಣಕ್ಕೆ ಹಚ್ಚುವೆ ಹಣೆ
ಆಜ್ಞೆ ಕೊಟ್ಟರು ಗುರುಪಾದ ಕರುಣೆ ಕೋಲು ಕೋಲೆ ॥
ತಿಳಿಯುಂದಿಲ್ಲ ನಿಮ್ಮ ಮಹಿಮ ಸೇವೆಮಾಡಿ
ಗಾಂಧಿಮಹಾತ್ಮಾ ಅಂಶ ತೀರಿದಿತ್ತರಿ ಪೂರ್ವ ಧರ್ಮ ಕೋಲು.... ॥
ಕೆಟ್ಟ ಕಲಿಯುಗ ಬಂತು ಕಾನೂನು ಬೇರೆ ತಂತು
ದಯಾಮಯ ದಾವಲ್ಲಿ ಉಳಿಯಿತು ಕೋಲು.... ॥
ಕಾಲಜ್ಞ ಹೇಳಿದ ಮಾತು ಕಣ್ಣಲ್ಲಿ ಕಂಡಾಂಗಾತು
ಮಹಾದೇವ ಎಂಥಾ ಹೊತ್ತು ತಂದಿರಿ ಕೋಲು.... ॥
ಸತ್ಯದಿಂದ ಸ್ವರಾಜ್ಯ ಗೆದ್ದು ಹಿಂದುಸ್ತಾನ ಕುಂತಾದ ಗೆದ್ದು
ಜಾತಿಧರ್ಮ ಎಂಬುದು ಇಟ್ಟಿಲ್ಲ ಭೇದ ಕೋಲು.... ॥
ಹಿಂದು ಮುಸಲ್ಮಾನ ಅಣ್ಣತಮ್ಮರ ಸಮನ
ತಮ್ಮೊಳಗ ತಾವು ಮಾಡ್ಯಾರೊ ಕದನ ಕೋಲು.... ॥
ಕಬುಲಾದ ಅಂಗರೆಜ ತಗಿತೆ ಕೊಡುವದಕೆ ರಾಜ
ತಿರುಗಿ ಝಂಡಾಕೆ ಮಾಡ್ಯಾರೊ ಪೂಜೆ ಕೋಲು.... ॥
ಹಾರಿನಿಂದ ಜೀನ ಸಾಹೇಬ ಕಾನೂನು ಕೊಡರೆಪ್ಪ ಬ್ಯಾರೆ
ನಮ್ಮ ನಿಮ್ಮದು ಹಿಸೆ ಬರೋಬರ ಕೋಲು.... ॥

ಕಾನೂನು ಕೊಟ್ಟರ ಬಗಲೆ ರಾಜರೆಲ್ಲ ಆಗ್ಯಾರೊ ಕಬೂಲೆ
ನಿಜಾಮಗ ಪತ್ರ ಬರದಾರೊ ಖುಲ್ಲಾ ಕೋಲು.... ॥
ಕಬೂಲಾದ ನಿಜಾಮ ಖಾತೆದ ಮೇಲೆ ಸೈನ್ಯದ ಕೊಟ್ಟ
ಖಾಸಿ ಮರಜವಿಗೆ ಬಂದಿ ಕೊನೆಟ್ಟ ಕೋಲು.... ॥
ಗುಲಾಮಾಗಿ ಇರುವದಕಿನ್ನ ಲೇಸಾಗಿ ಸಾಯುವದು ಸಮನ
ಇದು ಒಂದೇ ಮಾಡ್ತೇವು ಪಾಕಿಸ್ತಾನ ಕೋಲು.... ॥
ನೋಡಪ್ಪ ನಿನ್ನ ಇಷ್ಟ ಮಾತ ಸಾಕಿತ್ತು ಬೀಜ
ನಮ್ಮೊಳಗೆ ಆದ ಕಡಿಮೆ ಫೋಜ ಕೋಲಾ.... ॥
ಖಾನೆಯ ಸಾಹೇಬ ಎದೆಗೆ ಮುಟ್ಟಿದಂತಾಯಿತು
ನಾವು ಹುಟ್ಟಿ ರಝಾಕಾರರಿಗೆ ತಯಾರ ಮಾಡ ಕೋಲು.... ॥
ನೋಡಪ್ಪ ನಿನ್ನ ಇಚ್ಛೆ ನನ್ನ ಕಡೆ ಇಲ್ಲ ಕಪ್ಪ
ಕೊಡತೇನಿ ಸುಮ್ಮನ ಗಪ್ಪಾ ಕೋಲು.... ॥
ಸುರುವಾಯಿತು ಹೊಸ ಆಟಾ ಕಾಸಿಂ ಸಾಹೇಬ ಹುಕುಂ ಬಿಟ್ಟಾ
ಹಿಂದೂ ಹತಿಯಾರ ಕೈಕೊರಿ ಜಟ್ಟಾ ಕೋಲು.... ॥
ಪೋಲಿಸ ಬಂದಾದ ದೌಡ ಊರೊಳಗೆ ಕುಲಕರ್ಣಿ ಗೌಡ
ಹತಿಯಾರ ಕುಡವಲ್ಲದಿದ್ದಾರ ಇಲ್ಲದೊಂದು ಪೀಡ ಕೋಲು.... ॥
ಬಂದುಕ ಬಾರಾದಗೋಲಿ ಇಟ್ಟಾರೋ ನೆಲದಾಗ ಹೂಳಿ
ಸಜಾ ಕುಡತಾರೋ ಹೇಳಿ ಕೇಳಿ ಕೋಲು.... ॥
ಹಿಂದು ಹತಿಯಾರ ಬಿಚ್ಚಿ ರಝಾಕಾರರಿಗೆ ಕೊಟ್ಟಾರ ಮುಚ್ಚಿ
ಜಂಗಿನ ಸಲುವಾಗಿ ಹಾಕ್ಯಾರೊ ಕಚ್ಚಿ ಕೋಲು.... ॥
ತುರಕರದ ಎಂಥಾ ಹಿಂಸ ತೊಟ್ಟಿಲಾಗೆ ಮಲಗಿತ ಕೂಸ
ಬರಚಿಗಿ ಸಿಗಸ್ಯಾರ ಎಂಥ ಮೋಸ ಕೋಲು.... ॥
ಕೂಸು ಚಿಟ್ಟಂತ ಚೀರಿ ಕಣ್ಣು ತೆರೆದು ನೋಡ್ತಾದ ಮಾರಿ
ಅಂತಕರಣ ಇಲ್ಲದೆ ಹೊಡದಾರೊ ಹಾರಿ ಕೋಲು.... ॥
ಹೊತ್ತುಮುಣಗಿ ಆಗ್ಯಾರೊ ಜತ್ತ ಬಂದಾರೊ ಹಿಂದು ಮನಿಸುತ್ತ
ಹೊರಗೀದೆ ಹೇಳತಾರ ಕೊಯ್ಯತೇವಂತ ಕೋಲ.... ॥
ಘುಸಿ ಹಚ್ಚಿ ತೆರದಾರ ತಟ್ಟಿ ಹಿಡದಾರ ಮಾಲಕಂದು ರಟ್ಟಿ
ಬೆಳ್ಳಿ ಬಂಗಾರ ಎಲ್ಲೆಲ್ಲಿ ಇಟ್ಟಿ ಕೋಲು.... ॥
ಮೈಮೇಲೆ ಘಾಸಲೇಟ ಹಾಕಿ ಜೀವ ಇಟ್ಟು ಹಚ್ಚ್ಯಾರ ಬೆಂಕಿ
ಪ್ರಾಣ ಕೊಡತಾರೊ ಕೈಕಾಲು ಕಟ್ಟಿ ಕೋಲು.... ॥
ಇದ್ದಷ್ಟು ತೊಗೊಂಡಾರೊ ಗಂಟಾ ಮನಿಮುಂದಿಗಿ ಹಾಕ್ಯಾರೊ ಸುಟ್ಟಾ
ಪಂಚನಾಮೆ ಮೊಕದ್ದಾಮಾ ಮಾಡತಾರೊ ಝುಟ್ಟಾ ಕೋಲು.... ॥

ವೇಂಕಟ ಶಾಮಸುಂದರ ಜೋಡಿ ಅವರಿಗಿಟ್ಟಾರ ರೀತರ ಮಾಡಿ
ಅವರಿಬ್ಬರು ಹೋಂಟಾರೊ ಕೂಡಿ ಕೋಲು.... ||
ವೇಂಕಟ ಹೋಂಟಾನ ವೈರಿ ಬ್ರಾಹ್ಮಣರಿಗಿ ಅಂತಾನೊ ಕೊಯ್ಯಾರಿ
ಹಿಂದು ಮನಿದಾಗ ಬೇಸಾಕ ಹೋಗಿರಿ ಕೋಲು.... ||
ವೇಂಕಟಗ ಸಿಕ್ಕಾದ ಕುರ್ಚಿ ಪೊಲೀಸರೆಲ್ಲಾ ಹಿಡದಾರೊ ಬರ್ಚಿ
ಕಳ್ಳತನ ಮಾಡಹತ್ತಿದರಂಜಿ ಕೋಲು.... ||
ಪತಿವರ್ತೆ ಸ್ತ್ರೀಯರ ಮೇಲೆ ಬಲಾತ್ಕಾರ ಮಾಡ್ಯಾರೊ ತೋಲಾ
ಅವರಿಗಿ ತಿಳಿದಿಲ್ಲ ಮಾತಿನ ಮೂಲಾ ಕೋಲು.... ||
ಸಜ್ಜನರ ಮನಿದಾಗ ಕುಂತು ಆಡ್ಯಾರೊ ಏಕಾಂತಮಾತು
ಕಾಗಿ ಕೈದೊಳಗ ಕಾರಬಾರ ಬಂತು ಕೋಲು.... ||
ಹೊಡಿಬ್ಯಾಡರಿ ಸರಕಾರಿ ಬಿಟ್ಟ ಆದಕ್ಕಾಗಿ ಬಂದಿಲ್ಲ ಪುಟ್ಟಿ
ಯಾವದಾದರ ಮಾಡಿದರ ತುಂಬತದ ಹೊಟ್ಟಿ ಕೋಲು.... ||
ಕೇಳಬೇಕು ತುರಕರ ಮಾತು ನಮ್ಮನ ಮಾಡತಾರ ಮಮತ
ನಮಗೂಡ ಕಲತು ಮಾಡತಾರೊ ಊಟ ಕೋಲು.... ||
ಬುದ್ಧಿ ಹೀನ ಹೊಲೆಯರಜಾತಿ ಮೊದಲೆ ಕಾಲಬಿಟ್ಟ ಕತ್ತಿ
ಶಾಮಸುಂದರ ಮಾತಿಗಿ ತೂಗತಾರೊ ನೆತ್ತಿ ಕೋಲು .... ||
ಹೊಲಕಂತ ಒಯ್ಯಾದಾರ ರೊಟ್ಟಿ ಕಸಗೊಂಡರ ತಲಿಮೇಲಿನ ಬುಟ್ಟಿ
ಕಳಕೊಂಡರ ಉಟ್ಟಿದ ಬಟ್ಟಿ ಕೋಲು.... ||
ದೊಡ್ಡದೊಡ್ಡ ಸಾಹುಕಾರ, ಬಿಟ್ಟು ಹೋಗ್ಯಾರೊ ಮನಿಯಾರ
ಹೋಗಿ ಸೇರ್ಯಾರೊ ಸೊಲಾಪೂರ ಕೋಲು.... ||
ಹೇಳತಾರೊ ದುಃಖದ ಗೋಳಾ, ಮನಿಮಾರಾ ಆಗ್ಯಾವೊ ಹಾಳಾ
ಸುತ್ತೆಲ್ಲ ಕತ್ತಲ ಕಾಳ ಕೋಲು.... ||
ಘೋರ ಗರೀಬರು ಉಳದಾರೊ ಇಲ್ಲೆ ರಝಾಕಾರ ತಿಂತಾರ ಹಲ್ಲೆ
ಬಾಯಿದಾಗ ಹಿಡಕೊಂಡ ತಿಂತಾರೊ ಹುಲ್ಲೆ ಕೋಲು.... ||
ದುಃಖಿಸಬ್ಯಾಡರಿ ಆಗಿರಿ ಶಾಂತಿ ಎಳ್ಳಷ್ಟು ಮಾಡಬ್ಯಾಡಿರಿ ಚಿಂತಿ
ಮುಂದೇನಾಗುವದು ಕೇಳರಿ ಕ್ರಾಂತಿ ಕೋಲು.... ||
ನೆಹರು ಸರಕಾರ ಸೇರಿ ಅನ್ನ ಅರಿಬಿವ ಹಾಕಿ
ಕೂಸಿನ ಹಾಗೆ ಮಾಡ್ಯಾರೊ ಜ್ವಾಕಿ ಕೋಲು.... ||
ಹೊಟ್ಟಿಗಾಗಿ ಕೊಟ್ಟಾರೊ ಬೆನ್ನಾ ನಿರಾಶಾಗಿ ಉಂಡಾರೊ ಅನ್ನ
ಒಬ್ಬರ ಮಾರಿಮ್ಯಾಲೆ ಉಳಿದಿಲ್ಲೊ ಚಿನ್ನಾ ಕೋಲು.... ||
ಪಂದ್ರಾ ಅಗಸ್ಟ್ ದಿನ ಹೊಡೆದಾರೊ ಗ್ವಾರಟಿ ಹಾದಾದಿಗಿ
ಬಿದ್ದಾವೊ ತೋಲಾ ಹೆಣಗೋಳಿ ಕೋಲು.... ||

ಗಾಂಧಿಟೊಪ್ಪಿ ಇಟ್ಟದ್ದು ಕೇಳಿ ಕಾಂಗ್ರೆಸ ಬಂದದ ಓಡಿ
ಅವರು ಮಾಡ್ಯಾರೊ ಹೊಡಿ ಬಡಿ ಕೋಲು.... ॥
ತಿಂಗಳಗಿ ಪಗಾರ ಕೊಡತೇವು ಬಾರ
ಇರು ತಂಗಿ ಬೇಫಿಕರ ಕೋಲು.... ॥
ಅಯ್ಯಯ್ಯೊ ಪರಬ್ರಹ್ಮ ಪಂದ್ರಾ ಅಗಸ್ಟ ದಿನ ಇಟ್ಟಾರೊ ನೇಮ
ಮುಣಗಿ ಹೋಗ್ತಾದ ಹಿಂದುಸ್ತಾನ ಕೋಲು.... ॥
ಈ ಸುದ್ದಿ ದೆಹಲಿಗಿ ಮುಟ್ಟಿ ನೆಹರೂ ಮಾಡ್ತಾರೊ ಚಿಂತಿ
ಇದಕೇನ ಮಾಡಬೇಕು ಯುಕ್ತಿ ಕೋಲು.... ॥
ಅಫಸಾರ ಫೋಜಿಗಿ ಕರೆಸಿ ಫೌರ ಹುಕುಂ ಬರೆಸಿ
ಕಬಜಾ ಮಾಡಬೇಕು ಹೈದ್ರಾಬಾದಿ ಕೋಲು.... ॥
ಖಾಸಿಮಸಾಹೇಬ ಅಂತಾನ ನಕೊ ಖುಷಾಮತಿ ದೇನಾ ನಕೊ
ಕಾನೂನಿ ಠೈರೋ ನಕೊ ಬೋಲೊ ಕೋಲು.... ॥
ಅಂತಾನೊ ಅಂಧಾಮಂಧಾ ಅಷ್ಟಿಷ್ಟು ಆಯ್ತಾ ಬಂತಾ
ರಕ್ತಕೊಂಡು ರಣಗೆದ್ದಿ ಪಂತ ಕೋಲು.... ॥
ಚವದಾ ಜಿಲ್ಲಾ ಬಿಟ್ಟಾರೊ ಒಮ್ಮೆ ಇಳಸ್ಯಾರೊ ರಝಾಕಾರ ಸೊಕ್ಕಾ
ಖಾಸಿಮರ ಜವಿಗಿ ತಪಸ್ಯಾರೊ ದಿಕ್ಕಾ ಕೋಲು... ॥
ಠಾವಿನಂತೆ ಹುಡಕ್ಯಾರೊ ಸಂದಿ ಎತ್ತ ಸಿಗದಿಲ್ಲೊ ಬಂದಿ
ಆಗಾಗ ಅಂತಾರೊ ಕಾಂಗ್ರೆಸ ತಂದಿ ಕೋಲು.... ॥
ಏಲಿಗಾರೆ ಹಚ್ಚಿಲ್ಲೆ ಸುಣ್ಣಾ ಆಗಿ ಹೋಯಿತು ತುರಕರ ಮಣ್ಣಾ
ಕಬಜಾ ಮಾಡ್ಯಾರೊ ಬಿಟ್ಟಿಲ್ಲ ಪ್ರಾಣ ಕೋಲು.... ॥
ಘಸ್ತಕೋಮು ಘಸಾನೆ ಹೊಯ್ತು ರಝಾಕಾರ ಮ್ಯಾಲಿಂದ
ರಣಗೇಡಿ ಹೋಯ್ತು ವೆಂಕಟಗೆ ಸಂಕಟ ಬಂತು ಕೋಲು.... ॥
ಹತ್ಯಬ್ಯಾಡರಿ ತುರಕರ ಬೆನ್ನಾ ಸತ್ಯಕ್ಕೆ ನಡಿರಿನ್ನಾ
ನಿತ್ಯ ಮಾಡಿರಿ ಶಿವಧ್ಯಾನ ಕೋಲು.... ॥

ಕಠಿನಪದಗಳ ಅರ್ಥ

ದಾವಲ್ಲಿ–ಯಾವಲ್ಲಿ, ಎಲ್ಲಿ. ಕಬೂಲಾತ–ಸಮ್ಮತಿಸಿದ, ಅಂಗರೆಜ–ಇಂಗ್ಲೀಷರು, ಬಗಲೀ–(ಹತ್ತಿರ, ಸಮೀಪ.) ಬೇರೆ. ಖುಲ್ಲಾ–ಬಹಿರಂಗವಾಗಿ, ಸಮುನ–ಒಳ್ಳೆಯದು, ಫೋಜ–ಸೈನ್ಯ, ಜಟ್ಟಾ–ಕೂಡಲೆ, ದೌಡ–ಓಡಿ, ಸಜಾ–ಶಿಕ್ಷೆ, ಜಂಗಿನ–ಯುದ್ಧ. ಜಗಳ. ಜತ್ತ–ಜೊತೆಗಾಗಿ, ಘಸಿ–ಹಾರಿ, ತಟ್ಟಿ–ಬಾಗಿಲು ತೋಲಾ–ಬಹಳ, ಕಲತು–ಕೂಡಿಕೊಂಡು, ಅರಿಬೆನ–ಬಟ್ಟೆ, ಅರಿವೆ. ಜ್ವಾಕಿ–ಜೋಕೆ, ಕಾಪಾಡು, ಬೇಫಿಕರ–ನಿಶ್ಚಿಂತೆಯಿಂದ. ಅಫಸಾರ–ಆಫೀಸರ, ಜವಿಗಿ–ಊರ ಹೆಸರು, ಘಸಾನೆ–ತೀವ್ರ, ಬೇಗನೆ.

೧೧

ಸಂಪೀಗಿ ಹೊಳೆಯಲ್ಲಿ ಹಾಕ್ಯಾರಾ ಹರಿಗೋಲಾ
ಆತ ರಾಮಣ್ಣನ ಹರಿಚಂಡಾ ಗೋಪಾಲದರಾಮಾ ಆನಂದ
ಗೋಪಾಲದ ರಾಮಾ

ಆತಾನೇ ರಾಮಣ್ಣ ಹರಿಚಂಡ ಆಡಾಗ
ಕೂಸಮಾತ ಹೇಳಿ ನಗತಾವೊ ಗೋಪಾಲದ ರಾಮಾ.... ॥
ನಿಂತ ಚಂಡ ಆಡತಾರ ನೀಲಗಾರನ ಮಗಾ ಏನೊ
ತಗಿಯೊ ಮುತ್ತಿನ ಹಳಿಚಂಡಾ ಗೋಪಾಲದ ರಾಮಾ.... ॥
ಬಾಗಿ ಚಂಡಾ ಆಡಲಾಕ ಬಡಿಗ್ಯಾನ ಮಗಾಯೇನೊ
ತಗಿಯೊ ಮುತ್ತಿನ ಹಳಿಚಂಡಾ ಗೋಪಾಲದ ರಾಮಾ.... ॥
ಓಡೋಡಿ ರಾಮಣ್ಣಾ ಮನಿಗಾರೆ ಬಂದಾನೆ
ತಾಯಿ ಬಳಿ ಹೋಗಿ ನಿಂತಾನೆ ಗೋಪಾಲದ ರಾಮಾ.... ॥
ಅಮ್ಮಮ್ಮ ಕೇಳೆ ಅಮ್ಮ ತಾಯಮ್ಮಾ ಕೇಳೆ
ಚೆಂಡ ಕೂಡ ನನ್ನ ಹಡೆದಮ್ಮ ಗೋಪಾಲದ ರಾಮಾ.... ॥
ಅಜ್ಜ ಆಡಿದ ಚಂಡ ಮುತ್ಯಾ ಆಡಿದ ಚಂಡ
ಸುಮ್ಮನ ಬರವಲದೊ ಮಗಾ ಗೋಪಾಲದ ರಾಮಾ.... ॥
ಏಳಸಾವಿರಾ ಕುರಿಕೋಣಾ ಬಿದ್ದಾವೊ
ಓಡೋಡಿ ರಾಮಣ್ಣಾ ದಿಡ್ಡಿಗಿ ಹೋಗ್ಯಾನಾ ಗೋಪಾಲದ ರಾಮಾ.... ॥
ಕೂಗ ಹೊಡದು ಕುರಿಗಿ ತಂದಾನೊ
ಕೂಗ ಹೊಡದು ಕುರಿಯಾ ತಂದಾನೊ ರಾಮಣ್ಣಾ
ಗೋಪಾಲದ ರಾಮಾ.... ॥

ತಂದೆ ಅಗಸಿಯ ಮುಂದ ನಿಂದರಸಿ
ಆಸು ಕುರಿಯೆಲ್ಲಾ ಲಯಿಮಾಡಿ ಗೋಪಾಲದ ರಾಮಾ.... ॥
ಓಡೋಡಿ ರಾಮಣ್ಣಾ ಮನಿಗಾರೆ ಬಂದಾನೆ
ತಾಯಿ ಬಳಿ ಹೋಗಿ ನಿಂತಾನೆ ಗೋಪಾಲದ ರಾಮಾ.... ॥
ಏಟ ಹೇಳಿದರ ಕೇಳತಿಲ್ಲಾ ರಾಮಣ್ಣಾ
ತಂದಕೊಂಡೊ ನಿನ್ನ ಜೀವ ಸುತ್ತಾ ಗೋಪಾಳದ ರಾಮಾ.... ॥
ಏಳ ಬಾಗಿಲ ದಾಟಿ ಏಳ ದರವಾಜ ದಾಟಿ
ಮ್ಯಾಲ ಉಪ್ಪರಗಿ ಚಂಡ ತಕೊ ಹೋಗಲಾ ಗೋಪಾಳದ ರಾಮಾ.... ॥
ಉಂಡಾನಾ ಉಟ್ಟಾನಾ ಮ್ಯಾಲ ಇಳಿದೂ ಮೇಲವಾನ
ಏಳುಮಂದಿ ಗೆಳೆಯರಿಗೆ ಕೂಡಿಕೊಂಡಾ ಗೋಪಾಳದ ರಾಮಾ.... ॥

ಚಂಡಾ ಆಡಲಾಕಾ ಹೋಯಿತಿ ರಾಮಣ್ಣಾ
ತವರಮನಿ ಹೆಣ್ಣಮಕ್ಕಳ ಬೆನ್ನಹತ್ತಿ ಗೋಪಾಲದ ರಾಮಾ....॥
ತವರಮನಿ ಹೆಣ್ಣಮಕ್ಕಳ ಬೆನ್ನಹತ್ತಿ ಬಂದರಾ
ಬಾ ತಂಗಿನಂತಾ ಕರಿ ಮಗನೇ ಗೋಪಾಲದ ರಾಮಾ....॥
ಚಂಡಾ ಆಡಲಾಕ ಹೋಯಿತಿ ರಾಮಣ್ಣಾ
ಅತ್ತಿಮನಿ ಸೊಸಿದೇರು ಬೆನ್ನಹತ್ತಿ ಗೋಪಾಲದ ರಾಮಾ....॥
ಅತ್ತಿಮನಿ ಸೊಸಿದೇರು ಬೆನ್ನಹತ್ತಿ ಬಂದರಾ
ಬಾ ತಾಯಿನಂತಾ ಕರಿ ಮಗನೇ ಗೋಪಾಲದ ರಾಮಾ....॥
ಏಳಮಂದಿ ಗೆಳೆಯರಿಗಿ ಕೂಡಿಕೊಂಡಿ ರಾಮಣ್ಣಾ
ಚಂಡಿನ ಆಟಾ ಹೂಡ್ಯಾನಾ ಗೋಪಾಲದ ರಾಮಾ....॥
ಎಡಗೈಲಿ ಮುತ್ತಿನಸಿಂಬಿ ಬಲಗೈಲಿ ತಾಮರಕೊಡ
ಹೊಂಟಾರ ಸಾಂಗೆರ ಭಾಯಿ ನೀರ ಗೋಪಾಲದ ರಾಮಾ....॥
ನಿಂತಾಟಾ ನೋಡ್ಯಾರೇ ಕುಂತ ನೀರಾ ತುಂಬ್ಯಾರೇ
ಯಾರ ಮನಿಗಿ ಅವರು ಹೋಗ್ಯಾರೇ ಗೋಪಾಲದ ರಾಮಾ....॥
ಊರಯೆಲ್ಲ ಗಾವಾಳಿ ಕೇರಿಯೆಲ್ಲ ಗಾವಾಳಿ
ಏನ ಗಾವಾಳಿ ಸಾಂಗೆರೆ ಗೋಪಾಲದ ರಾಮಾ....॥
ಹರಿದೇವಿ ಮಗನಂತಾ ಅತಾ ರಾಮಣ್ಣನಂತಾ
ಚಂಡಿನ ಆಟಾ ಹೂಡ್ಯಾರಾ ಗೋಪಾಲದ ರಾಮಾ....॥
ಸೀರಿ ಉಟ್ಟಾಳಾರೆ ಕುಬಸಾ ತೊಟ್ಟಾಳಾರೆ
ಕಣ್ಣೀಗಿ ಕಾಡೀಗಿ ಹಚ್ಯಾಳಾಕಿ ಗೋಪಾಲದ ರಾಮಾ....॥
ಕಣ್ಣೀಗಿ ಕಾಡೀಗಿ ಹಚ್ಯಾಳಾಕಿ ರತ್ನದೇವಿ
ಮಾಳಿಗಿ ಏರಿ ನೋಡ್ಯಾಳಾ ಗೋಪಾಲದ ರಾಮಾ....॥
ತ್ಯಾಲಿಯಾ ನೋಡಿದರಾ ತೆಂಗಿನಕಾಯಿ ಹಂಗ
ರಾಮನ ಚಲುವೀರೆ ಭಾಳಾವೆ ಗೋಪಾಲದ ರಾಮಾ....॥
ದಂಡಾವು ನೋಡಿದರ ಬಾಳಿಯ ದಿಂಡಿನಾಂಗ
ರಾಮನ ಚಲವೀರೆ ಭಾಳಾವೇ ಗೋಪಾಲದ ರಾಮಾ....॥
ಕೈಯಾ ನೋಡಿದರ ಕಬ್ಬಿನಗಣಿ ಹಂಗ
ರಾಮನ ಚಲುವಿಕಿ ಭಾಳಾವೇ ಗೋಪಾಲದ ರಾಮಾ....॥
ಊರ ಕಾಯೋ ಬಾಲಹಣಮಾ ಕೇರಿ ಕಾಯೋ ಬಾಲಹಣಮಾ
ಬಾಗಲಕ ಬಂಗಾರ ಜಡಿಸೇನೋ ಗೋಪಾಲದ ರಾಮಾ....॥

ಬಾಗಲಕ ಬಂಗಾರ ಜಡಿಸೇನೋ ಬಾಲಹಣವಾ
ಚಂಡ ಬಂದು ಮಾಲಿನಾಗ ಬೀಳಲೇದಾ ಗೋಪಾಲದ ರಾಮಾ....॥

ಊರ ಕಾಯು ಲಕ್ಷ್ಮೀ ಕೇರಿ ಕಾಯು ಲಕ್ಷ್ಮೀ
ಏಳಸಾವಿರ ಕುರಿಕೋಣಾ ಗೋಪಾಲದ ರಾಮಾ....॥

ಏಳಸಾವಿರ ಕುರಿಕೋಣಾ ಲಕ್ಷ್ಮೀ
ಚಂಡಾ ಬಂದು ಮಾಲಿನಾಗ ಬೀಳಲೆಂದ ಗೋಪಾಲದ ರಾಮಾ....॥

ಅಣ್ಣಣ್ಣಾ ಕೇಳೋ ಅಣ್ಣಾ ಕಂರೆಣ್ಣಾ ಕೇಳೋ
ಹಸುವಾಗ್ಯಾವಲ್ಯಾವೊ ನನ್ನಗಾ ಗೋಪಾಲದ ರಾಮಾ....॥

ಅಣ್ಣಣ್ಣಾ ಕೇಳೋ ಅಣ್ಣಾ ರಾಮಣ್ಣಾ ಕೇಳೋ
ಇನ್ನೊಂದೆ ಆಟಾ ಆಡಾರೋ ಗೋಪಾಲದ ರಾಮಾ....॥

ಅಣ್ಣಣ್ಣಾ ಕೇಳೋ ಅಣ್ಣಾ ಕಂರೆಣ್ಣಾ ಕೇಳೋ
ಚಂಡ ಹೋಗಿ ಮಾಲಿನಾಗ ಬಿತ್ತ ಅಪ್ಪಾ ಗೋಪಾಲದ ರಾಮಾ....॥

ಓಡೋಡಿ ರಾಮಣ್ಣಾ ಮನಿಗಾರೆ ಬಂದಾನೆ
ತಾಯಿ ಬಳಿ ಹೋಗಿ ನಿಂತಾನೆ ಗೋಪಾಲದ ರಾಮಾ....॥
ಮಾರಿ ಬಾಡ್ಯಾವೊ ಮಗನೆ ತುಟಿಯು ಬಾಡ್ಯಾವೊ ಮಗನೆ
ಯಾರೇನಂದರಾ ನನಗೇಳೋ ಗೋಪಾಲದ ರಾಮಾ....॥
ಯಾರ ಬೈಯದಿಲ್ಲ ತಾಯಿ ಯಾರ ಹೊಡೆದಿಲ್ಲ ತಾಯಿ
ಚಂಡ ಹೋಗಿ ಮಾಲಿನಾಗ ಬಿತ್ತ ತಾಯಿ ಗೋಪಾಲದ ರಾಮಾ....॥
ಏಟ ಹೇಳಿದಿರಾ ಕೇಳಲೊ ಮಗಾ ರಾಮಾ
ತಂದಕೊಂಡೊ ನಿನ್ನ ಜೀವಸುತ್ತಾ ಗೋಪಾಲದ ರಾಮಾ....॥
ನಿನ್ನ ಮುಂಗುಲುಗಿ ರುಮಾಲಾ ತಗಿಯೊ ರಾಮಾ
ನಿನ್ನ ರತ್ನಿ ಕಂಡೊರ ಬೆನ್ನ ಬಿಡಾಳೊ ಗೋಪಾಲದ ರಾಮಾ....॥
ನಿನ್ನ ದೇವರಿ ಅಂಗಿಯಾವಾ ತೆಗಿಯೊ ರಾಮಾ
ನಿನ್ನ ರತ್ನಿ ಕಂಡೊರ ಬೆನ್ನ ಬಿಡಾಳೊ ಗೋಪಾಲದ ರಾಮಾ....॥
ನಿನ್ನ ಧಡಿ ಅಂಚಿನ ಧೋತರಾ ತಗಿಯೊ ರಾಮಾ ರತ್ನಿ ನಿನ್ನ
ನಿನ್ನ ತಿಮ್ಮಸೆಟ್ಟಿ ಪಾಪಾಸು ತೆಗಿಯೊ ರಾಮಾ ಗೋಪಾಲದ ರಾಮಾ....॥
ನಿನ್ನ ಮೈಯೆಲ್ಲಾ ಬೂದ್ಯಾವಾ ಹಚ್ಚಿಕೊ ರಾಮಾ
ಜೋಗಿ ಸನ್ಯಾಸಿನಾಗೋ ರಾಮಾ ನಿನ್ನ ರತ್ನಿ ನಿನ್ನ
ಗೋಪಾಲದ ರಾಮಾ....॥
ಮೈಯೆಲ್ಲಾ ಬೂದಿ ಹಚಗೊಂಡಾನಾ ರಾಮಣ್ಣಾ ಆನಂದ
ಜೋಗಿ ಸನ್ಯಾಸಿ ಆಗ್ಯಾನಾ ಗೋಪಾಲದ ರಾಮಾ....॥

ಏಳದರವಾಜಿ ದಾಟಿ ಏಳ ಬಾಗಿಲ ದಾಟಿ
ರತ್ನಿ ಮಾಲಿಗಿ ಹೋಗ್ಯಾನಾ ಗೋಪಾಲದ ರಾಮಾ....॥
ಅಮ್ಮಮ್ಮಾ ಕೇಳೆ ಅಮ್ಮಾ ತಾಯಮ್ಮಾ ಕೇಳೆ
ಚಂಡ ಕೊಡ ನನ್ನ ಹಡೆದಮ್ಮಾ ಗೋಪಾಲದ ರಾಮಾ....॥
ಆ ಚಂಡಾ ಉರಿಯಂಲಿ ಆ ಚಂಡಾ ಮೆರಿಯಂಲಿ
ಆ ಚಂಡಿಗ್ಯಾನ ಮಾಡತೊಯ್ತೊ ಗೋಪಾಲದ ರಾಮಾ....॥
ನಿಮ್ಮ ಅಪ್ಪಾ ಕಟ್ವಾ ಮಂಗಲಗಿ ರುಮಾಲಾ
ಕಟ್ಯಾರಾ ನೋಡೊ ಎಲೆ ರಾಮಾ ಗೋಪಾಲದ ರಾಮಾ....॥
ನಾ ಹುಟ್ಟಿದ ಯಾಳಿಲಿ ಸಣ್ಣ ಕೂಸ ಇರುವಾಗ
ಕಟ್ಟಿ ಬೆಳೆದಿದಾ ಹಡೆದಮ್ಮ ಗೋಪಾಲದ ರಾಮಾ....॥
ನಿಮ್ಮ ಅಪ್ಪಾ ತೊಡುವಾ ಧಡಿ ಅಂಚಿನ ಧೋತರಾ
ತೊಟ್ಟಾರಾ ನೋಡೋ ಎಲೊ ರಾಮಾ ಗೋಪಾಲದ ರಾಮಾ....॥
ನಾ ಹುಟ್ಟಿದ ಯಾಳಿಲಿ ಸಣ್ಣ ಕೂಸ ಇರುವಾಗ
ತೊಟ್ಟಿ ಬೆಳೆದಿದಾ ಹಡೆದಮ್ಮಾ ಗೋಪಾಲದ ರಾಮಾ....॥
ನಿಮ್ಮ ಅಪ್ಪಾ ತೊಡುವಾ ತಿಮ್ಮಸೆಟ್ಟಿ ಪಾಪಸು
ತೊಟ್ಟಾರಾ ನೋಡೋ ಎಲೊ ರಾಮಾ ಗೋಪಾಲದ ರಾಮಾ....॥
ನಾ ಹುಟ್ಟಿದ ಯಾಳಿಲಿ ಸಣ್ಣ ಕೂಸ ಇರುವಾಗ
ತೊಟ್ಟಿ ಬೆಳೆದಿದಾ ಹಡೆದಮ್ಮಾ ಗೋಪಾಲದ ರಾಮಾ....॥
ನಿಮ್ಮ ಅಪ್ಪಾ ಉಣುವಾ ಜೀರಿಗಿ ಸಾಲದ
ಅಕ್ಕಿ ಉಂಡಾರಾ ನೋಡೊ ಎಲೊ ರಾಮಾ ಗೋಪಾಲದ ರಾಮಾ....॥
ನಾ ಹುಟ್ಟಿದ ಯಾಳಿಲಿ ಸಣ್ಣ ಕೂಸ ಇರುವಾಗ
ಉಂಡೆ ಬೆಳೆದಿದಾ ಹಡೆದಮ್ಮಾ ಗೋಪಾಲದ ರಾಮಾ....॥
ಸುಮ್ಮನ ಕೂಡೆ ತಾಯಿ ಭಂಡ ಆಟ ಆಡುಬ್ಯಾಡೆ
ಹಿಂದು ಬಂದ ಗೆಳೆಯರು ನಗುತಾರೆ ಗೋಪಾಲದ ರಾಮಾ....॥
ಎಷ್ಟು ಹೇಳಿದರೂ ಕೇಳಾಲದೊ ಈ ರಾಂಡಿ
ಝಾಡಿಸಿ ಒದ್ದಾನೊ ಏಳಾ ತೊಡಿ ಗೋಪಾಲದ ರಾಮಾ....॥
ಝಾಡಿಸಿ ಒಳಾತೊಡಿ ಒದ್ದಾನೊ ರಾಮಣ್ಣಾ
ಒಳಾ ತೊಡ್ಯಾಗಿನ ಚಂಡಾ ತಕ್ಕೊಂಡಾನೆ ಗೋಪಾಲದ ರಾಮಾ....॥
ಏಳಬಾಗಿಲ ಕಾಯು ಕಾಯೂರಿ ಇದ್ದಿರೊ ವಾಲಿಕಾರೊ
ರಾಮ್ಯಾಗಾದರ ಬಿಡುಬ್ಯಾಡರೊ ಗೋಪಾಲದ ರಾಮಾ....॥

ಉಟ್ಟ ಬಾಳಿಪಟ್ಟಿ ಸೀರಿ ಪಟ್ಟಿಪಟ್ಟಿ ಹರಿದಾಳೆ
ತೆಲಿಬ್ಯಾನಿ ಅಂತೆ ಮನುಗ್ಯಾಳೆ ಗೋಪಾಲದ ರಾಮಾ....॥
ಕಚೇರಿಂದ ಅರಸರು ಮನಿಗಾರಾ ಬಂದಾರೊ
ಏನು ಕಾವುಸಾಲಿ ಎಲರಾಂಡಿ ಗೋಪಾಲದ ರಾಮಾ....॥
ಹರಿದೇವಿ ಮಗಾ ಆತಾ ರಾಮಣ್ಣನಂತಾ
ನನ್ನಗೆ ಅವಾ ಕೆಡುಸ್ಯಾನೇ ಗೋಪಾಲದ ರಾಮಾ....॥
ಅಪ್ಪಪ್ಪಾ ಕೇಳೊ ಅಪ್ಪಾ ಪರುಥಾನಿ ಕೇಳೊ
ತಪ್ಪುಮಾಡಿದವರಿಗಿ ಏನಮಾಡಬೇಕೊ ಗೋಪಾಲದ ರಾಮಾ....॥
ತಪ್ಪುಮಾಡಿದವರ ತಲಿ ಹೊಡಿಬೇಕೋ
ಊರೆಲ್ಲಾ ಸಲುಶಾಳಾ ಕೇರಿಯೆಲ್ಲಾ ಸಲುಶಾಳಾ
ಗೋಪಾಲದ ರಾಮಾ....॥
ರಾಮನ ತೆಲಿ ಹೊಡಿಲಾಕ ನಿಂತಾಳ
ಏಳಮಂದಿ ಗೆಳೆಯರಿಗೆ ಕೂಡಿಕೊಂಡೆ ರಾಮಣ್ಣಾ
ಚಂಡಿನ ಆಟ ಹೂಡ್ಯಾನೆ ಗೋಪಾಲದ ರಾಮಾ....॥
ಒಬ್ಬರ ಹೋಗಾದರ ಇಬ್ಬರ ಹೋಗ್ಯಾರೋ
ಹೋಗಿ ರಾಮಾಗ ಎಳತರಯೊ ಗೋಪಾಲದ ರಾಮಾ....॥
ಒಬ್ಬರ ಹೋಗಂದರ ಇಬ್ಬರ ಹೋಗತಾರೊ
ಹೋಗಿ ರಾಮಣ್ಣಗ ಎಳಿತಂದಾ ಗೋಪಾಲದ ರಾಮಾ....॥
ಗಂಧದಕಟ್ಟಗಿ ಸುಮ್ಮ ಬೆಂಕಿವಾ ಮಾಡಿ
ರಾಮನ ಕೈಯಲ್ಲಿ ಕೊಟ್ಟಾರಾ ಗೋಪಾಲದ ರಾಮಾ.... ॥
ರಾಮನ ಕೈಯಲ್ಲಿ ಎರಸಿ ಎಳಾಸದರಾ
ಮಲ್ಲೀಗಿಹೂ ಆಗಿ ಉದರ್‍ಯಾವೆ ಗೋಪಾಲದ ರಾಮಾ....॥
ಹಿಂದ ಸಾವಿರದಂಡ ಮುಂದ ಸಾವಿರದಂಡ
ರಾಮನ ತೇಲಿ ಹೊಡಿಲಾಕ ನಡೆದಾರೆ ಗೋಪಾಲದ ರಾಮಾ....॥
ಹಗಲಾ ಹನ್ನೆರಡುವರ್ಷ ಇರುಳ ಹನ್ನೆರಡುವರ್ಷ
ಮಕ್ಕಳ ಮಾರಿ ಕಂಡಿಲ್ಲ ಗೋಪಾಲದ ರಾಮಾ....॥
ಮಕ್ಕಳಾ ಮಾರಿ ಕಂಡಿಲ್ಲಾ ಅರಸಾರೆ
ಬುದ್ಧಿ ಇತ್ತ ಇಲ್ಲಾ ನಿಮಗ ಗೋಪಾಲದ ರಾಮಾ....॥
ಸೋದರಮಾವನ ಬಾಯಾಗ ಬಾಯಿಹಾಕಿ ಅಳತಾನೊ
ಹೊಯಿತಾದೊ ಮಾಮಾ ನನ್ನ ಜೀವಾ ಗೋಪಾಲದ ರಾಮಾ....॥
ಹೋಯಿತಾದೊ ಮಾಮಾ ನನ್ನಜೀವ ಘಳಂಗ್ಯಾಗ
ಘವಿಕಟ್ಟಿ ಘವಿದಾಗ ಇಡುಬಾರದಾ ಗೋಪಾಲದ ರಾಮಾ....॥

ಶ್ರೀಗಂಧದ ಕಟ್ಟಿಗಿ ಕೆತ್ತಿ ಮುಖವನೇ ಮಾಡಿ
ರತ್ನಿ ಕೈಯಲ್ಲಿ ಕೊಟ್ಟಾರೇ ಗೋಪಾಲದ ರಾಮಾ....॥
ರಾಮ್ಯಾನ ಮಕಾವು ಅಲ್ಲಾ ಹೋಗರೋ
ಅವಾ ಹುಟ್ಟಿದ ಯಾಳಿಲಿ ಸಣ್ಣಕೂಸ ಗೋಪಾಲದ ರಾಮಾ....॥
ಇರುವಾಗ ಗಲ್ಲದ ಮ್ಯಾಲ **ಸೆಳಘಾಯಿ**
ಊರೆಲ್ಲಾ ಸಲುಶಾಳಾ ಕೇರೆಲ್ಲಾ ಸಲುಶಾಳಾ ಗೋಪಾಲದ ರಾಮಾ....॥
ಅರುಸನ ತಲಿ ಹೊಡಿಲಾಕ ನಿಂತಾಳ
ಹಿಂದ ಸಾವಿರದಂಡಾ ಮುಂದ ಸಾವಿರದಂಡಾ ಗೋಪಾಲದ ರಾಮಾ....॥
ತಲಿ ಹೊಡಿಲಾಕ ನಡೆದಾರೆ
ಅಟ್ಕಆರಾಣದಾದಿ **ಘಟ್ಟ ಘಾವಾರ** ಹಾದಿ
ತಲಿ ಹೊಡಿಲಾಕ ನಡದಾರ ಗೋಪಾಲದ ರಾಮಾ....॥
ಇಂಥಾ ಯಾಳೇದಾಗ ಇಂಥಾ ಘಟಕ್ಯಾದಾಗ
ಮಗ ರಾಮು ಇದ್ದಾರ ಹ್ಯಾಂಗ ಇತ್ತೊ ಗೋಪಾಲದ ರಾಮಾ....॥
ಹಂಗ ಅಂಬು ಸಬದ ರಾಮುನ ಕಿವಿಯಲಿ ಬಿದ್ದ
ಗವಿದಾಗ ರಾಮಣ್ಣ ಹರಳ ಹೊಡದಾ ಗೋಪಾಲದ ರಾಮಾ....॥
ಹಿಂದ ಸಾವಿರದಂಡ ಹಿಂದಕ್ಕ **ಮುಡದ** ಹೋಯ್ತೋ
ಮುಂದ ಸಾವಿರದಂಡಾ ಮುಂದಕ್ಕ ಮಡಿತೊ ಗೋಪಾಲದ ರಾಮಾ....॥
ಮನಿಗಾರ ಬಂದಾರಾ ನಾವುದಗ ಕರಸ್ಯಾರಾ
ರತ್ನದೇವಿ ತಲಿಯು ಬೋಳಸ್ಯಾರ ಗೋಪಾಲದ ರಾಮಾ....॥

ಕಠಿನಪದಗಳ ಅರ್ಥ

ದರವಾಜಿ–ಬಾಗಿಲು, ತಾಮರ ಕೊಡ–ತಾಮ್ರದ ಕೊಡ, ಭಾಯಿ–ಬಾವಿ, ಗಾವಾಳಿ–ಗದ್ದಲ, ತ್ಯಾಲಿಯಾ–ತಲೆಯನ್ನು. ಮಾಲಿನಾಗ–ಮಹಲಿನಲ್ಲಿ, ಮುಂಗುಲಗಿ–ಊರ ಹೆಸರು, ಅಟ್ಕಆರಾಣ–ದಟ್ಟಡವಿ, ಕಂಡೊರ–ಕಂಡರೆ. ಕಟ್ಟಾ–ಕಮ್ಮತ್ತಿದ್ದ. ಕಟ್ಯಾರಾ–ಕಟ್ಟಿಯಾದರೂ, ಪರುಧಾನಿ–ಪ್ರಧಾನಿ, ಸಲುಶಾಳಾ–ಊರೆಲ್ಲ ಸಾರು, ಎಳತರುಯೊ–ಹೇಳುತ್ತಾರೆ, ಸೆಳಘಾಯಿ–ಗಾಯ, ಘಟ್ಟಘಾವಾರ–ಗಿರಿಗವ್ವರ, ಮಡದ–ಸತ್ತು.

■ ■

ಗ್ರಹಗಳು

ಹೊ. ಮ. ಪಂಡಿತಾರಾಧ್ಯ

ಬದುಕಬೇಕೆಂಬ
ನನ್ನೊಲವಿನ ಕೇಂದ್ರದ ಸುತ್ತ
ತಿರುಗುತ್ತವೆ ನೂರೆಂಟು ಇಚ್ಛಾಗ್ರಹಗಳು
ಕೆಲವೊಮ್ಮೆ ನನ್ನ ಸಿಕೆಗಳು ಹುಸಿಯಾಗಿ
ಕಕ್ಷೆತಪ್ಪಿ ಸರಿದು
ಉಲ್ಕೆಯಾಗಿ ಉರಿದು ಹೋಗುತ್ತವೆ
ಎಂದಾದರೊಂದು ದಿನ
ನನ್ನ ಬದುಕಿನ ಕೇಂದ್ರ ತಪ್ಪುತ್ತದೆ
ಆಗ
ಸುತ್ತ ಸುತ್ತುವ ಗ್ರಹಗಳು
ಆಗುತ್ತವೆ ಛಿದ್ರಛಿದ್ರ
ಸಿಡಿಯುತ್ತವೆ ದೂರದೂರ.

ದ್ವಂದ್ವ

ಟಿ. ಎಂ. ರಮೇಶ್

ಬೆಳಗಾಮುಂಚೆ ನಿವೇದಿತಾ ರಾಗ ತೆಗೆದಿದ್ದಳು. ದಿಢೀರಸಿ ಎಚ್ಚರಾಯಿತು. ಆದರೂ ಸಿಟ್ಟು ಬರಲಿಲ್ಲ. ನನಗೆ ಸಿಟ್ಟು ಬರುವುದಿಲ್ಲ ಎಂದು ನನಗೆ ಗೊತ್ತಿತ್ತು. ರಾತ್ರಿ ಮಲಗುವಾಗ ತಡವಾಗಿದ್ದರಿಂದ ನಿದ್ದೆ ಹರಿದಿರಲಿಲ್ಲ. ನೀನೂ ಉಳಿದುಕೊಂಡಿದ್ದೆ. ಏನಿದ್ದರೂ ಮೂಡಂತು ಹಾಳಾಯಿತು. ಸಿಟ್ಟು ಮಾಡಿದ್ದರೆ ಸರಿಯಾಗುತ್ತಿತ್ತು. ಮೌನವಾಗಿ ಎದ್ದೆ. ಹಾಸಿಗೆ ಮಡಿಸಿ ಕಟ್ಟಿದೆ. ಎರಡು ನಿಮಿಷ ಕುಕ್ಕರಗಾಲಿನಲ್ಲಿ ಕುಳಿತೇ ಇದ್ದೆ. ನಿವೇದಿತಾಳ ರಾಗ ನಿಂತಿರಲಿಲ್ಲ. ಸಿಟ್ಟು ಬರಿಸಿಕೊಂಡು ದಬಾಯಿಸ ಬೇಕೆಂದುಕೊಂಡೆ. ಲುಂಗಿ ಸುತ್ತುತ್ತ ಧಡಧಡನೆ ಮೆಟ್ಟಲಿಳಿದೆ. ನಿವೇದಿತಾ ವಾಸ್ತು ಬಾಗಿಲ ಹತ್ತಿರ ಕಂಭಕ್ಕೊರಗಿ ಏರುತ್ತಿದ್ದಳು. ನಿಧಾನ ಅವಳತ್ತ ಸಾಗಿದೆ. ಆಕೆಯ ತಲೆ ನೇವರಿಸುತ್ತ ಏನಾಯಿತೆ ಎಂದು ಕೇಳಿದೆ. ಅವಳ ಏರುವಿಕೆ ಹೆಚ್ಚಾಯಿತೆ ವಿನಃ ಆಕೆಯಿಂದ ಉತ್ತರ ಬರಲಿಲ್ಲ. ನಿನ್ನಲ್ಲಾಗಿದ್ದರೆ ಅಳುತ್ತಲೇ ಏನಾಯಿತೆಂಬುದನ್ನು ಹೇಳುತ್ತಿದ್ದಳು. ನೀನಾಗಿದ್ದರೆ ಕಣ್ಣೀರ ಮುಖವನ್ನ ಪ್ರದರ್ಶಿಸಿ ಏನಾಯಿತೆಂಬುದನ್ನು ಹೇಳುತ್ತಿದ್ದೆ. ನನ್ನನ್ನ ಕಂಡ ರತ್ನ, ಚಾವಡಿಯಿಂದ ಒಳಬಂದಳು. ನಿನ್ನ ಹಾಗೇ ವಾಸ್ತುಬಾಗಿಲ ಹತ್ತಿರ ಬಂದಳು. "ಇವಳಿಗೆ ಏನು ಮಾಡಿದ್ರೆ?" ಎಂದು ನಾನು ಕೇಳಿದೆ. "ಬೆಳಿಗ್ಗೆ ಮುಂಚೆ ಜಗಳ ಶುರು ಆಯ್ತಾ" ಎಂದು ಗದರಿಸಿದೆ. ಹೆಚ್ಚಿನ ಮಾತು ಹೊರಡಲಿಲ್ಲ. ನಿವೇದಿತಾಳತ್ತ ನೋಡಿದೆ. ನಿವೇದಿತಾ ಏಕುವುದನ್ನಾ ನಿಲ್ಲಿಸಿರಲಿಲ್ಲ. ರತ್ನಳಿಗೆ ಪೆಟ್ಟು ಬೀಳುತ್ತಿತ್ತೇನೋ. ಯಾಕೆಂದರೆ ನನಗೆ ಸಿಟ್ಟು ಏರತೊಡಗಿತ್ತು. ಅಷ್ಟರಲ್ಲಿ ರತ್ನ "ನಾನಲ್ಲ; ವಿನಾಯಕ ಅವಳನ್ನ ದೂಡಿ ಕೆಡವಿದ" ಎಂದಳು. ಅದನ್ನ ಹೇಳಲೆಂದೇ ಅವಳು ಬಂದಿದ್ದಳು. ಹೊರಗಿನಿಂದ ವಿಶ್ವನಾಥ ಹಣಿಕಿಕ್ಕುತ್ತಿದ್ದ. ವಿನಾಯಕನಿಗೆ ಬಯ್ಸಿಸಲು ಅವನು ಹಚ್ಚಿದ ವರಾತ ಇದು ಎಂದು ತಿಳಿಯಿತು. "ಅವನನ್ನ ಕರೆ" ಎಂದು ರತ್ನಳಿಗೆ ಹೇಳಿದೆ. ನಿವೇದಿತಾ ಏಕುತ್ತಲೇ ಇದ್ದಳು. "ಯಾಕೆ ದೂಡಿದ ಹೇಳು; ಅವನಿಗೆ ಶಾಸ್ತಿ ಮಾಡುತ್ತೇನೆ." ಎಂದೆ "ದೂಡಿದ, ಹೊಸಿಲು ಹೆಟ್ಟಿತು" ಎಂದು ಬಿಕ್ಕುತ್ತಲೇ ಹೇಳಿದಳು. "ಯಾಕೆ" ಎಂದೆ. "ಸುಮ್ಮನೆ" ಎಂದಳು. ಸುಮ್ಮನೆ ಯಾಕೆ ದೂಡುತ್ತಾನೆ? ನಿನ್ನದು ತಪ್ಪಿದೆ ಎಂದು ಹೇಳಬೇಕಾಗಿತ್ತು. "ಹೋಗಲಿ ಬಿಡು, ಅವನು ಕೆಟ್ಟವ" ಎಂದೆ. ಅವಳ ಅಳು ಪೂರ್ಣ ನಿಲ್ಲಲಿಲ್ಲ. ನೀನಾಗಿದ್ದರೆ ಇಷ್ಟುಹೊತ್ತಿಗೆ ಸುಮ್ಮನಿರಿಸಿ ಮತ್ತೆ ಕೀಟಲೆ

ಮಾಡಿ ಅಳಿಸುತ್ತಿದ್ದೆ. ನೀನು ಬಂಡಿ ಹಾಕಲು ತೊಡಗಿಬಿಟ್ಟೆ, ಸಹಿಸಿಕೊಳ್ಳಲು ತೊಡಗಿದೆ. ಸ್ವಾತಂತ್ರ್ಯವನ್ನ ಬಯಸಿದೆ. ಬೇಡದ್ದನ್ನು ಬಯಸಹೋದೆ. ನಿವೇದಿತಾ ಸೀದಾ ಹೋಗಿ ಅಮ್ಮನ ಹತ್ತಿರ ಪುಕಾರು ಹೇಳಬಹುದಿತ್ತು. ಇವತ್ಯಾಕೋ ದೊಡ್ಡದಾಗಿ ಅಳತೊಡಗಿದ್ದಾಳೆ.

ಕ್ರಮೇಣ ಅವಳ ಏಕುವಿಕೆ ಕಡಿಮೆಯಾಯಿತು. ನಿವೇದಿತಾ ಸುಮಾರು ಬೆಳೆದಳು. ವಯಸ್ಸು ಹತ್ತರ ಹತ್ತಿರವಾಗಿರಬೇಕು. ಇನ್ನೂ ಅಳುವುದು ಚಂದವಲ್ಲ. ಆಗ ನನಗೆ ವಯಸ್ಸು ಹದಿನೇಳು, ಅಷ್ಟೆ. ಇದ್ದಕ್ಕಿದ್ದಂತೆ ಒಂದುದಿನ ನೀನು ಬಂದೆ. ಆಗ ನನಗೆ ಹದಿನೇಳು–ನಾನು ಆದರ್ಶವಾದಿಯಾಗಿದ್ದೆ. ತಂಗಿಯನ್ನ ಅಮ್ಮನನ್ನ ಪ್ರೀತಿಯಿಂದ ಕಾಣಬೇಕೆಂಬ ತೀರ್ಮಾನ ಕೈಗೊಂಡಿದ್ದೆ. ಗೆಳೆತನದ ಬಗ್ಗೆ, ಬಾಂಧವ್ಯದ ಬಗ್ಗೆ ಬಹಳ ಮಾತಾಡಬೇಕೆನ್ನಿಸುತ್ತಿತ್ತು. ಅವತ್ತು ಕೆಳಗಿನ ಮನೆ ಗೀತಕ್ಕ, ನಮ್ಮ ಮನೆಗೆ ಬಂದಿದ್ದಳು. ನಾನು ಭೈರಪ್ಪನವರ 'ದೂರ ಸರಿದರು' ಕಾದಂಬರಿ ಓದುತ್ತಿದ್ದೆ, ಅವಳ ಜೊತೆಯಲ್ಲಿ ನೀನಿದ್ದೆ. ರಮಾಳ ಬಗ್ಗೆ ಹೃದಯ ಮಿಡಿಯುತ್ತಿತ್ತು. ನಿವೇದಿತಾ ಒಳಗೋಡಿದಳು.

ಹೋಗಿ ಮುಖ ತೊಳೆದು ಬಂದು ಒಲೆ ಹತ್ತಿರ ಕುಳಿತೆ. ಕಾಫಿ ಬಗ್ಗಿಸಿಕೊಂಡು ಕುಡಿದೆ, ಏಳಲು ಮನಸ್ಸು ಬರಲಿಲ್ಲ. ಕಾಲು ಮಡಿಸಿ ಕುಳಿತೇ ಇರೋಣ ಅನ್ನಿಸುತ್ತಿತ್ತು. ಅದು ನಿನ್ನೆ ಕ್ರಿಕೆಟ್ ಆಡಿದ್ದರ ಫಲ. ಅಪರೂಪಕ್ಕೊಮ್ಮೆ ಆಡಿದರೆ ಹಾಗೇ "ನಿನ್ನ ಹೆಸರೇನು" ಅಮ್ಮ ಕೇಳಿದಳು. "ಲಕ್ಷ್ಮೀದೇವಿ'' ಎಂದೆ ನೀನು. 'ಲಕ್ಷ್ಮೀದೇವಿ–ಲಕ್ಷ್ಮೀದೇವಿ – ಲಕ್ಷ್ಮೀ ಎಲ್-ಎ-ಕೆ-ಎಸ್-ಎಚ್-ಎಂ-ಐ-ಎಲ್-ಎ-ಎಕ್ಸ್-ಎಂ-ಐ-ಡಿ-ಇ-ವಿ-ಐ'. ನೀನು ಕಾಲೇಜಿಗೆ ಹೋಗಲು ನಿನ್ನಕ್ಕನ ಮನೆಯಲ್ಲಿ ಉಳಿದೆ. ಹಾಗೆಂದು ಹೇಳಿದೆ. ನಾನು ಗೋಪುರ ಏರಿಸಿದೆ. ಇದೇ ಅಡಿಗಲ್ಲಿನ ಮೇಲೆ ಗೋಪುರ ಏರಿಸುತ್ತ ಹೋದೆ. ನೀನು ಲಕ್ಷ್ಮೀ. ನನ್ನ ತಂಗಿ ನಿವೇದಿತಾ.

ನಾವಿಬ್ಬರು ಒಂದೇ ಕ್ಲಾಸಾಗಿದ್ದೆವು ಅಮ್ಮ ಅದನ್ನೇ ಹೇಳಿದಳು. ನಿನ್ನಕ್ಕ ಅದನ್ನೇ ಹೇಳಿದಳು. ನಾನೂ ಹೀಗೇ ಆಲೋಚನೆ ಮಾಡಿದೆ. ನಿವೇದಿತಾಳಿಗೂ ನಿನಗೂ ಬಹಳ ಭಿನ್ನತೆ, ಬಹಳ ವ್ಯತ್ಯಾಸ. ನಿವೇದಿತಾ ನನ್ನಲ್ಲಿ ಉಳಿಯಬೇಕೆಂದು ನಾನು ತೀರ್ಮಾನಿಸಿದ್ದರ ಪ್ರಕಾರ ರಾಜೇಶ್ವರಿ ನನ್ನಲ್ಲಿ ಒಂದಾಗಬೇಕಿತ್ತು. ಅವರಿಬ್ಬರೂ ಒಂದೇ ಥರ. ದುಂಡುಮುಖ ಗುಳಿಬೀಳುವ ಕೆನ್ನೆಗಳು, ವಿಶಾಲ ಹಣೆ.... ಆದರೆ ಬಂದವಳು ರಾಜೇಶ್ವರಿಯಲ್ಲ, ನೀನು.

ನಿಟ್ಟುಸಿರುಬಿಟ್ಟು ಎದ್ದೆ. ಎಲ್ಲಾ ಏನಾಯಿತು ? ನಾನು ಬೆಳೆದಿದ್ದನೆ – ಅದಕ್ಕೆ ಹೀಗಾಯಿತೆ ? ನೀನು ಬೆಳೆದದ್ದಕ್ಕೆ ಹೀಗಾಯಿತೆ ? ಓಹ್, ಮೊನ್ನೆಯೇ ತೀರ್ಮಾನಿ

ಸಿದ್ದೆನಲ್ಲ – ಅಭಿಮಾನ ! ನಿಜ ಲಕ್ಷ್ಮೀ, ಅಭಿಮಾನ. ಅಭಿಮಾನ, ಅಭಿಮಾನ.... ನಾನು ಬಗ್ಗಬೇಕಾಗಿತ್ತೆ, ನೀನು ಬಗ್ಗಬೇಕಾಗಿತ್ತೆ ? ಈ ಸಮಸ್ಯೆ ಇಂದು ಭೂತ, ವರ್ತಮಾನ.

ನೀನು ಪರವೂರಿನವಳು. ನಿನಗೆ ಸಹಾಯಮಾಡುವುದು ನನ್ನಂಥವನ ಕರ್ತವ್ಯ; ನನಗೆ ಅನಿವಾರ್ಯ. ನಿನ್ನ college admission ಗೆ ಸಹಾಯ ಮಾಡಿದೆ. ಹೇಳಿಕೊಳ್ಳುವುದಿಲ್ಲ. ಯಾಕೆ ಸಹಾಯಮಾಡಿದೆ ? ಬರಿಯ ಕರ್ತವ್ಯಬುದ್ಧಿಯಿಂದಲ್ಲ. ಅದು ಅನಿವಾರ್ಯವಾಗಿತ್ತು.... ಈಗೀಗ ನನ್ನ ಆತ್ಮಶೋಧನೆ ಬಹಳ ಹೆಚ್ಚಾಗಿ ಬಿಟ್ಟಿದೆ. ಹೀಗಾಗಿ ಅಭಿಮಾನ ಹೆಚ್ಚು. ನಾನು ಮುಂಚೆ ಸಂಕೋಚದ ಮನುಷ್ಯ ನಾಗಿದ್ದೆ. ಬಳಿಕ ಸ್ವಾಭಿಮಾನಿಯಾದೆ. ಅಂದು ನೀನು ನನ್ನನ್ನ ಪೂರ್ಣ ಸೆಳೆದು ಕೊಂಡುಬಿಟ್ಟೆ ! ನನಗೆ ಆಗ ಹದಿನೆಂಟು. ನಿನಗೆ ಹದಿನೇಳು. ನಾನು ಗಂಡು, ನೀನು ಹೆಣ್ಣು. ನೀನು ಬೆಳೆದಿದ್ದೆ, ನಾನು ಬೆಳೆಯುತ್ತಿದ್ದೆ.

....ಇವತ್ತೇಕೋ ಎಂದೂ ಇಲ್ಲದ ಯೋಚನೆಗಳು ರಜೆ ಕಳೆಯುತ್ತ ಬಂತು. ಒಂದೆರಡು ಕಥೆ ಬರೆಯುವುದಿದೆ. ಮತ್ತೆ ಕೊಟ್ಟಿಗೆ ಹೊದಿಕೆ ಮಾಡಬೇಕೆಂದು ಅಪ್ಪ ನಿನ್ನೆಯೇ ಹೇಳಿದ್ದ. ಹಿಡಿದ ಒಂದೇ ಕಾದಂಬರಿಯನ್ನ ಪೂರೈಸಲಾಗಿಲ್ಲ.... ಗಂಟೆ ಏಳೂವರೆಯಾಗುತ್ತಿದ್ದಂತೆ ಆಸರಿಗೆ ಕುಡಿದಾಯಿತು. ಅಪ್ಪ ಹೊಸ ತಾಕೀತು ಮಾಡಿದ. ಬಗ್ಗೀಸರದಲ್ಲಿ ಇಂದು ಕಮಲಾಕ್ಷಿಯ ಸಟ್ಟುಡಿ. ಅವಳ ಮದುವೆಗೂ ನಾನು ಹೋಗಿರಲಿಲ್ಲ. ಇಂದೂ ಅಪ್ಪನೇ ಹೋಗುವವನಿದ್ದ. ಆದರೆ ಬೆಳಿಗ್ಗೆ ಏನಾಯಿತೋ ಏನೋ ನನ್ನ ಹತ್ತಿರ ಹೋಗಿ ಬಾ ಎಂದ.... ಇದಕ್ಕೆ ಹೋಗಿಬರುವುದೂ ಒಳ್ಳೆಯದೆ. ಅಮ್ಮನ ಹತ್ತಿರ ನಿವೇದಿತಾಳನ್ನ ಕರೆದುಕೊಂಡು ಹೋಗುತ್ತೇನೆ ಎಂದು ಅವಳಿಗೆ ಸ್ನಾನ ಮಾಡಿಸಿಯಾಯಿತು. ಕಮಲಾಕ್ಷಿಗೆ ನಿನ್ನ ವಯಸ್ಸೆ ಹೌದು. ನೀನೊಂದು ದಡ, ಅವಳೊಂದು ದಡ. ಇಬ್ಬರಿಗೂ ಸಮತೋಲ ಇಲ್ಲ. ನಾನು ಬಯಸುವ ಸಹಜತೆ ಇಲ್ಲ. ನೀನು ಸಹಜತೆಯ ಭ್ರಮೆ ಹುಟ್ಟಿಸಿದ ನಿನ್ನ ದಾಹ ತೀರಿಸಿಕೊಳ್ಳುವ ನೀರಾಗಿ ನನ್ನನ್ನ ತಿಳಿದ ಕೃತ್ರಿಮ ಪ್ರತಿಕೃತಿ. ಕಮಲಾಕ್ಷಿ ರೂಪಗೊಳ್ಳದ ಅಥವಾ ರೂಪು ತೋರದ ಘನಾಕೃತಿ. ಕಮಲಾಕ್ಷಿ ಗಂಡನಮನೆಗೆ ಹೊರಟು ಹೋಗುತ್ತಾಳೆ ನಾನೇ ಪೆದ್ದ. ಅವಳಿಗೆ ನಾನು ಹತ್ತಿರವಾಗಿದ್ದರೆ ಅವಳು ನನಗೆ ಹತ್ತಿರವಾಗುತ್ತಿದ್ದಳು. ನೀನು ನೀನಾಗಿ ನನ್ನ ಹತ್ತಿರ ಬರತೊಡಗಿದಾಗ ನಾನು ನಿಂತಲ್ಲೆ ನಿಂತೆ. ಅದೇ ತಪ್ಪಾಯಿತು. ಕಮಲಾಕ್ಷಿ ತಾನಾಗಿಯೇ ನನ್ನ ಹತ್ತಿರ ಬರಲಿ ಎಂದು ಕಾದೆ. ಆಗಲೇ ಅಭಿಮಾನ ಬೆಳೆದಿತ್ತು. ಅಲ್ಲ, ಅದು ಅಭಿಮಾನವಲ್ಲ, ನಿಷ್ಕ್ರಿಯತೆ. ನೀನು ನೀನಾಗಿ ಬರುವಾಗ ನಿನ್ನಲ್ಲಿ ಅಭಿಮಾನ ಇರಲಿಲ್ಲ ? ನನ್ನಲ್ಲಿ ಇರಲಿಲ್ಲ ? ಕಮಲಾಕ್ಷಿಯಲ್ಲಿ ಇತ್ತೆ ? ಉಹುಂ, ಕಮಲಾಕ್ಷಿಯದು ಸಂಕೋಚಮನೋಭಾವ. ನನ್ನದೂ ಅದೇ ಏನು ? ಹಾಗಿದ್ದರೆ ನೀನೂ ನನ್ನಲ್ಲಿ ಸೇರುತ್ತಿರಲಿಲ್ಲ. ಆದ್ದರಿಂದ ಅದು ಹಾಗಲ್ಲ. ನಾನು

ಎಡವಿದ್ದು.... ತಥ್ ಈ ಆತ್ಮಶೋಧನೆ ಹಿಂಸೆ ಲಕ್ಷ್ಮಿ, ಬಿಸಿಲ ಕಿರಣ ಹರಡಿ ಹಬ್ಬಿದೆ. ಈಗಲೇ ತಂಪು. ಬೇಗನೆ ಹೊರಟರೆ ಒಳ್ಳೆಯದು. ಆಮೇಲೆ ಉರಿಬಿಸಿಲಾಗುತ್ತದೆ ಎಂದು ನಿವೇದಿತಾಳನ್ನ ಗಡಬಡಿಸಿ ಎಬ್ಬಿಸಿದೆ. ತಯಾರಾಗಲೂ ನಾನೇ ನೆರವಿತ್ತೆ. ಅವಳೀಗ ಎಳೆಯುವಳು ಏನೂ ಅನ್ನುವುದಿಲ್ಲ. ತಡಮಾಡಿದರೆ ಬಿಟ್ಟುಹೋಗುತ್ತೇನೆ ಎಂದು ಹೆದರಿಸಿದೆ. ನಿನ್ನಿಂದ ನಾನು ಸಿಡಿದ ದಿನದ ನೆನಪಾಯಿತು.

ಒಂದೇ ಬಸ್ಸಿಗೆ ಕಾಲೇಜಿಗೆ ಹೋಗುತ್ತಿದ್ದೆವು. ಹೋಗುವಾಗ ಬರುವಾಗ ದಾರಿತುಂಬ ಹರಟುತ್ತಿದ್ದೆವು. ಕಥೆ ಹೊಸೆಯುತ್ತಿದ್ದವು. ತಯಾರಾಗಿ ನಿವೇದಿತಾ ಳೊಂದಿಗೆ ಹೊರಟೆ. ಎಷ್ಟೇ ಗಡಿಬಿಡಿ ಮಾಡಿದರು ಹೊತ್ತೇರಿತು. ಬೇಸಿಗೆಯ ಬಿಸಿಲು, ಹಾಗಾಗಿ ಒಂಬತ್ತು ಗಂಟೆಗೇ ನೆಲ ಕಾದಿತ್ತು. ಕಳೆದ ಬೇಸಗೆಯಲ್ಲಿ ನಮ್ಮಿಬ್ಬರೊಂದಿಗೆ ನೀನೂ ಇದ್ದೆ. ಮೂವರೂ ಕಿರಿಯೂರಿನಲ್ಲಾದ ಮದುವೆಗೆ ಹೋಗಿದ್ದೆವು. ಅಲ್ಲಿಯ ಶೋಬಾಲ್ಸ್‌ಗಳನ್ನ ಕಂಡು ನನಗೊಮ್ಮೆ ಹೇಸಗೆಯಾದದ್ದುಂಟು. ಮನೆಗೆ ಬಂದವನು 'ಹರಿಣಗಳು' ಎಂಬ ಹೆಸರಿನ ಕಥೆ ಬರೆದೆ. ನಿನಗೆ ತೋರಿಸಿದೆ. 'ಣ' ವನ್ನ ಆವರಣ ಚಿಹ್ನೆಯಲ್ಲಿ ಇಡಬೇಕಾಗಿತ್ತು ಎಂದು ನೀನು ಹೇಳಿದೆ. ಅದು ಸಹಜ ಕಣೊ ಎಂದೆ. ನನ್ನ ಬಾಣ ನನಗೇ ತಿರುಗಿಸಿದೆ. ಅದು ಹೇಗೆ ತಿರುಗಿಸಿದೆಯೋ ನಾನು ಹೇಗೆ ಒಪ್ಪಿಕೊಂಡೆನೋ.... ಕಥೆಯನ್ನ ಹರಿದು ಹಾಕಿಬಿಟ್ಟೆ....

....ಕಮಲಾಕ್ಷಿ ಯಂತ್ರವಾಗುತ್ತಿದ್ದಾಳೆ. ಯಂತ್ರವಾಗಿಯೇ ಜೀವಿಸುತ್ತಾಳೆ? ಮನಸ್ಸಿಗೊಂದು ಅರ್ಥ ಇರುವುದಾದರೆ, ಹೃದಯಕ್ಕೊಂದು ಭಾವನೆ ಇರುವುದಾದರೆ ಯಂತ್ರಕ್ಕಿಂತ ಭಿನ್ನವಾಗಬೇಕು; ಆದರೆ ವಾಸ್ತವಾಂಶದಲ್ಲಿ ಎಲ್ಲ ಯಂತ್ರಗಳಾಗಬೇಕು ಎಂದು ನೀನಂದಿದ್ದೆ. ಕಮಲಾಕ್ಷಿ, ನಿನ್ನ ಮಾತಿಗೆ ಸಾಕ್ಷಿ. ಹ್ಞಂ, ನಿನ್ನ ಮಾತಿನಿಂದ ನನಗೇನು ? ನೀನು ನನಗೆ ಯಾರು ? ಕಮಲಾಕ್ಷಿ ನನಗೆ ಯಾರು ? ನಿವೇದಿತಾ– ಥೀ ಎಲ್ಲ ಬರಿಯ ಮಾತುಗಳಾಗಿ ಉಳಿದುಬಿಡುತ್ತವೆ. ಮಾತುಗಳಿಗೆ ಎದುರಾಗಿ ನಿಲ್ಲುವುದೂ ಉಂಟು. ಮಾತನ್ನ ನಾಶಪಡಿಸಿಯೂ ಪಡಿಸುತ್ತವೆ. ಆದಕ್ಕಾಗಿ ಮಾತು ಗಳನ್ನು ಅಂದುಕೊಳ್ಳುತ್ತೇನೆ. ನಗ್ನತೆಗೆ ಪರದೆ ಕಟ್ಟುತ್ತೇನೆ ಪರದೆಯ ಮುಂದೆ ನೀತಿ ಶಾಸ್ತ್ರವನ್ನ ಇಡುತ್ತೇನೆ. ಹಾಗಾದರೆ ನೀನು ಸತ್ಯದ ಪರದೆ ತೆಗೆದವಳು. ಉಹುಂ, ನಾನು ತೆಗೆಯುತ್ತಿದ್ದೆ. ನೀನು ಸತ್ಯ, ನಗ್ನತೆಯವರೆಗೆ ಮಾತ್ರ. ನಾನು ಆತ್ಮಸತ್ಯ.... ಅಯ್ಯೋ ಈ ಆತ್ಮಶೋಧನೆ ಹಿಂಸೆ ಲಕ್ಷ್ಮಿ.... ಆಘಾತ ಲಕ್ಷ್ಮಿ....

.... ಬಗ್ಗೀಸರದಿಂದ ಹೊರಡುವಾಗ ನಿವೇದಿತಾಳಿಗಾಗಿ ಹುಡುಕಿದೆ. ಆಕೆ ಎಲ್ಲೂ ಕಾಣಲಿಲ್ಲ. ಸಟ್ಟನೆ ಕೆರೆಯ ನೆನಪು ಬಂತು. ಹೊರಡುವಾಗಲೇ ಅಮ್ಮ ಜ್ಞಾಪಿಸಿದ್ದಳು – ನಿವೇದಿತಾ ಕೆರೆಗೆ ಹೋಗದಂತೆ ನೋಡಿಕೊ ಎಂದು. ಕೆರೆಯತ್ತ ಓಡಿದೆ. ನಿವೇದಿತಾ ನಾಲ್ಕಾರು ಹುಡುಗಿಯರೊಂದಿಗೆ ಕೆರೆದಾವರೆ ಕೊಯ್ಯುತ್ತ

ಸಾಗಿದ್ದಳು. ಆಗಲೇ ಅವಳಿಗೆ ಕೆರೆಯಕಡೆ ಹೋಗಬೇಡ ಎಂದಿದ್ದೆ. ಒಮ್ಮೆಗೇ ಸಿಟ್ಟು ಉಕ್ಕಿ ಬಂತು. ಕೆರೆ ಹೂ ಕೊಯ್ಯುತ್ತ ಕೊಯ್ಯುತ್ತ ಮುಂದೆಮುಂದೆ ಹೋಗಿ ಹುಗಿದುಗಿದು ಹೋದರೆ? ಕೂಗಿದೆ. ತಿರುಗಿ ನೋಡಿದಳು. ಕೊನೆ ಕೊನೆಗೆ ಒಮ್ಮೊಮ್ಮೆ ನೀನು ಮುಂದೆ ಹೋಗಿಬಿಡುತ್ತಿದ್ದೆ. ಬಸ್‌ಸ್ಟಾಪಿನವರೆಗೂ ನಾನೊಬ್ಬನೇ ಬರಬೇಕಾಗಿತ್ತು. ನೀನು ಸುಹಾಸಿನಿ, ನಿನ್ನ ನಗೆ ನನಗೆ ಅಮೃತ. ನಾನು ಟೀಕೆ ಮಾಡುತ್ತಿದ್ದೆ. ಪ್ರೀತಿಯಿಂದ ಟೀಕೆ ಮಾಡುತ್ತಿದ್ದೆ. ಅಭಿಮಾನ ಅದನ್ನ ನುಂಗಿತು. ನಾನು ಮುಂದೆ ಹೋಗಿ ನೀನು ಮುಂದುವರಿದಿಲ್ಲ, ಹಿಂದೆ ಹೋದೆ ಎಂದು ತೋರಿಸಿದೆ. ನೀನು ಕಾತರಿಸಿದೆ. ನಾನು ನಿನಗೆ ಸಮಸ್ಯೆಯಾದೆ. ಯಾರಿಗೂ ನಾನು ಸಮಸ್ಯೆ ಯಾಗಬಯಸುವುದಿಲ್ಲ. ನಿನಗೆ ಆದೆ ಹೇಗಾದೆ ಎಂಬುದೇ ನನಗೆ ಆಶ್ಚರ್ಯ. ನೀನೇ ನನ್ನನ್ನ ಸಮಸ್ಯೆ ಮಾಡಿಕೊಂಡೆ.... ನನ್ನನ್ನ ಮಾತಾಡಿಸಲು ನೋಡಿದೆ. ನಾನು ನಿನ್ನನ್ನ ಈಗ ಮಾತಾಡಿಸುತ್ತಿದ್ದೇನೆ. ನೀನು ಮುಳ್ಳಾಗಿದ್ದೀಯೆ. ನಿನ್ನಿಂದಲೇ ಕೀವು ತೆಗೆಯುವ ಕೆಲಸವೂ ನಿನ್ನದೆ. ಕೀವು ಹೋದರೆ ಗಾಯ ಗುಣವಾಗುತ್ತದೆ ಎಂದಲ್ಲ; ಸೆಳೆತ ಕಡಿಮೆಯಾಗುತ್ತದೆ. ಅಷ್ಟೇ ಅಲ್ಲ, ಗಾಯ ಗುಣವಾಗಲೂ ಬಹುದು. ನಿವೇದಿತಾ ನನ್ನನ್ನ ಕಂಡು ಹೆದರಿ ಮೇಲೆ ಬಂದಳು. ಮುಖ ಭಯವನ್ನ ಸೂಚಿಸುತ್ತಿತ್ತು. ನಾನು ಹೊಡೆಯಬೇಕಿತ್ತು. ಅದು ನಿವೇದಿತಾಳಿಗೂ ಅನಿರೀಕ್ಷಿತವಾಗುತ್ತಿರಲಿಲ್ಲ. ನೀನು ಬಿಡಲಿಲ್ಲ. ಬೆದರಿದೆ. ಬಹಳ ಮುಂಚೆ – ಒಂದುದಿನ ಕಾಲೇಜಿನಿಂದ ಬರುತ್ತಿರುವಾಗ ನಿನ್ನೊಡನೆ ನಿಮ್ಮ ಮನೆಗೇ ಬಂದೆ. ನಿನ್ನ ಭಾವ ಇರಲಿಲ್ಲ. ಗೀತಕ್ಕ ನಿನ್ನೊಂದಿಗೆ ನನಗೂ ಟೀ ಕೊಟ್ಟಳು. ಊಟಮಾಡಲು ಒತ್ತಾಯಿಸಿದಳು. ನಾನು ಇಲ್ಲ ಎಂದೆ, ಅಷ್ಟರಲ್ಲಿ ಹೊರಗಡೆ ಗಲಾಟೆ ಕೇಳಿಸಿತು. ಎರಡುದಿನ ಮುಂಚೆ ನಿನ್ನ ಭಾವನೊಂದಿಗೆ ಜಗಳವಾಡಿಹೋದ ಶೇರೇಗಾರ ಕುಡಿದು ಬಂದು, ಅಂಗಳದಲ್ಲಿ ನಿಂತು ಗಲಾಟೆ ಮಾಡುತ್ತಲಿದ್ದ. ನಮ್ಮ ಮಾತುಗಳನ್ನು ಕೇಳಲು ಆತ ತಯಾರಿರಲಿಲ್ಲ. ಕೂಗುತ್ತಲೇ ಇದ್ದ. ಆಗಲೇ ಸಂಜೆ ಏಳಾಗಿತ್ತು. ಅವನು ಕೂಗಿ ಕೂಗಿ ಹೊರಟುಹೋದ. ಬಿಡಾರದಲ್ಲಿ ಪುನಃ ಕೂಗಾಟ ಪ್ರಾರಂಭಿಸಿದ್ದು ಕೇಳಿಸುತ್ತಿತ್ತು. ಆ ದಿನ ಮಳಲಗಾಂವ ದಲ್ಲಿ ದೊಡ್ಡಾಟ ಬೇರೆ. ಅವನ ಆಳುಗಳು ಅದಕ್ಕೆ ಹೊರಡುವ ತಯಾರಿಯಲ್ಲಿದ್ದರು. ನಿಮ್ಮ ಮನೆ ಒಂಟಿಮನೆ. ಹೀಗಾಗಿ ರಾತ್ರಿ ಬಂದು, ಮತ್ತೆ ಗಲಾಟೆ ಎಬ್ಬಿಸಿದರೆ ಎಂದು ನೀವು ಭಯಪಟ್ಟಿರಿ. ಕುಡಿದು ಬೀಳುವ ಹೊತ್ತು, ಇನ್ನು ಅವನನ್ನ ಬೆಳಿಗ್ಗೆ ಕಂಡು ಕೊಳ್ಳಬೇಕು ಎಂದು ನಾನು ಭರವಸೆಯಿತ್ತೆ. ಗೀತಕ್ಕ, "ಮನೆಗೆ ಹೋಗಿ ರಾತ್ರಿ ಅಲ್ಲೇ ಉಳಿಯುವೆ ಎಂದು ಹೇಳಿ ಬಾ" ಎಂದು ತಾಕೀತು ಮಾಡಿದಳು, ಮನೆಗೆ ಹೋದೆ. ವಿಷಯ ತಿಳಿದ ಅಮ್ಮನೇ ಒತ್ತಾಯ ಮಾಡಿ ಕಳಿಸಿದಳು. ಎಲ್ಲಾ ಮರೆಯಲಾಗುವುದೇ ಇಲ್ಲ. ಬಹುಶಃ ಎರಡುವರ್ಷವೇ ಆಗಿರಬೇಕು. ನೀನು ಕುಸುಮ ಹೃದಯಿ. ಭಾವನೆ ಗಳ ತರಂಗದ ಪ್ರವಾಹ ಮನೆತುಂಬ ಹರಿಯುತ್ತಿತ್ತು. ಅದು ಹರಿದ ಕಾಲ. ನಿನ್ನಕ್ಕ ಕೋಣೆಯಲ್ಲಿ ಮಲಗಿದ್ದಳು. ನಾನು, ನಿನ್ನ ಎರಡು ತಮ್ಮಂದಿರು, ತಂಗಿ. ಜಗುಲಿಯ

ಮೇಲೆ ಮಲಗಿದ್ದೆವು. ಏನೇನೋ ಮಾತಾಡಿದವು. ಮಾತುಗಳು ನೆನಪಿಲ್ಲ. ಆ ಕ್ರಿಯೆ ಹಸಿರು. ಆ ಅನುಭವ ಇದೋ ಈಗಿನ ಸ್ಪರ್ಶ....

ನಿವೇದಿತಾಳಿಗೆ ಹೊಡೆಯಲು ಕೈ ಬರಲಿಲ್ಲ. ಗದರಿಸಿದೆ, ಹಾಗೆ ಮಾಡಬಾರದು ಎಂದೆ. ನೀನು ಹಾಗೆಂದಾಗ ಕೇಳಿರಲಿಲ್ಲ. ನಿನ್ನದು ಬಹುದೊಡ್ಡ ಪ್ರಶ್ನೆ; ಬಹು ದೊಡ್ಡ ಸಾಧನೆ. ನಾವು ಒಂದಾಗಿ ಸಾಗಿದ್ದೆಷ್ಟೋ, ಅಷ್ಟು ನಿಜ. ಬಳಿಕವೂ ನಿನ್ನಿಂದ ಸಹಾಯವಾದದ್ದಿದ್ದರೆ ಇದೇ ಇದೇ ಆಗಿರಬೇಕು— ನಿವೇದಿತಾಳಿಗೆ ಪೆಟ್ಟು ಬೀಳುತ್ತಿತ್ತು.... ಆದರೆ ಒಂದು ಸಂಶಯ. ನಿವೇದಿತಾ ಹೂವಾಗಿಲ್ಲ; ನಾನವಳನ್ನ ಹೂವೆಂದು ಭಾವಿಸುತ್ತಿದ್ದೇನೆ. ಅವಳು ಹೂವಾಗುತ್ತಾಳೆ. ಅವಳಲ್ಲಿಯೂ ಅಭಿಮಾನ ಬೆಳೆಯುತ್ತದೆ. ಘರ್ಷಣೆ ಗೋಡೆ ಕಟ್ಟುವುದು ನಿನಗೆ ಮಾತ್ರ ಮೀಸಲಲ್ಲ ಎಂದಾದರೆ ನಿನ್ನದು ಸರಿಯೆ ? —ಯಾಕಲ್ಲ.... ಹೇಗಾದೀತು ?

....ಹನ್ನೆರಡು ಹೊಡೆದಿತ್ತು. ನೀನು ನನ್ನ ಕೈಹಿಡಿದೇ ಮಲಗಿದ್ದೆ. ನನಗೆ ತೇಲುತ್ತಿದ್ದ ಅನುಭವ ಕಣ್ಣೆಳೆಯುತ್ತಿತ್ತು. ನೀನು ನನ್ನ ಕೈಯನ್ನ ನಿನ್ನ ಎದೆಗೆ ಒತ್ತಿ ಕೊಂಡೆ. ಯಾವಾಗಲೋ ನಿದ್ದೆ ಬಂದಿತ್ತು. ನೀನು ನನ್ನಲ್ಲಿ ಇಳಿಯುತ್ತಾ ಹೋದೆ. ಭೂತದಲ್ಲಿ ಹೊಕ್ಕು, ವರ್ತಮಾನದಲ್ಲಿ ನರ್ತಿಸುತ್ತ, ಭವಿಷ್ಯತ್ತಿನ ಚಿತ್ರವನ್ನ ಕಲಿಸಿಕೊಡುತ್ತ ಸ್ವಪ್ನಲೋಕಕ್ಕೆ ಧಾಳಿಮಾಡಿದೆ. ನನ್ನಲ್ಲಿ ಇಳಿದೆ. ಇಳಿದವಳು ವ್ಯಾಪಿಸಿದೆ. ವ್ಯಾಪಿಸುತ್ತ ಹೋದೆ. ನನ್ನನ್ನ ಮೀರಿ ವ್ಯಾಪಿಸಿದೆ. ನಾನು ಸಣ್ಣ ಕಣವಾಗಿ ಉಳಿಯುವಷ್ಟರ ಮಟ್ಟಿಗೆ ವ್ಯಾಪಿಸಿದೆ. ನಾನು ಸಿಡಿದೆ. ಸಿಡಿಯಲೇಬೇಕಾಗಿತ್ತು. ಸಿಡಿಯದಿದ್ದರೆ ನಾನೇ ಇಲ್ಲವಾಗು ತ್ತಿದ್ದೆ. ಅದಕ್ಕಾಗಿ ಸಿಡಿದೆ. ನಿನಗೆ ಕುಂದಾಗಿದೆಯೇ ? ನೀನು ನನ್ನ ಬಗ್ಗೆ ಏನಾದರೂ ಯೋಚಿಸುವುದುಂಟೆ ? ನಾನು ಯೋಚಿಸಲಾರೆ. ನಿನಗೇನು ಅನ್ನಿಸುತ್ತಿದೆ ಎಂಬುದನು, ನಾನು ಊಹಿಸಲಾರೆ. ನೀನು ಸಣ್ಣವಳು, ಆದರೆ ಉಪಗ್ರಹವಲ್ಲ. ನಾನು ದೊಡ್ಡವನು ಹಾಗೆಂದು ನಾನು ಸಾಧಿಸಬಲ್ಲೆ. ಆದರೆ ನಾನೇಕೆ ಉಪಗ್ರಹ ? ಹೌದು ನಾನು ಉಪಗ್ರಹ. ನನ್ನ ಪ್ರಯತ್ನವನ್ನ ಮೀರಿ ನಾನು ಉಪಗ್ರಹ. ನಿನ್ನನ್ನ ಕೊಲ್ಲುತ್ತೇನೆ ಎಂದು ಮನಸ್ಸಿನಲ್ಲಿ ನಿರ್ಧರಿಸಿದ್ದೆ. ನಾನೀಗ ನಿನ್ನನ್ನ ಸಾಯಿಸುತ್ತ, ಸಾಯುತ್ತಿದ್ದೇನೆ...

ಮನೆಗೆಬಂದ ಕೂಡಲೆ ಅಮ್ಮನ ಬಳಿ ನಿವೇದಿತಾ ಕೆರೆಗೆ ಹೋಗಿದ್ದನ್ನ ಹೇಳಿಕೊಟ್ಟೆ. ಅಮ್ಮ ಅವಳಿಗೆ ಸರಿಯಾಗಿ ಬೈದಳು. ಅವಳ ಮುಖ ಚಿಕ್ಕದಾಗಿರಬೇಕು. ಛೇ.... ಹ್, ಹೌದಾ ಅವಳಿಗೆ ಅದೇ ಶಿಕ್ಷೆ.

■ ■

ಅರುವತ್ತೊಕ್ಕಲು

ಆರ್. ಎನ್. ಗುರವ

ಶಾಸನಗಳಲ್ಲಿ ಉಲ್ಲೇಖಿತವಾಗುವ ಅನೇಕ ಸಂಘ-ಸಂಸ್ಥೆಗಳಲ್ಲಿ ಮೇಲಿಂದ ಮೇಲೆ ಬರುವ ಸಂಘವೆಂದರೆ ಅರುವತ್ತೊಕ್ಕಲು. ಇದು ಗ್ರಾಮದಲ್ಲಿ ಒಕ್ಕಲುತನ ಮಾಡುವ ರೈತರ ಸಂಘ. ಬೇಸಾಯವು ಯಾವ ಕಾಲದಲ್ಲಿಯೂ ನಮ್ಮ ಗ್ರಾಮಗಳ ಪ್ರಮುಖ ಉದ್ಯಮ. ಆದ್ದರಿಂದ ಪ್ರತಿ ಗ್ರಾಮದಲ್ಲಿ ರೈತರು ಇದ್ದೇ ಇರುವರು. ಇವರು ತಮ್ಮ ಕಾರ್ಯಸೌಕರ್ಯ, ಸಾಮಾಜಿಕ ಸ್ಥಾನಮಾನ, ಸ್ವಹಿತ ಸಂರಕ್ಷಣೆ ಮುಂತಾದವುಗಳಿಗಾಗಿ ತಮ್ಮದೆ ಆದ ಒಂದು ಪ್ರತ್ಯೇಕ ಸಂಘವನ್ನು ಊರಊರಿಗೆ ಕಟ್ಟಿಕೊಂಡಿದ್ದರು. ಈ ಸಂಘದ ಸದಸ್ಯರ ಸಂಖ್ಯೆ ಸಾಂಪ್ರದಾಯಿಕವಾಗಿ ಅರುವತ್ತೆಂದು ಪರಿಗಣಿಸಲ್ಪಟ್ಟಿತ್ತು. ಗ್ರಾಮದಲ್ಲಿ ಒಕ್ಕಲುತನ ಮಾಡುವವರ ಸಂಖ್ಯೆ ಏನೇ ಇದ್ದರೂ ಅವರಿಂದ ರಚಿಸಲ್ಪಟ್ಟ ಈ ಸಂಘಕ್ಕೆ ಅರುವತ್ತೊಕ್ಕಲು ಎಂದೇ ಹೆಸರು. ಕುಂದಗೋಳ ತಾಲೂಕಿನ ಕುಯಿಬಾಳ ಗ್ರಾಮದ ಶಾಸನದಲ್ಲಿ[೧] 'ಗೌಣ್ಡುಗಳು ಅಱುವತ್ತೊಕ್ಕಲುಮಿರ್ದ್ದು ಹನ್ನೆರಡು ಮತ್ತರು ಕೆಯ್ಯ........ಸಲಿಸುತ್ತಮಿರ್ಪ್ಪರು' ಎಂದು; ಸಿಂದಗಿ ತಾಲೂಕಿನ ಕನ್ನೊಳಿ ಗ್ರಾಮಂದ ಶಾಸನದಲ್ಲಿ[೨] 'ಕಂನವಳ್ಳಿಯ ಪ್ರಭುಗಳುಂ ಎಂಟುಹಿಟ್ಟು ಪಂಚಮಠಸ್ಥಾನಮುಂ ಅಱುವತ್ತೊಕ್ಕಲುಂ ದೇಸಿ ಮುಂಮುರಿದಂಡರುಂ ಸ್ಥಲದ ಸೆಟ್ಟಿಯರುಂ ಸಮಸ್ತ-ವಶೇಪರುಂ ನೆರೆದು' ಎಂದಿರುವ ಉಲ್ಲೇಖಗಳನ್ನು ಗಮನಿಸಬಹುದು.

ಈ ಸಂಘಕ್ಕೆ ಗ್ರಾಮದ ಪ್ರಭು ಎಂದರೆ ಊರೊಡೆಯು ಇಲ್ಲವೆ ಊರ ಗೌಡ ಪ್ರಮುಖನಾಗಿರುತ್ತಿದ್ದನು. ಧಾರವಾಡ ತಾಲೂಕಿನ ಸಿದ್ದಾಪೂರ ಗ್ರಾಮಂದ ಶಾಸನ-ವೊಂದರಲ್ಲಿ[೩] 'ನಾಲುವರು ಪ್ರಭುಮುಖ್ಯ ಅಱುವತ್ತೊಕ್ಕಲುಂ' ಎಂದು ಉಲ್ಲೇಖ ಬರುತ್ತದೆ. ರೋಣದ ಒಂದು ಶಾಸನದಲ್ಲಿ[೪] 'ಊರೊಡೆಯುಮುಖ್ಯವಲ್ಲಿಯರು-ವತ್ತೊಕ್ಕಲುಂ' ಎಂಬ ಪ್ರಯೋಗ ಬರುತ್ತದೆ. ಗ್ರಾಮದಲ್ಲಿ ಹೆಗ್ಗಡೆಯಿದ್ದ ಪಕ್ಷದಲ್ಲಿ ಆತನೂ ಗೌಡನ ಜೊತೆ ಈ ಸಂಘದ ಪ್ರಮುಖನಾಗಿರುತ್ತಿದ್ದನು. ಹಾನಗಲ್ಲ ತಾಲೂಕಿನ

೧. S. I. I. XX; No. 32, p. 36, ll. 40-41; A. D. 1045.
೨. Ibid.; No. 140, p. 178, ll. 10-12; A. D. 1164.
೩. S. I. I. XV; No. 229, p. 281, ll. 28-29; A. D. 1158.
೪. E. I. XIX; p. 232, ll. 67-68; A. D. 1179.

ಬಾಳಂಬೀಡ ಗ್ರಾಮದ ಶಾಸನವೊಂದರಲ್ಲಿ[೫] 'ಹರಿಹರ ಗಾವುಂಡ ಹೆಗ್ಗಡೆ ಬೀರಣ್ಣ ಪ್ರಮುಖವಱುವತ್ತೊಕ್ಕಲ ಸನ್ನಿಧಾನದೊಳಂ' ಎಂದು ಉಲ್ಲೇಖ ಬರುತ್ತದೆ. ಸ್ತ್ರೀ ಊರ ಗೌಡಕಿ ಮಾಡುತ್ತಿದ್ದರೆ ಅವಳೇ ಈ ಸಂಘದ ಮುಖ್ಯಸ್ಥಳಾಗಿರುತ್ತಿದ್ದಳು. ಗದಗ ತಾಲೂಕಿನ ಕಣವಿ ಗ್ರಾಮದ ಶಾಸನದಲ್ಲಿ[೬] 'ಗೌಂಡಿ ಮುಖ್ಯವಾಗಿ ಅಱುವತ್ತೊಕ್ಕಲುಂ' ಎಂದು ಉಲ್ಲೇಖ ಬರುತ್ತದೆ.

ಗ್ರಾಮದ ಕಂದಾಯದ ಆಡಳಿತದಲ್ಲಿ ಈ ಸಂಘಕ್ಕೆ ಮಹತ್ವದ ಸ್ಥಾನವಿತ್ತು. ಕೆಲವು ಗ್ರಾಮಗಳಲ್ಲಿ ಊರ ಭೂಮಿಗಳನ್ನು ಹಾಗೂ ಭೂಮಿಗಳ ಮೇಲಿನ ತೆರಿಗೆಯನ್ನು ದಾನ ಮಾಡುವ ಹಕ್ಕು ಸ್ವತಂತ್ರವಾಗಿ ಅಥವಾ ಬೇರೆ ಸಂಘ–ಸಂಸ್ಥೆಗಳ ಸಂಗಡ ಈ ಸಂಘಕ್ಕೆ ಇದ್ದದ್ದು ಕಂಡುಬರುತ್ತದೆ. ಇಂಡಿ ತಾಲೂಕಿನ ಹಿರೇಬೇವಿನೂರ ಗ್ರಾಮದ ಶಾಸನದಲ್ಲಿ[೭] ಚಕ್ರವರ್ತಿ ಭಿಲ್ಲಮದೇವನ ಮಂತ್ರಿ ಮಾಯಿದೇವ ದಂಡನಾಯಕನು ತರ್ದವಾಡಿನಾಡಿನ ಮನ್ನೆಯನಾದ ಬೀರ ಬಂದರಸಂಗೆ ಬೆಸಸಲು, ಬೇವಿನೂರ ಗ್ರಾಮದ ಮಲ್ಲಗಾವುಂಡ, ಅಲ್ಲಿಯ ಎಂಟುಹಿಟ್ಟು[೮], ಸ್ಥಾನಮಾನ್ಯ[೯], ಸೇನಬೋವ ಹಾಗೂ ಅರುವತ್ತೊಕ್ಕಲು ಇಂತಿವರು ಕೂಡಿ ಬನಕಾರ ಚವುಂಡಯ್ಯಂಗೆ ಹನ್ನೆರಡು ಮತ್ತರು[೧೦] ಭೂಮಿಯನ್ನು ಹಾಗೂ ಒಂದು ಮನೆಯ ನಿವೇಶನವನ್ನು ದತ್ತಿ ಹಾಕಿ ಕೊಟ್ಟದ್ದನ್ನು ನಾವು ಕಾಣುತ್ತೇವೆ. ಕಲಘಟಗಿ ತಾಲೂಕಿನ ಹಸರಂಬಿ ಗ್ರಾಮದ ಶಾಸನದಲ್ಲಿ[೧೧] ಸೋವಗೌಡ ಹಾಗೂ ಅರುವತ್ತೊಕ್ಕಲು ಕೂಡಿ ಹಸರಂಬಿಯ ಸೋಮೇಶ್ವರ ದೇವರ ಗಂಧ, ಧೂಪ, ನೈವೇದ್ಯ, ಜೀರ್ಣೋದ್ಧಾರಾದಿಗಳಿಗೆ ತೆರಿಗೆ ಪರಿಹಾರ ಸಹಿತ ಭೂಮಿಯನ್ನು ದಾನ ನೀಡುತ್ತಾರೆ. ಬೈಲಹೊಂಗಲ ತಾಲೂಕಿನ ಕುಲವಳ್ಳಿ ಗ್ರಾಮದ ಶಾಸನದಲ್ಲಿ[೧೨] ಗ್ರಾಮದ ಮೇಲಾಳಿಕೆಯು, ಯುವರಾಜಕುಮಾರ ವಿಜಯಾದಿತ್ಯದೇವನ ಪಿರಿಯರಸಿ ಹಂಪಾದೇವಿಯರದಾಗಿದ್ದರೂ ಭೂಮಿಯನ್ನು ತೆರಿಗೆ ವಿನಾಯತಿ ಸಹಿತ ದತ್ತಿ ಕೊಡುವಾಗ, ಅವಳಿಗೆ ಅಲ್ಲಿಯ ಅರುವತ್ತೊಕ್ಕಲದ ಅನುಮತಿಯನ್ನು ತೆಗೆದುಕೊಳ್ಳಬೇಕಾಯಿತು. ಮಿರಜಿ ತಾಲೂಕಿನ ಖೇಡಗ ಗ್ರಾಮದ

---

೫. S. I. I. XX: No. 142, p. 181, ll. 36-37; A.D. 1165.

೬. S. I. I. XV; No. 121, P. 152, l. 14; A. D. 1173.

೭. S. I. I. XX; No. 175, P. 221, ll. 52-57; A. D. 1190.

೮. ಊರ ಗ್ರಾಮಾಧಿಕಾರಿಗಳು ಮೂವರು (ಗೌಡ, ಶಾನಭೋಗ, ತಳವಾರ) ಮತ್ತು ಪಂಚಕಾರುಕರುವೆಂದರೆ ಬಡಗಿ, ಕಮ್ಮಾರ, ಅಕ್ಕಸಾಲಿಗ, ಮಡಿವಳ ಹಾಗೂ ಕಂಚಕಾರ ಇವರ ಪ್ರಮುಖರು ಐವರು ಹೀಗೆ ಎಂಟು ಜನರ ಸಮಿತಿ.

೯. ಸ್ಥಳದ ಮಾನಕರಿ; ಮನ್ನಣೆ ಪಡೆದ ಗೌರವಸ್ಥರು.

೧೦. ಭೂಮಿಯನ್ನು ಅಳೆಯುವ ಪ್ರಮಾಣ; ಈಗಿನ ಎಕರೆ, ಹೆಕ್ಟೇರವಿದ್ದಂತೆ.

೧೧. ಸ್ವಂತ ಸಂಗ್ರಹ; A. D. 1170-71.

೧೨. ಅದೇ. ಸಾ. ೧೭–೨೦; A. D. 1162.

ಶಾಸನದಲ್ಲಿ[೧೩] ಅರುವತ್ತೊಕ್ಕಲುಂ ಸಂಘವು ಬೇರೆ ಸಂಘ-ಸಂಸ್ಥೆಗಳ ಜೊತೆಯಲ್ಲಿ ಅರುವಣವೆಂಬ ಕಂದಾಯವನ್ನು ದಾನ ಬಿಟ್ಟ ಉಲ್ಲೇಖ ಬರುತ್ತದೆ. ಆದರೆ ಕೆಲವು ಗ್ರಾಮಗಳಲ್ಲಿ ದೇವಸ್ಥಾನಕ್ಕೆ ಭೂದಾನ ಮಾಡುವಾಗ ಅಲ್ಲಿಯ ಅರುವತ್ತೊಕ್ಕಲುಂ ಸಂಘಕ್ಕೆ ಆ ಸ್ಥಳದ ಸಾಮಂತ ಅರಸನಿಗೆ ಅರಿಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಗದಗ ತಾಲೂಕಿನ ಎಲಿಶಿರೂರ ಗ್ರಾಮದ ಶಾಸನವೊಂದರಲ್ಲಿ[೧೪] ಅಲ್ಲಿಯ ಅರುವತ್ತೊಕ್ಕಲುಂ ಮತ್ತು ಎಂಬರ್ಗಾವುಂಡುಗಳುಂ ಮೂಲಸ್ಥಾನದೇವರಿಗೆ ಭೂಮಿಯನ್ನು ದಾನಮಾಡಲು ಮಹಾಸಾಮಂತ ಶೋಭನರಸನಿಗೆ ಬಿನ್ನಪಂಗೆಯ್ದರೆಂಬ ಉಲ್ಲೇಖ ಬರುತ್ತದೆ.

ಭೂಮಿಯ ಹುಟ್ಟುವಳಿ ಮೇಲಿನ ಬಣ್ಣಿಗೆಗೊಳಗ, ತಳಸಾರಿಗೆ, ಬಾಯಿವೆಣ್ಣೆ, ಮೇಟಿಗೊಳಗ ಮುಂತಾದ ಕೆಲವು ಆದಾಯಗಳನ್ನು ದಾನ ಮಾಡುವ ಅಧಿಕಾರ ಈ ಅರುವತ್ತೊಕ್ಕಲು ಸಂಘಕ್ಕೆ ಇತ್ತು. ಕಲಘಟಗಿ ತಾಲೂಕಿನ ಸಿದ್ಧನಹಳ್ಳಿ ಶಾಸನದಲ್ಲಿ[೧೫] 'ಕೇತಗಾವುಂಡಪ್ರಮುಖವರುವತ್ತೊಕ್ಕಲುಂ' ಧಾನ್ಯವರ್ಗಗಳಲ್ಲಿ ಬಣ್ಣಿಗೆಗೊಳಗವನ್ನು ದೇವರಿಗೆ ಬಿಟ್ಟುಕೊಟ್ಟರೆಂದು ಹೇಳಲಾಗಿದೆ. ಬೈಲಹೊಂಗಲ ತಾಲೂಕಿನ ಬೈಲೂರ ಗ್ರಾಮದ ಶಾಸನದಲ್ಲಿ[೧೬] ಮುಂಮುರಿದಂಡಗಳುಂ[೧೭] ನಾಲ್ಕು ಪಟ್ಟಣಗಳ ಸೆಟ್ಟಿಗುತ್ತರುಂ[೧೮] ಹಾಗೂ ಅರುವತ್ತೊಕ್ಕಲು ಕೂಡಿ ಹೆಮ್ಮೇಶ್ವರದೇವರ ಪುರದ ತಳಸಾರಿಗೆ ಸುಂಕವನ್ನು ದಾನಮಾಡಿದ ಉಲ್ಲೇಖ ಬರುತ್ತದೆ. ಹಲ್ಯಾಳ ತಾಲೂಕಿನ ತೇರಗಾಂವ ಶಾಸನದಲ್ಲಿ[೧೯] ದೀಪಾವಳಿಯ ಅಮವಾಸ್ಯೆಯ ದಿನ ಅಲ್ಲಿಯ ಮೂಲಸ್ಥಾನದೇವರಿಗೆ ಮತ್ತು ಲಖಣೇಶ್ವರದೇವರಿಗೆ ಊರೊಡೆಯ, ಅರುವತ್ತೊಕ್ಕಲುಂ, ಎಂಟುಂಹಿಟ್ಟು, ಪಂಚಮಠ[೨೦] ಪ್ರಮುಖವಾಗಿ ದೀಪಾವಳಿಪರ್ವದ ಒಂದು ದಿವಸ ಸೊಡರೆಣ್ಣೆಗೆ ತಳಸಾರಿಗೆ, ಬಾಯ್ವೆಣ್ಣೆ ಸುಂಕಗಳನ್ನು ದಾನಮಾಡಿ ಕೊಟ್ಟರು ಎಂದು ಹೇಳಲಾಗಿದೆ.

ಪ್ರಜೆಗಳು ಸಾಮೂಹಿಕವಾಗಿ ಮನೆಗಳನ್ನು ಕಟ್ಟಿಸಿ ಅವುಗಳನ್ನು ನಿರ್ದಿಷ್ಟಪಡಿಸಿ ಹಂಚಿದ ಮೇಲೆ, ನಿರ್ದಿಷ್ಟಪಡಿಸಿದವರಾಗಲಿ ಬೇರೆಯವರಾಗಲಿ ಆ ಮನೆಗಳಲ್ಲಿ ವಾಸಮಾಡುವುದಕ್ಕಾಗಿ ನಿಯಮಗಳನ್ನು ಹಾಕಿಕೊಡುವ ವಿಷಯದಲ್ಲಿ ಬೇರೆಯವರ

೧೩. ಸ್ವಂತ ಸಂಗ್ರಹ; ಸಾ. ೧೭-೨೦; A. D. 1222.

೧೪. S. I. I. XI, p. I; No. 50, p. 38, l. 17; A. D. 1005.

೧೫. ಸ್ವಂತ ಸಂಗ್ರಹ; ll. 20-22; A. D. 1159.

೧೬. ಅದೇ; ll. 55-57; A. D. 1168.

೧೭. ವ್ಯಾಪಾರಸ್ಥರ ಸಂಘದ ಒಂದು ಘಟಕ.

೧೮. ಪಟ್ಟಣದ ಸೆಟ್ಟಿಗಳ ಪ್ರಮುಖ.

೧೯. ಸ್ವಂತ ಸಂಗ್ರಹ; ll. 4-10; A. D. 1217.

೨೦. ಗ್ರಾಮದಲ್ಲಿಯ ಹರಿ, ಹರ, ಬ್ರಹ್ಮ, ಜಿನ ಮತ್ತು ಬುದ್ಧ ಈ ಐದು ದೇವರ ಮಠಗಳ ಮುಖ್ಯಸ್ಥರು ಇಲ್ಲವೆ ಅವರ ಪ್ರತಿನಿಧಿಗಳ ಸಮಿತಿ.

ಜೊತೆ ಅರುವತ್ತೊಕ್ಕಲು ಸಂಘಕ್ಕೆ ಅಧಿಕಾರವಿದ್ದುದನ್ನು ನಾವು ಲಕ್ಷ್ಮೇಶ್ವರ ಗ್ರಾಮದ ಶಾಸನವೊಂದರಲ್ಲಿ[೨೧] ಕಾಣುತ್ತೇವೆ. ಈ ಶಾಸನವು ಹೀಗೆ ಹೇಳುತ್ತದೆ: "ಶ್ರೀ ಮಹಾಸ್ಥಾನಂ ಗೊಗ್ಗಿಯಬಸದಿಯಾಚಾರ್ಯ್ಯರಿಂದ್ರಕೀರ್ತ್ತಿಪಂಡಿತರುಮಾವರ ಹೆಗ್ಗಡೆ ಮಲ್ಲಿಯಣ್ಣನು ಮುಖ್ಯವಾಗಿ ಸಮಸ್ತ ದೇವಪುತ್ರಕರುಂ[೨೨] ಲೊಕ್ಕಿಸೆಟ್ಟಿ ಮೊದಲಾಗಿ ತಳಮುಮಱುವತ್ತೊಕ್ಕಲುಮಿರ್ದ್ದು ಮಾಡಿದ ವ್ಯವಸ್ಥೆಯೆನ್ತೆಂದಡೆ ಪ್ರಜೆಗಳು....ಮನೆಯಂ ಮಾಡಿಸಿದೊಡಂ ಮನೆಸಾಮ್ಯದವರೆಮ್ಮ ಮನೆಯೆಂದು ಮೂಱು ವರ್ಷದೊಳಗೆ ಬಂದರಪ್ಪಡವರ ಕಯ್ಯಲು ಮಾಡಿಸಿದುಪಕ್ಷಯಕ್ಕಿಮ್ಮಡಿಯಂ[೨೩] ಕೊಣ್ಡು ಬಿಡುವರಲ್ಲಿಂ ಮೇಲೆ ಮಾಡಿಸಿದವರ್ಗ್ಗೆ ಮನೆ ಪರಿಚ್ಛೇದವಂಗಡಿ ಮನೆ ಸಾಮ್ಯದವರ್ತ್ತಾವು ಮಾಡದೆಯುಂ ಪೆಱರ ಮಾಡಲೀಯ್ಯದೆಯುಮಿರ್ದ್ದರಪ್ಪ-ಡಂಗಡಿಯಕ್ಕೆ ಮನೆಯುಕ್ಕೆ ಬೀಳ್ಪಿದಾಯಮಂ ತಿಱುವರು ಮೂಱು ವರ್ಷದಿಂ ಬಳಿಕ್ಕೊಡೆಯರು ಬಂದು ಕಾಡಿದವರಪ್ಪಡೆ ಶ್ರೀ ಬಲ್ಲವರಸರಾಣೆ ಪಿರಿಯರಸಿಯರಾಣೆ." ಮನೆಗಳಾಗಲಿ ಮನೆಗಳ ನಿವೇಶನವಾಗಲಿ, ಈಗಿನಂತೆ ಆ ಕಾಲದಲ್ಲಾದರೂ ಕಂದಾಯ ಆಡಳಿತದ ವಿಷಯವಾಗಿದ್ದವು.

ಸಂಘದ ಸದಸ್ಯರ ಮಾಲಕಿಯ ಸೊತ್ತನ್ನು ಪ್ರತಿ ಸದಸ್ಯನಿಗೆ ಅನ್ವಯಿಸುವಂತೆ ದಾನ ಕೊಡುವ ಪಕ್ಷದಲ್ಲಿಯೂ ಸಂಘವು ಕಾಣಿಸಿಕೊಳ್ಳುತ್ತದೆ. ಗದಗ ತಾಲೂಕಿನ ಹರ್ತಿ ಗ್ರಾಮದ ಶಾಸನದಲ್ಲಿ[೨೪] "ಅಱುವತ್ತೊಕ್ಕಲುಂ ಮುಖ್ಯವಾಗಿ ಸಿರಿಯಮ-ಗವುಡನು .... ದೇವರ ಪವಿತ್ರಾರೋಪಣಕೆ[೨೫] ಮೊಕಲಲಿ ಹೊಱಿವೊಂದು ಮೊಕುಳ ಜೋಳ ತೋಟಕೆ ಹಾಗ ಯರಡು ನೂಱಡಕೆ .... ಬಿಟ್ಟರು" ಎಂದು ಉಲ್ಲೇಖ ಬರುತ್ತದೆ. ಎಲಿಶಿರೂರ ಗ್ರಾಮದ ಮತ್ತೊಂದು ಶಾಸನದಲ್ಲಿ[೨೬] ಅರುವತ್ತೊಕ್ಕಲು ಜೋಗೇಶ್ವರದೇವರಿಗೆ ಬಿಟ್ಟ ಧರ್ಮ 'ಮೇಂಟಿಯಲು ಪಣವೊಂದು ತೋಂಟದಲು ಪಣವೊಂದು' ಎಂಬ ಉಲ್ಲೇಖ ಬರುತ್ತದೆ. ಸಂಘವು ಈ ದಾನಗಳನ್ನು ಕೊಟ್ಟಿದ್ದರಿಂದ ಸಂಘದ ಎಲ್ಲ ಸದಸ್ಯರಿಗೆ ಆ ದಾನವನ್ನು ಪಾಲಿಸುವುದು ನೈತಿಕಕರ್ತವ್ಯವಾಗುತ್ತಿತ್ತು.

ದಾನಕ್ಕೆ ಸಾರ್ವಜನಿಕ ಸ್ವರೂಪ ಪಾವಿತ್ರ್ಯ ಹಾಗೂ ಸ್ಥೈರ್ಯ ಬರುವ ಉದ್ದೇಶದಿಂದ ದಾನ ಕೊಡುವಾಗ ಅವುಗಳನ್ನು ಪ್ರತಿಷ್ಠಿತ ವ್ಯಕ್ತಿ ಮತ್ತು ಪ್ರಮುಖ ಸಂಘ-ಸಂಸ್ಥೆ

---

೨೧. S. I. I. XX; No. 102, pp. 130-31, ll. 2-11; A. D. 1132.

೨೨. ದೇವರ ಸೇವಕರು.

೨೩. ಉಪಕ್ಷಯ = ವೆಚ್ಚ.

೨೪. S. I. I. XV; No. 176, p. 219, ll. 16-21; A. D. 1236.

೨೫. ಶ್ರಾವಣ ಮಾಸದಲ್ಲಿಯ ನೂಲಹುಣ್ಣಿವೆಯ ಉತ್ಸವ.

೨೬. S. I. I. XI, P. II; No. 158, p. 202, ll. 17-18; A. D. 1109.

ಗಳ ಸಮ್ಮುಖದಲ್ಲಿ ಕೊಡುವುದೊಂದು ಪದ್ಧತಿಯಾಗಿತ್ತು. ಖಾನಾಪೂರ ತಾಲೂಕಿನ ಗೋಳೀಹಳ್ಳಿ ಗ್ರಾಮದ ಶಾಸನದಲ್ಲಿ[೨೭] ಅಲ್ಲಿಯ ಹೆಮ್ಮೇಶ್ವರ ದೇವಾಲಯಕ್ಕೆ ಅಯ್ಯಾವಳೆಯ ಅಯ್ನೂರಸ್ವಾಮಿಗಳು[೨೮] ಮತ್ತು ಕೆಲವು ವರ್ತಕರ ಸಂಘಗಳಿಗೆ ಸಂಬಂಧಿಸಿದ ದಾನದಲ್ಲಿ ಅವುಗಳ ಜೊತೆಯಲ್ಲಿ ಅರುವತ್ತೊಕ್ಕಲದ ಹೆಸರೂ ಬಂದಿದೆ. ಅರುವತ್ತೊಕ್ಕಲದ ಸನ್ನಿಧಾನದಲ್ಲಿ ದಾನ ಬಿಟ್ಟ ಕಾರಣ, ಈ ಸಂಘದ ಹೆಸರನ್ನು ಅವುಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಮೇಲೆ ಉದ್ಧೃತಮಾಡಿದ ಬಾಳಂಬೀಡ ಶಾಸನ-ದಲ್ಲಿ[೨೯] 'ಹರಿಹರಗಾವುಂಡ ಹೆಗ್ಗಡೆ ಬೀರಣ ಪ್ರಮುಖವಱುವತ್ತೊಕ್ಕಲ ಸನ್ನಿಧಾನ-ದೊಳು' ಎಂಬ ಉಲ್ಲೇಖ ಬಂದಿದ್ದು ನೋಡಿದ್ದೇವೆ.

ನೀಡಿದ ದಾನವನ್ನು ಕಟ್ಟುನಿಟ್ಟಾಗಿ ನಡೆಸಿಕೊಳ್ಳುವುದನ್ನು ನೋಡಿ ಅದನ್ನು ಸಂರಕ್ಷಿಸುವ ಹೊಣೆಯನ್ನು ಬೇರೆ ಸಂಘ–ಸಂಸ್ಥೆಗಳೊಡನೆ ಕೆಲವು ಸಲ ಈ ಅರುವತ್ತೊಕ್ಕಲು ಸಂಘಕ್ಕೆ ಒಪ್ಪಿಸಲಾಗುತ್ತಿತ್ತು. ಕಲಘಟಗಿ ತಾಲೂಕಿನ ಸಂಗಮೇಶ್ವರ ಗ್ರಾಮದ ಶಾಸನವೊಂದರಲ್ಲಿ[೩೦] ಮಾರಸಿಂಗನ ಮಗ ನಾಗಣ್ಣನು ಕಟ್ಟಿಸಿದ ಶಿವಾಲಯಕ್ಕೆ ಬಿಟ್ಟ ದಾನವನ್ನು ಊರ ಗಾವುಂಡ ಹಾಗೂ ಅರುವತ್ತೊಕ್ಕಲು ರಕ್ಷಿಸುವರೆಂದು ಹೇಳ-ಲಾಗಿದೆ. ಹುಬ್ಬಳ್ಳಿ ತಾಲೂಕಿನ ಅಮರಗೊಳ ಗ್ರಾಮದ ಶಾಸನದಲ್ಲಿ[೩೧] ಕೇಶವ ಮತ್ತು ಭೈರವದೇವರ ದೇವಾಲಯಗಳಿಗೆ ನೀಡಿದ ದತ್ತಿಯನ್ನು ಗಾವುಂಡರು ಹಾಗೂ ಅರುವತ್ತೊಕ್ಕಲು ಪ್ರತಿಪಾಳಿಸುವರೆಂದು ಉಲ್ಲೇಖ ಬರುತ್ತದೆ. ಅದೇ ಪ್ರಕಾರ ಬದಾಮಿ ತಾಲೂಕಿನ ಹೊಸೂರ ಗ್ರಾಮದ ಶಾಸನದಲ್ಲಿ[೩೨] ಅಲ್ಲಿಯ ಮಲ್ಲಿಕಾರ್ಜುನ ದೇವಾಲಯಕ್ಕೆ ಬಿಟ್ಟ ಭೂದಾನವನ್ನು ಪ್ರತಿಪಾಳಿಸುವ ಹೊಣೆಯನ್ನು ಎಂಟುಹಿಟ್ಟು ಮತ್ತು ಬೇರೆ ಸಂಘಗಳ ಜೊತೆಗೆ ಅರುವತ್ತೊಕ್ಕಲ ಮೇಲೆ ಹಾಕಿದ್ದನ್ನು ನಾವು ಕಾಣುತ್ತೇವೆ.

ಶಿವಮೊಗ್ಗ ತಾಲೂಕಿನ ಕೂಡ್ಲಿ ಗ್ರಾಮದ ಶಾಸನದಲ್ಲಿ[೩೩] 'ಅರುವತ್ತುಗೌಂಡುಂ' ಎಂದು ಉಲ್ಲೇಖ ಬರುತ್ತದೆ. ಅದೇ ತಾಲೂಕಿನ ಕುಸ್ಕೂರು ಅಗ್ರಹಾರದ ಶಾಸನ ದಲ್ಲಿಯೂ[೩೪] 'ಅಱುವತ್ತು ಗವುಡು' ಎಂದು ಉಲ್ಲೇಖ ಬರುತ್ತದೆ. ಈ ಸ್ಥಳಗಳಲ್ಲಿ

---

೨೭. J. B. B. R. A. S., IX; p. 299, l. 44; A. D. 1163.
೨೮. ವ್ಯಾಪಾರಸ್ಥರ ಮಧ್ಯವರ್ತಿ ಸಂಘ.
೨೯. ಅಡಿಟಿಪ್ಪಣಿ ೫ ನೋಡಿ.
೩೦. ಸ್ವಂತ ಸಂಗ್ರಹ; A. D. 1082.
೩೧. ಅದೇ; ಸಾ. 31; A. D. 1119.
೩೨. S. I. I. XV; No. 236, p. 293, l. 31; A. D. 1155.
೩೩. E. C. VII; sh., 69, p. 72. l. 24; A. D. 1320.
೩೪. Ibid; sh., 19, p. 24, ll. 10-15; A. D. 1309.

ಗೌಂಡು ಇಲ್ಲವೆ ಗವುಡು ಶಬ್ದಕ್ಕೆ 'ಒಕ್ಕಲಿಗ, ರೈತ' ಎಂಬ ಅರ್ಥಗಳಿವೆ. ಬಿ. ಎಲ್. ರೈಸ್ ಅವರು ಈ ಶಬ್ದಸಮುಚ್ಚಯಗಳಿಗೆ 'The Sixty Farmers' ಎಂದು ಭಾಷಾಂತರ ಮಾಡಿರುತ್ತಾರೆ. ಆದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿಯ 'ಅರುವತ್ತು ಗೌಂಡು' ಮತ್ತು 'ಅಱುವತ್ತು ಗವುಡು' ಎಂಬ ಸಂಘಗಳು ಅರುವತ್ತೊಕ್ಕಲು ಸಂಘಕ್ಕೆ ಸಮಾನಾರ್ಥಕವಾಗಿವೆ. ಕೆಲವು ಶಾಸನಗಳಲ್ಲಿ 'ಒಕ್ಕಲ ಮಕ್ಕಳು' ಎಂಬ ಪ್ರಯೋಗಗಳು ಬರುತ್ತವೆ. ಉದಾಹರಣಾರ್ಥವಾಗಿ, ನಾಂದೇಡ ಜಿಲ್ಲೆಯ ದೇಗಳೂರ ತಾಲೂಕಿನ ಏರಗಿ ಗ್ರಾಮದ ಶಾಸನದಲ್ಲಿ[೩೫] 'ಏರಿಗೆ, ತಡಗೂರು, ಸಿರಿಮಲಿಗೆ, ಬವರಗಾವೆಯ ಮೂಲಿಗ ಪ್ರಭುಗಳುಂ ನಖರಮುಂ ಒಕ್ಕಲಮಕ್ಕಳು ಹೇಱುವ ಸೆಟ್ಟಿಯರುಂ ಎಂಟು ಹಿಟ್ಟುವೊಳಗಾಗಿಸ ಮಸ್ತ ಪ್ರಜೆಗಳು' ಎಂದೂ, ಚಿತ್ರದುರ್ಗ ತಾಲೂಕಿನ ಭೀಮಸಮುದ್ರ ಗ್ರಾಮದ ಶಾಸನದಲ್ಲಿ[೩೬] 'ಅಲ್ಲಿಯ ಒಕಲ ಮಕಳ ಸನ್ನಿಧಾನದೊಳ್' ಎಂದೂ ಉಲ್ಲೇಖಗಳು ಬರುತ್ತವೆ. ಈ ಒಕ್ಕಲಮಕ್ಕಳ ಶಬ್ದವಾದರೂ ಅರುವತ್ತೊಕ್ಕಲು ಶಬ್ದಕ್ಕೆ ಸಮಾನವಾಗಿರುತ್ತದೆ. ಹುಬ್ಬಳ್ಳಿ ತಾಲೂಕಿನ ನೂಲವಿ ಗ್ರಾಮದ ಶಾಸನದಲ್ಲಿ[೩೭] 'ಹನ್ನಿರ್ವ್ವರ್ಗ್ಗಾವುಂಡುಗಳು ಅಱುವತ್ತೊಕ್ಕಲಮಕ್ಕಳುಂ' ಎಂಬ ಉಲ್ಲೇಖ ಬರುತ್ತದೆ.

ಗ್ರಾಮದಲ್ಲಿ ಕಾಯಿಪಲ್ಲೆ ಬೆಳೆಸುವ ರೈತರೂ ಈ ಅರುವತ್ತೊಕ್ಕಲು ಸಂಘದಲ್ಲಿ ಸಮಾವೇಶವಾಗುತ್ತಿದ್ದರು, ಇವರಿಗೆ ಬಾಡಸರೊಕ್ಕಲು ಎಂದು ಹೆಸರು. ಹೀಗೆ ಧಾರವಾಡ ತಾಲೂಕಿನ ಅಮ್ಮಿನಭಾವಿಯ ಶಾಸನವೊಂದರಲ್ಲಿ[೩೮] 'ಬಾಡಸರೊಕ್ಕಲು ಮುಖ್ಯವಾಗಿ ಅಱುವತ್ತೊಕ್ಕಲುಂ' ಎಂದು ಉಲ್ಲೇಖ ಬರುತ್ತದೆ. 'ಬಾಡಸ ದೇವಣ್ಣ' ಎಂಬೊಬ್ಬ ಕಾಯಿಪಲ್ಲೆ ತೋಟದವನ ಹೆಸರೂ ಈ ಶಾಸನದಲ್ಲಿ ಬರುತ್ತದೆ. ತೋಟಿಗರೆಂದು ಈ ಬಾಡಸರೊಕ್ಕಲರಿಗೆ ಕರೆಯುತ್ತಿದ್ದರು. ಹುಬ್ಬಳ್ಳಿ ತಾಲೂಕಿನ ನೂಲವಿ ಗ್ರಾಮದ ಶಾಸನದಲ್ಲಿ[೩೯] 'ಬಾಡುಕಾಯಿ ತೋಟದೊಳು ಸೌತೆಯಕಾಯಿ ೫ ಬದನೆಕಾಯಿ ೫ ಹೀರೆಕಾಯಿ ೫ ಮಂ ದಿನಂಪ್ರತಿ ನಿವೇದ್ಯಕ್ಕೆ ತೋಟಿಗರು ಕೊಟ್ಟರ್' ಎಂಬ ಉಲ್ಲೇಖ ಬರುತ್ತದೆ. ಕೆಲವು ರೈತರು ಎಲೆಯತೋಟವನ್ನು ತಮ್ಮ ಇತರ ವ್ಯವಸಾಯದೊಂದಿಗೆ ಮಾಡುತ್ತಿದ್ದರೆ, ಅವರಿಗೂ ತೋಟಿಗರೆಂದು ಕರೆದು ಈ ಅರುವತ್ತೊಕ್ಕಲದಲ್ಲಿ ಸೇರ್ಪಡೆ ಮಾಡಿಕೊಳ್ಳುತ್ತಿದ್ದರು. ಹೀಗೆ ಹುಬ್ಬಳ್ಳಿ ತಾಲೂಕಿನ ಕುರ್ಡಿಕೇರಿ ಗ್ರಾಮದ ಶಾಸನವೊಂದರಲ್ಲಿ[೪೦] 'ಅಱುವತ್ತೊಕ್ಕಲುಂ ತಮ್ಮ ತೋಟದಲು

೩೫. Inscriptions from Nanded District; No. 31. p. 59, ll. 12-14; A. D. 1134.
೩೬. E. C. XI; cd., 47, p. 31, l. 22; A. D. 1067.
೩೭. ಸ್ವಂತ ಸಂಗ್ರಹ; ll. 42-43; A. D. 1237.
೩೮. S. I. I. XI, P-II; No. 191, p. 249, ll. 29-31; A. D.1112.
೩೯. ಸ್ವಂತ ಸಂಗ್ರಹ (ಅಡಿಟಿಪ್ಪಣಿ 32); ll. 38-39; A. D. 1201.
೪೦. ಅದೇ; ll. 18-19; A. D. 1126.

ಕೊಯ್ಲಲು ಸಾಯಿರೆಲೆಯುಂ ಕೊಟ್ಟರು' ಎಂಬ ಉಲ್ಲೇಖ ಬರುತ್ತದೆ. ವೀಳೆದೆಲೆಯ ತೋಟಗಾರರ 'ಐನೂರನಾಲ್ವರೆಲೆಯಬೋಜಂಗರು' ಎಂದು ಸ್ವತಂತ್ರವಾದ ಒಂದು ಸಂಘವಿತ್ತು. ಎಲೆಯ ತೋಟದ ವ್ಯವಸಾಯವನ್ನು ಮುಖ್ಯವಾಗಿಟ್ಟುಕೊಂಡವರು ಈ ಸಂಘದಲ್ಲಿ ಸೇರ್ಪಡೆಯಾಗುತ್ತಿದ್ದರು. ಆದರೆ ಧಾನ್ಯ ಬೆಳೆಸುವ ವ್ಯವಸಾಯವನ್ನು ಪ್ರಾಮುಖ್ಯವಾಗಿ ಮಾಡಿ, ಗೌಣವಾಗಿ ಎಲೆಯ ತೋಟವನ್ನು ಮಾಡುವ ಒಕ್ಕಲುಗಳು ಅರುವತ್ತೊಕ್ಕಲು ಸಂಘದಲ್ಲಿ ಸೇರ್ಪಡೆಹೊಂದುತ್ತಿದ್ದರು.

ಹೂವಿನಗಿಡಗಳ ವ್ಯವಸಾಯ ಮಾಡುವ ರೈತರ ಸಂಘಕ್ಕೆ 'ಮಾಲಗಾಱ ಅಱುವತ್ತೊಕ್ಕಲು' ಎಂದು ಹೆಸರುವಿದ್ದುದನ್ನು ನಾವು ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರ ಗ್ರಾಮದ ಶಾಸನಗಳಲ್ಲಿ ಕಾಣುತ್ತೇವೆ. ಈ ಸಂಘವು ನಾಗಭೂಷಣದೇವರಿಗೆ ಭತ್ತವನ್ನು ಮತ್ತು ಮೇಳೇಶ್ವರದೇವರಿಗೆ ಹೂವಿನಗಿಡಗಳನ್ನು ಬಿಟ್ಟುಕೊಟ್ಟಿತೆಂದು ಈ ಶಾಸನಗಳಲ್ಲಿ ಹೇಳಲಾಗಿದೆ.[೪೧]

ಇನ್ನು, ಈ ಅರುವತ್ತೊಕ್ಕಲು ಸಂಘದ ಬಗ್ಗೆ ಶಾಸನಗಳಲ್ಲಿ ಕಂಡುಬರುವ ಕೆಲವು ವರ್ಣನೆಗಳನ್ನು ನೋಡೋಣ. ಗದಗ ತಾಲೂಕಿನ ಹೊಂಬಳ ಗ್ರಾಮದ ಶಾಸನದಲ್ಲಿ[೪೨] 'ಸರ್ವ್ವಜನೋಪಕಾರವಪ್ಪ ವ್ಯವಸಾಯಿಗಳೆನಿಸಿದ ಪೊಂಬುಳ್ಚದಱುವತ್ತೊಕ್ಕಲುಂ' ಎಂದು ವರ್ಣನೆ ಬರುತ್ತದೆ. ರೈತರು ನಿಜವಾಗಿ ಸರ್ವಜನೋಪಕಾರಿಯಾಗಿರುತ್ತಾರೆ. ಹಾನಗಲ್ಲ ತಾಲೂಕಿನ ಬಾಳೂರ ಶಾಸನದಲ್ಲಿ[೪೩]

ಈ ವಸುಮತಿಯೊಳ್ಪಿ ಬುಧಜ
ನಾವಳಿಗೆ ನಟಂಗೆ ನಗ್ನಭಗ್ನಾಳಿಗೆ ಕ
ಳ್ಪಾವನಿಜರೆನಿಸಿ ನೆಗಟ್ದ
ರ್ಕ್ಕೀವಳಮೆ ಪರಹಿತಾರ್ತ್ಥರಱುವತ್ತೊಕ್ಕಲ್ ॥

ಎಂದು ಈ ಸಂಘದ ವರ್ಣನೆ ಬರುತ್ತದೆ. ಕಲಘಟಗಿ ತಾಲೂಕಿನ ಕಲಕುಂಡಿ ಗ್ರಾಮದ ಶಾಸನದಲ್ಲಿ[೪೪] ಬರುವ ವರ್ಣನೆ ಹೀಗೆ ಇದೆ :

೪೧. A. R. I. E. 1958-59; Nos. 664-666; A.D. 1144,

೪೨. S. I. I. XV; No. 273, p. 104, l. 65; A. D. 1189.

೪೩. K. I. V; No. 20, p. 71, ll. 28-29; A. D. 1125.

೪೪. ಸ್ವಂತ ಸಂಗ್ರಹ; ll. 49-51; A. D.1150.

ಸಕಳಾಚಾರವಿಚಾರಚಾರು ∪∪ – – ಧಾರರನ್ಯೋನ್ಯರ
ಕ್ಷಕರತ್ಯಂತವಿಶುದ್ಧಧರ್ಮ್ಮನಿರತತ್ರೈರ್ವಣ್ಣ್ಯಶುಶ್ರೂಷಕ
ಸ್ಸರ್ವ್ವಕೃತೋಪಾರ್ಜ್ಜನರುದ್ಧಧಾನ್ಯಧನಸಂಪನ್ನರ್ಕ್ಕಳಾಚಾರಸಾ
ತ್ವಿಕಸಾರರ್ಸ್ಸಲೆ ಕಲ್ಲುಕಂಡಿಯಱುವತ್ತೊಕ್ಕಲ್ಗಳೇಂ ಧನ್ಯರೋ ॥

ಹೀಗೆ ಅರುವತ್ತೊಕ್ಕಲುಸಂಘದ ಸ್ವರೂಪ, ಕಾರ್ಯವ್ಯಾಪ್ತಿ, ಅಧಿಕಾರವ್ಯಾಪ್ತಿ, ಸಾಮಾಜಿಕ ಗೌರವ ಸ್ಥಾನ, ಸಾಮೂಹಿಕ ಹೊಣೆಗಾರಿಕೆ ಮುಂತಾದ ವಿಷಯಗಳ ಮೇಲೆ ಶಾಸನಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ.

■ ■

ಆಗಸ್ಟ್ ಶ್ಲೀಷರ್
(೧೮೨೧–೧೮೬೮)

ಲಿಂಗದೇವರು ಹಳೆಮನೆ

ಆಗಸ್ಟ್ ಶ್ಲೀಷರ್, ಜರ್ಮನ್ ದೇಶದ ಶ್ರೇಷ್ಠ ಭಾಷಾವಿಜ್ಞಾನಿ. ಇವನು ಜರ್ಮನಿಯ ಮೆಯ್‌ನಿಂಗೀನ್ ಎಂಬಲ್ಲಿ ೧೮೨೧ ನೆಯ ಇಸವಿ ಫೆಬ್ರುವರಿ ೧೯ ರಂದು ಜನಿಸಿದ. ಇವನ ತಂದೆಯ ಹೆಸರು ಡಾ. ಜಾನ್ ಗಾಟ್ಲಿಫ್. ಶ್ಲೀಷರ್ ಕೋಬರ್ಗ್‌ನಲ್ಲಿ ಲೇಪಿಗ್ ಶಾಲೆಯಲ್ಲಿ ವ್ಯಾಕರಣವನ್ನು ಅಧ್ಯಯನ ಮಾಡಿದ. ಅನಂತರ ಟ್ಯುಬಿಂಗರ್‌ನಲ್ಲಿ ತತ್ತ್ವಶಾಸ್ತ್ರವನ್ನು ಕುರಿತು ನಾಲ್ಕು ಸೆಮೆಸ್ಟರ್‌ಗಳನ್ನು ಅಭ್ಯಾಸ ಮಾಡಿದ. ಅಲ್ಲಿಯೇ ಎವಾಲ್ಡ್ ಎನ್ನುವವರ ಹತ್ತಿರ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳನ್ನು ಕಲಿತನು. ಅನಂತರ ತತ್ತ್ವಶಾಸ್ತ್ರದ ಹೆಚ್ಚಿನ ಅಧ್ಯಯನಕ್ಕಾಗಿ ಬಾನ್‌ಗೆ ತೆರಳಿದ.

ಶ್ಲೀಷರ್ ಅನೇಕ ಕ್ಷೇತ್ರಗಳಲ್ಲಿ ಅತ್ಯಂತ ಮೇಧಾವಿ ವಿದ್ವಾಂಸನಾದುದರಿಂದ ಅವುಗಳೆಲ್ಲದರ ಪ್ರಭಾವವೂ ಅವನ ಭಾಷಾವಿಜ್ಞಾನ ಅಧ್ಯಯನದ ಮೇಲಾಗಿರುವುದನ್ನು ಕಾಣಬಹುದು. ಇವನಿಗೆ ಬಹಳ ವಿಷಯಗಳಲ್ಲಿ ಆಸಕ್ತಿ ಇದ್ದರೂ ಇವನ ಗಮನವನ್ನು ಸೆಳೆದ ಮುಖ್ಯ ವಿಷಯಗಳೆಂದರೆ ತತ್ತ್ವಶಾಸ್ತ್ರ, ಜೈವಿಕ ವಿಜ್ಞಾನ ಮತ್ತು ಭಾಷಾವಿಜ್ಞಾನ. ಟ್ಯುಬಿಂಗರ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಹಾನ್ ತತ್ತ್ವಜ್ಞಾನಿಯಾದ ಹೆಗೆಲ್‌ನ ಪ್ರಭಾವಕ್ಕೊಳಗಾಗಿ ಅವನ ಅತ್ಯಂತ ನಮ್ರ ವಿದ್ಯಾರ್ಥಿಯಾದ. ಅನಂತರದ ಇವನ ಜೀವಿತಕಾಲದಲ್ಲಿ ಡಾರ್ವಿನ್‌ನ ಸಿದ್ಧಾಂತದಿಂದ ಪ್ರಬಲವಾಗಿ ಪ್ರಭಾವಿತನಾದರೂ ತನ್ನ ಜೀವನದ ಉತ್ತರಾರ್ಧದಲ್ಲಿ ಹೆಗೆಲ್‌ನ ಐತಿಹಾಸಿಕ ಸಿದ್ಧಾಂತ ಮತ್ತು ಡಾರ್ವಿನ್‌ನ ನೈಸರ್ಗಿಕ ಆಯ್ಕೆಗಳನ್ನು ಏಕೀಕರಿಸಿ, ಭಾಷೆಗೆ ತರ್ಕಬದ್ಧವಾದ ಮತ್ತು ಪ್ರಮಾಣೀಭೂತವಾದ ಸಿದ್ಧಾಂತವೊಂದನ್ನು ನೀಡಲು ಪ್ರಯತ್ನಿಸಿದ.

ಶ್ಲೀಷರ್ ಸಾರಸಂಗ್ರಹವಾಗಿ ಬರೆದ ಇಂಡೋ–ಯುರೋಪಿಯನ್ ಭಾಷೆಗಳ ತೌಲನಿಕ ವ್ಯಾಕರಣ ಚೊಕ್ಕವಾಗಿ ವ್ಯವಸ್ಥಾಪಿಸಿದ ಮತ್ತು ವಿಶದವಾಗಿ ನಿರೂಪಿಸಲ್ಪಟ್ಟ ಪುಸ್ತಕ. ಈ ಪುಸ್ತಕ ಬಹುಪಾಲು ಬೇರೆ ವಿದ್ವಾಂಸರ ಶೋಧನೆಯ ಅವಲಂಬನವನ್ನು ಪಡೆದಿದೆ. ಇಲ್ಲಿ ಇವನ ಶೋಧನೆ ಸ್ವಲ್ಪವೇ ಆದರೂ ಅವನ ಶೋಧನೆಗಳೆಲ್ಲ ಸಮತೋಲನವಾದ ತಾರ್ಕಿಕತೆಯ ಮೇಲೂ ಬುದ್ಧಿವಂತಿಕೆಯಿಂದ ಸಿದ್ಧಪಡಿಸಿದ ಕ್ರಮಾಂಕತೆಯ ಮೇಲೂ ಸ್ಥಿರವಾಗಿ ನಿಂತಿವೆ. ಅವನಿಗೆ ತೀಕ್ಷ್ಣವಾದ ಮತ್ತು ಅಸಾ

ಧಾರಣವಾದ ಶೈಲಿಯ ಮೇಲೆ ಹಿಡಿತ ಸಾಧಿತವಾಗಿತ್ತು. ನಮ್ಮ ಸಮಕಾಲೀನರಲ್ಲೂ ಕಾಣಬರದ ವಿಶದವಾದ ಅಭಿವ್ಯಕ್ತಿ, ಅವನ ಮುಖ್ಯ ಆಯುಧವಾಗಿತ್ತು. ಅದ್ದರಿಂದಲೇ ಅವನ ವ್ಯಾಕರಣ, ಅನೇಕ ವರ್ಷಗಳ ವರೆಗೆ ಅಂಗೀಕೃತವಾದ ಮತ್ತು ಅರ್ಹವಾದ ಪಠ್ಯವೆಂದು ಪರಿಗಣಿಸಲ್ಪಟ್ಟಿತ್ತು.

ಭಾಷಾವಿಜ್ಞಾನಕ್ಕೆ ಶ್ಲೀಪರ್‌ನ ಮೂರು ಗಮನಾರ್ಹ ಕೊಡುಗೆಗಳೆಂದರೆ, ೧ ಭಾಷಾ ಬಾಂಧವ್ಯ ಸಿದ್ಧಾಂತ. ೨ ಮೂಲಭಾಷೆಯನ್ನು ಪುನರ್ರಚಿಸುವ ತೌಲನಿಕ ಸಿದ್ಧಾಂತ. ೩ ಭಾಷಾ ವರ್ಗೀಕರಣ ಸಿದ್ಧಾಂತ. ಜೈವಿಕವಿಜ್ಞಾನದ ಸಿದ್ಧಾಂತಗಳನ್ನೆಲ್ಲಾ ಶ್ಲೀಪರ್ ತನ್ನ ಭಾಷಾ ಅಧ್ಯಯನಕ್ಕೆ ಅಳವಡಿಸಿಕೊಂಡ. ಭಾಷೆಗಳೂ ನಿಸರ್ಗ ಜೀವಿಗಳಂತೆಯೇ ಎಂದು ನಿರ್ಧರಿಸಿಕೊಂಡು, ಅವುಗಳೂ ಮನುಷ್ಯನ ಹಿಡಿತಕ್ಕೆ ನಿಸರ್ಗಮೂಲವಾದ ಹುಟ್ಟು, ಬೆಳವಣಿಗೆ, ಅಭಿವೃದ್ಧಿಗಳನ್ನು ಪಡೆದುಕೊಂಡು; ಕೆಲವು ಅಧಿಕೃತ ನಿಯಮಗಳ ಪ್ರಕಾರ ತಮ್ಮ ಜೀವನದ ಉನ್ನತಮಟ್ಟಕ್ಕೆ ಏರಿ; ವೃದ್ಧಾಪ್ಯಕ್ಕೆ ಸಂದು ನಂತರ ಪತನವಾಗುತ್ತವೆ ಎಂಬ ಅಭಿಪ್ರಾಯವನ್ನು ತಳೆದು; ಜೀವನದ ಇತಿಮಿತಿ ಗತಿಯನ್ನೆಲ್ಲಾ ಭಾಷೆಗೆ ಆರೋಪಿಸಿದ. ಇಲ್ಲಿಂದ ಭಾಷಾವಿಜ್ಞಾನ, ಜೈವಿಕವಿಜ್ಞಾನದ ಒಂದು ಅಂಗವೆಂದು ಪರಿಗಣಿಸಲ್ಪಟ್ಟಿತು. ಶ್ಲೀಪರ್ ತನ್ನ ಈ ಹೊಸ ಶೋಧನೆಯ ನಿಯಮಗಳನ್ನು ಭೌತಶಾಸ್ತ್ರ ಮತ್ತು ರಾಸಾಯನಿಕ ಶಾಸ್ತ್ರಗಳ ನಿಯಮಗಳೊಂದಿಗೆ ಮೇಳವಿಸಿ, ಹೊಸ ಸೂತ್ರವೊಂದನ್ನು ಕೊಡಲು ಪ್ರಯತ್ನಪಟ್ಟ. ಮತ್ತು ಶೋಧನೆಯ ವಿಕಾಸವನ್ನು ಡಾರ್ವಿನ್‌ನ 'ವಿಕಾಸವಾದ'ದೊಂದಿಗೆ ಸೇರಿಸಿ, ವಿವರಣೆ ಕೊಡಲು ತುಂಬಾ ಹೆಣಗಿದ. ಪ್ರಾಚೀನ ಭಾಷೆಗಳ ಬಗೆಗೆ ಇದ್ದ ಕುತೂಹಲ ಮತ್ತು ದಾಹ, ಭಾಷಾ ವಿಜ್ಞಾನಿಗಳಲ್ಲಿ ಅತುಳವಾಗಿದ್ದಾಗಲೇ ಭಾಷಾವಿಜ್ಞಾನದಲ್ಲಿ ಇನ್ನೊಂದು ದಂತಕಥೆ ಎಂಬಂತೆ ಶ್ಲೀಪರ್‌ನ ವಾದ ಪ್ರಕಟವಾಯಿತು. ಭಾಷೆ, ಸಾಮಾನ್ಯಜೀವಿಯಂತೆ ಜೀವನ ನಿಯಮಗಳನ್ನುಳ್ಳದ್ದು ಎಂಬ ಕಟ್ಟು ಕಥೆಗೆ (?) ಅದರದೇ ಆದ ಸ್ವತಂತ್ರ ಅಸ್ತಿತ್ವವಿದೆ.

ದಿನದಿನಕ್ಕೆ ಅಭಿವೃದ್ಧಿಹೊಂದುತ್ತಿರುವ ಜೈವಿಕಸಿದ್ಧಾಂತದ ನಿಯಮಗಳು ಭಾಷಾವಿಜ್ಞಾನದ ಕ್ಷೇತ್ರದಲ್ಲಿ ಹೊಸಹೊಸ ವಾದ–ವಿವಾದಗಳನ್ನು, ಅಭಿರುಚಿಗಳನ್ನು ತಂದುಕೊಟ್ಟಿವೆ. ಭಾಷೆಗಳ ಹುಟ್ಟು, ಬೆಳವಣಿಗೆ ಮತ್ತು ಸಾವುಗಳ ಬಗ್ಗೆ ನಂತರ ಬಿಚ್ಚು ಮನಸ್ಸಿನಿಂದ ಚರ್ಚಿಸಲಾಯಿತು. ಈ ಸಿದ್ಧಾಂತ ನೂರಾರು ಆಕ್ಷೇಪಣೆಗಳನ್ನು ಎದುರಿಸಬೇಕಾಯಿತು. ಶ್ಲೀಪರ್ ಇಂಡೋ-ಯುರೋಪಿಯನ್ ಭಾಷೆಗಳನ್ನು ಇಡಿಯಾಗಿ ಅಭ್ಯಾಸ ಮಾಡುತ್ತಿದ್ದಾಗ ಅವನಿಗೆ ಜೈವಿಕವಿಜ್ಞಾನದಲ್ಲಿದ್ದ ಆಸಕ್ತಿ, ಅವನನ್ನು ವಸ್ತುಸ್ಥಿತಿಯ ಒಗ್ಗೆ ಮೇರೆ ಮೀರಿದ ವ್ಯವಸ್ಥೆಯನ್ನು ರಚಿಸುವಂತೆ ಮಾಡಿತು. ಆದರೆ ಜೈವಿಕವಿಜ್ಞಾನದ ನೆಲೆಗಟ್ಟಿನ ಮೇಲೆ ರಚಿತವಾದ ಇವನ ಭಾಷಾಸಿದ್ಧಾಂತ, ಭಾಷಾ

ವಿಜ್ಞಾನಿಗಳ ಮೇಲೆ ಮಹತ್ತರ ಪ್ರಭಾವ ಬೀರಿತೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇವನ ಅನುಯಾಯಿಗಳೆಲ್ಲ ತೌಲನಿಕ ವ್ಯಾಕರಣದ ಪುರೋಗಾಮಿರಮ್ಯ ಸಂಪ್ರದಾಯಗಳನ್ನೆಲ್ಲ ತ್ಯಜಿಸಿ, ಎಚ್ಚರ ಮತ್ತು ನಿರ್ದುಷ್ಟತೆಯಿಂದ ಸಂಶೋಧನೆಯನ್ನು ಮುಂದುವರಿಸಲು ಪ್ರಯತ್ನಪಟ್ಟರು. ಹೀಗೆ ಅವರು 'ನವ ವೈಯಾಕರಣಿ'ಗಳಿಗೆ ಹೊಸಮಾರ್ಗವೊಂದನ್ನು ಹಾಕಿಕೊಟ್ಟರು.

ಭಾಷೆಯ ಆಂತರಿಕ ರಚನೆಯ ಆಧಾರದ ಮೇಲೆ, ಅದರಲ್ಲೂ ಮುಖ್ಯವಾಗಿ ಆಕೃತಿಮವಿಜ್ಞಾನದ ಆಧಾರದ ಮೇಲೆ ಪ್ರಪಂಚದ ಭಾಷೆಗಳನ್ನು ವಿವಿಕ್ತಭಾಷೆ, ಸಂಯೋಗಪ್ರಧಾನಭಾಷೆ ಮತ್ತು ವಿಭಕ್ತಿಪ್ರಧಾನಭಾಷೆಯೆಂದು ಮೂರು ಭಾಗಗಳನ್ನಾಗಿ ಶ್ಲೀಷರ್ ವರ್ಗೀಕರಿಸಿದ್ದಾನೆ. ವಿವಿಕ್ತಭಾಷೆಗೆ ಒಳ್ಳೆಯ ಉದಾಹರಣೆ, ಚೈನಾ ಭಾಷೆ. ಈ ಭಾಷೆಯಲ್ಲಿನ ಪದಗಳು ವಿರೋಧಾಭಾಸದಿಂದ ಕೂಡಿವೆ ಎಂಬ ಅಭಿಪ್ರಾಯ ಹೊರಗಿನವರಿಗೆ ಬಂದರೆ ಆಶ್ಚರ್ಯವಿಲ್ಲ. ಈ ಭಾಷೆಯಲ್ಲಿ ಪದಾನುಕ್ರಮಣಿಕೆ ತುಂಬಾ ಮುಖ್ಯ. ವಾಕ್ಯದಲ್ಲಿನ ಪದಾನುಕ್ರಮಣಿಕೆ ಮತ್ತು ಸ್ವರಭೇದದ ಆಧಾರದ ಮೇಲೆ ವ್ಯಾಕರಣ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಕೆಲವೊಮ್ಮೆ ವ್ಯಾಕರಣಾಂಶಗಳನ್ನೊಳಗೊಂಡ ಪದಗಳು ಯಾವ ಅರ್ಥವೂ ಇಲ್ಲದೆ ಬಳಸಲ್ಪಡುತ್ತವೆ. ಅಂತಹ ಪದಗಳನ್ನು ಚೀನೀ ವೈಯಾಕರಣರು 'ಖಾಲಿ ಪದಗಳು' (Empty words) ಎಂದು ಕರೆಯುತ್ತಾರೆ. ಇವುಗಳು ಅರ್ಥವಂತಿಕೆಗೆ ಪ್ರತಿಕೂಲವಾಗಿದ್ದರೂ ಪೂರ್ಣ ಪದಗಳೆಂದಲೇ ಅಂಗೀಕರಿಸಲ್ಪಟ್ಟಿವೆ.

ದ್ರಾವಿಡ, ತುರ್ಕಿ ಮುಂತಾದ ಸಂಯೋಗಪ್ರಯೋಗಪ್ರಧಾನಭಾಷೆಗಳಲ್ಲಿ ಧಾತುವಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಸಂಯೋಗಿಸುವುದರ ವ್ಯಾಕರಣ ರಚನೆಯನ್ನು ವಿವರಿಸಲು ಸಾಧ್ಯವಾಗುತ್ತದೆ.

ಇಂಡೋ–ಯುರೋಪಿಯನ್ ಮುಂತಾದ ವಿಭಕ್ತಿಪ್ರಧಾನಭಾಷೆಗಳಲ್ಲಿ ಪ್ರತ್ಯಯಗಳನ್ನು ಹಚ್ಚುವಾಗ ಮೂಲಪ್ರಕೃತಿಯೇ ತನ್ನ ರೂಪವನ್ನು ಮಾರ್ಪಡಿಸಿಕೊಳ್ಳುತ್ತದೆ.

ನಿಜವಾಗಿ ಹೇಳುವುದಾದರೆ ಈ ತ್ರಿವಿಧಭಾಷಾವರ್ಗೀಕರಣದ ಆಲೋಚನೆಯನ್ನು ಪ್ರಥಮವಾಗಿ ಮಾಡಿದ ಗೌರವ, ಶ್ಲೀಷರನಿಗಿಂತ ಹಿಂದೆ ಇದ್ದ ಅದೇ ಹೆಸರಿನ ಇನ್ನೊಬ್ಬ ವಿದ್ವಾಂಸ ವಿಲ್‌ಹೆಲ್ಮ್ ಶ್ಲೀಷರನಿಗೆ ಸಲ್ಲಬೇಕು. "ಇಂದು ಜಗತ್ತಿನಾದ್ಯಂತ ಬಳಕೆಯಲ್ಲಿರುವ ಭಾಷೆಗಳು ಹಿಂದೆಯೂ ಪ್ರಪಂಚದಾದ್ಯಂತ ಜನಗಳ ಬಾಯಿಯಲ್ಲಿ ಬಳಕೆಯಾಗುತ್ತಿದ್ದವು. ಅವುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ಆ ವರ್ಗಗಳು ಯಾವುವೆಂದರೆ, ವ್ಯಾಕರಣ ರಚನೆಯೇ ಇಲ್ಲದ ಭಾಷೆಗಳು, ಪೂರ್ವಪ್ರತ್ಯಯಗಳನ್ನು ತೆಗೆದುಕೊಳ್ಳುವ ಭಾಷೆಗಳು ಮತ್ತು ಪ್ರತ್ಯಯಾತ್ಮಕ

ಭಾಷೆಗಳು'' ಎಂದು ವಿಲ್‌ಹೆಲ್ಮ್ ಶ್ಲೀಪರ್ ಬರೆದಿದ್ದಾನೆ. ಇವನ ಈ ವರ್ಗೀಕರಣದಲ್ಲಿ ಏನೇ ದೋಷಗಳಿರಲಿ, ಇದೇ ವರ್ಗೀಕರಣಸಿದ್ಧಾಂತ ಮುಂದೆ ಕೊಂಚ ಬದಲಾವಣೆಯೊಂದಿಗೆ ಇಂದು ಪ್ರಚಲಿತವಿರುವಂತಹ ವರ್ಗೀಕರಣಸಿದ್ಧಾಂತವೊಂದನ್ನು ತಯಾರಿಸಲು ಅನುಕೂಲಮಾಡಿಕೊಟ್ಟಿತು.

ಜೈವಿಕವಿಜ್ಞಾನದ ವಿದ್ಯಾರ್ಥಿಯಾದ್ದರಿಂದ ಶ್ಲೀಪರ್ ಎಲ್ಲ ಜೀವಿಗಳ ಜೀವನ ಚಕ್ರದ ಬಗ್ಗೆ ತುಂಬಾ ಸೂಕ್ಷ್ಮವಾದ ಅಧ್ಯಯನ ನಡೆಸಿ, ಆಳವಾದ ಜ್ಞಾನವನ್ನು ಸಂಪಾದಿಸಿಕೊಂಡಿದ್ದ. ಹುಟ್ಟು, ಪ್ರೌಢಾವಸ್ಥೆ, ವೃದ್ಧಾಪ್ಯ ಮತ್ತು ಸಾವು; ದೇಹ ತನ್ನ ಬೆಳವಣಿಗೆಯಲ್ಲಿ ಕಡೆಯ ಅವಸ್ಥೆಯನ್ನು ಮುಟ್ಟಿದ ಮೇಲೆ, ಇನ್ನು ಬೆಳವಣಿಗೆ ಸಾಧ್ಯವಿಲ್ಲ ಎಂದು ಸ್ಥಿರವಾದ ಮೇಲೆ ಶರೀರ ಕೃಶವಾಗಿ ಅಳಿದುಹೋಗುತ್ತದೆ. ಶ್ಲೀಪರ್ ತನ್ನ ಈ ವಾದವನ್ನು ಹೆಗೆಲ್‌ನ ಐತಿಹಾಸಿಕಸಿದ್ಧಾಂತದೊಂದಿಗೆ ಗಂಟು ಹಾಕಿದ. ವಿರುದ್ಧಶಕ್ತಿಗಳ ಸಂತತ ಘರ್ಷಣೆಯಿಂದಲೇ ಯಶಸ್ಸು ಆಗುವುದೆಂಬ ಬಲವಾದ ನಂಬಿಕೆ, ಈ ಸಿದ್ಧಾಂತದ ಹಿಂದೆ ಅಡಗಿತ್ತು. ಹೆಗೆಲ್ ಪ್ರತಿಪಾದನೆ (thesis), ಅರ್ಥಾಂತರನ್ಯಾಸ (antithesis) ಮತ್ತು ಸಂಶ್ಲೇಷಣೆ (synthesis) ಎಂಬ ಪಾರಿಭಾಷಿಕಪದಗಳನ್ನು ಉಪಯೋಗಿಸಿದ. ಹೆಗೆಲ್‌ನ ಈ ವೈಜ್ಞಾನಿಕ ಮತ್ತು ತಾತ್ವಿಕ ಚಿಂತನಾಂಶಗಳನ್ನು ಒಂದೆಡೆ ಸೇರಿಸಿ, ಭಾಷೆಯ ಬಗೆಗೆ ತನ್ನದೇ ಆದ ಒಂದು ಹೊಸ ಸಿದ್ಧಾಂತವನ್ನು ಶ್ಲೀಪರ್ ಕಂಡುಹಿಡಿದ.

ಭಾಷೆ ತನ್ನ ಪ್ರಥಮಹಂತದಲ್ಲಿ ಸರಳ ಪ್ರತಿಪಾದನೆಯಿಂದ ಕೂಡಿದ ವಿವಿಕ್ತ ಸ್ವಭಾವವುಳ್ಳದ್ದಾಗಿತ್ತೆಂದು ಅವನು ಊಹಿಸಿದ. ಭಾಷೆಯ ಈ ಘಟ್ಟ, ಅತ್ಯಂತ ಸರಳವೂ ಸುಲಭಗ್ರಾಹ್ಯವೂ ಆದ ರಚನೆಯನ್ನು ಒಳಗೊಂಡಿತ್ತು. ಅನಂತರ ತನ್ನ ವಿವಿಕ್ತಸ್ಥಿತಿಯಿಂದ ಅದು ಪ್ರತ್ಯಯಾತ್ಮಕಸ್ಥಿತಿಗೆ ಬೆಳೆಯಿತು. ಈ ಘಟ್ಟ, ಭಾಷೆಯ ಮೊದಲನೆಯ ಘಟ್ಟಕ್ಕಿಂತ ಸ್ವಲ್ಪ ಸಂಕೀರ್ಣವಾಗಿದ್ದು, ಭಾಷೆಯನ್ನು ಬಳಸುವಲ್ಲಿ ಅತಿ ಜಾಣ್ಮೆಯನ್ನು ಕಾಣಬಹುದು. ಅಭಿವ್ಯಕ್ತಿಯ ಮೇಲೆ ಹೆಚ್ಚಿನ ಗಮನವನ್ನು ನೀಡುವುದರಿಂದಾಗುವ ಅರ್ಥಾಂತರನ್ಯಾಸವನ್ನು ಇಲ್ಲಿ ಗಮನಿಸಬಹುದು. ಕಟ್ಟಕಡೆಯದಾಗಿ ಮನುಷ್ಯನ ಬೌದ್ಧಿಕಶಕ್ತಿ ಮತ್ತು ಜಿಜ್ಞಾಸಪೂರ್ಣವಾದ ಪ್ರಗತಿಯುತ ಹಂಬಲಿಕೆ, ಸಂಶ್ಲೇಷಣಾವಿಧಾನವನ್ನು ರೂಪಿಸಿಕೊಳ್ಳಲು ಅನುವುಮಾಡಿಕೊಟ್ಟವು. ಭಾಷೆಯಲ್ಲಿನ ಅರ್ಥ ಮತ್ತು ರೂಪಗಳ ಮಧ್ಯ ಸಂಶ್ಲೇಷಣೆ ಉಂಟಾಗಿ, ಭಾಷೆ ಶ್ಲಿಷ್ಟಯೋಗಾತ್ಮಕ (inflectional) ಸ್ಥಿತಿಯನ್ನು ಮುಟ್ಟಿತು. ಆದ್ದರಿಂದ ಶ್ಲೀಪರ್ ಚಕ್ರೀಯ (cyclic) ವಿಧಾನವೊಂದನ್ನು ರೂಪಿಸಿ, ಭಾಷೆ ವಿವಿಕ್ತವಾಗಿದ್ದು ನಂತರ ಅಂಟುಭಾಷೆಯಾಗಿ, ಕಡೆಯಲ್ಲಿ ಅದು ಪ್ರತ್ಯಯಾತ್ಮಕವಾಗುತ್ತದೆಂದು ತಿಳಿಸಿದನು. ಇದನ್ನೇ ಸುಲಭವಾಗಿ ಹೇಳುವುದಾದರೆ ಭಾಷೆ, ಪ್ರತ್ಯಯಾತ್ಮಕಸ್ಥಿತಿಯನ್ನು ಮುಟ್ಟಿ

ವುದಕ್ಕೆ ಮುನ್ನ ವಿವಿಕ್ತಸ್ಥಿತಿ ಮತ್ತು ಸಂಯೋಗಪ್ರಧಾನಸ್ಥಿತಿಯನ್ನು ದಾಟಲೇಬೇಕು. ಈ ವಾದದ ಫಲಿತಾರ್ಥವಾಗಿ ಎಲ್ಲ ಭಾಷೆಗಳೂ ತಮ್ಮ ವಿಕಾಸದ ಅವಧಿಯಲ್ಲಿ ಮೇಲೆ ತಿಳಿಸಿದ ಘಟ್ಟಗಳನ್ನು ಮುಟ್ಟಿರುತ್ತವೆ.

ಆದರೆ ಶ್ಲೀಷರನ ವಾದದಲ್ಲಿರುವ ಕೆಲವು ವಿರೋಧಾಭಾಸಗಳು ಓದುಗನ ಪ್ರಜ್ಞೆಯಿಂದ ಅಷ್ಟು ಬೇಗ ಮಾಸಿಹೋಗುವುದಿಲ್ಲ. ಭಾಷೆಯು ತನ್ನ ವಿಕಾಸದ ದೀರ್ಘ ಅವಧಿಯಲ್ಲಿ ಪತನವನ್ನು ಹೊಂದುತ್ತದೆಂದು ತಿಳಿಸಿದ ಶ್ಲೀಷರ್, ಭಾಷೆಯ ರಾಜನಿಕ ಬೆಳವಣಿಗೆಯಲ್ಲಿ ನಿರಂತರವಾದ ಪ್ರಗತಿಯಿರುವುದೆಂದು ಊಹಿಸುತ್ತಾನೆ. ಹೆಗೆಲ್‌ನ ಪಟ್ಟಶಿಷ್ಯನಾದ ಶ್ಲೀಷರ್, ಪ್ರತಿಪಾದನೆ (thesis) ಮತ್ತು ಅರ್ಥಾಂತರನ್ಯಾಸ (anti-thesis) ಗಳನ್ನು ಒಂದುಗೂಡಿಸಿ ಅವೆರಡಕ್ಕೂ ಸಾಮಾನ್ಯವಾದ ಸಂಶ್ಲೇಷಣ (synthesis) ವಿಧಾನವನ್ನು ಪುನರ್‍ರೂಪಿಸುವುದರಲ್ಲಿ ಯಾವ ಅಳುಕನ್ನೂ ತೋರಲಿಲ್ಲ. ಒಮ್ಮೆ ಮನುಷ್ಯ ವೃದ್ಧಾಪ್ಯವನ್ನು ಸೇರಿದನೆಂದರೆ ಅವನ ಸಾವು ಸನ್ನಿಹಿತವಾಯಿತೆಂದೇ ಅರ್ಥ. ಅಂತೆಯೇ ಭಾಷೆ ಒಮ್ಮೆ ತನ್ನ ಪೂರ್ಣ ಬೆಳವಣಿಗೆಯ ಉತ್ತುಂಗಸ್ಥಿತಿಯನ್ನು ಮುಟ್ಟಿತೆಂದರೆ ಅದರ ಇಳಿಮುಖವೂ ಆರಂಭವಾಯಿತೆಂದೇ ಅರ್ಥ. ತನ್ನ ವಿಕಾಸದ ಅವಧಿಯಲ್ಲಿ ಉಂಟಾದ ಬದಲಾವಣೆಗಳನ್ನೆಲ್ಲಾ ಹಾಯ್ದು ಪಡೆದುಕೊಂಡಿದ್ದ ನಿರ್ದುಷ್ಟತೆ, ನಿಧಾನವಾಗಿ ಕಳಚಿಕೊಳ್ಳತೊಡಗುತ್ತದೆ. ಆದರೆ ಭಾಷೆಯ ಈ ವಿರುದ್ಧ ಗತಿಗೆ ಇರುವ ಕಾರಣಗಳನ್ನು ಶ್ಲೀಷರ್ ತಿಳಿಸಿಲ್ಲ. ನಮ್ಮ ಸಂಶಯದ ಮೋಡ ಕರಗದೆ ಹಾಗೆಯೇ ಉಳಿದುಬಿಡುತ್ತದೆ. ಶ್ಲೀಷರ್ ಭಾಷೆಯ ಜೀವಿತಕಾಲವನ್ನು ಎರಡು ಭಾಗಗಳನ್ನಾಗಿ ವಿಂಗಡಿಸುತ್ತಾನೆ. ೧. ಭಾಷೆಯ ಉನ್ನತಿಯ ಕಾಲ. ಅದನ್ನು ಅವನು ಐತಿಹಾಸಿಕ ಪೂರ್ವಾವಧಿಯೆಂದು ಕರೆದಿದ್ದಾನೆ. ೨. ಭಾಷೆಯ ಅವನತಿಯ ಕಾಲ. ಅದನ್ನು ಐತಿಹಾಸಿಕಾವಧಿಯೆಂದು ಕರೆದಿದ್ದಾನೆ. ಜೋದ್ಯದ ಸಂಗತಿಯೆಂದರೆ ಶ್ಲೀಷರ್ ಹೇಳುವ ಐತಿಹಾಸಿಕಾವಧಿ, ನಮಗೆ ಐತಿಹಾಸಿಕ ಆಧಾರಗಳು ದೊರೆಯುವ ಮುನ್ನವೇ ಆರಂಭವಾಗಿದ್ದುದರಿಂದ ಯಾವುದೇ ಭಾಷೆ ನಿರ್ದಿಷ್ಟ ಅವಧಿಯನ್ನು ಗಳಿಸಿಕೊಂಡಿತ್ತೆಂದು ಹೇಳುವುದು ಸಾಧ್ಯವಿಲ್ಲ.

ಇಂಥ ಸಿದ್ಧಾಂತಗಳನ್ನು ಸಮಯೋಚಿತವಾಗಿ ವಿಮರ್ಶಿಸಿ ಕೆಲವೊಮ್ಮೆ ಖಂಡಿಸಬೇಕಾಗುತ್ತದೆ. ಭಾಷೆಗಳ ಉದಾಹರಣೆಯನ್ನು ತೆಗೆದುಕೊಂಡು ಶ್ಲೀಷರನ ಸಿದ್ಧಾಂತವನ್ನು ವಿಮರ್ಶಿಸ ಹೊರಟಾಗ ಅವನ ವಾದದಲ್ಲಿ ಕೆಲವೊಮ್ಮೆ ದೋಷಗಳು ಕಂಡುಬರುತ್ತವೆ. ಚೈನಾ, ಇಂಡೋ-ಯುರೋಪಿಯನ್ ಭಾಷೆಗಳೇ ಇದಕ್ಕೆ ತಕ್ಕ ಆಧಾರಗಳನ್ನು ಒದಗಿಸುತ್ತವೆ. ಈ ಸಂದರ್ಭದಲ್ಲಿ ನಾವು ಭಾಷಾ ವಿಜ್ಞಾನ, ಮಾನವಿಕ ವಿಜ್ಞಾನ; ನಿಸರ್ಗದ್ದಲ್ಲ ಎಂಬುದನ್ನು ಮನಗಾಣಬೇಕು. ಮಾನವಿಕ ವಿಜ್ಞಾನಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ಒಂದಕ್ಕೊಂದು ಸಂಬಂಧವಿಲ್ಲದಂತೆ ನಿರ್ಬಂಧದಲ್ಲಿಡಲು ಸಾಧ್ಯವಿಲ್ಲ. ವಸ್ತುಸ್ಥಿತಿಯನ್ನು ಕುರಿತು ಹೇಳುವುದಾದರೆ ಈ ಸಿದ್ಧಾಂತದ ಅನುಯಾಯಿಗಳು

ಹೇಳುವಷ್ಟು ಭಾಷೆಯ ಉಗಮ ಮತ್ತು ರಚನೆ ಸರಳವಲ್ಲ. ಅದು ತುಂಬಾ ಸಂಕೀರ್ಣವಾದದ್ದು. ಈ ಸಿದ್ಧಾಂತದವರು ರೂಪಿಸಿದ ವರ್ಗೀಕರಣ ವಿಧಾನ ಮತ್ತು ಭಾಷಾ ವಿಕಾಸ ವಿಧಾನ ಎಷ್ಟು ಟೊಳ್ಳೆಂಬುದನ್ನು ಕೆಲವೇ ಉದಾಹರಣೆಗಳ ಮೂಲಕ ಸಾದೃಶ್ಯಗೊಳಿಸಬಹುದು.

ಭಾಷೆ ವಿವಿಕ್ತವಾಗಿದ್ದು, ಸಂಯೋಗಪ್ರಧಾನವಾಗಿ ಪ್ರತ್ಯಯಾತ್ಮಕವಾಯಿತೆಂದು ಹೇಳುವ ಶ್ಲೀಷರನ ವಾದಕ್ಕೆ ಏನಾದರೂ ಆಧಾರವಿದೆಯೇ? ಕಡೆಯ ಎರಡು ಸ್ಥಿತಿಗಳು ಒಮ್ಮುಖವಾಗಿದ್ದು ಅಧಿಕ ವ್ಯಾಪ್ತಿಯನ್ನು ಪಡೆದುಕೊಂಡಿವೆ. ಮೂಲಪ್ರಕೃತಿಗೆ ಬೇರೊಂದು ಅರ್ಥವುಳ್ಳ ಪ್ರತ್ಯಯವನ್ನೋ ಪ್ರಕೃತಿಯನ್ನೋ ಸೇರಿಸುವುದರಿಂದಾಗುವ ಅರ್ಥ ಬದಲಾವಣೆಯನ್ನು ನಾವಿಲ್ಲಿ ಕಾಣಬಹುದು. ಬಹಳಮಂದಿ ಭಾಷಾವಿಜ್ಞಾನಿಗಳು ಕ್ರಿಯಾಪದದ ಅಂತ್ಯದಲ್ಲಿ ಬರುವ ಆಖ್ಯಾತಪ್ರತ್ಯಯಗಳು ಒಂದುಕಾಲಕ್ಕೆ ಪೂರ್ಣ ಸರ್ವನಾಮಗಳಾಗಿದ್ದುವೆಂದೂ ಮತ್ತು ನಾಮಪದಗಳಿಗೆ ಈಗ ಹತ್ತಿಸುವ ವಿಭಕ್ತಿಪ್ರತ್ಯಯಗಳು ಒಂದುಕಾಲಕ್ಕೆ 'ವಿಭಕ್ತ್ಯರ್ಥಕಾವ್ಯಯ' (post position) ಗಳಾಗಿದ್ದುವೆಂದು ಊಹಿಸುತ್ತಾರೆ. ಭಾಷೆಯ ಪೂರ್ವಸ್ಥಿತಿಯನ್ನು ಗಮನಿಸಿ ಹೇಳುವುದಾದರೆ ನಾಮಪದ ಮತ್ತು ಕ್ರಿಯಾಪದಗಳ ಪ್ರತ್ಯಯಗಳಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ಅಲ್ಲದೆ ಅವುಗಳು ಪೂರ್ಣಪದಗಳೂ ಅಲ್ಲ. ಆದ್ದರಿಂದ ಐತಿಹಾಸಿಕವಾಗಿ ವಿವಿಕ್ತ ಭಾಷೆಯ ಕಲ್ಪನೆ ಉಪಪಾದನೀಯವಲ್ಲ. ಸಿದ್ಧಾಂತದ ಪ್ರತಿಪಾದಕರ ವಾದ ತರ್ಕಬದ್ಧವಾಗಿದ್ದು ಸಾಧ್ಯತೆಗಳನ್ನು ಎತ್ತಿಹಿಡಿದಿದ್ದರೂ ಇಂಡೋ-ಯುರೋಪಿಯನ್ ಭಾಷೆಗಳಲ್ಲಿರುವ ಲಿಖಿತ ಆಧಾರಗಳಿಂದೂ ಈ ಸಾಧ್ಯತೆಗೆ ಸಮರ್ಥನೆಯನ್ನು ನೀಡುವುದಿಲ್ಲ. ಅಲ್ಲದೆ ಭಾಷೆಯ ವಿವಿಕ್ತಸ್ಥಿತಿಯೇ ಅತ್ಯಂತ ಪ್ರಾಚೀನಸ್ಥಿತಿಯೆಂದು ಯಾವ ರೂಪಾಧಾರವೂ ಇಲ್ಲ. ಚೈನಾಭಾಷೆ ಕೆಲವೊಮ್ಮೆ ಪ್ರತ್ಯಯಾತ್ಮಕ ಭಾಷೆಗಳಿಗಿಂತ ಹೆಚ್ಚಾಗಿ ಸೂಕ್ಷ್ಮ ಹಾಗೂ ಕ್ಲಿಷ್ಟಕರ ಅಭಿವ್ಯಕ್ತಿಯನ್ನು ಕಲಾತ್ಮಕವಾಗಿ ನಿರೂಪಿಸುವುದನ್ನು ಕಾಣಬಹುದು. ತಮ್ಮಲ್ಲಿನ ಕುತೂಹಲವನ್ನು ಇಂಗಿಸಿಕೊಳ್ಳುವುದಕ್ಕೋಸ್ಕರ ಚೈನಾದ ಕೆಲವು ವಿದ್ವಾಂಸರು ತಮ್ಮ ಭಾಷೆಯ ಬಗೆಗೆ ಅಧ್ಯಯನ ನಡೆಸಿ, ತಮ್ಮ ಭಾಷೆಯ ವಿವಿಕ್ತ ರಾಚನಿಕ ಸ್ವಭಾವ, ಇತಿಹಾಸಪೂರ್ವದಲ್ಲಿ ತುಂಬಾ ಸಂಕೀರ್ಣವಾಗಿದ್ದಿರಬಹುದೆಂದು ಊಹಿಸಿದ್ದಾರೆ.

ಶ್ಲೀಷರ್, ಭಾಷೆಯ ಬಗೆಗೆ ಸಾಕಷ್ಟು ಸಂಶೋಧನೆಯನ್ನು ನಡೆಸಿದ್ದರೂ ಅವನು ಪಡೆದುಕೊಂಡ ಫಲಿತಾಂಶ ಮಾತ್ರ ಬಹಳ ಕಡಿಮೆ. ಜೈವಿಕವಿಜ್ಞಾನದ ಬಗೆಗೆ ಅಪೂರ್ವ ಒಲವಿದ್ದರೂ ತನ್ನ ಶಾಸ್ತ್ರೀಯ ಹಾಗೂ ತಾರ್ಕಿಕ ಬುದ್ಧಿಯನ್ನೆಲ್ಲಾ ವ್ಯಯಗೊಳಿಸಿ, ಭಾಷೆಯ ಬಗ್ಗೆ ಪ್ರಾಯೋಗಿಕವಿಧಾನವೊಂದನ್ನು ರೂಪಿಸಲು ಪ್ರಯತ್ನಪಟ್ಟ ಮಹಾ ಮೇಧಾವಿ ಈತ. ಇವನ ಸಂಶೋಧನೆ ಸ್ವೀಕೃತವಾಗಲಿ ಬಿಡಲಿ, ಆದರೆ ಪ್ರಥಮವಾಗಿ ವಿದ್ವಾಂಸರಲ್ಲಿ ಜಿಜ್ಞಾಸೆ ಏಳುವಂತೆ ಮಾಡಿದ ಖ್ಯಾತಿ ಇವನಿಗೆ ಸಲ್ಲಬೇಕು.

■ ■

ಗಿರಿಜವ್ವನ ಸೋಬಾನ

ಎಂ. ಜಿ. ಈಶ್ವರಪ್ಪ

ರನ್ನದ ಕೊಡಕ್ಕೆ ಚಿನ್ನದ ಸಿಂಬೆ ಸುತ್ತಿ
ಗಿರಿಜೆ ಹೊರಟಾಳೆ ಜಲದೇವಿಗೆ ॥ಸೋ॥
ಗಿರಿಜೆ ಹೊರಟಾಳೆ ಜಲದಿಗೆ ॥ಸೋ॥
ಗಿರಿಜೇನೆ ಹೊರಟಾಳೆ ಜಲದೀಗೆ ಮಂದುಗದ
ಪರಮೇಶುರನೆ ಜಪವ ಮಾರುತಾರೆ ॥ಸೋ॥
ಪರಮೇಶರ ಜಪವ ಮಾರುತ ಕೇಳ್ಯಾರಲ್ಲೆ
ಯಾವ ಶಿವಶರಣರ ಮಗಳವ್ವ ॥ಸೋ॥
ಶಿಲಾವಂತರು ಸೊಸೆ ಲಿಂಗವಂತರ ಮಗಳು
ಭೂಮಿಪಾಲಿಕರ ಕೇರಿ ಕಿರಿ ತಂಗಿ ॥ಸೋ॥
ಭೂಮಿನೆ ಪಾಲಿಕರ ಕೇರಿ ಕಿರಿ ತಂಗಿ
ಪರಮೇಶುರ ನಮ್ಮ ಮಾವನಿಗೆ ದಯಮಾಡ್ರೀ ॥ಸೋ॥
ನಿಮ್ಮನೆ ಅರಮಾನೆ ನಾವೇನು ಬಲ್ಲೆವೆ
ಹೆಸರ್ಹೇಳೆ ಆದರ ಗುರುತೇಳೆ ॥ಸೋ॥
ರನ್ನದ ಅರಮನೆ ಚಿನ್ನದ ತೊಲಿಕಂಬ
ಗರುಡೇ ಮಂಚಾಪದ ಪಡಸಾಲೇ ॥ಸೋ॥
ಗರುಡೇನೆ ಮಂಟಪದ ಪಡಸಾಲಿಗೆ ಗಾಜಿನ
ಕಂಬದ ಗುರುತವ ಹಿಡಿದು ಬರಬೇಕ್ರಿ ॥ಸೋ॥
ಬಂದಂಥ ಬೀಗರಿಗೆ ಗಿಂಡಿಲಗ್ವಣಿ ಕೊಟ್ಟು
ಗಂಧದ ಮಳಿಗ್ಯಾಗೆ ಉಣಸೀಡಿ ॥ಸೋ॥
ಗಂಧದ ಮಳಿಗ್ಯಾಗೆ ಉಣಸೀಡಿ ಬೀಗರಿಗೆ
ಇಳ್ಳೆ ಹಿಡಿದಾರೆ ತಬಕೀಲೆ ॥ಸೋ॥
ಇಳ್ಳೇವ ಹಿಡಿದಾರೆ ತಬಕೀಲೆ ಬೀಗರಿಗೆ
ಲಿಂಗ್ಜೇ ನೀವ್ ಬಂದ ಬಗೆಯೇನ್ರೀ ॥ಸೋ॥
ಗಿರಿಜೇಯ ಬೇಡುದ್ಕೆ ಪುರದವಲ್ಲಯ್ಯ
ಸಣ್ಣಳೊ ಗಿರಿಜಮ್ಮನ ಕೊಡಬೇಕ್ರಿ ॥ಸೋ॥

ಗಿರಿಜೆಯು ಕೊಡುವಕ್ಕೆ ಪುರದವಲ್ಲಯ್ಯ
ಸಣ್ಣಳು ಗಿರಿಜವ್ವನ ಕೊಡಲಾರೆ ॥ಸೋ॥
ಹಾಲ ಕಾಸದರಿಯೆ ಬಾನ ಬಸಿಯಾದರಿಯೆ
ಮಂತ್ಹೊಂದು ಕೆಲಸ ಮಾಡಲರಿಯೆ ॥ಸೋ॥
ಮಂತ್ತು ಒಂದೇ ಕೆಲಸ ಮಾಡಲರಿ ಪರಮೇಶುರ
ಸಣ್ಣಳು ಗಿರಿಜವ್ವನ ಕೊಡಲಾರೆ ॥ಸೋ॥
ಹಾಲ ಕಾಸದಿರಲಿ ಬಾನ ಬಸಿಯದಿರಲಿ
ಮಂತ್ಹೊಂದೇ ಕೆಲಸ ನಮಗಿರಲಿ ॥ಸೋ॥
ಮಂತ್ತು ಒಂದೇ ಕೆಲಸ ನಮಗಿರಲಿ ಬಸವಣ್ಣಾರೆ
ಸಣ್ಣ ಗಿರಿಜವ್ವನ ಕೊಡಬೇಕರಿ ॥ಸೋ॥
ತುಪ್ಪ ಕಾಸದರಿಯೆ ಪುತ್ರಗೆ ನೀಡದರಿಯೆ
ಮಂತ್ಹೊಂದು ಬದುಕ ಮಾಡಲರಿಯೆ ॥ಸೋ॥
ಮಂತ್ತು ಒಂದೇ ಬದುಕ ಮಾಡಲರಿ ಪರಮೇಶುರನೆ
ಸಣ್ಣಳು ಗಿರಿಜವ್ನ ಕೊಡಲಾರೆ ॥ಸೋ॥
ತುಂಪ್ಪ ಕಾಸದಿರಲಿ ಪುತ್ರಗೆ ನೀಡದಿರಲಿ
ಮಂತ್ಹೊಂದೇ ಬದುಕು ನಮಗಿರಲಿ ॥ಸೋ॥
ಮಂತ್ತು ಒಂದೇ ಬದುಕು ನಮಗಿರಲಿ ಬಸವಣ್ಣರೆ
ಸಣ್ಣಳು ಗಿರಿಜವ್ವನ ಕೊಡಬೇಕ್ರಿ ॥ಸೋ॥
ಅತ್ತಿಲ್ಲ ಮಾವಿಲ್ಲ ಚಿಕ್ಕ ಸೋದರಿಲ್ಲ
ಮಂತ್ಹೇಳಿ ಸಲಹೋ ಕೃಪೆಯಿಲ್ಲ ॥ಸೋ॥
ಮಂತ್ಹೇಳಿ ಸಲಹೋ ಕೃಪೆಯಿಲ್ಲ ಪರಮೇಶುರನೆ
ಸಣ್ಣಳು ಗಿರಿಜವ್ವನ ಕೊಡಲಾರೆ ॥ಸೋ॥
ಅತ್ತೆಯು ನಾನುಂಟು ಮಾವನೆ ನಾನುಂಟು
ಮಂತ್ತೆ ಹೇಳಿ ಸಲಹೊ ಕೃಪೆ ನಾನೇ ॥ಸೋ॥
ಮತ್ತೆ ಹೇಳಿ ಸಲಹೊ ಕೃಪೆ ನಾನು ಬಸವಣ್ಣರೆ
ಸಣ್ಣಳು ಗಿರಿಜಮ್ಮನ ಕೊಡೆಬೇಕ್ರಿ ॥ಸೋ॥
ಅಂಗಳದ ಗಿರಿಜವ್ವ ಆಡುತ್ತೇನೆಂದಾಳೆ
ಅಣ್ಣೋಜಿ ನನ್ನ ಕೊಡಬೇಕ್ರೆ ॥ಸೋ॥
ಅಣ್ಣೋಜ ನನ್ನ ಕೊಡಬೇಕ್ರಿ ಕೈಲಾಸದ
ಎಪ್ಪತ್ಹೊಂದ್ ಜಡೆಯ ಶರಣರಿಗೆ ॥ಸೋ॥
ಕಟ್ಟೆಮ್ಯಾಲೆ ಗಿರಿಜವ್ವ ಬೀಸುತ್ತೇನೆಂದಾಳೆ
ಅಪ್ಪಾಜಿ ನನ್ನ ಕೊಡಬೇಕ್ರಿ ॥ಸೋ॥

ಅಪ್ಪಾಜಿ ನನ್ನ ಕೊಡಬೇಕು ಕೈಲಾಸದ
ಮುವ್ವತ್ತೊಂದ್ ಜಡೆಯ ಶರಣರಿಗೆ ॥ಸೋ॥
ಬಾಗಲಗೆ ಗಿರಿಜವ್ವ ಕುಟ್ಟುತ್ತೇನೆಂದಾಳೆ
ಅವ್ವೋಜಿ ನನ್ನ ಕೊಡಬೇಕ್ರೆ ॥ಸೋ॥
ಅವ್ವೋಜಿ ನನ್ನ ಕೊಡಬೇಕು ಕೈಲಾಸದ
ಮೇಲೊಂದೆ ಜಡೆಯ ಶರಣರಿಗೆ ॥ಸೋ॥
ಕಾವಿಯು ಹೊದ್ದಿಯಾರೆ ಬೆತ್ತವ ಹಿಡಿದಾರೆ
ಸೀಮೆಯು ಮ್ಯಾಲೆ ತಿರುಗ್ಯಾರೆ ॥ಸೋ॥
ಬೆತ್ತವ ಹಿಡಿಯಾರೆ ಜೋಳಿಗೆ ಹಾಕ್ಯಾರೆ
ಸೀಮೆಯು ಮ್ಯಾಲೆ ತಿರುಗ್ಯಾರೆ ॥ಸೋ॥
ಸೀಮೆಯು ಮ್ಯಾಲೆ ತಿರುಗುವಾ ಜಂಗಮಂಗೆ
ನೀನೇನು ಮರುಳಾದೆ ಗಿರಿಜವ್ವ ॥ಸೋ॥
ಜೋಳಿಗೆ ಅಂಬೋದು ನೀನೇನು ಜರಿದ್ಯಪ್ಪ
ಜೋಳಿಗೆ ಸಲುವ್ಯಾವೆ ನರಲೋಕ ॥ಸೋ॥
ಕಾವಿಯು ಹೊದಿಯೋರೆ ಜೋಳಿಗೆ ಹಾಕ್ಯಾರೆ
ದೇಶದ ಮ್ಯಾಲೆ ತಿರಿಯೋರೆ ॥ಸೋ॥
ದೇಶದ ಮ್ಯಾಲೆ ತಿರುಗುದ ಜಂಗಮರ
ಮತ್ತೇನು ಮರುಳಾದೆ ಗಿರಿಜವ್ವ ॥ಸೋ॥
ಜೋಳಿಗೆ ಅಂಬೋದು ನೀನೇನು ಜರಿದವ್ವ
ಜೋಳಿಗೆ ಸಲುವ್ಯಾವೆ ಮೂರುಲೋಕ ॥ಸೋ॥
ಆರುವಾರದ ಕಡಗ ಮೂರುವಾರದ ತಾಳಿ
ಸಣ್ಣಳು ಗಿರಿಜಮ್ಮನ ಮದುವಿಗೆ ॥ಸೋ॥
ಹತ್ತುವಾರದ ಕಪ್ಪು ಎಂಟುವಾರದ ವಾಲೆ
ಕನ್ನೆ ಗಿರಿಜಮ್ಮನ ಮದುವೀಗೆ ॥ಸೋ॥
ಕಟ್ಟೆಮ್ಯಾಲೆ ಶಿವ ಒತ್ತಿಗೆ ಸಕಲತಿ ಬಸವ
ಅಲ್ಲಿ ಗಂಗವ್ವ ಗೌರವ್ವ ॥ಸೋ॥
ಅಲ್ಲಿನೇ ಗಂಗವ್ವ ಗೌರವ್ವ ಗಿರಿಜವ್ವಗೆ
ಓಲೆ ಇಡುವಾರೆ ಗಡಿ ಇಲ್ಲ ॥ಸೋ॥
ಕಟ್ಟೆಮ್ಯಾಲೆ ಶಿವ ಒತ್ತಿಗೆ ಸಕಲತಿ ಬಸವ
ಅಲ್ಲಿ ಲಕ್ಕವ್ವ ಚೊಳಚವ್ವ ॥ಸೋ॥
ಅಲ್ಲೀನೇ ಲಕ್ಕವ್ವ ಚೊಳಚವ್ವ ಗಿರಿಜವ್ವಗೆ
ಬಂದಿ ಇಡುವಾರೆ ಗಡಿ ಇಲ್ಲ ॥ಸೋ॥

ಕಂಬಳಿ ಕರಿಯಾರೆ ನಿಂಬೆಕಾಯ್ ಜಡಿಯಾರೆ
ಲಿಂಗ ಜಂಗಮಾರೆ ಶರಣಾರೆ ॥ಸೋ॥
ಲಿಂಗನೇ ಜಂಗಮರ ಶರಣರು ಸೇರ್‍ಯಾರು
ಸಣ್ಣಳು ಗಿರಿಜಮ್ಮನ ಮದುವೀಗೆ ॥ಸೋ॥
ಕಂಬಳಿ ಕರಿಯಾರೆ ಬಾಳೆಕಾಯ್ ಜಡಿಯಾರೆ
ಇರೊ ಜಂಗಮರೆ ಶರಣರೆ ॥ಸೋ॥
ಇರೋದೆ ಜಂಗಮರ ಶರಣರು ಸೇರ್‍ಯಾರಲ್ಲ
ಕನ್ನೆ ಗಿರಿಜಮ್ಮನ ಮದುವೀಗೆ ॥ಸೋ॥
ಶರಣರು ಶರಣರು ಸೇರಿ ಆಕಾಸಕೇಣಿ ಹಾಕಿ
ದೇವಟಿಗೆ ಕೋಲ ಹಿಡುದಾರೆ ॥ಸೋ॥
ದೀವಟಿಗೆ ಕೋಲ ಹಿಡಿದಾರೆ ಶರಣರು ಸೇರಿ
ಶಿವನೀಗೆ ಧಾರಿ ಎರುದಾರೆ ॥ಸೋ॥

■ ■

* ಸಂಗ್ರಹಿಸಿದ ಸ್ಥಳ : ಶಿವಮೊಗ್ಗ ಜಿಲ್ಲೆಯ ಹಾಡೋನಹಳ್ಳಿ ಎಂಬ ಗ್ರಾಮ.

ಕ್ರಿಸ್ತಶಕ ಪ್ರಾರಂಭದ ಶಿವದೇವಾಲಯ

ಅ. ಸುಂದರ

ದಿ. ೪-೧೦-೭೫ ರ **ಡೆಕ್ಕನ್ ಹೆರಾಲ್ಡ್** ವೃತ್ತಪತ್ರಿಕೆಯ ೫ ನೆಯ ಪುಟದಲ್ಲಿ ಅಂಕೋಲದ ಬಳಿ ಶ್ರೀ ಬೊಮ್ಮಯ್ಯ ನಾಯಕ ಮತ್ತು ಶ್ರೀ ರಾಧಕೃಷ್ಣ ನಾಯಕ ಇವರು ತಮ್ಮ ಭೂಮಿಯಲ್ಲಿ ಅಗೆಯುತ್ತಿದ್ದಾಗ ಇಟ್ಟಿಗೆ ದೇವಾಲಯದ ಭಾಗಗಳು ಮತ್ತು ಒಂದು ಅಪೂರ್ವ ಶಿವಲಿಂಗ ಕಂಡು ಬಂದಿತೆಂದೂ ಶಿವಲಿಂಗದ ಮೇಲೆ ಅಸ್ಪಷ್ಟವಾಗಿ ಕೂರ್ಮ ಮತ್ತು ನರಸಿಂಹನ ಕೆತ್ತನೆಗಳಿವೆಯೆಂದೂ ವರದಿಯಾಗಿತ್ತಷ್ಟೇ. ಈ ಮೊದಲೇ ೧೯೭೨-೭೪ ರಲ್ಲಿ ಶ್ರೀ ರಾಧಕೃಷ್ಣ ನಾಯಕ ಈ ವಿಶ್ವವಿದ್ಯಾಲಯದ ಪ್ರಾಚೀನಭಾರತ ಇತಿಹಾಸ ಮತ್ತು ಶಾಸನ ವಿಭಾಗದ ವಿದ್ಯಾರ್ಥಿಯಾಗಿದ್ದಾಗ, ಈ ಪ್ರಾಚೀನ ನೆಲೆಯಿಂದ ಕೆಲವೊಂದು ಮೃತ್ ಪಾತ್ರೆ ಚೂರುಗಳನ್ನು ತಂದು ನನಗೆ ತೋರಿಸಿದ್ದರು.

ಈ ನೆಲೆಯನ್ನು ದಿ. ೭-೧೧-೭೫ ರಲ್ಲಿ ಶ್ರೀ ಆರ್. ವಿ. ನಾಯಕರ ನೆರವಿನಿಂದ ನಾನು ಸ್ವತಃ ಪರೀಕ್ಷಿದೆ. ಇದು ಒಂದು "ಇತಿಹಾಸ ಪ್ರಾರಂಭ ಕಾಲ"ದ (ಕ್ರಿ. ಪೂ. ೨- ಕ್ರಿ.ಶ. ೩ ನೆಯ ಶತಮಾನ) ಜನ ವಾಸ್ತವ್ಯವಿದ್ದ ನೆಲೆ. ಅಲ್ಲಲ್ಲಿ ಹೊಳಪಾದ ಹಾಗೂ ಮಸುಕಾದ ಕಪ್ಪು-ಕೆಂಪು, ಕೆಂಪು ಬಣ್ಣದ ವಿವಿಧ ಆಕಾರಗಳ ಗಡಿಗೆ ಮಡಿಕೆಗಳ ಅವಶೇಷಗಳು, ಸುಟ್ಟಮಣ್ಣಿನ ಗೊಂಬೆಗಳು, ಇಟ್ಟಿಗೆಗಳ ಚೂರುಗಳು ಇವೆ (ಅಲ್ಲದೆ ಅಲ್ಲಲ್ಲಿ ಕಲ್ಲಿನಲ್ಲಿ ಕೊರೆದು ತೆಗೆದ ಸುಮಾರು ೨೦, ೩೦ ಉದ್ದನೆಯ ಆಯತಾಕಾರದ ಭಾವಿಗಳಿವೆ. ಭಾವಿಗಳು ಯಾವ ಕಾಲದ್ದೆಂದು ನಿರ್ಣಯಿಸಬೇಕಾಗಿದೆ. ಇವುಗಳಲ್ಲಿ ಕೆಲವನ್ನು ಈಗಲೂ ಉಪಯೋಗಿಸುತ್ತಾರೆ. ಏತದಿಂದ ಗದ್ದೆಗಳಿಗೆ ನೀರು ಹಾಯಿಸುವುದಕ್ಕೆ ಈ ಆಕಾರದ ಭಾವಿಗಳು ಅನುಕೂಲವಂತೆ). ಅಗೆತದಲ್ಲಿ ದೊರೆತ ಇಟ್ಟಿಗೆ ಕಟ್ಟಡವನ್ನು ಕಿತ್ತು ಹಾಕಲಾಗಿತ್ತು.

ಇಟ್ಟಿಗೆ ಕಟ್ಟಡವು ೫ ಮೀ. ಉದ್ದ ಮತ್ತು ೪ ಮೀ. ಅಗಲವಿದ್ದು ಆಯತಾಕಾರವಾಗಿತ್ತು. ಗೋಡೆಯ ಅಗಲ, ೬ ಮೀ. ಶಿವಲಿಂಗವು ಓರೆಯಾಗಿ ಉದ್ದಕ್ಕೆ ಒಡೆದು ಎರಡು ಭಾಗಗಳಾಗಿದ್ದು ಕಟ್ಟಡದೊಳಗಿನ ಹಾಳುಮಣ್ಣಿನಲ್ಲಿ ಮತ್ತು ಬೇರೆ ಕಡೆಗಳಲ್ಲಿ ಸುಮಾರು ೧.೫೦ ಮೀ. ಆಳದಲ್ಲಿ ದೊರೆತವು. ಕಟ್ಟಡವು ಕೇವಲ ಕಲಸುಮಣ್ಣಿನಿಂದ

ಕಟ್ಟಲಾಗಿತ್ತು. ಇಟ್ಟಿಗೆಯ ಅಳತೆ ೪೦×೨೦×೮ ಸೆ. ಮೀ. ಅಥವಾ ೨೦×೯×೮ ಸೆ. ಮೀ. ಕಟ್ಟಡವು ನಿಸ್ಸಂಶಯವಾಗಿ ಕ್ರಿ.ಶ. ೧–೨ನೆಯ ಶತಮಾನದ್ದು. ಶಿವಲಿಂಗವು ೧.೭೩ ಮೀ. ಉದ್ದವಾಗಿದ್ದು ಕೆಳಭಾಗ (೩೦×೨೦ ಸೆ. ಮೀ.) ಆಯಾತಾಕಾರ, ಇದಕ್ಕನುಗುಣ ವಾಗಿ ಮಧ್ಯಭಾಗ ಅಷ್ಟಕೋನ ಮತ್ತು ಮೇಲ್ಭಾಗ (೨೧×೧೧ ಸೆ. ಮೀ.) ಹಿಗ್ಗಿದ ವರ್ತುಳವು ಆಗಿದೆ. ಮೇಲೆ ಗೋಲಾಕಾರವಾಗಿದೆ. ಇದರ ಮೇಲೆ ಬ್ರಹ್ಮಸೂತ್ರ ಗೆರೆಯಿದೆ. ಸಾಮಾನ್ಯವಾಗಿ ಲಿಂಗದ ಈ ಭಾಗಗಳು ಚೌರಸ, ಸಮ ಅಷ್ಟಕೋನ ಮತ್ತು ಸಮವೃತ್ತವಾಗಿರುತ್ತವೆ. ಆದ್ದರಿಂದ ಈ ವಿಧದ ಲಿಂಗಕ್ಕಿಂತ ಇದು ಭಿನ್ನ ವಾಗಿದೆ. ಕೆಳಗಿನ ಎರಡು ಭಾಗಗಳ ಮೇಲೆ ಉಳಿಯ ಕಚ್ಚುಗಳಿವೆ. ಬಹಳಷ್ಟು ಮಾಸಿ ಹೋಗಿದ್ದು ಸ್ವಲ್ಪ ಮಾತ್ರ ಉಳಿದಿದೆ. ಮತ್ತು ಅಲ್ಲಲ್ಲಿ ಚಕ್ಕೆಗಳು ಎದ್ದಿವೆ. ಇವುಗಳಲ್ಲಿ ಎರಡನ್ನು ಕೂರ್ಮ ಮತ್ತು ನರಸಿಂಹನ ಆಕಾರದವುಗಳೆಂದು ಭಾವಿಸ ಲಾಗಿತ್ತು. ಆದರೆ ಯಾವ ವಿಧವಾದ ಚಿತ್ರಗಳೂ ಲಿಂಗದ ಮೇಲಿಲ್ಲ.

ಇದುವರೆಗೂ ಸುಮಾರು ೧–೨ ನೆಯ ಶತಮಾನದಲ್ಲಿ ಶಿವದೇವಾಲಯ ಗಳಿದ್ದವೆಂಬುದನ್ನು ತಾಳಗುಂದದ ಕದಂಬ ಕಾಕುಸ್ಥವರ್ಮನ ಕಾಲದ ಶಾಸನ ಮಾತ್ರ ತಿಳಿಸುತ್ತದೆ. ಅದರಲ್ಲಿ ಶಾತಕರ್ಣಿಗಳಿಂದ ಸೇವಿಸಲ್ಪಟ್ಟ ಮಹಾದೇವನ ದೇವಾಲಯದ ಸಮೀಪದಲ್ಲಿ ಕಾಕುಸ್ಥವರ್ಮನು ಕೆರೆಯನ್ನು ನಿರ್ಮಿಸಿದ ಉಲ್ಲೇಖವಿದೆ. ಮಳವಳ್ಳಿ ಪ್ರಾಕೃತ ಶಾಸನದಲ್ಲಿ ''ಲೋಕನಾಥ ಶಿವನ'' ಉಲ್ಲೇಖವಿದೆ. ಇವಿಷ್ಟನ್ನು ಬಿಟ್ಟರೆ, ೫ ನೆಯ ಶತಮಾನಕ್ಕಿಂತ ಹಿಂದೆ ಶಿವದೇವಾಲಯಗಳಿದ್ದುದಕ್ಕೆ ಪ್ರತ್ಯಕ್ಷ ಆಧಾರ ಸಿಕ್ಕಿರ ಲಿಲ್ಲ. ಈಗ ಅಂಕೋಲದ ೧–೨ ನೆಯ ಶತಮಾನದ ಈ ವಿಶಿಷ್ಟ ಶಿವಲಿಂಗವು ಅಂಥ ಒಂದು ಮಹತ್ವದ ಪ್ರತ್ಯಕ್ಷ ಪ್ರಮಾಣವಾಗಿರುವುದಲ್ಲದೆ, ಇದುವರೆಗೆ ತಿಳಿದ ಮಟ್ಟಿಗೆ ಇದೇ ಅತ್ಯಂತ ಪ್ರಾಚೀನ ಲಿಂಗವೆಂದು ಹೇಳಬಹುದು.

ನನ್ನ ಶೋಧನೆಯಲ್ಲಿ, ಇದೇ ತರಹದ ಲಿಂಗವು, ಗೋಕರ್ಣದಿಂದ ಸುಮಾರು ೧೫ ಕಿ. ಮೀ. ಪೂರ್ವಕ್ಕಿರುವ ಶಿವಪುರದಲ್ಲಿರುವ ಈಶ್ವರ ದೇವಾಲಯದಲ್ಲಿಯೂ ಮತ್ತು ಸು. ೨–೫ ನೆಯ ಶತಮಾನಗಳ ಅಂತರದಲ್ಲಿಯ ಶಿವಲಿಂಗಗಳುಳ್ಳ ಇಟ್ಟಿಗೆ ದೇವಾಲಯಗಳ ಅವಶೇಷಗಳು ಹರೀಶಿ (ಸೊರಬ ತಾಲೂಕು), ಹೈಗುಂದ (ಹೊನ್ನಾವರ ತಾಲೂಕು) ಮತ್ತು ಹಟ್ಟಿಯಂಗಡಿ (ಕುಂದಾಪುರ ತಾಲೂಕು) ಯಲ್ಲಿ ಸಿಕ್ಕಿವೆ.

■ ■



ಅಂಕೋಲ : ಬೋಳೆಭಾಗದಲ್ಲಿರುವ ಇತಿಹಾಸ ಪ್ರಾರಂಭಕಾಲದ
(ಕ್ರಿ.ಶ.೧–೨) ಇಟ್ಟಿಗೆ ಕಟ್ಟಡದ ಅವಶೇಷ ಮತ್ತು ಅದರಲ್ಲಿದ್ದ ಶಿವಲಿಂಗ.

ಮಲಿಯವ್ವ–ಗಂಗವ್ವ

(ಡೊಳ್ಳಿನ ಪದ)

ಕೆ. ವಿರೂಪಾಕ್ಷಗೌಡ

ಸ್ವಾಮಿ ನಮ್ಮಾಯ ದೇವರು ಬಂದಾವ್ರು ಬನ್ನಿರೇ
ಗುರುವೇ ನಮ್ಮಾಯ ದೇವರು ಬಂದಾವ್ರು ಬನ್ನಿರೇ ॥ ಪ ॥
ಮಂಗಳಾರದ ದಿನದಲಿ ಮಲಿಯವ್ವ ನ್ಯಾಮನಿತ್ಯವು ಮಾಡ್ಯಾಳೆ
ನ್ಯಾಮನಿತ್ಯವು ಮಾಡ್ಯಾಳಪ್ಪ ಒಲಿಗಳು ನೆಲಗಳ ಬಳಿದಾಳ
ಒಲಿಗಳು ನೆಲಗಳ ಬಳಿದಾಳಪ್ಪ ಹೂವಿಗೆ ಹೊನ್ನ ಕಳಿವ್ಯಾಳ
ಹೂವಿಗೆ ಹೊನ್ನ ಕಳಿವ್ಯಾಳಪ್ಪ ಆಳಿಗೆ ಭಂಡಾರೊಡದಾಳ
ಆಳ ಬರಲಿಲ್ಲಂದ್ಹೇಳಿ ಮಲಿಯವ್ವ ಮಾಳಿಗಿನತ್ತೊಮ್ಮೆ ನೋಡ್ಯಾಳ
ಮಾಳಿಗಿ ಮಡಿಗಲ್ಲ ಹತ್ತಿ ಆಳಿನ ದಾರಿ ನೋಡ್ಯಾಳೆ
ಆಳು ಬಂದು ನಿನ್ನಂಗಳದಾಗ ಮಾಳ್ಗಿ ಇಳಿಯೋ ಮಾರಾಳೇ
ಹೂವ ಬರಲಿಲ್ಲಂದ್ಹೇಳಿ ಮಲಿಯವ್ವ ಹೂದೇವನತ್ತೊಮ್ಮೆ ನೋಡ್ಯಾಳೆ
ಹೂದೇವ ಹುಲಿಮಿಕಾವ ಹತ್ತಿ ಹೂವಿನ ದಾರಿ ನೋಡ್ಯಾಳ
ಹೂವೆ ಬಂದು ನಿನ್ನ ಸಿರಿಗಿನೇರ್ಯಾವೆ ಹೂದೇವನಿಳಿಯೆ ಮಾರಾಳೇ
ಹೂವೇ ಆಳೆ ಕೂಡಿಕೊಂಡು ಗಂಗಿಗೆ ಸಿಂಗಾರಾಗ್ಯಾವೆ
ಅಡಿವೆಲ್ಲ ಕಾಲಾಟೀಳಪ್ಪ ಗಿಡುವೆಲ್ಲ ಕೈ ಪಂಜೇಳ
ಗಿಡವೆಲ್ಲ ಕೈ ಪಂಜಿನ ಬೆಳಕಲಿ ಗಂಗಿ ಸ್ನಾನಕೆ ಹೊಂಟಾಳೆ
ಮಂದನಾಮರು ಮಲಗಿದ ಗಂಗವ್ವ ಬೆಚ್ಚೊಂಬೆದರೊಂಬಿದ್ದಾಳೆ
ಬೆಚ್ಚಂಬೆದರೊಂಬಿದ್ದಾಳಪ್ಪ ಜಲ್ಲಾನ ಜಲ ಬತ್ತ್ಯಾಳೆ
ಆರುಲೋಕದ ದಂಡೇ ಬಂತೇ ಮೂರಲೋಕದ ದಂಡೇಳೆ
ಆರಲೋಕದ ದಂಡಲ್ಲ ಗಂಗವ್ವ ಮೂರಲೋಕದ ದಂಡಲ್ಲ
ಶಿವನ ಮಗಳು ನಾ ಮಲಿಯವ್ವ ಗಂಗಿ ಸ್ನಾನಕೆ ಬಂದೀನೆ
ದೆವ್ವನ ದಂಡು ಬಂತಂದೇಳಿ ಭೂತನ ದಂಡು ಬಂತೆಂದೇಳಿ ಜಲ್ಲಿನ ಜಲಬತ್ಯಾಳ
ದೆವ್ವನ ದಂಡೆ ಅಲ್ಲ ಗಂಗವ್ವ ಭೂತನ ದಂಡೆ ಅಲ್ಲೇಳೆ
ಶಿವನ್ನ ಮಗಳು ನಾ ಮಲಿಯವ್ವ ಗಂಗಿ ಸ್ನಾನಕೆ ಬಂದೀನಿ
ಶಿವನ್ನ ಮಗಳು ಮಲಿಯವ್ವಾದರ ನಮ್ಮ ಶಾಜವು ಬರಲೇಳೆ
ನಮ್ಮ ಶಾಜವ ನಮಗೆ ಕೊಟ್ಟು ನಿಮ್ಮ ಒಲಿಗಳ ತೊಳಿಯವ್ವ

ಒಂದೆಲಿ ಒಂದಡಕಿ ಬರಲೀ ಒಂದೆ ಗಂಧದ ಬಟ್ಟೇಳೆ
ಐದೆಲಿ ಐದಡಕಿ ಬರಲೀ ಐದು ಮಳಲದ ಗೌರೇಳೆ
ಅಚ್ಚಚ್ಚ ಬಿಳಿ ಎಲಿ ಬರಲಿ ಕತ್ರಿಸಿದ ಕರಿ ಅಡಕೇಳೆ
ಕತ್ರಿಸಿದ ಕರಿ ಅಡಕೇ ಬರಲಿ ರಾಚೂರ ಬಿಳಿಗಾಸೇಳ
ರಾಚೂರ ಬಿಳಿಗಾಸ ಬರಲಿ ರಾಣೆದ ಸುಣ್ಣ ಬರಲೇಳ
ಸ್ವಾರೀಲಿ ಬಾನ ಬರಲೇಳವ್ವ ದ್ವಾರೇದ ಹೋಳಿಗಿ ಬರಲೇಳೆ
ಶೆಟಿಗೆಲಿ ಹಾಲು ಬರಲೇಳವ್ವ ಬಟ್ಟಲಲಿ ತುಪ್ಪ ಬರಲೇಳೆ
ನೆನಿಯಕ್ಕಿ ನೆಲಗಡಲಿ ಬರಲಿ ಗೊನಿ ಮುಂದ ಬಾಳೆಣ್ಣೇಳೆ
ಇಷ್ಟೆಲ್ಲ ಶಾಜ ಅಲ್ಲಿ ಗಂಗವ್ವ ಪುಟ್ಟಿಯು ತುಂಬಿ ಇಟ್ಟಾಳೆ
ಜಲ್ಲನ ಜಲ ಬತ್ತಿದ ಗಂಗವ್ವ ತುಂಬುತ ತುಮುಕುತ ಬಂದಾಳ
ನಿಂತ ಹರಿಯೋ ಸಿರಿಗಂಗವ್ವನ ಕುಂತೇ ಮಜ್ಜನ ಮಾಡ್ಯಾಳೆ
ದಿಡಿಗೀಲ್ಧರಿಯೋ ಸಿರಿಗಂಗವ್ವನ ಹಿಡಿದೇ ಮಜ್ಜನ ಮಾಡ್ಯಾಳೆ
ಹೊತ್ತು ಆದಾವು ಏಳು ನನತಾಯಿ ಹತ್ತವ್ವ ಪಲ್ಲಕ್ಕೀನ
ಹೂವಿನಾಗ ಅಡಗಿದ ಮಲಿಯವ್ವನ ಏನೆಂದು ನಾನು ಎಬ್ಬಿಸಲಿ ?
ಹೊತ್ತು ಆದಾವು ಏಳು ನನತಾಯಿ ಹತ್ತವ್ವ ಪಲ್ಲಕ್ಕೀನ
ಪಲ್ಲಕ್ಕೀನ ಹತ್ತುವಾಗ ಬಿಡಿಮುತ್ತು ರ್‍ಯಾವಳ ಸಡಿಲ್ಯಾವ
ಬಿಡಿಮುತ್ತು ರ್‍ಯಾವಳ ಸಡಿಲಿದ ಬೈಲ್ಯಾಗ ಬಾಡದ ನಿಂತಾರ
ನೀ ಬಿಡಿಮುತ್ತು ರ್‍ಯಾವಳ ಸಡಿಲಿದ ಬೈಲ್ಯಾಗ ಈರ್‍ಯಾರ ಬಿಡದ ನಿಂತಾರ
ಈರ್‍ಯಾರ ದೇವರು ಬಂದಾವ ಬನ್ನಿರೇ........

■ ■

ಹಾಡಿದವರು : ದೊಡ್ಡ ದುರುಗಪ್ಪ, ಕಣ್ವ ಮಲ್ಲಾಪೂರ. ಅಂಚೆ. ನಿಡಗುರ್ತಿ
ತಾಲೂಕು : ಸೊಂಡೂರು, ಜಿಲ್ಲೆ : ಬಳ್ಳಾರಿ.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೦.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	೧೮೮೦	ಕೃಷ್ಣರಾಜ ಒಡೆಯ III	ಮೈಸೂರು	ತ್ಯಾಕಲ್‌ನ ಅಮಲ್ದಾರ್ ಕೃಷ್ಣರಾಯನಿಗೆ ನಿರೂಪ. ವಿಠಲೇಶ್ವರನ ಪೂಜಾವಿಧಿಗೆ ಮಾಡಿದ ವ್ಯವಸ್ಥೆ.	ಆ.ಸ.ಮೈ.ಆ.ರಿ. ೧೯೧೯,ಪು.೪೨.
೧೧೧.	ಸರ್ಜಾಪುರ	ಆನೇಕಲ್	,,	,,	,,	,,	ಅಮಲ್ದಾರ್ ರಾಮಯ್ಯನಿಗೆ ನಿರೂಪ. ಫಕೀರ ಮಂಸುದ್ದೀನನಿಗೆ ೬ ವರಹಗಳ ಇನಾಮು ನೀಡಬೇಕೆಂದಿದೆ.	,,
೧೧೨.	ಗುಬ್ಬಿ	ಗುಬ್ಬಿ	ತುಮಕೂರು	೧೮೮೧	,,	,,	ಅಪ್ಪಾಜಯ್ಯನಿಗೆ ನಿರೂಪ. ಖಾಜಿ ಮೊಖದುಮ್‌ಷಾನಿಗೆ ಎರಡು	ಅದೇ,ಪು.೪೨-೪೩

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಖಂಡುಗ ಗದ್ದೆಗೆ ಬದಲು ೧ ವರಹ ೭ತ್ತಿ ಹಣ ಮೌಲ್ಯದ ಭೂಮಿಯನ್ನು ಕೊಡುವಂತೆ ತಿಳಿಸಿದೆ.	
೧೧೩.	ಸರ್ಜಾಪುರ	ಆನೇಕಲ್	ಬೆಂಗಳೂರು	೧೮೦೩	ಕೃಷ್ಣರಾಜ ಒಡೆಯ III	ಮೈಸೂರು	ಸನದು. ಆಂಜನೇಯ ಮತ್ತು ಕೋದಂಡರಾಮ ದೇವರ ಉತ್ಸವಕ್ಕೆ ಪದ್ಮಸಾಲೆ ಮತ್ತು ಪಡಸಾಲೆಯರು ಪ್ರತಿ ಬಟ್ಟೆಯ ಉತ್ಪನ್ನ ಮತ್ತು ಮಾರಾಟಕ್ಕೆ ೧ ಕಾಸನ್ನು ಹಾಗೂ ಇತರರು ಮನೆಗೆ ಒಂದರಂತೆ ಹೊನ್ನನ್ನು ಪ್ರತಿ ವರ್ಷ ಕೊಡುವದಾಗಿ ಒಪ್ಪಿದರು.	ಆ.ಸ.ಮೈ.ಆ.ರಿ. ೧೯೧೯,ಪು.೪೩.
೧೧೪.	,,	,,	,,	,,	,,	,,	,,	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೫.	ಮಧುಗಿರಿ	ಮಧುಗಿರಿ	ತುಮಕೂರು	೧೮೦೮	ಕೃಷ್ಣರಾಜ ಒಡೆಯ III	ಮೈಸೂರು	ಪೂರ್ಣಯ್ಯನಿಂದ ಖಾಜಿ ಮಹಮ್ಮದ್ ಇಮಾಮನಿಗೆ ಮರಾಠಿ ಸನದು. ಇಮಾಮನನ್ನು ಮದ್ದಗಿರಿ ತಾಲೂಕಿಗೆ ಖಾಜಿಯಾಗಿ ನೇಮಿಸಿದ ಮತ್ತು ಅವನು ನಿರ್ವಹಿಸಬೇಕಾದ ಐದು ಕಾರ್ಯಗಳ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೧೮,ಪು.೬೧
೧೧೬.	,,	,,	,,	,,	,,	,,	ಪೂರ್ಣಯ್ಯನಿಂದ ಖಾಜಿ ಮಹಮ್ಮದ್ ಹುಸೇನನಿಗೆ ಮರಾಠಿ ಸನದು. ಹುಸೇನನನ್ನು ಕೊರಟಗೆರೆ ತಾಲೂಕಿಗೆ ಖಾಜಿಯಾಗಿ ನೇಮಿಸಿದ ಮತ್ತು ಅವನ ನಿರ್ವಹಣೆಗಳ ಉಲ್ಲೇಖ.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೭.	ಸರ್ಜಾಪುರ	ಆನೇಕಲ್	ಬೆಂಗಳೂರು	೧೮೧೨	ಕೃಷ್ಣರಾಜ ಒಡೆಯ III	ಮೈಸೂರು	ಹೊಸಕೋಟೆಯ ಅಮಲ್ದಾರನಿಗೆ ನಿರೂಪ. ಗುಂಡಯ್ಯನನ್ನು ಶಾನುಭೋಗಿಕೆಯಿಂದ ಬಿಡಿಸಿ ಆ ಸ್ಥಾನಕ್ಕೆ ಸೀತಾರಾಮಯ್ಯನ ನೇಮಕ. ಗುಂಡಯ್ಯನಿಂದ ಬರಬೇಕಾದ ಸುಮಾರು ೫೦ ವರಹಗಳನ್ನು ವಸೂಲು ಮಾಡಬೇಕು. ಅಲ್ಲದೆ ರೈತರಿಗೆ ಗುಂಡಯ್ಯನಿಂದಾದ ಕಿರುಕುಳವೂ ಇದೆ.	ಆ.ಸ.ಮೈ.ಆ.ರಿ. ೧೯೧೯,ಪು.೪೩
೧೧೮.	ಮುಳಬಾಗಿಲು	ತೀರ್ಥಹಳ್ಳಿ	ಶಿವಮೊಗ್ಗ	,,	,,	,,	ನಗರ ಸರ್ಕಾರದ ಅಮೀಲರು, ಶಿರಸ್ತೆದಾರರು ಮತ್ತು ಮೊಖದ್ದಮ್‌ಗಳಿಗೆ ಬರೆದ ಪರ್ಶಿಯನ್, ಮರಾಠಿ ಮತ್ತು ಕನ್ನಡದ ನಿರೂಪ. ಮುಳಬಾಗಿಲಿನ ಕೃಷ್ಣಾನಂದ ಸ್ವಾಮಿಗಳಿಂದ ಸಂದಾಯವಾಗುತ್ತಿದ್ದ ೨೨ ವರಹ, ೬ಕ್ಕೆ ಹಣ	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ವನ್ನು ಬಿನ್ನಹದ ಮೇರೆಗೆ ರಿಯಾಯತಿಗೊಳಿಸಿದ್ದು.	
೧೧೯.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	೧೮೧೪	ಕೃಷ್ಣರಾಜ ಒಡೆಯ III	ಮೈಸೂರು	ಸನದು. ಸೈಯಿದ್ ಮುಹಮ್ಮದ್ ಹುಸೇನಿಯನ್ನು ಚಿತ್ರದುರ್ಗ ತಂಕಡಿಗೆ ಮುಖ್ಯ ಖಾಜಿಯೆಂದು ೧೦ ಕಂಠೀರಾಯಿ ವರಹ ಸಂಬಳದ ಮೇಲೆ ನೇಮಕ.	ಆ.ಸ.ಮೈ.ಆ.ರಿ. ೧೯೧೮,ಪು.೬೧
೧೨೦.	,,	,,	,,	,,	,,	,,	ಸನದು. ಮುಖ್ಯ ಖಾಜಿಯಾಗಿ ಸೈಯಿದ್ ಮುಹಮ್ಮದ್ ಹುಸೇನಿಯ ನೇಮಕವನ್ನು ಆಮೀಲ ಲಕ್ಷ್ಮಣರಾಯನಿಗೆ ತಿಳಿಸಿದೆ.	,,
೧೨೧.	,,	,,	,,	,,	,,	,,	ಚಿತ್ರದುರ್ಗ ತಂಕಡಿಗೆ ಒಳಪಟ್ಟ ೧೩ ತಾಲೂಕುಗಳ ಆಮೀಲರು ಮತ್ತು ಕಿಲ್ಲೇದಾರರಿಗೆ ಬರೆದ	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಸನದು. ಎಲ್ಲ ಖಾಜಿಗಳ ಅಪ್ಪಣೆಯನ್ನು ಮನ್ನಿಸಬೇಕು ಮತ್ತು ಅವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಮುಸ್ಲಿಮರ ಜಗಳವನ್ನು ಮುಖ್ಯ ಖಾಜಿಗೆ ಒಪ್ಪಿಸಬೇಕು.	
೧೨೨.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	೧೮೧೪	ಕೃಷ್ಣರಾಜ ಒಡೆಯ III	ಮೈಸೂರು	ರಾಜ್ಯದ ಖಾಜಿ ಸೈಯಿದ್ ಅಲಿಯಿಂದ ಮುಖ್ಯ ಖಾಜಿ ಸೈಯಿದ್ ಮಹಮ್ಮದ್ ಹುಸೇನಿಗೆ ಕಳಿಸಿದ ಸನದು. ಮುಖ್ಯಖಾಜಿಯು ಕೈಕೊಳ್ಳಬೇಕಾದ ಏಳು ಮುಖ್ಯ ಕಾರ್ಯಗಳು ಇವೆ.	ಆ.ಸ.ಮೈ.ಆ.ರಿ. ೧೯೧೮,ಪು.೬೧
೧೨೩.	ಮೈಸೂರು	ಮೈಸೂರು	ಮೈಸೂರು	,,	,,	,,	ನಾಗಯ್ಯನಿಂದ ಹಿತ್ತಾಳೆ ಬಾಗಿಲಿನ ಕಾಣಿಕೆ.	ಅದೇ, ಪು. ೬೪

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨೪.	ಮೈಸೂರು	ಮೈಸೂರು	ಮೈಸೂರು	೧೮೧೪	ಕೃಷ್ಣರಾಜ ಒಡೆಯ III	ಮೈಸೂರು	ನಾಗಯ್ಯನಿಂದ ಹಿತ್ತಾಳೆ ಬಾಗಿಲಿನ ಕಾಣಿಕೆ.	ಆ.ಸ.ಮೈ.ಆ.ರಿ. ೧೯೧೮,ಪು.೬೪
೧೨೫.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	೧೮೧೫	,,	,,	ಫೌಜುಂದಾರ ಲಿಂಗರಾಜಯ್ಯ ಅರಸನಿಂದ ಆಮೀಲ ರಾಮಯ್ಯನಿಗೆ ಬರೆದ ಸನದು. ಹಿಂದಿನ ಸನದುಗಳನ್ನು ಪರಿಶೀಲಿಸಿದ ವಿವರ ಮತ್ತು ರಾಮಭಟ್ಟನಿಂದ ಜೋಡಿಯನ್ನು ಸಂಗ್ರಹಿಸಬೇಕೆಂದು ಇದೆ.	ಆ.ಸ.ಮೈ.ಆ.ರಿ. ೧೯೧೯,ಪು.೪೩
೧೨೬.	ನಂಜನಗೂಡು	ನಂಜನಗೂಡು	ಮೈಸೂರು	,,	,,	,,	ಅರಸನಿಂದ ಚಿನ್ನದ ಸರ್ಪವಾಹನದ ಕಾಣಿಕೆ.	ಆ.ಸ.ಮೈ.ಆ.ರಿ. ೧೯೧೮,ಪು.೬೨
೧೨೭.	,,	,,	,,	೧೮೧೬	,,	,,	ಅರಸನಿಂದ ಸಹಸ್ರಧಾರೆಯ ದಾನ	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨೮.	ಸರ್ಜಾಪುರ	ಆನೇಕಲ್	ಬೆಂಗಳೂರು	೧೮೨೦	ಕೃಷ್ಣರಾಜ ಒಡೆಯ III	ಮೈಸೂರು	ಆಮೀಲ ಅಪ್ಪೂರಾಯನಿಗೆ ಬರೆದ ಸನದು. ದೊಡ್ಡತಿಮ್ಮಸಂದ್ರದ ಶಾನುಭಾಗನಿಂದ ದೂರಿನವಿವರ ಗಮನಿಸಿ ಶಾನಭಾಗಿಕೆಯ ಅಧಿಕಾರವನ್ನು ನಿರ್ಧರಿಸಬೇಕು.	ಆ.ಸ.ಮೈ.ಆ.ರಿ. ೧೯೧೯,ಪು.೪೩-೪೪
೧೨೯.	,,	,,	,,	೧೮೨೧	,,	,,	ರಾಮದೇವರ ಪೂಜಾವಿಧಿಗಳಿಗೆ ನೀಡಿದ ದತ್ತಿಯನ್ನು ತಿಳಿಸುವ ನಿರೂಪವನ್ನು ಅಪ್ಪೂರಾಯನು ಅರ್ಚಕ ಚನ್ನರಾಯಪ್ಪನಿಗೆ ಬರೆದಿದ್ದಾನೆ.	ಅದೇ, ಪು.೪೪
೧೩೦.	ಮೈಸೂರು	ಮೈಸೂರು	ಮೈಸೂರು	,,	,,	,,	ಸನದು. ಲಿಂಗರಾಜಮ್ಮಣ್ಣಿಯಿಂದ ಸುಬ್ಬರಾಯದಾಸನಿಗೆ ದತ್ತಿ.	ಆ.ಸ.ಮೈ.ಆ.ರಿ. ೧೯೧೯,ಪು.೪೯-೫೦
೧೩೧.	,,	,,	,,	೧೮೨೨	,,	,,	ಸನದು. ಲಿಂಗರಾಜಮ್ಮಣ್ಣಿಯಿಂದ ಸುಬ್ಬರಾಯದಾಸನಿಗೆ ವೃತ್ತಿವಿವರ ಇದೆ.	ಅದೇ, ಪು. ೪೯

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೨.	ಮೈಸೂರು	ಮೈಸೂರು	ಮೈಸೂರು	೧೮೨೮	ಕೃಷ್ಣರಾಜ ಒಡೆಯ III	ಮೈಸೂರು	ಬೇಗಳೂರು ಫೌಜುದಾರ ತಿಮ್ಮ ರಾಜಯ್ಯ ಅರಸನಿಂದ ಸುಬ್ಬರಾಯ ದಾಸನಿಗೆ ರಹದಾರಿ. ತಿರುಪತಿ ಯಿಂದ ಹಿಂದಿರುಗುವ ಸುಬ್ಬ ರಾಯದಾಸನಿಗೆ ಸತ್ಕರಿಸುವ ವಿವರವಿದೆ.	ಆ.ಸ.ಮೈ.ಆ.ರಿ. ೧೯೧೯, ಪು.೪೯
೧೩೩.	,,	,,	,,	೧೮೨೯	,,	,,	ಅರಸನಿಂದ ರಹದಾರಿ. ಹಲವು ಬ್ರಾಹ್ಮಣರೊಡನೆ ಉಡುಪಿ ಮತ್ತು ಗಂಗಾಯಾತ್ರೆಗೆ ಹೊರಟಿ ರುವ ಸುಬ್ಬರಾಯದಾಸನಿಂದ ಕಂದಾಯ ಪಡೆಯದೆ, ಅವನನ್ನು ಸತ್ಕರಿಸಬೇಕು.	,,
೧೩೪	,,	,,	,,	೧೮೩೦	,,	,,	ರಹದಾರಿ. ಫೌಜುದಾರ ವೀರರಾಯ ಅರಸನು ಹೊಳೆಹೊನ್ನೂರು ಮತ್ತು ಹೊನ್ನಾಳಿಯ ಅಮೀಲ	,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ಮತ್ತು ಕಿಲ್ಲೇದಾರರಿಗೆ ತಿಳಿಸಿದ ಸುಬ್ಬರಾಮದಾಸನ ಗಂಗಾಯಾತ್ರೆ ಮತ್ತು ಅವನನ್ನು ಸತ್ಕರಿಸುವ ವಿವರ.	
೧೩೫.	ಮೈಸೂರು	ಮೈಸೂರು	ಮೈಸೂರು	೧೮೨೯	ಕೃಷ್ಣರಾಜ ಒಡೆಯ III	ಮೈಸೂರು	ರೆಸಿಡೆಂಟ್ ಕಾಸಮೈಜೋರ್‌ನಿಂದ ಸುಬ್ಬರಾಯದಾಸನಿಗೆ ರಹದಾರಿ.	ಆ.ಸ.ಮೈ.ಆ.ರಿ. ೧೯೧೯,ಪು.೫೦
೧೩೬.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	೧೮೩೦	,,	,,	ದಿವಾನ್ ವೇಂಕಟರಾಜಯ್ಯ ಅರಸನಿಂದ ಮಾಲೂರು ಆಮೀಲ್ದಾರ ಬಿಳಿಗಿರಯ್ಯನಿಗೆ ನಿರೂಪ. ಹೊಸಕೋಟೆ ಅಪ್ಪಣ್ಣ ಭಟ್ಟರ ದೂರು ಗಮನಿಸಿ, ವಿಠಲೇಶ್ವರ ದೇವರ ಪೂಜಾವಿಧಿಗೆ ತುರುಂಗಲೂರು ಗ್ರಾಮವನ್ನು ಜೋಡಿ ಹಣ ಕೊಟ್ಟು ಅನುಭವಿಸಬೇಕು.	ಅದೇ, ಪು. ೪೪

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೭.	ಹೊಸಕೋಟೆ	ಹೊಸಕೋಟೆ	ಬೆಂಗಳೂರು	೧೮೩೦	ಕೃಷ್ಣರಾಜ ಒಡೆಯ III	ಮೈಸೂರು	ಅಮೀಲ ಶೇಷಯ್ಯನಿಂದ ಚನ್ನ ರಾಯಪ್ಪನಿಗೆ ನಿರೂಪ. (ಹಿಂದಿನಂತೆ)	ಆ.ಸ.ಮೈ.ಆ.ರಿ. ೧೯೧೯,ಪು.೪೪
೧೩೮.	ಮೈಸೂರು	ಮೈಸೂರು	ಮೈಸೂರು	,,	,,	,,	ಹರಿಕಾರ ತಿಮ್ಮಪ್ಪನ ದುರ್ನಡತೆಗೆ ಸುಬ್ಬರಾಯದಾಸನ ದೂರು ಮತ್ತು ಅದರ ಪರಿಹಾರ.	ಅದೇ, ಪು. ೪೯
೧೩೯.	,,	,,	,,	೧೮೩೧	,,	,,	ಲಕ್ನೋವಿನ ರೆಸಿಡೆಂಟನಿಂದ ಸುಬ್ಬರಾಯದಾಸನಿಗೆ ಮರಾಠಿ ರಹದಾರಿ ಪತ್ರ.	ಅದೇ, ಪು. ೫೦
೧೪೦.	,,	,,	,,	೧೮೩೨	,,	,,	ದೇವರಾಜ ನೃಪತಿ ಮತ್ತು ಅವನ ಪತ್ನಿ ಕೆಂಪಮ್ಮಣ್ಣಿಯರಿಂದ ಅನಂತವ್ರತ ನೆರವೇರಿಕೆ ಹಾಗೂ ನೃಪತಿಯಿಂದ ಅನಂತನಾಥ ಮೂರ್ತಿಯ ನಿರ್ಮಾಣ.	ಆ.ಸ.ಮೈ.ಆ.ರಿ. ೧೯೧೮,ಪು.೬೪

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೧.	ದೇವರಾಯ ದುರ್ಗ	ತುಮಕೂರು	ತುಮಕೂರು	೧೮೩೨	ಕೃಷ್ಣರಾಜ ಒಡೆಯ III	ಮೈಸೂರು	ಚನ್ನರಾಜಯ್ಯನ ಮಲ್ಲರಾಜಯ್ಯ ನಿಂದ ಗೋಪುರ, ಪ್ರಾಕಾರ ಮತ್ತು ಧ್ವಜಸ್ತಂಭದ ನಿರ್ಮಾಣ.	ಆ.ಸ.ಮೈ.ಆ.ರಿ. ೧೯೧೮,ಪು.೬೪
೧೪೨.	ಮೈಸೂರು	ಮೈಸೂರು	ಮೈಸೂರು	..	..	..	ಯಶೋವಂತ ಬಹಾದೂರ್ ನಿಂದ ಸುಬ್ಬರಾಯದಾಸನಿಗೆ ಮರಾಠಿ ರಹದಾರಿ ಪತ್ರ.	ಆ.ಸ.ಮೈ.ಆ.ರಿ. ೧೯೧೯,ಪು.೫೦
೧೪೩.	..	..	..	೧೮೩೩	..	..	ಕಾರ್ವೇಟನಗರದ ಮಹಾಮಂಡಳೇಶ್ವರ ಬೊಮ್ಮರಾಜ ಬಹಾದಾರ್ ದೇವ ಮಹಾರಾಜುಲುನಿಂದ ಸುಬ್ಬರಾಯ ದಾಸನಿಗೆ ತೆಲಗು ರಹದಾರಿ ಪತ್ರ	..
೧೪೪.	..	..	..	..	..	..	ಪತ್ರ. ತಾತಾಚಾರ್ಯುಲುನಿಂದ ಸುಬ್ಬರಾಯದಾಸನಿಗೆ ಕಾಣಿಕೆ.	..

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೫.	ಮೈಸೂರು	ಮೈಸೂರು	ಮೈಸೂರು	೧೮೩೫	ಕೃಷ್ಣರಾಜ ಒಡೆಯ III	ಮೈಸೂರು	ತಿರುವಾಂಕೂರಿನ ದಿವಾನ್‌ನಿಂದ ಸುಬ್ಬರಾಯದಾಸನಿಗೆ ತಮಿಳು ರಹದಾರಿ ಪತ್ರ.	ಆ.ಸ.ಮೈ.ಆ.ರಿ. ೧೯೧೯,ಪು.೫೦
೧೪೬.	,,	,,	,,	೧೮೩೬	,,	,,	ಸನದು. ಸುಬ್ಬರಾಯದಾಸನ ಯಾತ್ರೆ ಮತ್ತು ಸತ್ಕಾರ್ಯಗಳ ವಿವರ ಇದೆ.	ಅದೇ,ಪು.೪೫-೪೭
೧೪೭.	,,	,,	,,	೧೮೩೮	,,	,,	ಶಿಲಾಶಾಸನ. ಸುಬ್ಬರಾಯದಾಸನ ಯಾತ್ರೆ ಮತ್ತು ಸತ್ಕಾರ್ಯಗಳ ವಿವರವಲ್ಲದೆ, ತೋಳಪ್ಪ–ವರದಾಚಾರ್ಯನಿಂದ ನಾರಾಯಣ ವಿಗ್ರಹ ದಾನ ಮತ್ತು ಪೂಜಾ ವಿಧಿಗೆ ದತ್ತಿ.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೮.	ಮೈಸೂರು	ಮೈಸೂರು	ಮೈಸೂರು	೧೮೩೬	ಕೃಷ್ಣರಾಜ ಒಡೆಯ III	ಮೈಸೂರು	ಸುಬ್ಬರಾಯದಾಸನು ತನ್ನ ಮತ್ತು ಅರಸನ ಧರ್ಮಕಲ್ಯಾಣಕ್ಕಾಗಿ ಮಾಡಿದ ದತ್ತಿ ವಿವರ.	ಆ.ಸ.ಮೈ.ಆ.ರಿ. ೧೯೧೯,ಪು.೪೭
೧೪೯.	,,	,,	,,	೧೮೩೭	,,	,,	ನಿರೂಪ. ಸುಬ್ಬರಾಯದಾಸನಿಂದ ನಿರ್ಮಿತವಾದ ದೇವಾಲಯಕ್ಕೆ ಅರಸನಿಂದ ದತ್ತಿ ಮತ್ತು ಸುಬ್ಬ ರಾಯದಾಸನ ಯಾತ್ರಾ ವಿವರ.	ಅದೇ, ಪು. ೪೯
೧೫೦.	ನಂಜನಗೂಡು	ನಂಜನಗೂಡು	,,	,,	,,	,,	ತುಲಾಭಾರದ ನಂತರ ಕೃಷ್ಣರಾಜ ಒಡೆಯರಿಂದ ಧಾರಾಪಾತ್ರೆಯ ದಾನ.	ಆ.ಸ.ಮೈ.ಆ.ರಿ. ೧೯೧೮,ಪು.೬೨
೧೫೧.	ಮೈಸೂರು	ಮೈಸೂರು	,,	೧೮೩೮	,,	,,	ಶ್ರೀನಿವಾಸದಾಸ ಮತ್ತು ಸುಬ್ಬ ರಾಯದಾಸರು ತಮ್ಮ ಮಾತಾ ಪಿತೃಗಳ ಪುಣ್ಯಕ್ಕೆ ಮತ್ತು ಅರಸನ ಶ್ರೇಯೋಭಿವೃದ್ಧಿಗೆ ದತ್ತಿ ನೀಡಿದರು. ಅಲ್ಲದೆ ಪ್ರಸನ್ನ	ಆ.ಸ.ಮೈ.ಆ.ರಿ. ೧೯೧೯,ಪು.೪೮

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
							ವೆಂಕಟೇಶ್ವರ ದೇವಾಲಯ ಮತ್ತು ಸುಬ್ರಹ್ಮಣ್ಯ ಅಗ್ರಹಾರಗಳ ಸ್ಥಾಪನೆಗೆ ವಿವರ ಇದೆ.	
೧೫೨.	ಮೈಸೂರು	ಮೈಸೂರು	ಮೈಸೂರು	೧೮೩೮	ಕೃಷ್ಣರಾಜ ಒಡೆಯ III	ಮೈಸೂರು	ಸುಬ್ಬರಾಯದಾಸನಿಗೆ ಅರಸನಿಂದ ಪತ್ರ. ಕಲ್ಕುಟಿಗ ಚೌಡಾಚಾರಿಗೆ ದೇವಸ್ಥಾನ ನಿರ್ಮಾಣ ಮುಂಗಿಸಲು ಒಪ್ಪಿಸಿದ್ದು.	ಆ.ಸ.ಮೈ.ಆ.ರಿ. ೧೯೧೯, ಪು.೪೯
೧೫೩.	,,	,,	,,	೧೮೪೩	,,	,,	ಬಿಳಿಕೆರೆಯಲ್ಲಿ ಸುಬ್ಬರಾಯದಾಸನಿಂದ ಕಟ್ಟಲ್ಪಟ್ಟ ಜಯವೆಂಕಟೇಶ ದೇವಾಲಯಕ್ಕೆ ಅರಸನಿಂದ ದತ್ತಿ.	ಅದೇ, ಪು.೪೯-೫೦
೧೫೪.	ನಂಜನಗೂಡು	ನಂಜನಗೂಡು	,,	೧೮೪೬	,,	,,	ವೆಂಕಟಲಕ್ಷ್ಮಮ್ಮನಿಂದ ಬೆಳ್ಳಿಯ ಮುಖವಾಡದ ಕಾಣಿಕೆ.	ಆ.ಸ.ಮೈ.ಆ.ರಿ. ೧೯೧೮, ಪು.೬೪

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೫೫.	ಮೈಸೂರು	ಮೈಸೂರು	ಮೈಸೂರು	೧೮೪೬	ಕೃಷ್ಣರಾಜ ಒಡೆಯ III	ಮೈಸೂರು	ನಿರೂಪ. ಸುಬ್ಬರಾಯದಾಸನು ಕಟ್ಟಿಸಿದ ಬಿಳಿಕೆರೆಯ ಸತ್ರಕ್ಕೆ ವಿದ್ಯಾಪೂರ್ಣತೀರ್ಥ ಶ್ರೀಪಾದರಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೯,ಪು.೫೦-೫೧
೧೫೬.	,,	,,	,,	೧೮೫೩	,,	,,	ಸನದು. ದೇವಾಲಯಕ್ಕೆ ಸಲ್ಲಬೇಕಾದ ೩೦ ವರಹಗಳ ಬದಲು ೨೦ ವರಹಗಳು ಸಲ್ಲುತ್ತಿದ್ದುದಕ್ಕೆ ಸುಬ್ಬರಾಯದಾಸನಿಂದ ಬಂದ ದೂರು ಗಮನಿಸಿ, ಉಳಿದ ೧೦ ವರಹಗಳನ್ನು ರಥೋತ್ಸವ ಮತ್ತು ಬ್ರಾಹ್ಮಣರ ಭೋಜನಕ್ಕೆ ಕಾಯ್ದಿರಿಸಿದೆ ಎಂದು ಉತ್ತರ.	ಅದೇ, ಪು. ೫೦
೧೫೭.	,,	,,	,,	೧೮೫೭	,,	,,	ಮೈಸೂರರಸರ ವಂಶಾವಳಿಯಿರುವ ಕಾಗದಪತ್ರ.	ಆ.ಸ.ಮೈ.ಆ.ರಿ. ೧೯೧೮,ಪು.೬೨-೬೩

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೫೮.	ಮೈಸೂರು	ಮೈಸೂರು	ಮೈಸೂರು	೧೮೫೮	ಕೃಷ್ಣರಾಜ ಒಡೆಯ III	ಮೈಸೂರು	ಸನದು. ಸುಬ್ಬರಾಯದಾಸನಿಂದ ದೂರು. ದೇವಸ್ಥಾನದ ಖರ್ಚು ವೆಚ್ಚ ಕೇಳಬಾರದೆಂದು ಮತ್ತು ಅರಸರು ದೇವಾಲಯಕ್ಕೆ ಭೆಟ್ಟಿ ಕೊಡುವುದಾಗಿ ಖಜಾಂಚಿಯಿಂದ ಉತ್ತರ.	ಆ.ಸ.ಮೈ.ಆ.ರಿ. ೧೯೧೯, ಪು. ೫೦
೧೫೯.	,,	,,	,,	೧೮೬೦	,,	,,	ಮೈಸೂರರಸರ ವಂಶಾವಳಿ ಯನ್ನು ಒಳಗೊಂಡ ಹಿತ್ತಾಳೆ ಪಟ.	ಆ.ಸ.ಮೈ.ಆ.ರಿ. ೧೯೧೮,ಪು.೬೨-೬೪
೧೬೦.	,,	,,	,,	—	,,	,,	ಸುಬ್ಬರಾಯದಾಸನಿಗೆ ಅರ್ನಿಯ ಅಭಿನವ ಪೂರ್ಣಪ್ರಿಯ ಶ್ರೀನಿವಾಸರಾವ್ ಸಾಹಿಬ್‌ನಿಂದ ಮರಾಠಿ ರಹದಾರಿ.	ಆ.ಸ.ಮೈ.ಆ.ರಿ. ೧೯೧೯, ಪು. ೫೦

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೬೧.	ಮೈಸೂರು	ಮೈಸೂರು	ಮೈಸೂರು	—	ಕೃಷ್ಣರಾಜ ಒಡೆಯ III	ಮೈಸೂರು	ಸುಬ್ಬರಾಯದಾಸನಿಗೆ ಸೊಂಡೂರಿನ ಹಿಂದೂರಾವ್ ಘೋರ್ಪಡೆ ಮಮಲಕತ ಮಂದಾರ್ ಸೇನಾಪತಿಯಿಂದ ಮರಾಠಿ ರಹದಾರಿ.	ಆ.ಸ.ಮೈ.ಆ.ರಿ. ೧೯೧೯, ಪು. ೫೦
೧೬೨.	,,	,,	,,	—	,,	,,	ರಘೋಜಿ ಭೋಸಲೆ ಸೇನಾ ಸಾಹಿಬ್‌ನಿಂದ ಸುಬ್ಬರಾಯದಾಸನಿಗೆ ನಾಗಪುರದಲ್ಲಿ ಕೊಟ್ಟ ಮರಾಠಿ ರಹದಾರಿ.	ಆ.ಸ.ಮೈ.ಆ.ರಿ. ೧೯೧೯, ಪು. ೫೦
೧೬೩.	,,	,,	,,	—	,,	,,	ಸುಬ್ಬರಾಯದಾಸನ ಕುಟುಂಬದಲ್ಲಿ ಉಂಟಾದ ಮರಣದ ಬಗ್ಗೆ ವ್ಯಕ್ತವಾದ ಶೋಕಪತ್ರ.	,,
೧೬೪.	,,	,,	,,	—	,,	,,	ಸುಬ್ಬರಾಯದಾಸನ ಪ್ರತಿಮೆ ಎಂದು ತಿಳಿಸುತ್ತದೆ.	ಅದೇ,ಪು.೪೭–೪೮

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೬೫.	ಮೈಸೂರು	ಮೈಸೂರು	ಮೈಸೂರು	—	ಕೃಷ್ಣರಾಜ ಒಡೆಯ III	ಮೈಸೂರು	೨೪ ಅನುಷ್ಟುಪ್ ಶ್ಲೋಕವನ್ನೊಳಗೊಂಡಿದೆ. ಕೃಷ್ಣರಾಜ ಒಡೆಯನಿಗೆ ಶ್ರೇಯೋಭಿವೃದ್ಧಿ ಆಗಲೆಂದು, ಹಲವು ದೇವತಾ ಪ್ರಾರ್ಥನೆ ಇವಾಗಿವೆ.	ಆ.ಸ.ಮೈ.ಆ.ರಿ. ೧೯೧೯,ಪು.೪೪
೧೬೬.	ಹುರ	ನಂಜನಗೂಡು	,,	—	,,	,,	ಬೀಗ ಮಲ್ಲರಾಜಯ್ಯನಿಂದ ಕಾಣಿಕೆ.	ಆ.ಸ.ಮೈ.ಆ.ರಿ. ೧೯೧೮,ಪು.೬೪
೧೬೭.	,,	,,	,,	—	,,	,,	ಹಂಪೆ ಅರಸರಿಂದ ಕಾಣಿಕೆ	,,
೧೬೮.	,,	,,	,,	—	,,	,,	ಮಲ್ಲಾಜಮ್ಮಣ್ಣಿಯಿಂದ ಕಾಣಿಕೆ.	,,
೧೬೯.	ನಂಜನಗೂಡು	,,	,,	—	,,	,,	ಶೃಂಗೇರಿ ಸ್ವಾಮಿಗಳಿಂದ ಕಾಣಿಕೆ.	,,
೧೭೦.	,,	,,	,,	—	,,	,,	ಶೃಂಗೇರಿ ಜಗದ್ಗುರು ನರಸಿಂಹ ಭಾರತಿಗಳಿಂದ (ಚಿನ್ನದ ಸರ) ಕಾಣಿಕೆ.	,,

(ಮುಂದುವರಿಯುವುದು)

ಒರೆಗಲ್ಲು

---

೧. ಪಂಪಭಾರತದ ಒಂದು ನಂಬಿಕೆ, ಒಂದು ಮೌಲ್ಯ :

ಪ್ರಾಚೀನ ಕನ್ನಡಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈ ವರೆಗೆ ಸಂಶೋಧನ ಮತ್ತು ವಿಮರ್ಶನದೃಷ್ಟಿಯ ಅಧ್ಯಯನ ನಡೆದು, ಈಗ 'ಜೀವನದರ್ಶನ' ದೃಷ್ಟಿಯ ಅಧ್ಯಯನದ ಕಾಲ ಸನ್ನಿಹಿತವಾಗಿದೆ. ಈ ನಿಟ್ಟಿನಲ್ಲಿ ನಡೆಯಬೇಕೆನ್ನುವವರಿಗೆ ಪಂಪ ಭಾರತವೊಂದು ಕನ್ನೆ ನೆಲ. ಮಹಾಭಾರತವೆಂಬ 'ಕತೆ', ಸಮಕಾಲೀನ ಜೀವನವೆಂಬ 'ವರ್ಣಕ'ಗಳನ್ನು 'ಒಡಂಬಡಿಸಿ'ಕೊಂಡ ಅಪೂರ್ವಕೃತಿಯಾದ ಇದು, ನಿಜ ಅರ್ಥ ದಲ್ಲಿ ೧೦ನೆಯ ಶತಮಾನದ ಜನಾಂಗದ ಚರಿತ್ರೆಯಾಗಿದೆ.

'ಜನಾಂಗ' ಎಂಬುದು ತೀರ ಸಂಕೀರ್ಣ ಆಚಾರ–ವಿಚಾರಗಳಿಂದ ಕೂಡಿದ ಜನ ಸಮೂಹ. ಸರ್ವದೇಶ, ಸರ್ವಕಾಲ ಮಾನಿತವಾದ ಆದರ್ಶಗಳೂ ಒಂದು ದೇಶ, ಒಂದು ಕಾಲದ ಆದರ್ಶಗಳೆನಿಸುವ ಮೌಲ್ಯಗಳೂ ಆ ದೇಶ, ಆ ಕಾಲಗಳ ಅನಧಿಕೃತ ಮತ್ತು ಅರೆಲಕ್ಷಿತ ಮೌಲ್ಯಗಳೆನಿಸುವ ನಂಬಿಕೆಗಳೂ ಇಂಥ ಜನಾಂಗವನ್ನು ಮುನ್ನಡೆ ಸುವ ಸೂತ್ರಗಳಾಗಿರುತ್ತವೆ. ಪಂಪಭಾರತದಲ್ಲಿ ಕಾಣುವ ಇಂಥ ಒಂದು ನಂಬಿಕೆ ಮತ್ತು ಇಂಥ ಒಂದು ಮೌಲ್ಯವನ್ನು ಇಲ್ಲಿ ಗಮನಿಸಬಹುದು.

೧. ಬೇರ್ಗಳಂ ನಭಕ್ಕೆತ್ತದೆ :

ಒತ್ತಿ ತರುಂಬಿನಿಂದ ರಿಪುಭೂಜಸಮಾಜದ ಬೇರ್ಗಳಂ ನಭ।
ಕ್ಕೆತ್ತದೆ, ತನ್ನ ಬಂದು ಮೊರೆವೊಕ್ಕಡೆ ಕಾಯದೆ, ಚಾಗದೊಳ್ಪನ।
ಚ್ಚೊತ್ತದೆ— ಪೂಣ್ದು ಬಾಳ್ವ ಪುಳುವಾನಸನೆಂಬನಜಾಂಡಮೆಂಬುದೊಂ।
ದತ್ತಿಯಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮುರಾಂತಕಾ ॥

'ಅತ್ತಿಯ ಪಣ್ಣೊಳಿರ್ಪ ಪುಳು' ಎಂಬ ಹೋಲಿಕೆಯ ಮೂಲಕ ಅಳಿಮಾನವನನ್ನು ಸೂಚಿಸುವ ಇದು, ಪಂಪಭಾರತದ ಒಂದು ಅಪೂರ್ವಪದ್ಯ. ಇಲ್ಲಿ ಪರಾಕ್ರಮ, ದಾನ, ಶರಣಾಗತರಕ್ಷಣೆಯೆಂಬ ಮೂರು ಜೀವನಮೌಲ್ಯಗಳನ್ನು (ರನ್ನ ಹೇಳುವ "ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ....) ಹೇಳಲಾಗಿದ್ದು, 'ಒತ್ತಿ ತರುಂಬಿನಿಂದ ರಿಪುಭೂಜಸಮಾಜದ ಬೇರ್ಗಳಂ ನಭಕ್ಕೆ' ಎತ್ತಬೇಕು ಎಂಬ ವಾಕ್ಯದಿಂದ, ಏರಿಬಿಂದ ವೈರಿವೃಕ್ಷಸಮೂಹದ ಬೇರುಗಳನ್ನು ಮುಗಿಲಿಗೆ ತೋರಿಸಬೇಕು ಎಂಬ ಅರ್ಥ ಹೊರಡುತ್ತದೆ. ಇಲ್ಲಿಯ **'ಬೇರುಗಳನ್ನು ಮುಗಿಲಿಗೆ ತೋರಿಸಬೇಕು'**

ಎಂಬ ಹೇಳಿಕೆಯ ಕಡೆಗೆ ನಮ್ಮ ವಿದ್ವಾಂಸರು ವಿಶೇಷ ಗಮನಕೊಟ್ಟಂತೆ ತೋರುವುದಿಲ್ಲ. 'ನಭ' ಪದವನ್ನು ಪಾದಪೂರಣಕ್ಕಾಗಿ ಇಲ್ಲವೆ ಶಕ್ತಿಪೂರ್ಣ ಅಭಿವ್ಯಕ್ತಿಗಾಗಿ ಬಳಸಿರಬೇಕೆಂದು ಕೆಲವರು ಭಾವಿಸಿರಬಹುದು; ಇನ್ನು ಕೆಲವರು ನೆಲದ ಸಂಪರ್ಕ ಬಂದರಲ್ಲವೇ ಬೇರು ಚಿಗಿಯುವುದು, ಹಾಗಾಗದಂತೆ ಬುಡಮೇಲು ಮಾಡಬೇಕು ಎಂದು ಸಸ್ಯಧರ್ಮದ ಹಿನ್ನೆಲೆಯಲ್ಲಿ ಅರ್ಥೈಸಿರಬಹುದು. ಮೂಲೋತ್ಪಾಟನ ಅರ್ಥದ ಯಾವುದೇ ಪದವಾದರೂ ಇವರ ದೃಷ್ಟಿಯಲ್ಲಿ ನಡೆಯುತ್ತದೆ. ಆದರೆ ಈ ಭಾಗವನ್ನು ಸಸ್ಯಧರ್ಮದ ಹಿನ್ನೆಲೆಯಲ್ಲಿ ಅರ್ಥೈಸದೆ, ಜಾನಪದ ನಂಬಿಕೆಯ ಹಿನ್ನೆಲೆಯಲ್ಲಿ ಅರ್ಥೈಸಬೇಕೆಂದು ತೋರುತ್ತದೆ.

ಉತ್ತರಕರ್ನಾಟಕದಲ್ಲಿ 'ಬೇರು' ಮತ್ತು 'ಮುಗಿಲು'ಗಳಿಗೆ ಸಂಬಂಧಪಟ್ಟಂತೆ ಒಂದು ಜಾನಪದ ನಂಬಿಕೆಯಿದೆ. ಸಸಿಯನ್ನು ಕಿತ್ತು, ಮತ್ತೆ ಊರುವಾಗ ಅದರ ಬೇರನ್ನು ಮುಗಿಲಿಗೆ ತೋರಿಸಬಾರದು, ತೋರಿಸಿದಲ್ಲಿ ಅದು ಹತ್ತಿಕೊಳ್ಳುವುದಿಲ್ಲವೆಂಬುದೇ ಆ ನಂಬಿಕೆ. ಮಕ್ಕಳಲ್ಲಿಯಂತೂ ಇದು ತುಂಬ ಪ್ರಚಾರದಲ್ಲಿದೆ. ಅವರು ಸಸಿಯನ್ನು ಕಿತ್ತು ಸ್ಥಳಾಂತರಿಸುವಾಗ, ಬೇರನ್ನು ಮುಗಿಲಿಗೆ ತೋರಿಸಬಾರದು ಎಂದು ಹೇಳುವುದು, ಹಾಗೆ ಮಾಡುವುದು ಇಂದಿಗೂ ಪ್ರಚಾರದಲ್ಲಿದೆ. ಪಂಪ ಪ್ರಯೋಗಿಸಿದ 'ಬೇರ್ಗಳ ನಭಕ್ಕೆ' ಎತ್ತಬೇಕೆಂಬ ಮಾತಿಗೆ ಹಾಗೆ ಮಾಡಿದಲ್ಲಿ ಅದು ಮತ್ತೆ ಹತ್ತಿಕೊಳ್ಳುವುದೇ ಇಲ್ಲ ಎಂಬ ಈ ಜಾನಪದ ನಂಬಿಕೆ ಹಿನ್ನೆಲೆಯಾಗಿದೆ.

''ಜಯವಧು ಕೂರ್ತೆಸೆದಿರ್ಕುಂ ಮಾವನ ನಿಮ್ಮ ದಯೆಯಿಂದೆಮ್ಮಂ'' ಎಂಬ ಪಂಪಭಾರತದ ವಾಕ್ಯದಲ್ಲಿಯ ವಧು ಮತ್ತು ಮಾವಗಳ ಸಂಬಂಧದಂತೆ ಇಲ್ಲಿ 'ಬೇರು' ಮತ್ತು 'ನಭ'ಗಳಲ್ಲಿ ಸಂಬಂಧ ಕಲ್ಪಿಸಿಕೊಂಡು, ಈ ಜಾನಪದ ನಂಬಿಕೆಯ ಹಿನ್ನೆಲೆಯಲ್ಲಿ 'ಬೇರ್ಗಳಂ ನಭಕ್ಕೆತ್ತದೆ' ಎಂಬುದನ್ನು ಪರಿಭಾವಿಸಬೇಕು. ಆಗ ಈ ಮಾತಿನ ಅರ್ಥ ಇನ್ನಷ್ಟು ಹೊಳೆಯುತ್ತದೆ; ತನ್ನ ಕಾಲದ ಈ ಒಂದು ನಂಬಿಕೆಯನ್ನು ಆಯ್ದುಕೊಂಡ ಪಂಪನ ದೃಷ್ಟಿ ಅಚ್ಚರಿ ಹುಟ್ಟಿಸುತ್ತದೆ.

೨. ಕರ್ಣನೊಡಲಿಂದಾಗಳ್ :

> ಕುಡುಮಿಂಚಿನ ಸಿಡಿಲುರುಳಿಯೊ ।
> ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್ ।
> ನಡೆ ನೋಡೆನೋಡೆ ದಿನಪನೊ ।
> ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ॥

ಕರ್ಣನ ಪ್ರಾಣೋತ್ಕ್ರಮಣ ಪ್ರಸಂಗದಲ್ಲಿ ಬರೆದ ಪಂಪಭಾರತದ ಈ ಪದ್ಯ, ವ್ಯಾಸ ಭಾರತದ

ದೇಹಾಚ್ಚ ಕರ್ಣಸ್ಯ ನಿಪಾತಿತಸ್ಯ
ತೇಜಃ ಸೂರ್ಯಂ ಖಂ ವಿತತ್ಯಾವಿವೇಶ

—ಕರ್ಣಪರ್ವ ಅಧ್ಯಾಯ ೯೧, ಶ್ಲೋಕ ೫೮.

ಈ ಶ್ಲೋಕದ ಕನ್ನಡ ರೂಪವಾಗಿದೆ. ಈ ವರೆಗೆ ಕರ್ಣನ ಬಗ್ಗೆ ಬರೆದ ಅನೇಕ ವಿದ್ವಾಂಸರು ಈ ಪದ್ಯದ ಅರ್ಥವಿಶೇಷವನ್ನು ಗಮನಿಸದೆ, ಕೇವಲ ಶಬ್ದಾರ್ಥವನ್ನು ಹೇಳಿದ್ದಾರೆ. 'ಪಂಪಭಾರತ ದೀಪಿಕೆ'ಯಲ್ಲಿ ಆಗಾಗ ಪದ್ಯಗಳ ಅಂತರಾರ್ಥವನ್ನು ಸೂಚಿಸುವ ಡಾ. ಡಿ. ಎಲ್. ಎನ್. ಅವರು ಸಹ ಈ ಪದ್ಯಕ್ಕೆ

"ಕುಡುಮಿಂಚಿನ– ವಕ್ರವಾದ ಮಿಂಚನ್ನುಳ್ಳ, ಸಿಡಿಲುರುಳಿಯೊಳ್– ಸಿಡಿಲ ಉಂಡೆಯಲ್ಲಿ, ತೇಜೋರೂಪಂ– ತೇಜಸ್ಸಿನ ರೂಪವುಳ್ಳ, ಒಂದು ಮೂರ್ತಿ– ಒಂದು ಬಿಂಬವು. ಒಡಂಬಡಂ ಪಡೆಯೆ– ಒಪ್ಪುವುದಾಗಲು, ಹೊಂದಿಕೊಳ್ಳಲು, ಕರ್ಣನ, ಒಡಲಿಂದೆ– ದೇಹದಿಂದೆ. ಆಗಳ್– ಆಗ, ನಡೆ ನೋಡೆನೋಡೆ– ಚೆನ್ನಾಗಿ ನೋಡಲು. ದಿನಪನೊಳ್– ಸೂರ್ಯನಲ್ಲಿ, ಒಡಗೂಡಿದುದು– ಐಕ್ಯವಾಯಿತು."

ಎಂದು ಸಾಮಾನ್ಯ ಅರ್ಥ ಬರೆದಿದ್ದಾರೆ. ಇಲ್ಲಿ ಬಹಳೆಂದರೆ ತಂದೆಯಾದ ಸೂರ್ಯನ ಹತ್ತಿರ, ಮಗನಾದ ಕರ್ಣನ ತೇಜೋರೂಪ ಹೋಯಿತೆಂದು ಕೆಲವರು ಹೇಳಬಹುದು. ಹಾಗಿದ್ದರೆ ಕುರುಕ್ಷೇತ್ರದಲ್ಲಿ ಮಡಿದ ವೀರವ್ಯಕ್ತಿಗಳ ತೇಜೋರೂಪ ತಮ್ಮ ದೈವೀ ತಂದೆಗಳ ಹತ್ತಿರ ಹೋಗದೆ, ಕರ್ಣನ ಒಡಲಿನಿಂದ ಮಾತ್ರ ಏಕೆ ಹೋಯಿತು ? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಗೆ ಪುರಾತನ ಭಾರತೀಯರು ನಂಬಿದ್ದ ಮೌಲ್ಯದ ಹಿನ್ನೆಲೆಯಲ್ಲಿ ಉತ್ತರ ಹುಡುಕಬೇಕು.

ಪ್ರಾಚೀನಕಾಲದಲ್ಲಿ ಪ್ರಜಾರಕ್ಷಣೆಯ ನಿಯತವಾದ ವ್ಯವಸ್ಥೆ ಇರಲಿಲ್ಲ. ಸ್ವಯಂ ವೀರನಲ್ಲದೆ ಒಬ್ಬ ವ್ಯಕ್ತಿ, ಒಂದು ದೇಶ ಬದುಕುವುದು ಅಸಾಧ್ಯವಾಗಿದ್ದಿತು. ಪ್ರಾಣವನ್ನು ಪಣಕ್ಕಿಟ್ಟು ಹೋರಾಡುವಂತೆ ಪ್ರಜೆಗಳಲ್ಲಿ ವೀರಭಾವವನ್ನು ತುಂಬುವ ಕಾಲವದು. ಹೀಗಾಗಿ ಶೌರ್ಯ ಪ್ರದರ್ಶನದ ಬಗ್ಗೆ ಅನೇಕ ಮೌಲ್ಯಗಳು, ಪ್ರಶಂಸೆಗಳು ಅಂದಿನ ಸಮಾಜದಲ್ಲಿ ಬೆಲೆ ಪಡೆದವು, ನೆಲೆ ಪಡೆದವು. ಇವುಗಳಲ್ಲಿ 'ಹತೇನಾಪಿ ಸುರಾಂಗನಾ' ಎಂಬ 'ವೀರಸ್ವರ್ಗಸಾಧನೆ' ಜನಮನದಲ್ಲಿ ಆಳವಾಗಿ ಬೇರೂರಿದ್ದಿತು. ಸ್ವರ್ಗವನ್ನು ಸಾಧಿಸಲು ಅವಶ್ಯವಾಗಿರುವ ದೇವೋಪಾಸನೆ ಮೊದಲಾದವುಗಳ ಸಾಲಿನಲ್ಲಿ 'ವೀರಮರಣ'ವೂ ಸ್ಥಾನಪಡೆದು ಧರ್ಮವೀರನಿಗೆ ಸಮಾನವಾದ ಸ್ಥಾನ, ಯುದ್ಧ ವೀರನಿಗೂ ಲಭಿಸಿತು. ಆದರೆ ಇವರು 'ಸೂರ್ಯಮಂಡಲ'ವನ್ನು ಭೇದಿಸಿ ಸ್ವರ್ಗ ಲೋಕಕ್ಕೆ ಹೋಗಬೇಕಾಗುತ್ತದೆಯೆಂದು

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ ।
ಪರಿವ್ರಾಟ್ ಯೋಗಯುಕ್ತಶ್ಚ ರಣೇಚಾಭಿಮುಖೇ ಹತಃ ।

ಎಂಬ ಶ್ಲೋಕದ ಮೂಲಕ ಮಹಾಭಾರತ ಸ್ಪಷ್ಟಪಡಿಸುತ್ತದೆ. ಈ ಶ್ಲೋಕ, ಕರ್ನಾಟಕದ ಅನೇಕ ವೀರಶಾಸನಗಳಲ್ಲಿಯೂ ಗೋಚರಿಸುತ್ತದೆ.[೧] ಮೇಲಿನ ಪಂಪಭಾರತದ ಪದ್ಯವನ್ನು ಈ ಮೌಲ್ಯದ ಹಿನ್ನೆಲೆಯಲ್ಲಿ ಅರ್ಥೈಸಬೇಕು. ಅಂದರೆ ತೀರಿಕೊಂಡ ಕೂಡಲೇ ಕರ್ಣನ ಒಡಲಿನಿಂದ ತೇಜೋರೂಪವೊಂದು ಸೂರ್ಯಮಂಡಲವನ್ನು ಸೇರಿತು ಎಂಬುದಕ್ಕೆ ಸ್ವರ್ಗದತ್ತ ಪ್ರಯಾಣ ಬೆಳೆಸಿತು ಎಂದು ಅರ್ಥ ಹೇಳಬೇಕೇ ಹೊರತು, ತಂದೆಯತ್ತ ನಡೆಯಿತು ಎಂದು ಅರ್ಥ ಹೇಳಬಾರದು. ಈ ಪದ್ಯದ ತರುವಾಯವೇ ಬಂದ

" ಪಿಡಿದನೆ ಪುರಿಗಣೆಯನೆರ ।
ಬ್ಬಿಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ।
ಪಿಡಿದಟ್ಟಿದನ್ " ಎಂದು ದೇವರ ।
ಪಡೆ ಗಡಣದೆ ಪೊಗೞ್ದು ದಿನತನೂಜನ ಗಂಡಂ ॥

ಎಂಬ ಪದ್ಯ, ದೇವತೆಗಳ ಹೊಗಳಿಕೆಯೊಂದಿಗೆ ದೇವಲೋಕಕ್ಕೆ ನಡೆದ ವೀರನ ಪ್ರಯಾಣವನ್ನೇ ಧ್ವನಿಸುತ್ತದೆ.

ಪ್ರಾಚೀನಕಾಲದ 'ಜೋಳವಾಳಿ'ಗಳಿಗೆ 'ವೀರಸ್ವರ್ಗ', ಬದುಕಿನ ಸಾರಸರ್ವಸ್ವವಾಗಿದ್ದಿತಂ. ಅವರಿಗೆ ಆದರ್ಶವಾಗುವಂತೆ ಇಲ್ಲಿ ಕರ್ಣನ ಮೂಲಕ ಒಬ್ಬ ಜೋಳವಾಳಿ ವೀರಸ್ವರ್ಗವೇರುವ ಕ್ರಿಯೆಯನ್ನು ಶಬ್ದಾಭಿನಯದಿಂದ ತೋರಿಸಿದ್ದಾರೆ, ವ್ಯಾಸ ಮತ್ತು ಪಂಪ.[೨]

ಹೀಗೆ ಒಳಹೊಕ್ಕು ನೋಡಿದರೆ ಪಂಪನ ಪದಗಳು, ಪದ್ಯಗಳು ತಮ್ಮ ಶಬ್ದಾರ್ಥ ಮಿತಿಯನ್ನು ಮೀರುತ್ತ ಹೋಗಿ ಒಂದು ನಂಬಿಕೆಗೋ, ಒಂದು ಮೌಲ್ಯಕ್ಕೋ ಸಂಕೇತವಾಗಿ ನಿಲ್ಲುತ್ತವೆ.

ಎಂ. ಎಂ. ಕಲಬುರ್ಗಿ

೨. ಅಂಬುಲಿಗೆ ಚೆನ್ನಮಲ್ಲೇಶ ಮತ್ತು ಶಿವಸಿದ್ಧರಾಮರ ಕಾಲ ವಿಚಾರ :

ಆರ್. ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ' ದ್ವಿತೀಯ ಸಂಪುಟ,

---

೧ ಶಾಸನಗಳಲ್ಲಿಯೂ ಈ ಶ್ಲೋಕ ಇರುವುದೆಂದು ನನ್ನ ಗಮನಕ್ಕೆ ತಂದ ಡಾ. ಎಂ ಚಿದಾನಂದ ಮೂರ್ತಿ ಅವರಿಗೆ ನನ್ನ ಕೃತಜ್ಞತೆಗಳು.

೨ ದಾನಿಯೂ ಸೂರ್ಯಮಂಡಲವನ್ನು ಭೇದಿಸಿ, ಸ್ವರ್ಗಕ್ಕೆ ಹೋಗುವನೆಂದು ಸರ್ವಜ್ಞ ಹೇಳುತ್ತಾನೆ:

ದಾನದ ಫಲದಿಂದೆ । ಶ್ರೀನಾಥನಾಗುವ ।
ಭಾನುಮಂಡಲವನೊಡೆದಮಳ । ಸ್ವರ್ಗಕ್ಕೆ
ತಾನೊಡೆಯನಹನು ಪರಮಾರ್ಥ. (ವಚನ ೩೫೧)

ಪುಟ ೫೪೩ ರಲ್ಲಿ (ಅಂಬುಲಿಗೆ) ಚೆನ್ನಮಲ್ಲೇಶನ ಕಾಲವನ್ನು ಕುರಿತು '' ಪೂರ್ವ ಕವಿಗಳಲ್ಲಿ ಚಾಮರಸನನ್ನು (ಸು.೧೪೩೦) ಸ್ತುತಿಸುವುದರಿಂದ ಕವಿ ಅವನ ಕಾಲಕ್ಕಿಂತ ಈಚೆಯವನು ಎಂಬುದು ವ್ಯಕ್ತವಾಗಿದೆ; ಸುಮಾರು ೧೭೦೦ರಲ್ಲಿ ಇದ್ದಿರಬಹುದು'' ಎಂದಿದ್ದಾರೆ.

ಚೆನ್ನಮಲ್ಲೇಶ, ಚಾಮರಸನನ್ನು 'ದೀಪದ ಕಲಿಯರ ಕಾವ್ಯ'ದಲ್ಲಿ (೧–೮) ಸ್ಮರಿಸಿದ್ದಾನೆ. ಈ ದೀಪದ.... ಹಸ್ತಪ್ರತಿಯೊಂದನ್ನು "ತೇರದಾಳದ ಪ್ರಭುವಿನ ವಾಲ್ಯೆಸುವ ಚನ್ನಪ್ಪನ ಉದರದಿ ಜನಿಸಿದಂಥ ಮಗಿಯಯ್ಯನು'' ಶಾ. ಶಕೆ. ೧೬೧೭ (= ಕ್ರಿ. ಶ. ೧೬೯೫)ರಲ್ಲಿ ಪ್ರತಿಮಾಡಿದ್ದಾನೆ.[೧] ಈ ಪ್ರತಿಯ ಕಾಲವನ್ನು ಆಧರಿಸಿ, ಅಂಬುಲಿಗೆ ಚೆನ್ನಮಲ್ಲೇಶನ ಕಾಲವನ್ನು ಕವಿಚರಿತೆಕಾರರು ಸೂಚಿಸಿರುವುದಕ್ಕಿಂತ ಸುಮಾರು ೨೫–೩೦ ವರ್ಷ ಹಿಂದಕ್ಕೆ ಸರಿಸಬಹುದಾಗಿದ್ದು; ಆಗ ಕವಿಯ ಕಾಲ ಸು. ೧೬೭೦ ಎನ್ನಬಹುದು.

ದೊ. ಲ. ನರಸಿಂಹಾಚಾರ್ಯರು 'ವೀರಶೈವ ಶಿಖಾರತ್ನ'ದ ಕರ್ತೃ ಶಿವಸಿದ್ಧ ರಾಮನ ಕಾಲವನ್ನು ಚರ್ಚಿಸುತ್ತ ''ಇವನ ಗುರು ಚೆನ್ನಮಲ್ಲೇಶನು ಸು. ೧೭೦೦ರಲ್ಲಿದ್ದ ದೀಪದ ಕಲಿಯೂರ ಕಾವ್ಯ, ವೀರಸಂಗಯ್ಯನ ಚೌಪದ ಎಂಬ ಗ್ರಂಥಗಳ ಕರ್ತೃ ವಾದ ಚೆನ್ನಮಲ್ಲೇಶನಾಗಿದ್ದಲ್ಲಿ, ಅವನ ಶಿಷ್ಯ ಶಿವಸಿದ್ಧರಾಮನ ಕಾಲವೂ ಸುಮಾರು ೧೭೦೦ ಆಗುತ್ತದೆ'' ಎಂದಿದ್ದಾರೆ.[೨] ಈ ಮೊದಲು ತಿಳಿಸಿದಂತೆ ಅಂಬುಲಿಗೆ ಚೆನ್ನ ಮಲ್ಲೇಶನ ಕಾಲ ಸು. ೧೬೭೦ ಆಗಿದ್ದು, ಅವನ ಶಿಷ್ಯನಾಗಿರಬಹುದಾದ ಶಿವಸಿದ್ಧ ರಾಮನ ಕಾಲವು ಸಹ ಸು. ೧೬೭೦ ಆಗುತ್ತದೆ.

ಎಸ್. ಶಿವಣ್ಣ

---

೧ ಬುದ್ಧಯ್ಯಸ್ವಾಮಿ ಪುರಾಣಿಕ : ಶ್ರೀ ಮದನಾದಿ ಅಲ್ಲಮಪ್ರಭು, ಪು. ೧೫೯ (೧೯೩೬).
೨ ನರಸಿಂಹಾಚಾರ್. ಡಿ. ಎಲ್ : ಜಯಕರ್ನಾಟಕ. ೯–೮ (ಪು. ೫೬೩).

ಅಖಿಲ ಕರ್ನಾಟಕ ತೃತೀಯ ಜಾನಪದ ಸಮ್ಮೇಲನ

ಪಂಡಿತರ, ವಿವಿಧ ಕಲಾಮಂಡಿತರ ಅವಜ್ಞೆಗೆ ಒಳಗಾದ ಜಾನಪದಕ್ಕೆ ಇಂದು ಎಂದಿಲ್ಲದ ಅಗ್ರತಾಂಬೂಲ; ಬದುಕಿಗೆ ತೀರ ಹತ್ತಿರವಾದ ಜಾನಪದ ಈಗ ವಿಶ್ವವಿದ್ಯಾಲಯದ ಅಭ್ಯಸನೀಯ ವಿಷಯಂಗಳಲ್ಲೊಂದು. ಅಂತೆಯೇ ಈ ಬಗೆಗೆ ಗಮನ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ಕಳೆದ ಎರಡು ವರುಷಗಳಿಂದಲೂ ಅಖಿಲ ಕರ್ನಾಟಕ ಜಾನಪದ ಸಮ್ಮೇಲನಗಳನ್ನು ಅತ್ಯಂತ ವೈಶಿಷ್ಟ್ಯಪೂರ್ಣವಾಗಿ, ವೈವಿಧ್ಯಮಯವಾಗಿ ಜರುಗಿಸಿ ನಾಡಿನ ಜನತೆಯ ಕೃತಜ್ಞತೆಗೆ ಪಾತ್ರವಾಗಿದೆ. ಈ ಉಜ್ವಲಪರಂಪರೆಯನ್ನು ಈ ಸಲವೂ ಕಾಯ್ದುಕೊಂಡು ಬಂದ ಕೀರ್ತಿ ಅಧ್ಯಯನ ಪೀಠಕ್ಕೆ ಸಲ್ಲುತ್ತದೆ. ದಿನಾಂಕ ೧೪–೧–೧೯೭೬ ರಿಂದ ೧೫–೧–೧೯೭೬ ರ ವರೆಗೆ ಎರಡು ದಿನ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ, ವಿಜೃಂಭಣೆಯಿಂದ ನೆರವೇರಿತು; ವಿಜಯದುಂದುಭಿಯನ್ನು ಮೊಳಗಿಸಿತು.

ದಿನಾಂಕ ೧೪–೧–೧೯೭೬ರ ಬೆಳಗಿನ ಪ್ರಶಾಂತ ವಾತಾವರಣ. ವಿಶ್ವವಿದ್ಯಾಲಯದ ಆವರಣಕ್ಕೆ ಹೊಸ ಕಳೆ, ಬೆಳ್ಳಿಹಬ್ಬದ ಸಂಭ್ರಮ; ಸಡಗರ. ಗಾಂಧಿಭವನವು ವಿಖ್ಯಾತ ಜಾನಪದ ತಜ್ಞರಾಗಿದ್ದ ಲಿಂ. ಬಿ. ಎಸ್. ಗದ್ದಿಗಿಮಠರ ಮಂಟಪವಾಗಿ ನೇರ್ಪಟ್ಟಿತ್ತು. ಮುಂಜಾನೆ ಸರಿಯಾಗಿ ೯ ಗಂಟೆಗೆ ಸಮ್ಮೇಲನಾಧ್ಯಕ್ಷರಾದ ಡಾ. ದೇ. ಜವರೇಗೌಡ, ಉದ್ಘಾಟಕರಾದ ಕುಲಪತಿ ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನಪೀಠದ ನಿರ್ದೇಶಕರಾದ ಡಾ. ಎಮ್. ಎಸ್. ಸುಂಕಾಪುರ ಅವರು ಪ್ರಾಧ್ಯಾಪಕವೃಂದದೊಡನೆ ಮಂಟಪ ಪ್ರವೇಶಿಸಿದಂತೆಯೇ ಕಹಳೆಯ ಧ್ವನಿ; ಇನ್ನೊಂದು ಮೂಲೆಯಿಂದ ಕೋಗಿಲೆಯ ಕಲರವ ಸಹಜ ಸುಂದರವಾದ ಸನ್ನಿವೇಶ, ಆಗಮಿಸಿದವರ ಮನವನ್ನು ತಣಿಸಿತು. ಮಂಟಪದ ಮುಂಭಾಗದಲ್ಲಿಯೇ ಇದುವರೆಗೂ ಕನ್ನಡದಲ್ಲಿ ಪ್ರಕಟವಾದ ಜಾನಪದ ಸಾಹಿತ್ಯರಾಶಿಯ ಅಂದವಾದ ಪ್ರದರ್ಶನ.

ಮುಳಗುಂದ್ಧ ದೊಡ್ಡಾಟ ಮೇಳದವರಿಂದ ಜಾನಪದ ಧಾಟಿಯಲ್ಲಿಯೇ ಪ್ರಾರ್ಥನೆಯಾದ ನಂತರ ಹಾಸ್ಯಮಯ ಶೈಲಿಯಲ್ಲಿ ಡಾ. ಎಮ್. ಎಸ್. ಸುಂಕಾಪುರ ಅವರು ಕನ್ನಡ ಅಧ್ಯಯನಪೀಠವು ಜಾನಪದ ಕ್ಷೇತ್ರದಲ್ಲಿ ನಡೆದುಬಂದ ದಾರಿಯ ಸೂಕ್ಷ್ಮ ನೋಟವನ್ನೂ ಅಖಿಲ ಕರ್ನಾಟಕ ಜಾನಪದ ಸಮ್ಮೇಲನದ ಉದ್ದೇಶಗಳನ್ನೂ ವಿವರಿಸಿ- ಸಮಾರಂಭಕ್ಕೆ ಆಗಮಿಸಿದವರೆಲ್ಲರನ್ನೂ ಹೃತ್ಪೂರ್ವಕ ಸ್ವಾಗತಿಸಿದರು. ನಂತರ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠರು ನಂದಾದೀಪವನ್ನು ಬೆಳಗಿಸಿ, ಸಮ್ಮೇಲನವನ್ನು

ಉದ್ಘಾಟಿಸಿದರು. ಜಾನಪದದ ಉಗಮ-ವಿಕಾಸಗಳ ಬಗೆಗಿನ ಕುಲಪತಿಗಳ ಉದ್ಬೋಧಕ ವಿಚಾರಗಳು ಮನನೀಯವಾಗಿದ್ದವು. ರಾಮಾಯಣ-ಮಹಾಭಾರತಗಳು ಸಹ ಮೂಲತಃ ಜಾನಪದದ ವಸ್ತುಗಳು ಎಂಬ ಅಂಶವನ್ನು ಸ್ಪಷ್ಟಪಡಿಸಿ, ಬದಲಾದ ಕಾಲಮಾನದ ವಿಶ್ಲೇಷಣೆ ಮಾಡಿದ ಅವರು, ಹಳ್ಳಿಯಲ್ಲಿರುವ ಪ್ರತಿ ವಸ್ತುವಿನಲ್ಲಿ ಅಮೂಲ್ಯ ಇತಿಹಾಸ ವಿದೆ. 'ತಿರುಗಿ ಹಳ್ಳಿಗೆ ಹೋಗಿರಿ' ಎಂಬ ಗಾಂಧೀಜಿ ಸಂದೇಶ ಅರ್ಥಪೂರ್ಣವಾಗಿದೆ ಎಂಬ ಇತ್ಯಾದಿ ಮೌಲಿಕ ವಿಚಾರಗಳು ಸಭಿಕರ ಹೃದಯವನ್ನು ತಟ್ಟಿದವು; ವಿದ್ಯಾರ್ಥಿ ಗಳ ಮನಕ್ಕೆ ನಾಟಿದವು. ಡಾ. ಜವರೇಗೌಡರು ಕನ್ನಡದ ಕಲಿಗಳು. ಜಾನಪದ ಕ್ಷೇತ್ರ ದಲ್ಲಿ ಅವರು ಮಾಡಿದ ಕಾರ್ಯ ಶ್ಲಾಘನೀಯ. ಅವರ ಅಧ್ಯಕ್ಷತೆಯಲ್ಲಿ ಸಮ್ಮೇಲನವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಸಾರಿ, ಸಮ್ಮೇಲನವನ್ನು ಉದ್ಘಾಟಿಸಿ ದರು.

ಡಾ.ಜವರೇಗೌಡರು ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ, ಜಾನಪದದ ಹಿರಿಮೆ-ಗರಿಮೆಯನ್ನು ವಿಶ್ವಸಾಹಿತ್ಯದ ಹಿನ್ನೆಲೆಯಲ್ಲಿ ಹೃದಯಂಗಮವಾಗಿ ವಿವೇಚಿಸಿದರು; ವಿಶ್ಲೇಷಿಸಿದರು. ಅವರ ಸುದೀರ್ಘವಾದ, ವಿದ್ವತ್‌ಪೂರ್ಣವಾದ, ರಸವತ್ತಾದ ಭಾಷಣ ಪ್ರೇಕ್ಷಕರಿಗೆ ಒಂದು ರಸದೌತಣವಾಗಿತ್ತು. ಜಾನಪದವು ವಿಶ್ವವ್ಯಾಪಿ; ವಿಶ್ವ ರೂಪಿ. ಕರ್ನಾಟಕದಲ್ಲಿ ಜಾನಪದ ಬಗೆಗೆ ಮಾಡಬೇಕಾದ ಕಾರ್ಯ ಬೆಟ್ಟದಷ್ಟಿದೆ. ಇದೊಂದು ಅಮೂಲ್ಯ ಗಣಿ. ಈ ಗಣಿಯನ್ನು ತೋಡುವುದರಲ್ಲಿ ಎಲ್ಲರೂ ಆಸಕ್ತಿ-ಅಭಿರುಚಿ ಬೆಳಿಸಿಕೊಂಡರೆ ಜಾನಪದ ಬೆಳೆ ಹುಲುಸಾಗಿ ಬರುವುದರಲ್ಲಿ ಸಂದೇಹವಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠವು ಜಾನಪದದ ಬಗೆಗೆ ಮಾಡು ತ್ತಿರುವ ಕೆಲಸ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಿ, ತಮಗೆ ಈ ಬಗೆಯ ಸದಾವಕಾಶ ಕಲ್ಪಿಸಿದ ಕನ್ನಡ ಅಧ್ಯಯನಪೀಠದ ಕಾರ್ಯಕರ್ತರನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ, ಜನಪದ ಸಾಹಿತ್ಯದರ್ಶನ ಭಾಗ-೨ ಗ್ರಂಥದ ಬಿಡುಗಡೆ ಮಾಡಿ, ಗ್ರಂಥದ ಬಗೆಗೆ ಉಚಿತವಾದ ಎರಡು ಮಾತುಗಳನ್ನಾಡಿದರು. ಡಾ. ಕೆ. ಜಿ. ಶಾಸ್ತ್ರಿಗಳ ವಂದನಾರ್ಪಣದೊಂದಿಗೆ ಬೆಳಗಿನ ಸಮಾರಂಭವು ಮುಕ್ತಾಯಗೊಂಡಿತು.

ಮಧ್ಯಾಹ್ನ :

ಪೂರ್ವಯೋಜನೆಯಂತೆ ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ 'ಬಯಲು ನಾಟಕಗಳ ಸ್ವರೂಪ' ಎಂಬ ವಿಷಯವನ್ನು ಕುರಿತು ಮೊದಲನೆಯ ಗೋಷ್ಠಿ ಪ್ರಾರಂಭ ವಾಯಿತು. ಅಧ್ಯಕ್ಷತೆ, ಹೆಸರಾಂತ ಸಾಹಿತಿ ಶ್ರೀ ಕೆ. ವಿ. ಸುಬ್ಬಣ್ಣನವರದು. ಭಾಷಣ ಕಾರರ ಪರಿಚಯ ನೀಡಿ ಡಾ. ಜೆ. ಎಸ್. ಕುಳ್ಳಿಯವರು ಎಲ್ಲರ ಸ್ವಾಗತ ಬಯಸಿದರು. ಗೋಷ್ಠಿಯಲ್ಲಿ ನಾಲ್ಕುಜನ ವಿದ್ವಾಂಸರು ತಮ್ಮ ಅಭ್ಯಾಸಪೂರ್ಣ ಪ್ರಬಂಧಗಳನ್ನು ಸಾದರಪಡಿಸಿದರು. ಡಾ. ಕೆ. ಜಿ. ಶಾಸ್ತ್ರಿಯವರು 'ಯಕ್ಷಗಾನ' ಎಂಬ ವಿಷಯ ವನ್ನೆತ್ತಿಕೊಂಡು ಮಾತನಾಡಿದರು. ಯಕ್ಷಗಾನ ಒಂದು ವಿಶಿಷ್ಟಕಲೆ. ಉತ್ತರ ಮತ್ತು

ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇನ್ನೂ ಜೀವಂತವಾಗಿದೆ. ಯಕ್ಷಗಾನದ ಪರಂಪರೆ, ರಂಗಸ್ಥಳ, ಚಂಡೆಮದ್ದಳೆ, ಪಾತ್ರಗಳು, ಹಿಮ್ಮೇಳ ಮೊದಲಾದ ವಿವಿಧ ಸ್ತರಗಳನ್ನು ಎಳೆ-ಎಳೆಯಾಗಿ ಬಿಡಿಸಿ, ದೃಷ್ಟಾಂತಗಳನ್ನು ನೀಡಿದ ಅವರ ಪ್ರಬಂಧ ಮನೋಜ್ಞವಾಗಿದ್ದಿತು. ಡಾ. ಶಿವರಾಮ ಕಾರಂತರು ಯಕ್ಷಗಾನದ ಮೇಲೆ ನಡೆಸುತ್ತಿರುವ ಪ್ರಯೋಗಗಳ ಮಹತ್ವದ ಬಗೆಗೂ ಪ್ರೇಕ್ಷಕರ ಗಮನ ಸೆಳೆದರು.

ಪ್ರೊ.ಸೋಮಶೇಖರ ಇಮ್ರಾಪುರರು 'ದೊಡ್ಡಾಟದ ಸ್ವರೂಪದ' ಬಗೆಗೆ ವಿವೇಚಿಸಿದರು. ಅದರ ಉಗಮ-ವಿಕಾಸದ ಬಗೆಗೆ ತಮ್ಮ ವಿಚಾರಗಳನ್ನು ಪ್ರಸ್ತಾಪಿಸಿದರು. ಜನಪದರಂಗಭೂಮಿಯ ಪ್ರಮುಖ ಅಂಗ, ದೊಡ್ಡಾಟ. ಬಯಲಾಟದ ಹೊಟ್ಟೆಯಲ್ಲಿಯೇ ಸಣ್ಣಾಟಗಳಿವೆ. ದೊಡ್ಡಾಟಗಳಲ್ಲಿ ಪಾತ್ರ ಮಹತ್ವಪೂರ್ಣವಾದುದು-ಎಂದು ಮುಂತಾಗಿ ತಮ್ಮ ಪ್ರಬಂಧವನ್ನು ವಿಸ್ತಾರವಾಗಿಯೇ ಸಾದರಪಡಿಸಿದರು.

'ಕೃಷ್ಣಪಾರಿಜಾತ'ದ ಬಗೆಗೆ ಮಾತನಾಡಿದವರು, ಪ್ರೊ.ಭುಜೇಂದ್ರ ಮಹಿಶವಾಡಿ. ಜಾನಪದಕ್ಕೆ ಪುರಾಣವೇ ಮೂಲ; ಪುರಾಣಕ್ಕೆ ಜಾನಪದವೇ ಮೂಲ. ಜಾನಪದವು ವಿಜ್ಞಾನವೂ ಅಹುದೆಂಬ ವಿಚಾರಗಳಿಂದ ಪ್ರಾರಂಭವಾದ ಅವರ ಪ್ರಬಂಧ, ಅನೇಕ ಸಂಶೋಧನಾತ್ಮಕ ಅಂಶಗಳಿಂದ ಕೂಡಿತ್ತು. 'ಪಾರಿಜಾತ'ದ ಕಥಾವಸ್ತು, ಧಾಟಿ, ಪ್ರಕಾರ, ಪಾತ್ರ ಮೊದಲಾದವುಗಳ ಉಲ್ಲೇಖ ಮಾಡುತ್ತ ಅಪರಾಳ ತಮ್ಮಣ್ಣ, ಕುಲಗೋಡ ತಮ್ಮಣ್ಣ ಇವರು 'ಪಾರಿಜಾತ'ದ ಬಗೆಗೆ ಸಲ್ಲಿಸಿದ ಅಮೋಘ ಸೇವೆಯನ್ನು ಎತ್ತಿಹೇಳಿದರು. ಕೌಜಲಗಿ ನಿಂಗಮ್ಮ ವಹಿಸಿದ ಪಾತ್ರವನ್ನು ಮರಾಠಿಯ ನಾಮಚಂದ್ರ ಪೌಳಾಬಾಯಿಯ ಪಾತ್ರದ ಹಿನ್ನೆಲೆಯಲ್ಲಿ ಮಾಡಿದ ತೌಲನಿಕ ವಿವೇಚನೆ ಸಭಿಕರ ಗಮನವನ್ನು ಸೆಳೆಯಿತು. ಈ ಪಾರಿಜಾತದಿಂದ ಜೈನ ಪಾರಿಜಾತ, ಶೈವ ಪಾರಿಜಾತ, ವೈಷ್ಣವ ಪಾರಿಜಾತಗಳೂ ಹುಟ್ಟಿಕೊಂಡಿವೆಯೆಂಬ ವಿವರಗಳನ್ನು ನೀಡಿದರು.

ಕೊನೆಯದಾಗಿ ಡಾ. ಎಮ್. ಎಸ್. ಲಕ್ಷ್ಮಿಯವರು 'ಗೊಂಬೆಯಾಟ'ದ ಬಗೆಗಿನ ಪ್ರಬಂಧವನ್ನು ಸಾದರಪಡಿಸಿದರು. ಗೊಂಬೆಯಾಟದಲ್ಲಿ ಸೂತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದೆ. ಸೂತ್ರಧಾರನ ಪಾತ್ರವು ಹಿರಿದಾಗಿದೆ. ಕಾಲ ಬದಲಾದಂತೆ ಗೊಂಬೆಗಳ ಆಟ ಬದಲಾಗಿದೆ. ಜಾನಪದ ಸಂಸ್ಕೃತಿಯಲ್ಲಿ ಗೊಂಬೆಯಾಟ ಒಂದು ಮೈಲುಗಲ್ಲು. ಈ ಆಟ ಆಡಿದರೆ ಮಳೆ ಬರುತ್ತದೆಂಬ ನಂಬಿಕೆಯಿದೆ. ಪ್ರತಿಯೊಂದು ರಾಷ್ಟ್ರದಲ್ಲಿ ಗೊಂಬೆಗಳ ಆಟಗಳಿವೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ 'ಗೊಂಬೆಯಾಟ' ಒಂದು ಅಭ್ಯಸನೀಯ ವಿಷಯ. ಈಗಿನ ಸಿನೀಮಾಗಳ ಮೂಲವು ಸಹ ಗೊಂಬೆಯಾಟದಲ್ಲಿದೆಯೆಂದು ಮುಂತಾಗಿ ಸ್ಪಷ್ಟಪಡಿಸಿದ ಅವರ ಪ್ರಬಂಧ ಚೇತೋಹಾರಿಯಾಗಿತ್ತು.

ಶ್ರೀ ಕೆ. ವಿ. ಸುಬ್ಬಣ್ಣನವರು ಅಧ್ಯಕ್ಷಸ್ಥಾನದಿಂದ ಸಮಾರೋಪ ಭಾಷಣ ಮಾಡಿ ಸಾದರಪಡಿಸಿದ ಪ್ರಬಂಧಗಳ ಸಮೀಕ್ಷೆ ಮಾಡಿದರು. ಜಗತ್ತಿನ ನಾಟಕಗಳ-

ಹಿನ್ನೆಲೆ–ಸ್ವರೂಪಗಳನ್ನು ಎತ್ತಿಕೊಂಡು ನಾವು ಸಾಧಿಸಬೇಕಾದ ಮಹತ್ವದ ಅಂಶಗಳ ಕಡೆಗೆ ಪ್ರೇಕ್ಷಕನ ಗಮನ ಸೆಳೆದರು.

ಸಾಯಂಕಾಲ :

ಜಾನಪದರಂಗದರ್ಶನದ ಅಂಗವಾಗಿ ಕನ್ನಡ ಅಧ್ಯಯನಪೀಠದ ಜಾನಪದ ವಿದ್ಯಾರ್ಥಿನಿಯರಿಂದ ಜರುಗಿದ ರಂಗುರಂಗಿನ ವೇಷದ ಜಾನಪದ ನೃತ್ಯ ಮನೋಹರ ವಾಗಿತ್ತು. ಸಾಲಹಳ್ಳಿಯ ಶ್ರೀ ಮಲ್ಲಪ್ಪ ಹೊಸಕೋಟಿ ಹಾಗೂ ಸಂಗಡಿಗರ ಗೀಗೀ ಮೇಳದವರು ತಮ್ಮ ಪದಗಳಿಂದ ಜನಮನ ಸೂರೆಗೊಂಡರು. ಅಮರಗೋಳದ ಶ್ರೀ ನಿಂಗಪ್ಪ ಪೂಜೇರ ಹಾಗೂ ಸಂಗಡಿಗರು ಡೊಳ್ಳಿನ ಪದಗಳನ್ನು ಸಾದರಪಡಿಸಿದರು. ರಂಗದರ್ಶನದ ಕೇಂದ್ರಕಾರ್ಯಕ್ರಮವಾದ ಮುಳಗುಂದ ಮೇಳದವರ 'ದ್ರೌಪದಿ ವಸ್ತ್ರಾಹರಣ' ದೊಡ್ಡಾಟವು ಕಲಾಪ್ರೌಢಿಮೆಯಿಂದ ಕೂಡಿತ್ತು. ದೊಡ್ಡಾಟದ ಪ್ರತ್ಯಕ್ಷ ಪ್ರದರ್ಶನದ ಮಾದರಿಯಿಂದಾಗಿ ಕಲಾಪ್ರೇಮಿಗಳ ಮೆಚ್ಚುಗೆಯನ್ನು ಗಳಿಸಿತು.

ಜನೆವರಿ ೧೫ ರ ಮುಂಜಾನೆ :

ಬೆಳಗಿನ ೯–೩೦ ಕ್ಕೆ ಸರಿಯಾಗಿ ' ಬಯಲು ನಾಟಕಗಳ ಸ್ವರೂಪ ' ವಿಷಯದ ಬಗೆಗಿನ ಎರಡನೆಯ ಗೋಷ್ಠಿಯು ಡಾ. ಆರ್. ವಾಯ್. ಧಾರವಾಡಕರರ ಅಧ್ಯಕ್ಷತೆ ಯಲ್ಲಿ ಜರುಗಿತು. ಈ ಗೋಷ್ಠಿಯಲ್ಲಿಯೂ ನಾಲ್ವರು ವಿದ್ವಾಂಸರು ಭಾಗವಹಿಸಿ ದ್ದರು. ಡಾ. ಎಮ್. ಎಮ್. ಕಲಬುರ್ಗಿಯವರು ಗೋಷ್ಠಿಯ ನಿಯಂತ್ರಕರಾಗಿ ಭಾಷಣಕಾರರ ಪರಿಚಯ ಮಾಡಿಕೊಡುತ್ತ ಎಲ್ಲರನ್ನೂ ಸ್ವಾಗತಿಸಿದರು.

ಮೊದಲ ಪ್ರಬಂಧವನ್ನು ಸಾದಪರಡಿಸಿದವರು ಶ್ರೀ ಎಮ್. ಟಿ. ಧೂಪದ. 'ರಾಜಾನಾಟ'ದ ಬಗೆಗೆ ಮಾತನಾಡುತ್ತ ಅದರ ಸ್ವರೂಪ, ರಂಗಸಜ್ಜಿಗೆ, ದಪ್ಪಿನ ನಾದ, ನೃತ್ಯಗಳಿಂದ ಜನಮೆಚ್ಚುಗೆಯನ್ನು ಪಡೆದ ರೀತಿಯನ್ನು ಮಾರ್ಮಿಕವಾಗಿ ತಿಳಿಸಿದರು. ಹಲವು ಕಡೆಗೆ ಇದಕ್ಕೆ ಚಿಮಣಾನಾಟವೆಂಬ ಹೆಸರೂ ಇದೆ. ರಾಜಾನಾಟವನ್ನು ತಳೇ ವಾಡ ನಬಿ ಪ್ರಚಾರ ಮಾಡಿದನು ಎಂದು ಹೇಳಿದ ಅವರ ಪ್ರಬಂಧದಲ್ಲಿ ಸಂಶೋಧಕ ದೃಷ್ಟಿಯನ್ನು ಕಾಣಬಹುದಿತ್ತು.

ಡಾ. ಬಿ. ಬಿ. ಹೆಂಡಿಯವರು 'ದಾಸರಾಟ'ದ ಸ್ವರೂಪವನ್ನು ಕುರಿತು ಮಾತನಾಡಿ ದರು. ಈ ಆಟದಲ್ಲಿ ಗೊಟ್ಟಿ ಭೀಮಣ್ಣ, ಜವಾರಿ (ಸಖಾರಾಮ), ಚಿಮಣಾ (ಸ್ತ್ರೀ) ಇವರೇ ಮುಖ್ಯ ಪಾತ್ರಧಾರಿಗಳು. ಇದರಲ್ಲಿ ಹೆಣ್ಣು, ಗಂಡಿಗೆ ಹೆಚ್ಚು ಬೋಧಿಸಿದರೆ ಅದು ರಾಧಾನಾಟ; ಗಂಡು, ಹೆಣ್ಣಿಗೆ ಹೆಚ್ಚು ಬೋಧಿಸಿದರೆ ರಾಜಾನಾಟವೆಂದು ಕರೆಯುವರು. ಇದನ್ನು ಹೆಚ್ಚು ಪ್ರಚಾರಮಾಡಿದವರು ಹೊನ್ನಿಕೇರಿಯ ಕಲಾಕಾರರು. ಹೀಗೆ ನಾಟಕಾಂಶದ ಭಾಗಗಳನ್ನು ಎತ್ತಿ ಸ್ಪಷ್ಟಪಡಿಸಿದ ಅವರ ಪ್ರಬಂಧ ವಿಚಾರಪ್ರಚೋದಕವಾಗಿತ್ತು.

ಪ್ರೊ. ಎಸ್. ಎಸ್. ಬ್ಯಾತನಾಳ 'ಶರಣರಾಟ'ವನ್ನು ಎತ್ತಿಕೊಂಡು, ತಮ್ಮ ಪ್ರಬಂಧವನ್ನು ಓದಿದರು. ಶರಣರಾಟ, ಸಣ್ಣಾಟದ ಪ್ರಕಾರಕ್ಕೆ ಸೇರಿದುದು. ನೇರವಾಗಿ ಭಕ್ತಿಯನ್ನು ಬೋಧಿಸುವುದಕ್ಕಿಂತ ಶರಣರ ಜೀವನಚರಿತ್ರೆಯ ಮೂಲಕ ತಿಳಿಸುವುದು ಶರಣರಾಟದ ಜೀವಾಳ. ಶಿವಭಕ್ತಿಯೇ ಇಲ್ಲಿ ಪ್ರಧಾನ. ಸಂಗೀತಕ್ಕೆ ತಬಲಾ – ತಾಳ – ಪೇಟಿಗಳು ಬೇಕಾಗುತ್ತವೆ. ಶರಣರಾಟಗಳು ಜನಸಾಮಾನ್ಯರಿಗೆ ಮೀಸಲಾದ ದೇಶಿಕಲೆ ಎಂದು ಮುಂತಾಗಿ ಹೇಳಿ, 'ಹೇಮರಡ್ಡಿ ಮಲ್ಲಮ್ಮ'ನ ನಾಟಕವನ್ನು ಎತ್ತಿಕೊಂಡು ವಿವೇಚಿಸಿದರು.

ಜನಪ್ರಿಯ ಜಾನಪದ ನಾಟಕಗಳಲ್ಲಿ ಒಂದಾದ 'ಸಂಗ್ಯಾ–ಬಾಳ್ಯಾ' ಬಗೆಗೆ ಪ್ರಬಂಧ ನಿವೇದಿಸಿದವರು ಡಾ. ಎಂ. ಬಿ. ಕೊಟ್ರಶೆಟ್ಟಿ. ಇದೊಂದು ವಸ್ತುನಿಷ್ಠ ಕಲೆ. ಈ ನಾಟಕಕ್ಕೆ ನೂರು ವರುಷಗಳ ಇತಿಹಾಸವಿದೆ. ಗೆಳೆಯರಿಬ್ಬರ ವೈಮನಸ್ಸಿಗೆ ಕಾರಣವಾದ ಈ ದುರಂತವನ್ನು ನಾಟಕಕಾರ ವಿವರಿಸಿದ ಬಗೆಯನ್ನು ತಿಳಿಸಿ, ಅದರಲ್ಲಿ ಬರುವ ಹಾಡುಗಳನ್ನು ವಿಶ್ಲೇಷಿಸಿದರು. ನಾಟಕ ಬೆಳೆದುಬಂದ ಹಂತಗಳನ್ನು ವಿವರಿಸಿದ ಡಾ. ಕೊಟ್ರಶೆಟ್ಟಿಯವರ ಪ್ರಬಂಧ, ವಿಮರ್ಶಾತ್ಮಕವಾಗಿತ್ತು.

ಕೊನೆಯಲ್ಲಿ ಡಾ. ಕೆ ಜಿ. ಗುರುಮೂರ್ತಿಯವರು 'ಜಾನಪದ ನಾಟಕ : ಒಂದು ಮಾನಸಿಕ ಅಧ್ಯಯನ' ವಿಷಯವನ್ನೆತ್ತಿಕೊಂಡು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ನಿಬಂಧವನ್ನು ಸಾದರಪಡಿಸಿದರು. ಜನಮನವನ್ನು ತಿದ್ದುವ ಕಾರ್ಯದಲ್ಲಿ ಜನಪದ ನಾಟಕಗಳ ಪಾತ್ರವನ್ನು ವಿಶ್ಲೇಷಿಸಿದ ಅವರ ನಿಬಂಧ ಹೊಸವಿಚಾರಗಳಿಂದ ಕೂಡಿತ್ತು.

ಡಾ. ಆರ್. ವಾಯ್. ಧಾರವಾಡಕರರು ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಕರ್ನಾಟಕದ ಬಯಲು ನಾಟಕಗಳಲ್ಲಿ ಬಂಗಾಲದ ಚೈತನ್ಯರ ಪ್ರಭಾವವನ್ನು ಎತ್ತಿತೋರಿಸಿದರು. ದಾಸರಾಟದ ಪರಂಪರೆಯನ್ನು ಕಂಪನಿ ನಾಟಕಗಳು ಸ್ವೀಕರಿಸಿದ ವಿಷಯವನ್ನು ಉಲ್ಲೇಖಿಸಿ, ಬಯಲುನಾಟಕಗಳ ನಾನಾ ವೈವಿಧ್ಯಗಳ ಸುಂದರ ಸಮೂಹವನ್ನು ಗುರುತಿಸಿದ ಡಾ. ಧಾರವಾಡಕರರ ಅಧ್ಯಕ್ಷೀಯಭಾಷಣ ವಿಚಾರಪ್ರಚೋದಕ; ಸಾದರಪಡಿಸಿದ ಪ್ರಬಂಧಗಳ ಸಮೀಕ್ಷೆ, ಹೃದಯಂಗಮ.

ಮಧ್ಯಾಹ್ನ :

ಸಮ್ಮೇಲನದ ಕೊನೆಯ ಗೋಷ್ಠಿ ಮಧ್ಯಾಹ್ನ ೩ ಘಂಟೆಗೆ ಪ್ರಸಿದ್ಧ ಸಾಹಿತಿಗಳಾದ ಡಾ. ಬೆಟಗೇರಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ವಿಷಯ : 'ಬಯಲುನಾಟಕಗಳ ಜೀವಾಳ'. ಐದುಜನ ಪ್ರಾಧ್ಯಾಪಕರು ಇದರಲ್ಲಿ ಭಾಗವಹಿಸಿದ್ದರು. ವ್ಯಾಖ್ಯಾತರ ಪರಿಚಯಮಾಡಿ ಸ್ವಾಗತಕೋರಿದವರು ಡಾ. ಎಂ. ಬಿ. ಕೊಟ್ರಶೆಟ್ಟಿ.

ಡಾ. ಡಿ. ಕೆ. ರಾಜೇಂದ್ರರು 'ಕತೆಗಾರ–ಹಿಮ್ಮೇಳ' ಎಂಬ ವಿಷಯದ ಬಗೆಗೆ ತಮ್ಮ ಪ್ರಬಂಧವನ್ನು ಮಂಡಿಸಿದರು. ಸೂತ್ರಧಾರನೇ ಬಯಲಾಟಗಳ ಕೇಂದ್ರಶಕ್ತಿ. ಬಯಲಾಟಗಳಿಗೆ 'ಕತೆಗಾರ–ಹಿಮ್ಮೇಳ' ಎರಡು ಕಣ್ಣುಗಳಿದ್ದಂತೆ. ಎಂದು ಮುಂತಾಗಿ ತಮ್ಮ ಅನೇಕ ವಿಚಾರಗಳನ್ನು ಸಭಿಕರ ಮುಂದಿಟ್ಟರು.

'ಕುಣಿತ–ಹಾಡುಗಾರಿಕೆ'ಯನ್ನು ಕುರಿತ ಮಾತನಾಡಿದವರು ಡಾ. ಎಮ್. ಎಸ್. ಸುಂಕಾಪುರರು. ಜಾನಪದ ಸಾಹಿತ್ಯದಲ್ಲಿಯೇ ಜೀಕುತ್ತಿರುವ ಅವರ ಮಾತುಗಳು ತೂಕಬದ್ಧವಾಗಿದ್ದವು. ಗೀತ, ನೃತ್ಯ, ಸಂಗೀತ, ಧಾಟಿ, ರಾಗಾಲಾಪ ಇವು ಎರಡರಲ್ಲಿಯೂ ಇವೆ. ದೊಡ್ಡಾಟಗಳಲ್ಲಿ ಹಾಡುಗಾರಿಕೆ ಏರುತ್ತ ಹೋಗುತ್ತದೆ. ಕುಣಿತಗಳು ಸಾಮೂಹಿಕ– ಎಂದು ಹಾಸ್ಯದಲ್ಲಿ ಲಾಸ್ಯವಾಡಿದ ಅವರ ಭಾಷಣ ಮನೋರಂಜನೆಯೊಡನೆ ಮನೋವಿಕಾಸವನ್ನೂ ಮಾಡಿತು.

ಪ್ರೊ. ದೇವೇಂದ್ರಕುಮಾರ ಹಕಾರಿಯವರು 'ವೇಷಗಾರಿಕೆ' ಎಂಬ ವಿಷಯವನ್ನು ಎತ್ತಿಕೊಂಡು ಮಾತನಾಡಿದರು. ರಾಯಚೂರ ಜಿಲ್ಲೆಯಲ್ಲಿ ಕಿಳ್ಳಿಕೇತರಾಟ, ಜಾತಿಗಾರರ ವೇಷಗಳು ಪ್ರಸಿದ್ಧವಾದರೆ, ಉತ್ತರಕರ್ನಾಟಕದಲ್ಲಿ ಗೊಂದಲಿಗರ ವೇಷ–ಭೂಷಣಗಳು ಕಟ್ಟುನಿಟ್ಟಾದವು. ಜಾನಪದ ನಾಟಕಗಳಲ್ಲಿ ಪಾತ್ರಧಾರಿಗಳೇ ತಮ್ಮತಮ್ಮ ವೇಷ-ಭೂಷಣಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆಂದು ವಿವರಿಸಿದ ಅವರ ಪ್ರಬಂಧ ಮನೋರಂಜಕವಾಗಿತ್ತು.

'ಪ್ರೇಕ್ಷಕವರ್ಗ'ವನ್ನು ಕುರಿತ ಪ್ರಬಂಧ ಸಾದರಪಡಿಸಿದವರು ಡಾ. ಎಮ್.ಎಮ್. ಕಲಬುರ್ಗಿಯವರು. ನಾಗರಿಕರಂಗಭೂಮಿಯ ಪ್ರೇಕ್ಷಕರಿಂದ ಜಾನಪದರಂಗಭೂಮಿಯ ಪ್ರೇಕ್ಷಕರು ಭಿನ್ನವಾಗಿರುವ ರೀತಿಯನ್ನು ಪ್ರಾಚೀನ ಆಧಾರಗಳಿಂದ ಸಮರ್ಥಿಸುತ್ತ, ಜಾನಪದಪ್ರೇಕ್ಷಕನ ಲಕ್ಷಣಗಳನ್ನು ಸಮಗ್ರವಾಗಿ ವಿವೇಚಿಸಿದರು. ಜಾನಪದ ವೃತ್ತಿನಾಟಕ ಮತ್ತು ವಿಲಾಸಿನಾಟಕಗಳ ಪ್ರೇಕ್ಷಕರ ವಿಭಿನ್ನ ಮನೋಭಾವಗಳನ್ನು ಹಂಚಿ ಹೇಳಿದರು. ವಿಲಾಸಿ ನಾಟಕಗಳು ಪುರಾಣ ಪುಣ್ಯಕಥೆಗಳಂತೆ ಪ್ರೇಕ್ಷಕನಿಗೆ ಗ್ರಾಮದ ಪರವಾಗಿ ಹಮ್ಮಿಕೊಂಡ ಸಾಂಸ್ಕೃತಿಕ ಚಟುವಟಿಕೆಯಾಗಿ ಪರಿಣಮಿಸುತ್ತವೆಯೆಂದು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿದ ರೀತಿ ಶಾಸ್ತ್ರೀಯವಾಗಿದ್ದಿತು.

ಕೊನೆಯವರಾಗಿ ಪ್ರೊ. ಕೆ. ಗೋವಿಂದರೆಡ್ಡಿಯವರು ತಮಿಳಿನಲ್ಲಿರುವ 'ತಿರುಕುತಿ' ಬಗೆಗೆ ಕನ್ನಡ ಬಯಲಾಟಗಳನ್ನು ಗಮನದಲ್ಲಿರಿಸಿ ವಿವರಿಸಿದ ರೀತಿ, ಕುತೂಹಲಕಾರಿಯಾಗಿತ್ತು. ಮುಖ್ಯಪಾತ್ರ ಮತ್ತು ಅಮುಖ್ಯಪಾತ್ರಗಳ ಬಗೆಗೂ ಅವರು ವಿವೇಚಿಸಿದರು.

ಅಧ್ಯಕ್ಷರಾದ ಡಾ. ಬೆಟಗೇರಿ ಕೃಷ್ಣಶರ್ಮರು ಭಾಷಣಕಾರರ ಪ್ರಬಂಧಗಳ ವೈಚಾರಿಕ ಸಮೀಕ್ಷೆ ನಡೆಯಿಸಿ, ಜಾನಪದದ ವಿವಿಧ ಕಲೆಗಳಲ್ಲಿಯ ಸತ್ಯತೆಯನ್ನು ಸೊಗಸಾಗಿ

ವಿವರಿಸಿದರು. ಅವರ ಅನುಭವಪೂರ್ಣ-ವಿಚಾರ ಪ್ರಚೋದಕ ಅಧ್ಯಕ್ಷೀಯ ಮಾತುಗಳು ಗಮನಾರ್ಹವಾಗಿದ್ದವು.

ಶ್ರೀ ರಾವಬಹಾದ್ದೂರ ಮತ್ತು ಶ್ರೀ ಧೂಪದ ಅವರು ಸಮ್ಮೇಲನದ ಸವಿನೆನಪುಗಳನ್ನು ಸ್ಮರಿಸಿಕೊಂಡರು; ತಮ್ಮ ಮನಸ್ಸಿನ ಮೇಲಾದ ಪರಿಣಾಮಗಳನ್ನು ಸಭಿಕರಿಗೆ ವಿವರಿಸಿದರು.

ಡಾ. ಜವರೇಗೌಡರು ಮುಕ್ತಾಯ ಭಾಷಣ ಮಾಡುತ್ತ, ತಾವೊಬ್ಬ ವಿದ್ಯಾರ್ಥಿಯಾಗಿ ಇಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳನ್ನು ಕಂಡು ಸಂತೋಷವಾಗಿದೆಯೆನ್ನುತ್ತ, ಜಾನಪದ ಪ್ರಯೋಜನಗಳನ್ನು ಕುರಿತ ಅವರು ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳು ಸರ್ವರ ಹೃದಯವನ್ನು ಮುಟ್ಟಿದವು; ತಟ್ಟಿದವು. ಪ್ರೊ. ಬಿ. ವ್ಹಿ. ಮಲ್ಲಾಪೂರರು ಸಮ್ಮೇಲನದ ಯಶಸ್ವಿಗಾಗಿ ದುಡಿದವರೆಲ್ಲರನ್ನೂ ಸ್ಮರಿಸಿ, ಸರ್ವರ ಆಭಾರಮನ್ನಿಸಿದರು.

ಸಾಯಂಕಾಲ :

ಜಾನಪದರಂಗದರ್ಶನದ ಎರಡನೆಯ ದಿನವಾದುದರಿಂದ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ವಿಶ್ವವಿದ್ಯಾಲಯದ ಆವರಣದ ನಿವಾಸಿಗಳು ತಂಡತಂಡವಾಗಿ ಬಂದಿದ್ದರು. ರಂಗದರ್ಶನದ ಕಾರ್ಯಕ್ರಮಗಳಿಗೆ ವಿಶೇಷ ಕಳೆ ಬಂದಿತ್ತು. ಹಲುವಾಗಿಲು ಮೇಳದವರ ತೊಗಲುಬೊಂಬೆಯಾಟ, ನರಗುಂದದ ಮೇಳದವರ ಕರಡಿಮಜಲು ಚೇತೋಹಾರಿಯಾಗಿದ್ದವು. ಶ್ರೀಮತಿ ಫಕೀರವ್ವ ಮಾದರ (ಹೆಬ್ಬಾಳ), ಶ್ರೀ ಹನಮಂತಪ್ಪ ಹಾಡಕಾರ ಉಭಯತರು ನಡೆಯಿಸಿಕೊಟ್ಟ ವಾದ-ವಿವಾದಗಳ ಲಾವಣಿ ಕಾರ್ಯಕ್ರಮಗಳು ಗಮನಾರ್ಹವಾಗಿದ್ದವು. ಕುಮಠಾದ ಶ್ರೀ ಅನಂತ ಮಹಬಳೇಶ್ವರ ವೈದ್ಯ ಹಾಗೂ ಸಂಗಡಿಗರು ಶ್ರೀಕೃಷ್ಣನು ಅತ್ತೆಯ ಮನೆಗೆ ಹೊರಟ ಸನ್ನಿವೇಶದ ಪ್ರಸಂಗವನ್ನು ' ಯಕ್ಷಗಾನ ' ರೂಪದಲ್ಲಿ ಪ್ರಸ್ತುತಪಡಿಸಿದ ಕಾರ್ಯಕ್ರಮ ಆಹ್ಲಾದಕಾರಿಯಾಗಿದ್ದಿತು.

ಸಮಾರೋಪ :

ಒಟ್ಟಿನಲ್ಲಿ ತೃತೀಯ ಅಖಿಲ ಕರ್ನಾಟಕದ ಜಾನಪದ ಸಮ್ಮೇಲನ, ಜಾನಪದ ಸಾಹಿತ್ಯದ ಪ್ರಮುಖ ಅಂಗಗಳಲ್ಲಿ ಒಂದಾದ ಬಯಲು ನಾಟಕಗಳ ಸ್ವರೂಪದ ದಿಗ್ದರ್ಶನ ಮಾಡುವುದರಲ್ಲಿ ಸಾಕಷ್ಟು ಸಫಲವಾಯಿತೆಂದು ಹೇಳಬಹುದು. ಇದರ ವಿವಿಧ ಮುಖಗಳನ್ನು ಎತ್ತಿತೋರಿಸುವುದರಲ್ಲಿ ಪ್ರಬಂಧಕಾರರು ವಿಶೇಷ ಪರಿಶ್ರಮಪಟ್ಟದ್ದು ಸ್ಪಷ್ಟವಾಗಿ ಗೋಚರಿಸಿತು. ಜಾನಪದ ವಿದ್ಯಾರ್ಥಿಗಳಿಗೆ ಇದೊಂದು ರಸಪ್ರಸಂಗ, ಜ್ಞಾನೋಪಾಸಕರಿಗೆ ಸುವರ್ಣ ಸಮಯ. ಇದು, ಕರ್ನಾಟಕ ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಸಂದರ್ಭಕ್ಕೆ ಕನ್ನಡ ಅಧ್ಯಯನಪೀಠ ನೀಡಿದ ವಿಶೇಷ ಕಾಣಿಕೆಯೆನಿಸಿತು.

ಎಸ್. ಎಸ್. ಭೂಸರಡ್ಡಿ

ಗ್ರಂಥಾವಲೋಕನ

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ : ಹತ್ತು ಸಂಪುಟಗಳು. ಪ್ರಧಾನ ಸಂಪಾದಕರು: ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಡಾ. ಎಂ. ಚಿದಾನಂದಮೂರ್ತಿ. ಪ್ರಕಾಶನ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೫. ಪ್ರತಿಯೊಂದು ಸಂಪುಟದ **ಬೆಲೆ : ರೂ ೪-೦೦**

೧. ಕನ್ನಡ ಸಾಹಿತ್ಯ ಸಮೀಕ್ಷೆ : ಡಾ. ಜಿ. ಎಸ್. ಶಿವರುದ್ರಪ್ಪ. ಪು : viii+೧೮೭

ಕನ್ನಡ ಸಾಹಿತ್ಯವನ್ನು ಕುರಿತು ಈ ವರೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬಂದ ಹಲವು ಕೃತಿಗಳಿಂದ ಪ್ರಸ್ತುತ ಗ್ರಂಥ ಭಿನ್ನವಾಗಿದೆ. ವಿಷಯ ವಿಶ್ಲೇಷಣಾ ವಿಧಾನ, ಸಾಮಾನ್ಯನಿಗೆ ನಿಲುಕುವಂಥ ಸರಳ ಭಾಷೆ, ಸುಂದರ ನಿರೂಪಣೆ, ವಿಸ್ತಾರ ವಾದ ಚರಿತ್ರೆಯ ಸಂಕ್ಷೇಪಿಕರಣ – ಈ ಮೊದಲಾದ ಗುಣಗಳಿಂದ ಕೂಡಿದ ಕಿರಿದಾದ ಈ ಕೃತಿ, ಸತ್ವಶ್ರೀಮಂತಿಕೆಯನ್ನು ಹೊಂದಿದೆ. ಪ್ರಾಚೀನಕಾಲದಿಂದ ಈ ವರೆಗೆ ಹರಿದುಬಂದ ಸಾಹಿತ್ಯವನ್ನು ಹೊಸದೃಷ್ಟಿಯಿಂದ ನೋಡಿದುದರ ಫಲವಾಗಿ, ಹೊಸ ಸೃಷ್ಟಿಯಾಗಿ ಅವತಾರಗೊಂಡಿದೆ ಈ ಕೃತಿ.

ವ್ಯಾಸಂಗದ ಅನುಕೂಲತೆಗಾಗಿ ಮಾಡಿಕೊಂಡ ಇಲ್ಲಿಯ ಏಳು ಅಧ್ಯಾಯಗಳಲ್ಲಿ ಒಂದು ಸುಸಂಬದ್ಧತೆ ಇದೆ. ಮೊದಲ ಅಧ್ಯಾಯ : ಕನ್ನಡ ಸಾಹಿತ್ಯ ಇಟ್ಟ ಹೆಜ್ಜೆ, ತೊಟ್ಟ ರೂಪಗಳು. ಕನ್ನಡಭಾಷೆ, ಕರ್ನಾಟಕ ಪ್ರಾಚೀನತೆ, ಹಲ್ಮಿಡಿಶಾಸನ, ಕವಿರಾಜ ಮಾರ್ಗ.... ಚಂಪೂ ಘಟ್ಟ, ಕ್ರಾಂತಿಘಟ್ಟ ಹಾಗೂ ನವೋದಯ ಘಟ್ಟಗಳನ್ನು ಸಾದ್ಯಂತ ವಾಗಿ ಪರಿಚಯಿಸಿದ್ದಾರೆ. ನವೋದಯ, ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯಿಕ ಚಟುವಟಿಕೆಗಳು, ಪ್ರಮುಖ ತಿರುವು ಪಡೆದು ಮಾರ್ಗ, ದೇಸಿ ಹಾಗೂ ಆಧುನಿಕ ಎಂಬ ಮೂರು ರೀತಿಯಲ್ಲಿ ಸಾಹಿತ್ಯ ತೊಟ್ಟ ಹಲವು ಮುಖಗಳನ್ನು ಮನೋಜ್ಞವಾಗಿ ವಿವರಿ ಸಿದ್ದಾರೆ. ಕೃತಿಯ ಗಾತ್ರಭಯ ಹಲವೆಡೆಯ ವಿವರಣೆಗಳಿಗೆ ಅಡ್ಡಿಯಾದಂತಿದೆ.

ಕನ್ನಡ ಸಾಹಿತ್ಯದ ಪ್ರಮುಖ ಪ್ರೇರಣೆಗಳಾದ ಮತಧರ್ಮ, ರಾಜಾಸ್ಥಾನ ಹಾಗೂ ಸಂಸ್ಕೃತ ಸಾಹಿತ್ಯ ಪರಂಪರೆಯನ್ನು ಎರಡನೆಯ ಅಧ್ಯಾಯ ಒಳಗೊಂಡಿದೆ. ಕಾವ್ಯದ ಉದ್ದೇಶ, ಧರ್ಮದ ಉದ್ದೇಶವಾದಾಗ ಸಾಹಿತ್ಯ ಧರ್ಮಪ್ರಸಾರದ-ಪ್ರಚಾರದ ಮಾಧ್ಯಮವಾಗುವದೆಂಬುದನ್ನು ಸಾಧಾರವಾಗಿ ವಿವರಿಸಿದ್ದಾರೆ. 'ಧರ್ಮವೆಂಬುದು

ಕವಿಗಳೆಂಬ ಕುದುರೆಗಳಿಗೆ ಚಾಟಿಯಂತೆ ಕೆಲಸ ಮಾಡಿದೆ' ಎಂಬ ಅವರ ಉಲ್ಲೇಖ ಯಥಾಯೋಗ್ಯವಾಗಿದೆ. ಪ್ರಭುಶಕ್ತಿಗೆ ಬದ್ಧವಾದ ಹಳಗನ್ನಡ, ನಿರಾತಂಕ ಪರಿಸರದ ಹೊಸಗನ್ನಡ ಸೃಜನಶೀಲತೆಯನ್ನು ಎತ್ತಿತೋರಿಸಿ, ಹಿಂದು–ಇಂದಿನ ಸಾಹಿತ್ಯದ ಗುಣ ವಿಶೇಷಗಳನ್ನು ತೌಲಣಿಕವಾಗಿ ಸ್ಪಷ್ಟಗೊಳಿಸಿದ್ದಾರೆ. ಕನ್ನಡ, ಸಂಸ್ಕೃತ, ಪ್ರಾಕೃತ ಹಾಗೂ ತಮಿಳು ಭಾಷೆಗಳಿಂದ ಪ್ರೇರಣೆ ಪಡೆದು ಪುಷ್ಟಿಗೊಂಡ ಬಗೆಯನ್ನೂ ಸೂಚಿಸಿದ್ದಾರೆ. ನಾಡಿನ ತ್ಯಾಗ, ವೀರ ಗುಣ ಜಾನಪದ ಕಾವ್ಯಗಳಲ್ಲಿ ಉಳಿದುಕೊಂಡದ್ದನ್ನು ಪ್ರಸ್ತಾಪಿಸಿ, ನಂಜುಂಡ ಕವಿಯ 'ರಾಮನಾಥ ಚರಿತೆ'ಯನ್ನು ಜಾನಪದ ಮಹಾಕಾವ್ಯವೆಂದು ಮಾಡಿದ ಉಲ್ಲೇಖ ವಿಚಾರಣೀಯವಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಸಾಹಿತ್ಯವನ್ನು ನವೋದಯ ಮತ್ತು ನವ್ಯ ಎಂದು ಕರೆದು ಪಾಶ್ಚಾತ್ಯಸಾಹಿತ್ಯ, ಕನ್ನಡ ಲೇಖಕರಿಗೆ ಹೊಸತೊಂದು ಲೋಕವನ್ನು ತೋರಿದ ಬಗೆಯನ್ನು ಸಾಧಾರವಾಗಿ ಸಮರ್ಥಿಸಿದ ಬಗೆ ಮೆಚ್ಚುವಂತಹದು. ಪರಂಪರೆಯ ಪ್ರಜ್ಞೆಯನ್ನು ಮೈಗೂಡಿಸಿ ಕೊಂಡು ಹೊರಗಿನ ಪ್ರೇರಣೆಗಳನ್ನು ಅರಗಿಸಿಕೊಂಡು ಬೆಳೆದ, ಕನ್ನಡ ಸಾಹಿತ್ಯದ ಬಗೆಗಿನ ಅವರ ಅಭಿಮಾನ ಅನುಕರಣೀಯ.

'ಕನ್ನಡ ಕವಿಗಳ ವಸ್ತು-ತಂತ್ರ-ಭಾಷಾ ಪ್ರಜ್ಞೆ' ಗ್ರಂಥದ ಮೂರನೆಯ ಅಧ್ಯಾಯ. ಧರ್ಮ–ತತ್ವ, ನೀತಿ, ರಾಜಾಸ್ಥಾನ, ಪಂಡಿತಮಂಡಲ, ಧರ್ಮಶ್ರದ್ಧಾ ಸಹೃದಯರು, ಉದಾತ್ತ ವಸ್ತುವಿನಿಂದ ಕಾವ್ಯ ಉದಾತ್ತವಾಗುತ್ತದೆಂಬ ಭಾವನೆ, ಸಾಹಿತ್ಯದ ವೈವಿಧ್ಯ ತೆಯ ಬೆಳವಣಿಗೆಗೆ ಮಾರಕವಾದವೆಂಬ ಅವರ ಮತ, ಸರ್ವಸಮ್ಮತ.' ನಮ್ಮ ಕವಿಗಳಿಗೆ ಐತಿಹಾಸಿಕಪ್ರಜ್ಞೆಯೇ ಇರಲಿಲ್ಲ' ಎಂಬ ಹೇಳಿಕೆಯೂ ಅರ್ಹವಾದುದೇ. ವಚನಕಾರರು, ಅನ್ಯಮತ ವಿಡಂಬನ ಕವಿಗಳಿಗೆ ಸಮಗ್ರ ಜೀವನವೇ ಹೊಸಗನ್ನಡ ಸಾಹಿತ್ಯದಂತೆ ವಸ್ತುವಾಗದಿದ್ದುದನ್ನು ಕೂಲಂಕಷವಾಗಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಸಾಹಿತ್ಯಭಾಷೆ, ಜನಸಾಮಾನ್ಯಭಾಷೆಯಾದದ್ದು ಹೊಸಗನ್ನಡದಲ್ಲಿಯೇ ಎಂದು ಉಚಿತವಾದ ತೀರ್ಪನ್ನೂ ಮಂಡಿಸಿದ್ದಾರೆ.

ಕನ್ನಡ ಕವಿಗಳ ಕಾವ್ಯಕಲ್ಪನೆ–ಗ್ರಂಥದ ನಾಲ್ಕನೆಯ ಅಧ್ಯಾಯ. ನಮ್ಮ ಪೂರ್ವ ಕವಿಗಳು ಕಾವ್ಯದ ಬಗ್ಗೆ ತಮ್ಮದೇ ಅಭಿಪ್ರಾಯ ರೂಪಿಸಿಕೊಳ್ಳಲು, ಧೋರಣೆಗಳನ್ನಿರಿಸಿ ಕೊಳ್ಳಲು ಸಶಕ್ತರಾಗಿದ್ದರೆಂಬುದನ್ನು ಅವರ ಕಾವ್ಯಗಳ ಪೀಠಿಕಾಭಾಗದ ಪದ್ಯಗಳಿಂದ ಅರಿಯಬಹುದಾಗಿದೆ. ಪಂಪ ಮೊದಲಾದ ಪ್ರಮುಖರಾದ ಹಲವು ಕವಿಗಳ ಪದ್ಯ ಗಳನ್ನು ಉದಾಹರಿಸಿ ಆ ಕವಿಗಳ ಕಾವ್ಯಧೋರಣೆ, ಕಾವ್ಯಸ್ವರೂಪ ಹಾಗೂ ಕಾವ್ಯದ ವಸ್ತು, ರೀತಿ ಮೊದಲಾದವನ್ನೂ ವಿವರಿಸಿದ ಬಗೆ ಅಭ್ಯಾಸಾರ್ಹವಾಗಿದೆ. ಅನಪೇಕ್ಷೆ, ಕವಿಯ ಸಂಪತ್ತೆಂಬುದನ್ನು ಸಾರಿದ್ದಾರೆ.

ಐದನೆಯ ಅಧ್ಯಾಯ, 'ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ'. ಇದರಲ್ಲಿ

ವಿಜಯಾಂಬಿಕೆಯನ್ನು ಆದಿಯಾಗಿ ಹೊನ್ನಮ್ಮನ ವರೆಗೆ ಬರುವ ಕವಯಿತ್ರಿಯರನ್ನು ಉಲ್ಲೇಖಿಸಿ ಕಂತಿ, ಅಕ್ಕಮಹಾದೇವಿ ಹಾಗೂ ಹೊನ್ನಮ್ಮನನ್ನು ಕುರಿತು ವಿಶೇಷವಾದ ವಿವರಣೆ ನೀಡಿದ್ದಾರೆ. ಕಂತಿಯ ಚಮತ್ಕಾರ ಬಿಟ್ಟರೆ ಉಳಿದವರಲ್ಲಿ ಭಕ್ತಿಯೇ ಸ್ಥಾಯಿಯಾದದ್ದನ್ನು ಗುರುತಿಸಿದುಂಟು. ಅಂತರಂಗದ ತಳಮಳ-ದಿನದಿನದ ಅನುಭವ ಗಳನ್ನು ಎರಕಹೊಯ್ದ ಅಲಿಖಿತ ಸಾಹಿತ್ಯ ನಿರ್ಮಾತೃಗಳಾದ ಅಜ್ಞಾತ ಸ್ತ್ರೀಯರೇ ಕನ್ನಡದ ಸಹಜವಾದ ಕವಯಿತ್ರಿಯರೆಂದು ನೀಡಿದ ಅವರ ಸೂಚನೆ, ಸ್ತುತ್ಯಾರ್ಹ ವಾಗಿದೆ.

ಆರನೆಯ ಅಧ್ಯಾಯದಲ್ಲಿ ಮೌಲ್ಯಪ್ರಜ್ಞೆ ಮತ್ತು ಸಾಮಾಜಿಕ ಅರಿವು ನಿರೂಪಣಗೊಂಡಿವೆ. ಯುಗಧರ್ಮದ ಪ್ರಜ್ಞೆ, ಕವಿಯ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತದೆಂಬುದನ್ನು ವೀರ, ಭಕ್ತಿ ಹಾಗೂ ಸ್ವಾತಂತ್ರ್ಯ ಯುಗದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಪಂಪ, ಬ್ರಹ್ಮಶಿವರಂಥ ಅನೇಕ ಕವಿಕಾವ್ಯಗಳಲ್ಲಿ ಸಾಮಾಜಿಕ ಅಧ್ಯಯನಕ್ಕಿರುವ ಅವಕಾಶಗಳನ್ನೂ ಸಾಧ್ಯತೆಗಳನ್ನೂ ಉದಾಹರಣೆ ಯೊಂದಿಗೆ ನಿರವಿಸಿದ ಬಗೆ ಹೃದ್ಯವಾಗಿದೆ. ಸಾಮಾಜಿಕಪ್ರಜ್ಞೆಯನ್ನು ಕುರಿತು ಹರಿಹರ ನಷ್ಟು ನಿರಾಶೆ ಹುಟ್ಟಿಸುವವಷ್ಟು ಇನ್ನಾರೂ ಇಲ್ಲ ಎಂಬ ಹೇಳಿಕೆ ಅವರ ನಿಷ್ಪಕ್ಷಪಾತ ವಿಮರ್ಶೆಗೆ ಜ್ವಲಂತ ಸಾಕ್ಷಿಯಾಗಿದೆ. ಬದುಕಿಗೆ ಹೆಚ್ಚು ಹತ್ತಿರದವುಗಳಾದ ನವೋದಯ, ಪ್ರಗತಿಶೀಲ ಮತ್ತು ನವ್ಯ ಘಟ್ಟಗಳ ಅಧ್ಯಯನದ ಅವಶ್ಯಕತೆಯನ್ನು ನಿವೇದಿಸಿದ್ದಾರೆ.

ಕನ್ನಡ ಕವಿಗಳ ಸಾಹಿತ್ಯದ ವೈಶಿಷ್ಟ್ಯಗಳು ಸಮಾರೋಪದಲ್ಲಿ ಎಡೆಪಡೆದಿವೆ. ವಿವಿಧ ಧರ್ಮಗಳು ಸಾಹಿತ್ಯದ ಮೂಲಪ್ರೇರಣೆಯಾದದ್ದರಿಂದ ಕನ್ನಡಸಾಹಿತ್ಯಕ್ಕೆ ಬೇರಾವ ಸಾಹಿತ್ಯಕ್ಕಿಲ್ಲದ ವೈವಿಧ್ಯತೆ ಬರಲು ಕಾರಣವಾಯಿತೆಂದು ಮೆಚ್ಚಿ ನುಡಿದಿದ್ದಾರೆ. ವಿವಿಧ ಧರ್ಮಗಳ ಕ್ರಿಯೆ–ಪ್ರತಿಕ್ರಿಯೆಗಳ ಮಿಶ್ರಣದಲ್ಲಿ ತಲೆಯೆತ್ತಿದ ಸಮನ್ವಯದೃಷ್ಟಿ, ಕನ್ನಡ ಸಾಹಿತ್ಯದ ವಿಶೇಷತೆಯೆಂದು ಸೂಕ್ತ ಅಭಿಪ್ರಾಯವಿತ್ತಿದ್ದಾರೆ. ಸಂಸ್ಕೃತ ಮಿಶ್ರಿತ ಕನ್ನಡದ ಸೊಗಸು, ಸಂಸ್ಕೃತವನ್ನೊಲ್ಲದ ಶುದ್ಧದೇಸಿಯ ಸೊಗಸು, ತ್ರಿಪದಿ, ರಗಳೆ, ಸಾಂಗತ್ಯ, ವಚನ, ಕೀರ್ತನ– ಈ ಎಲ್ಲ ರೂಪಗಳು ಕನ್ನಡ ಕಾವ್ಯದ ವೈಶಿಷ್ಟ್ಯಗಳೆಂದು ಎತ್ತಿತೋರಿದ್ದಾರೆ. ಅದರಲ್ಲಿಯೇ ವಚನ ಸಾಹಿತ್ಯ ರೂಪ, ಸತ್ವ ಗಳಿಂದ ವಿಶ್ವಸಾಹಿತ್ಯಕ್ಕೆ ಕೊಡುಗೆಯಾಗಿದೆ ಎಂದು ನಿಸ್ಸಂಕೋಚವಾಗಿ ವ್ಯಕ್ತಪಡಿಸಿದ್ದಾರೆ. ಇಂಥ ಸಾಹಿತ್ಯ ಸಮೃದ್ಧಿಯ ಪರಿಚಯ, ಶ್ರದ್ಧೆಯ ಅಭ್ಯಾಸಗಳತ್ತ ಸಾಮಾನ್ಯನ ಗಮನ ಹರಿಯುವ ಅಗತ್ಯತೆಯನ್ನು ಒತ್ತಿ ನಿವೇದಿಸಿದುದು ಸಾಹಿತಿಯೊಬ್ಬನ ಪ್ರಾಮಾಣಿಕ ನುಡಿಯಾಗಿದೆ.

ಅನುಬಂಧದಲ್ಲಿ ಶ್ರೀ ಎಸ್. ಶಿವಣ್ಣ ಅವರು ಸಿದ್ಧಪಡಿಸಿಕೊಟ್ಟ ಗ್ರಂಥ ಸಂಖ್ಯಾವಿವರ ಸೂಚಿಯು, ಸಾಹಿತ್ಯಾಭ್ಯಾಸಿಗಳಿಗೆ ಮಹತ್ವಪೂರ್ಣ ಕೊಡುಗೆಯಾಗಿದೆ.

ಈ ರೀತಿ ಕಿರಿಯಗಾತ್ರದ ಈ ಹಿರಿಯಕೃತಿ. ಈ ಗ್ರಂಥಮಾಲೆಯ ಆಶಯವನ್ನು ಪೂರೈಸಿದುದರಲ್ಲಿ ಯಾವ ಸಂದೇಹವೂ ಇಲ್ಲ. ಮಾಲೆಯ ಪ್ರೇರಕರಾದ ಶ್ರೀ ಗುಪ್ತಾ ಅವರೂ ಪ್ರಸ್ತುತ ಗ್ರಂಥ ಕರ್ತೃಗಳಾದ ಡಾ. ಶಿವರುದ್ರಪ್ಪನವರೂ ಕನ್ನಡ ಕುಲ ಕೋಟಿಯ ಅಭಿವಂದನೆಗೆ ಪಾತ್ರರು.

ಬಿ. ವ್ಹಿ. ಗುಂಜೆಟ್ಟಿ

೨. ಶಾಸನ ಮತ್ತು ಗದ್ಯ : ಹು. ಕಾ. ಜಯದೇವ್. ಪುಟ : viii + ೨೦೦

ಭರತಖಂಡದಲ್ಲಿ ಶಾಸನಗಳ ಪರಿವೀಕ್ಷಣ ಮತ್ತು ಪ್ರಕಟನ ಕಾರ್ಯ, ಬಹಳ ದಿವಸಗಳಿಂದ ನಡೆದುಬಂದಿದೆ. ಆಯಾ ಪ್ರಾಂತಗಳಲ್ಲಿ ದೊರೆಯುವ ಶಾಸನಗಳ ಬಗ್ಗೆ ಆಯಾ ಪ್ರಾದೇಶಿಕ ಭಾಷೆ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಕೃತಿಗಳು ಬೆಳಕು ಕಂಡಿವೆ. ಆದರೆ ಕರ್ನಾಟಕದ ಸಮಗ್ರ ಶಾಸನಗಳನ್ನು ಕಣ್ಣೆದುರಿಗಿಟ್ಟುಕೊಂಡು, ಸಮಗ್ರದೃಷ್ಟಿಯ ಚಿತ್ರನಿರ್ಮಾಣಕಾರ್ಯ ಇನ್ನೂ ನೆರವೇರಿಲ್ಲ. ಈಗ ಶಾಸನಗಳ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಇಂಗ್ಲೀಷಿನಲ್ಲಿ ಅಧಿಕ ಸಂಖ್ಯೆಯ, ಕನ್ನಡದಲ್ಲಿ ಕಡಿಮೆ ಸಂಖ್ಯೆಯ ಪ್ರೌಢ ಲೇಖನ ಮತ್ತು ಗ್ರಂಥಗಳು ಹೊರಬಂದದ್ದು ನಿಜವಾದರೂ ಜನ ಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು, ಶಾಸನಗಳ ವಿಷಯಜ್ಞಾನದ ವಿವಿಧ ಚಿತ್ರ ಗಳನ್ನು ಬಿಡಿಸಿ ತೋರಿಸುವ, ಗದ್ಯದ ಹಲವು ಮಾದರಿಗಳನ್ನು ತೆರೆದಿಟ್ಟಿರುವ ಕಾರ್ಯ ನಡೆದುದು; ಹು. ಕಾ. ಜಯದೇವ್ ಅವರ 'ಶಾಸನ ಮತ್ತು ಗದ್ಯ' ಕೃತಿಯಲ್ಲಿ.

ಈ ಗ್ರಂಥದಲ್ಲಿ ಶಾಸನ ಮತ್ತು ಗದ್ಯಗಳ ವಿವೇಚನೆಯಿದ್ದು, ಪ್ರಥಮ ಭಾಗದ ಹರವು ಒಂಬತ್ತು ಶೀರ್ಷಿಕೆಗಳಲ್ಲಿ ಹರಡಿಕೊಂಡಿದೆ. ಶಾಸನದ ವ್ಯಾಖ್ಯೆ, ಪ್ರಭೇದಗಳನ್ನು ಭಾರತೀಯ ಹಿನ್ನೆಲೆಯಲ್ಲಿ ಸ್ಥೂಲ ಹಾಗೂ ಸಮರ್ಪಕ ರೀತಿಯಲ್ಲಿ ವಿವರಿಸಿ, ಶಾಸನ ಗಳ ಗರ್ಭದಲ್ಲಿ ಹುದುಗಿರುವ ವಿಷಯಸಂಪತ್ತಿಯನ್ನು ವಸ್ತು, ರೀತಿ ಹಾಗೂ ಉದ್ದೇಶಗಳ ದೃಷ್ಟಿಯಿಂದ ವಿವರಿಸುವುದರ ಜೊತೆಗೆ ಇತಿಹಾಸದ ಪುನಾರಚನೆ, ಸಾಂಸ್ಕೃತಿಕ ಜೀವನ, ಭಾಷೆಗಳ ಅಧ್ಯಯನದಲ್ಲಿ ಶಾಸನಗಳು ಒದಗಿಸುವ ಅಪೂರ್ವ ಸಾಮಗ್ರಿಯತ್ತ ಬೆರಳುತೋರಿದ್ದಾರೆ. 'ಕೆಲವು ಪ್ರಮುಖ ಶಾಸನಗಳು' ಭಾಗದಲ್ಲಿ ಅಶೋಕನಿಂದ ವಿಜಯನಗರದ ವರೆಗಿನ ಮುಖ್ಯಶಾಸನಗಳೊಂದಿಗೆ ಮುಂದಿನ ಅವ ಧಿಯ ಕೆಲವು ಶಾಸನಗಳನ್ನೂ ಸೇರಿಸಿದ್ದರೆ, ಈ ಭಾಗ ಪರಿಪೂರ್ಣವೆನಿಸುತ್ತಿತ್ತು. ಆ ನ್ಯೂನತೆಯ ಧ್ವನಿ ಇಲ್ಲಿ ಕೇಳಿಸುತ್ತದೆ.

ಕೇವಲ ಕೃತಿ ರಚನೆಗಳಿಂದ ತೃಪ್ತಗೊಳ್ಳದ ಕನ್ನಡ ಕವಿಗಳು ಶಾಸನಗಳನ್ನೂ ರಚಿಸಿ, ಕಾವ್ಯ ಹಾಗೂ ಶಾಸನ ಸಾಹಿತ್ಯಗಳ ಕ್ಷಿತಿಜವನ್ನು ಹಿಗ್ಗಿಸಿದರು. ರಾಜಾಶ್ರಯ

ಲಭಿಸಿದ ಕವಿಗಳ ಕಾವ್ಯಪ್ರತಿಭೆಯ ಪ್ರಥಮ ಪ್ರಯತ್ನ ಮತ್ತು ಅವರು ಬಾಳಿ-ಬದುಕಿದ ಅವಧಿಯ ಗಡುವನ್ನು ನಿರ್ಧರಿಸುವಲ್ಲಿ ಕನ್ನಡ ಕವಿಗಳು ಬರೆದ ಶಾಸನಗಳು, ಕನ್ನಡ ಸಾಹಿತ್ಯ ರಚನೆಗೆ ಎಂತಹ ಅಮೂಲ್ಯ ಸಾಮಗ್ರಿಸಂಪತ್ತನ್ನು ಪೂರೈಸುತ್ತವೆ ಎಂಬ ಅಂಶಗಳತ್ತ ಗಮನ ಸೆಳೆದಿದ್ದಾರೆ.

ರನ್ನನನ್ನು ಮೊದಲ್ಗೊಂಡು ತಿರುಮಲಾರ್ಯನ ವರೆಗಿನ ಕನ್ನಡ ಕವಿಗಳು ರಚನೆಗೈದ ಶಾಸನಗಳ ವಿಷಯ ವಿವೇಚನೆಯನ್ನು ಒಂದು ಕ್ರಮದಲ್ಲಿ ನಡೆಸಿರುವ ಪ್ರಯತ್ನ ಸ್ತುತ್ಯವೆನಿಸಿದರೂ, ಶಾಂತಿನಾಥ ಬರೆದ ಶಾಸನಗಳ ಉಲ್ಲೇಖವಿರದಿರುವುದು ಒಂದು ಊನವೆಂದೇ ಹೇಳಬೇಕು.

'ಶಾಸನಗಳ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ' ಹಾಗೂ 'ಶಾಸನಗಳ ಸಾಹಿತ್ಯಿಕ ಮೌಲ್ಯ'ಗಳಲ್ಲಿ ಲೇಖಕರ ಕಾವ್ಯವ್ಯಾಸಂಗ, ಶಾಸನವ್ಯಾಸಂಗಗಳ ದೀರ್ಘ ಪರಿಶ್ರಮ ಮತ್ತು ಸಾಹಿತ್ಯಿಕ ಮೌಲ್ಯಗಳನ್ನು ತೂಗಿನೋಡುವ ದೃಷ್ಟಿ ತುಂಬ ಮೆಚ್ಚುವಂತಹವು.

'ಶಾಸನ ಕವಿಗಳು' (ಶಾಸನ ಸಾಹಿತ್ಯ ಚರಿತ್ರೆ) ಶೀರ್ಷಿಕೆಯ ಅಡಿಯಲ್ಲಿ ಈ ಹಿಂದೆ ಕೆಲವು ಗ್ರಂಥಗಳಲ್ಲಿ ಬಂದ ವಿಷಯದ ಜೊತೆಯಲ್ಲಿ ಸಮರ್ಪಕ ವಿಚಾರ-ವಿವರಣೆಗಳನ್ನು ನೀಡಿದ್ದಾರೆ. ಜಿನವಲ್ಲಭನು ಗಂಗಾಧರಂ ಶಾಸನದ ಕರ್ತೃ ಎಂದು ಹೇಳುವ ಉಕ್ತಿಗೆ ಇನ್ನಷ್ಟು ಪ್ರಬಲ ಆಧಾರಗಳು ಬೇಕೆಂಬುದನ್ನು ಮರೆಯಲಾಗದು. ಇಲ್ಲಿಯೂ ವಿಜಯನಗರ ಮತ್ತು ತರುವಾಯದ ಪ್ರಮುಖ ಶಾಸನಕವಿಗಳ ವಿವರಣೆ ಬರದಿರುವುದು, ಶಾಸನ ಸಾಹಿತ್ಯ ಚರಿತ್ರೆಯ ಅಪೂರ್ಣತೆಯನ್ನು ಸೂಚಿಸುತ್ತದೆ.

ದ್ವಿತೀಯ ಭಾಗವಾದ 'ಗದ್ಯ'ದಲ್ಲಿ ಕನ್ನಡ ಗದ್ಯದ ಬೆಳವಣಿಗೆಯ ಘಟ್ಟಗಳನ್ನು ಶಾಸನಗದ್ಯ, ಕೈಫಿಯತ್ ಅಥವಾ ಬಖೈರುಗಳ ಗದ್ಯ, ಗದ್ಯ ಕಥೆಗಳು, ಗದ್ಯ ಎಂಬ ಹಂತಗಳಲ್ಲಿ ಗುರುತಿಸಿ, ' ಗದ್ಯದ ಇತಿಹಾಸ : ಒಂದು ಸಮೀಕ್ಷೆ 'ಯಲ್ಲಿ ಗದ್ಯ ನಡೆದು ಬಂದ ದಾರಿಯ ರೇಖಾಚಿತ್ರವನ್ನು ಸಿದ್ಧಗೊಳಿಸಿಕೊಟ್ಟಿದ್ದಾರೆ. ಇಲ್ಲಿಯ ವಿವೇಚನೆ ಅತ್ಯಂತಮಹತ್ವ ಹಾಗೂ ಪ್ರಯೋಜನಪೂರ್ಣವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಶಾಸನಗದ್ಯ, ವಿವಿಧ ಮಾದರಿಗಳಲ್ಲಿ ಹೇಗೆ ವ್ಯವೆತ್ತಿನಿಂತಿದೆಯೆಂಬುದನ್ನು ಅನೇಕ ಉಪಯುಕ್ತ ಉದಾಹರಣೆಗಳಿಂದ ಸ್ಪಷ್ಟಪಡಿಸುತ್ತ ಪ್ರೌಢ, ಸಂಸ್ಕೃತಭೂಯಿಷ್ಠ, ವ್ಯಾವಹಾರಿಕ ಹಾಗೂ ದೇಸಿ ಮೊದಲಾದ ಗದ್ಯ, ನಾನಾರೂಪಗಳೊಂದಿಗೆ ತನ್ನ ನಿಜ ಸ್ವರೂಪದಲ್ಲಿ ಕಾಣಿಸಿಕೊಂಡಿರುವುದನ್ನು ತಿಳಿಸಿದ್ದಾರೆ. ಶಾಸನಗದ್ಯ, ಕೈಫಿಯತ್ ಅಥವಾ ಬಖೈರುಗದ್ಯ, ನೋಂಪಿಯ ಕಥೆ, ವ್ಯಾಖ್ಯಾನಗದ್ಯ ಮುಂತಾದ ಕ್ಷೇತ್ರದಲ್ಲಿ ನಡೆದ ಮತ್ತು ನಡೆಯಬೇಕಾದ ಕಾರ್ಯಬಾಹುಳ್ಯವನ್ನು ಕಳಕಳಿಯಿಂದ ಸೂಚಿಸಿದ್ದಾರೆ.

ಹೀಗೆ ಹಲ್ಮಿಡಿ ಶಾಸನದಿಂದ ಹೊಸಗನ್ನಡ ಸಾಹಿತ್ಯದ ವರೆಗಿನ ಕನ್ನಡ ಗದ್ಯದ ಯಾತ್ರಾ ಪಥವನ್ನು ತೋರಿಸಿಕೊಟ್ಟಿದ್ದಾರೆ.

ಮುದ್ರಣದೋಷಗಳ ಜಾಡ್ಯ, ಗ್ರಂಥಾಂತರಂಗದಲ್ಲಿ ಬಲವಾಗಿ ಹರಡಿಕೊಂಡಿದೆ. ಮುಖಪುಟದ ವಿನ್ಯಾಸ ಹಾಗೂ ಬಣ್ಣ, ಆಕರ್ಷಕ ಮೈಕಟ್ಟಿನಿಂದ ತುಂಬಿನಿಂತಿವೆ. ಒಟ್ಟಿನಲ್ಲಿ 'ಶಾಸನ ಮತ್ತು ಗದ್ಯ' ಹು ಕಾ. ಜಯದೇವ್ ಅವರ ಆಳವಾದ ಅಧ್ಯಯನ ಹಾಗೂ ಚಿಂತನೆಗಳ ಫಲವಾಗಿ ಮೂಡಿಬಂದ ಅಭ್ಯಾಸಯೋಗ್ಯ ಕೃತಿಯಾಗಿದೆ.

ಬಿ. ಆರ್. ಹಿರೇಮಠ

೩. ಶಾಸ್ತ್ರಸಾಹಿತ್ಯ : ಎಂ. ವಿ. ಸೀತಾರಾಮಯ್ಯ. ಪುಟ : viii + ೩೧೦

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಮಾಲಿಕೆಯಲ್ಲಿ ಮೂರನೆಯ ಸಂಪುಟ, 'ಶಾಸ್ತ್ರ ಸಾಹಿತ್ಯ'. ಅಲಂಕಾರ, ಛಂದಸ್ಸು, ವ್ಯಾಕರಣ, ನಿಘಂಟು, ಜ್ಞಾನಕೋಶ, ಧಾರ್ಮಿಕ ಹಾಗೂ ಲೌಕಿಕ ಶಾಸ್ತ್ರಗ್ರಂಥಗಳ ಚರಿತ್ರೆಯನ್ನು ಯೋಜನೆಯ ಪರಿಮಿತಿಯಲ್ಲಿ ಸಾರ್ಥಕವಾಗಿ ಪ್ರತಿಪಾದಿಸಿದವರು, ಕನ್ನಡದ ಖ್ಯಾತ ವಿದ್ವಾಂಸರಾದ ಎಂ. ವಿ. ಸೀತಾರಾಮಯ್ಯ ಅವರು.

ಶಾಸ್ತ್ರಸಾಹಿತ್ಯದ ವಿವಿಧ ಅಂಗಗಳನ್ನು ಕೂಲಂಕಷವಾಗಿ ವಿವೇಚಿಸುವ ಪೂರ್ವದಲ್ಲಿ ಕಾವ್ಯ-ಕವಿತ್ವ-ಶಾಸ್ತ್ರಕವಿತ್ವ-ಶಾಸ್ತ್ರಸಾಹಿತ್ಯಗಳ ವಿವರವಾದ ಹಿನ್ನೆಲೆ, ಕೃತಿಗೆ ತಳಪಾಯವಾಗಿ ನಿಂತಿದೆ. ಶಾಸ್ತ್ರಗ್ರಂಥಗಳ ಬೆಳವಣಿಗೆಯನ್ನು ವಿವರಿಸಿ, 'ಲೌಕಿಕ ಶಾಸ್ತ್ರಗ್ರಂಥಗಳ' ಸಂಬಂಧದಲ್ಲಿ 'ಪಂಪ, ಪೊನ್ನ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ರತ್ನಾಕರ, ಷಡಕ್ಷರಿ ಮುಂತಾದ ಶ್ರೇಷ್ಠ ಕನ್ನಡ ಕವಿಗಳ ಕಾವ್ಯಗಳಿಗೆ ಧರ್ಮವೇ ಸ್ಫೂರ್ತಿಯ ಸೆಲೆ: ಅವರ ಕೃತಿಗಳಲ್ಲಿ– ಪುರಾಣಕಾವ್ಯಗಳಲ್ಲಿ ಕವಿತೆಯೂ ಮತಧರ್ಮಕ್ಕೆ ಸಂಬಂಧಪಟ್ಟ ಶಾಸ್ತ್ರವಿಚಾರಗಳೂ ಹಾಸುಹೊಕ್ಕಾಗಿ ನೆಯ್ದುಕೊಂಡಿವೆ' ಎಂದು ಅವುಗಳ ಸ್ನೇಹವನ್ನು ಸೂಚಿಸಿದ್ದಾರೆ.

ಅಲಂಕಾರಶಾಸ್ತ್ರ ಎಂದರೇನು ? ಎಂದು ಆರಂಭಿಸಿ ರಸ, ರಸಾನುಭವ, ಸೌಂದರ್ಯ, ವ್ಯಂಗ್ಯ, ಧ್ವನಿ, ಪ್ರಾಸ, ಅನುಪ್ರಾಸ, ಯಮಕ ಮೊದಲಾದ ವಿಷಯ ಕುರಿತ ಪೂರ್ವದ ಆಲಂಕಾರಿಕರ ಅಭಿಪ್ರಾಯಗಳು ತಿಳಿಯಾದ ಸರಳ ನಿರೂಪಣೆಯಿಂದಾಗಿ ಸಾಮಾನ್ಯ ಓದುಗನಿಗೂ ಆಸಕ್ತಿಯನ್ನುಂಟುಮಾಡುವಂತಿವೆ. ತರುವಾಯ 'ಕನ್ನಡ ಲಕ್ಷಣಗ್ರಂಥ'ಗಳಲ್ಲಿ 'ಶ್ರೀವಿಜಯನ ಕವಿರಾಜಮಾರ್ಗ'ದ ಸಾರಸತ್ವವನ್ನು ವಿವರಿಸುತ್ತ, ಕನ್ನಡ ನಾಡು-ನುಡಿಯ ವರ್ಣನೆ ಶಾಸ್ತ್ರಗ್ರಂಥದಲ್ಲಿ ಅವಶ್ಯವೆ ? ಎಂದು ಪ್ರಶ್ನಿಸಿ, ಅದು ರಚಿತವಾದ ಕಾಲದ ಪರಿಸ್ಥಿತಿಯೇ ಅದಕ್ಕೆ ಪ್ರೇರಣೆ ಎಂದು ಸೂಚಿಸಿದ್ದಾರೆ.

ಉಸಿರ್ದಾಣ, ಯತಿ, ದಕ್ಷಿಣೋತ್ತರ ಮಾರ್ಗಗಳನ್ನು ವಿವರಿಸಿ "ಕನ್ನಡ ಸಾಹಿತ್ಯದಲ್ಲಿ 'ಸಮರಸ'ಗಳ ಪ್ರವಾಸಕ್ಕೆ ಶ್ರೀವಿಜಯನದೇ ಶ್ರೀಕಾರ" (ಪು. ೪೫) ಎಂದು ನಿರ್ಣಯಿಸಿದ್ದಾರೆ.

ನಾಗವರ್ಮರು ಎಷ್ಟು ಜನ ? ಎಂಬುದನ್ನು ಚರ್ಚಿಸಿ, ೨ ನೆಯ ನಾಗವರ್ಮನ ಕೃತಿಗಳಲ್ಲಿ 'ಕಾವ್ಯಾವಲೋಕನ'ದ ವಿಷಯವನ್ನು ಚೆನ್ನಾಗಿ ಪ್ರತಿಪಾದಿಸಿದ್ದಾರೆ. "ರೀತಿ ಕಾವ್ಯದ ಶರೀರ, ರಸ ಅದರ ಜೀವ– ಇದೇ ಉಕ್ತಿಯ ತಿರುಳು, 'ರೀತಿ', 'ರಸ' ಎಂಬ ಮಾತುಗಳನ್ನು ವಿಶಾಲಾರ್ಥದಲ್ಲಿ ಗ್ರಹಿಸಿದರೆ ಆಧುನಿಕರು ಕೂಡ ನಾಗವರ್ಮನ ಅಭಿಪ್ರಾಯಗಳನ್ನು ಒಪ್ಪಬಹುದು" ಎಂಬಂತಹ ಹೇಳಿಕೆಗಳು ತುಂಬ ಮೌಲಿಕವಾದವು. ಅದರಂತೆ ಉದಯಾದಿತ್ಯಾಲಂಕಾರ, ಮಾಧವಾಲಂಕಾರ, ಅಪ್ರತಿಮವೀರಚರಿತೆ, ಕನ್ನಡಕುವಲಯಾನಂದ, ನರಪತಿವಿಜಯ ಹಾಗೂ ಕರ್ಣಾಟಕಚಂದ್ರಾಲೋಕ, ಶ್ರೀ ಲಕ್ಷ್ಮೀನೃಸಿಂಹಸ್ತೋತ್ರ ಮೊದಲಾದ ಕನ್ನಡ ಅಲಂಕಾರ ಕೃತಿಗಳ ಸಮಾಲೋಚನೆ ಕೈಕೊಂಡಿದ್ದಾರೆ.

ರಸಪ್ರಕರಣದಲ್ಲಿ ಭರತನು ಹೇಳಿದ ಎಂಟು ರಸಗಳಲ್ಲದೆ ಕವಿರಾಜಮಾರ್ಗವು ಶಾಂತರಸವನ್ನು ಒಂಬತ್ತನೆಯ ರಸವನ್ನಾಗಿ ಹೇಳಿದುದನ್ನು ಉಲ್ಲೇಖಿಸಿ 'ಶೃಂಗಾರ ರತ್ನಾಕರ', 'ರಸರತ್ನಾಕರ', 'ನವರಸಾಲಂಕಾರ', 'ರಸಮಂಜರಿ' ಕೃತಿಗಳ ವಸ್ತುವಿವೇಚನೆ ಸಾರರೂಪವಾಗಿ ವ್ಯಕ್ತವಾಗಿದೆ. ಧ್ವನಿತತ್ತ್ವ ಕುರಿತ ಕನ್ನಡ ಆಲಂಕಾರಿಕರ ಅಭಿಪ್ರಾಯಗಳನ್ನು ಹೇಳಿ ಇಪ್ಪತ್ತನೆಯ ಶತಮಾನದ ಕನ್ನಡ ಲಕ್ಷಣಗ್ರಂಥಗಳ ಸ್ಥೂಲಪರಿಚಯ ಎ. ಆರ್. ಕೃ., ತೀ. ನಂ. ಶ್ರೀ, ಕೆ. ಕೃಷ್ಣಮೂರ್ತಿ ಅವರ ಮಹತ್ಸಾಧನೆಯೊಂದಿಗೆ ಬಂದಿದೆ.

'ಛಂದಸ್ಸು' ಕುರಿತು ಹಿನ್ನೆಲೆ, ಬೆಳವಣಿಗೆಯನ್ನು ವಿವರಿಸಿದ್ದಾರೆ. "ಕನ್ನಡ ಛಂದೋಗ್ರಂಥಗಳಲ್ಲಿ ಸಂಸ್ಕೃತ ಛಂದಸ್ಸಿನ ವೃತ್ತಗಳ ಲಕ್ಷಣಗಳನ್ನು ಹೇಳುವಾಗ ಸಂಸ್ಕೃತ ಶಾಸ್ತ್ರಕಾರರನ್ನು ಅನುಕರಿಸುವುದರಿಂದ, ಸಂಕ್ಷೇಪವಾಗಿಯಾದರೂ ಕೆಲವರ ಪರಿಚಯ ಮಾಡಿಕೊಳ್ಳುವುದು ಆಗತ್ಯವೆನಿಸುತ್ತದೆ" ಎಂದು ವಿವರಣೆ ಬಂದುದು ಉಚಿತವಾಗಿದೆ. 'ಕನ್ನಡ ಛಂದೋಗ್ರಂಥ'ಗಳಲ್ಲಿ ಗುಣಗಾಂಕಿಯಂ, ಕರ್ಣಾಟಛಂದೋಮತ, ನಾಗವರ್ಮನ ಛಂದೋಂಬುಧಿ, ಕವಿಜಿಹ್ವಾಬಂಧನ, ಛಂದಸ್ಸಾರ, ನಂದಿಛಂದೋರ್ಣವ ಹಾಗೂ ಈಚಿನ ಛಂದಸ್ಸಾರ, ಛಂದೋಮಾಲಿಕೆಗಳನ್ನು, ಬಿ. ಎಂ. ಶ್ರೀ, ತೀ. ನಂ. ಶ್ರೀ, ಡಿ. ಎಸ್. ಕರ್ಕಿ, ಎಲ್. ಬಸವರಾಜು, ಟಿ. ವಿ. ವೆಂಕಟಾಚಲಶಾಸ್ತ್ರಿ ಅವರ ವಿಚಾರಗಳನ್ನು ಸಂಗ್ರಹಿಸಿದ್ದಾರೆ. "ನಾಗವರ್ಮನ 'ಛಂದೋಂಬುಧಿ'ಯ ಉಪಯುಕ್ತತೆ ಇಂದು ಕಡಿಮೆಯಾಗಿರಬಹುದು, ಆದರೆ ಅದರ ಕೀರ್ತಿ ಮಾಸಿಲ್ಲ, ಮಾಸುವುದೂ ಇಲ್ಲ. ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಛಂದೋಂಬುಧಿಗೆ ಅಗ್ರಸ್ಥಾನ

ಎಂದೆಂದಿಗೂ ಮೀಸಲಾಗಿರುತ್ತದೆ." ಎಂಬ ನಿರ್ಣಯವನ್ನು ಆಧಾರಪೂರ್ವಕ ಮಂಡಿಸಿದ್ದಾರೆ.

"ನಮ್ಮ ಪ್ರಾಚೀನ ಕನ್ನಡ ವ್ಯಾಕರಣಕರ್ತರಿಗೆ ಈ ತೌಲನಿಕದೃಷ್ಟಿಯಿರದಿದ್ದರೂ ಕನ್ನಡ. ಸಂಸ್ಕೃತದಿಂದ ಭಿನ್ನವಾದ ಭಾಷೆ ಎಂಬ ಅರಿವಿದ್ದಿತು" ಎಂಬುದನ್ನು ವಿವರಿಸು ವುದರೊಂದಿಗೆ 'ಸಂಸ್ಕೃತ ವ್ಯಾಕರಣ' ಕೃತಿಗಳನ್ನು ಉಲ್ಲೇಖಿಸಿದ್ದಾರೆ. ಕನ್ನಡ ವ್ಯಾಕರಣ ಗಳಲ್ಲಿ ಕವಿರಾಜಮಾರ್ಗ, ಶಬ್ದಸ್ಮೃತಿ, ಕರ್ಣಾಟಕ ಭಾಷಾಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನಗಳಲ್ಲಿ, ಶಬ್ದಸ್ಮೃತಿ ಹಾಗೂ ಶಬ್ದಮಣಿದರ್ಪಣಗಳ ವಿವರಣೆ ವಿಸ್ತಾರ ವಾಗಿ ನಿರೂಪಿತವಾಗಿದೆ.

ಜೊತೆಗೆ ಭಾಷಾವಿಜ್ಞಾನದ ಸಂಕ್ಷೇಪ ಪರಿಚಯವೂ ಇದೆ. ಇಲ್ಲಿಯ ಸಂಸ್ಕೃತ ಹಾಗೂ ಕನ್ನಡ ನಿಘಂಟುಗಳ ವಿವರಣೆ ಉಪಯುಕ್ತವಾಗಿದೆ. ಕನ್ನಡದ ಪ್ರಥಮ ವಿಶ್ವಕೋಶ 'ಲೋಕೋಪಕಾರ'. "ಸಾಹಿತ್ಯದ ರಸವಂತಿಕೆ, ಕಲೆಯ ಚೆಲುವಿಕೆ, ಸರ್ವ ಧರ್ಮಸಮನ್ವಯದೃಷ್ಟಿ, ಯೋಗದ ಅನುಭವ, ಬಹುಶ್ರುತವಾದ ಮೇಧಾವಿಯ ಸರ್ವಜ್ಞತ್ವ, ದೈವಭಕ್ತಿ, ಲೋಕೋಪಕಾರ ನಿಷ್ಠೆ– ಇವೆಲ್ಲ ಗುಣಗಳೂ ನಿಜವಾಗಿ ಒಬ್ಬ ವ್ಯಕ್ತಿಯಲ್ಲಿ ಮೈಗೂಡಿ ಬೆಳೆಯುವುದು ತುಂಬ ವಿರಳ. ಈ ಗುಣಗಣವನ್ನು ನಿಜ ವಾಗಿಸಿಕೊಂಡ ಮಹಾವ್ಯಕ್ತಿ ನಿಜಗುಣ ಶಿವಯೋಗಿ". (ಪು. ೨೧೭) ಎಂದು ಜ್ಞಾನ ಕೋಶಗಳ ಸಂದರ್ಭದಲ್ಲಿ ಅನೇಕ ಮೇಧಾವಿಗಳ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಧಾರ್ಮಿಕಗ್ರಂಥಗಳ ವಿವೇಚನೆಗೆ ಹಿನ್ನೆಲೆಯಾಗಿ "ಕನ್ನಡ ನಾಡು ಅನೇಕ ಮತ ಧರ್ಮಗಳ ಕೂಡಲಸಂಗಮ; ಸರ್ವಧರ್ಮ ಸಮನ್ವಯದ ಪ್ರಯೋಗಶಾಲೆ" (ಪು. ೨೨೬) ಎಂದು ಆರಂಭಿಸಿ ಜೈನ, ವೀರಶೈವ, ವೈದಿಕ ಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿಗಳನ್ನು ಪರಿಶೀಲಿಸಿದ್ದಾರೆ. ಜೈನಮತಗ್ರಂಥಗಳಲ್ಲಿ ರತ್ನಕರಂಡಕ, ಪರಮಾಗಮ ಸಾರ, ದ್ವಾದಶಾನುಪ್ರೇಕ್ಷೆಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಜೈನತತ್ವವನ್ನು ಸಾಧಾರಣ ವಾಗಿ ವಿವರಿಸುವ ಮಾಘನಂದಿ ಆಚಾರ್ಯರ 'ಶಾಸ್ತ್ರಸಾರಸಮುಚ್ಚಯ', 'ಪದಾರ್ಥ ಸಾರ' ಮೊದಲಾದ ಕೃತಿಗಳು ಇಲ್ಲಿ ಸೇರ್ಪಡೆಯಾಗದಿರುವುದು ಕೊರತೆಯಾಗಿ ತೋರು ವುದು. ವೀರಶೈವಮತಶಾಸ್ತ್ರಗ್ರಂಥಗಳ ಸಂದರ್ಭದಲ್ಲಿ 'ಷಟ್‌ಸ್ಥಲ' ವಿವರಣೆ ಸಾರ್ಥಕವಾಗಿ ಬಂದಿದೆ.

ಲೌಕಿಕ ಶಾಸ್ತ್ರಗ್ರಂಥಗಳಲ್ಲಿ ವೈದ್ಯಾಮೃತ, ಖಗೇಂದ್ರಮಣಿದರ್ಪಣ, ಸ್ತ್ರೀವೈದ್ಯ, ವ್ರಣವೈದ್ಯ, ಬಾಲವೈದ್ಯ, ಗೋವೈದ್ಯ, ಗಜಶಾಸ್ತ್ರ, ಸೂಪಶಾಸ್ತ್ರ, ಜಾತಕತಿಲಕ, ರಟ್ಟಮತ, ಮದನತಿಲಕ, ಗಣಿತಶಾಸ್ತ್ರ, ರತ್ನಶಾಸ್ತ್ರ, ಲಾಸ್ಯರಂಜನೀಯ ಕೃತಿಗಳ ಪರಿಚಯ ಬಂದಿದೆ.

ಶಾಸ್ತ್ರಸಾಹಿತ್ಯದಲ್ಲಿ ಅಡಕವಾಗಿರುವ ಅಲಂಕಾರ, ಛಂದಸ್ಸು, ವ್ಯಾಕರಣ ಮೊದಲಾದ ವಿಷಯಗಳು ಕಬ್ಬಿಣದ ಕಡಲೆ ಎಂದೇ ಸಾಮಾನ್ಯವಾಗಿ ಗ್ರಹಿಸುವಾಗ, ಈ ವಿಷಯದ ಕೃತಿ ಸಾಮಾನ್ಯನಿಗೆ ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎಂಬ ಪ್ರಶ್ನೆ ಏದುರಾಗಬಹುದು. ಆದರೆ ಸರಳ ನಿರೂಪಣೆ ಹಾಗೂ ಖಚಿತ ಅಭಿಪ್ರಾಯಗಳಿಂದಾಗಿ ಕೃತಿ ಆಕರ್ಷಕವೂ ಸಾರ್ಥಕವೂ ಆಗಿ ಪರಿಣಮಿಸಿದೆ. ಎಂ. ವಿ. ಸೀತಾರಾಮಯ್ಯ ಅವರ ಪಾಂಡಿತ್ಯಕ್ಕೆ ಸಾಕ್ಷಿಯೂ ಆಗಿದೆ. ಅಲಂಕಾರ, ಛಂದಸ್ಸು, ವ್ಯಾಕರಣಗಳ ಬಗೆಗೆ ವಿಷಯ ವಿವರವಾಗಿ ಬಂದಿರುವಂತೆ ಧಾರ್ಮಿಕ, ಲೌಕಿಕ, ಶಾಸ್ತ್ರಗ್ರಂಥಗಳ ವಿಷಯ ವಿವರಣೆ ಇನ್ನಿಷ್ಟು ಬೇಕಿತ್ತೇನೋ ಎನ್ನಿಸದಿರದು.

" 'ತ್ರಿಪದಿ ಕನ್ನಡ ಛಂದೋಗಂಗೆಯ ಗಂಗೋತ್ರಿ' ಎಂಬ ಡಿ. ಎಸ್. ಕರ್ಕಿ ಅವರ ಅಭಿಪ್ರಾಯವನ್ನು ಮಾರ್ಪಡಿಸಬೇಕೆಂದು ಕಾಣುತ್ತದೆ. ಏಳೆಯನ್ನೇ ನಾವು ಕನ್ನಡ ಛಂದಸ್ಸಿನ ತಾಯಿಬೇರು ಎಂದು ಭಾವಿಸಬಹುದು" (ಪು. ೧೩೩). "ಅಕ್ಕರ ಛಂದಸ್ಸಿನ ರಹಸ್ಯ ಗ್ರಂಥಕರ್ತರಿಗೆ (ಶ್ರೀನಿವಾಸ ರಾಘವಾಚಾರ್ಯ : ಛಂದೋಮಾಲಿಕೆ) ಅರ್ಥವಾಗಿಲ್ಲ, ಅಂಶಗಣಗಳ ಬದಲು ಮಾತ್ರಾಗಣಗಳ ಲೆಕ್ಕವಿಟ್ಟು ಅದನ್ನು ವಿವರಿಸ ಹೊರಟಿರುವುದು ಈ ಗ್ರಂಥದ ಒಂದು ದೋಷ" (ಪು. ೧೪೭) ಮೊದಲಾದ ಅಭಿಪ್ರಾಯಗಳು ಎಂ. ವಿ. ಸೀತಾರಾಮಯ್ಯ ಅವರ ಸಮತೂಕದ ತರ್ಕಬದ್ಧ ವಿಮರ್ಶೆಗೂ, ವಿಚಾರಸ್ಪಷ್ಟತೆಗೂ ಸಾಕ್ಷಿಯಾಗಿರುವುದಲ್ಲದೆ ಮಾರ್ಗದರ್ಶಿಸೂತ್ರಗಳಂತೆ ಭಾಸವಾಗುವವು. ಇಂಥ ಉಪಯುಕ್ತ ಕೃತಿ ರಚಿಸಿದ ಶ್ರೀ ಎಂ. ವಿ. ಸೀತಾರಾಮಯ್ಯ ಅವರಿಗೆ ಕನ್ನಡ ಜನತೆ ಕೃತಜ್ಞರು.

ಎಸ್. ಪಿ. ಪಾಟೀಲ

೪. ಚಂಪೂ ಕವಿಗಳು : ಪಿ. ವಿ. ನಾರಾಯಣ. ಪುಟ : viii + ೨೬೪

ಬಹುಮುಖ ವ್ಯಾಪ್ತಿಯನ್ನುಳ್ಳ ಕನ್ನಡ ಸಾಹಿತ್ಯವನ್ನು 'ಪ್ರೌಢ ಪರಿಮಿತ ವರ್ಗದ ಆಚೆ ಇರುವ, ಸಾಹಿತ್ಯಾಸಕ್ತರಾದ ಸಾಮಾನ್ಯರಿಗೆ' ತಿಳಿಯಾದ ಬರೆವಣಿಗೆಯಲ್ಲಿ ವರ್ಣನಾತ್ಮಕವಾಗಿಯೂ ಕಥನಾತ್ಮಕವಾಗಿಯೂ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶ ಹೊತ್ತು, 'ಸಾಮಾನ್ಯನಿಗೆ ಸಾಹಿತ್ರ ಚರಿತ್ರೆ' ಮಾಲೆಯಲ್ಲಿ ಹೊರಬಂದ ನಾಲ್ಕನೆಯ ಸಂಪುಟ, 'ಚಂಪೂ ಕವಿಗಳು' ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟನೆ.

ಚಂಪೂ ಸಾಹಿತ್ಯ ಸ್ವರೂಪವನ್ನು ಕುರಿತು ಬರೆದ ಈ ಕೃತಿಯು ಆರು ಅಧ್ಯಾಯಗಳಲ್ಲಿ 'ಚಂಪು'ವಿನ ಪರಿಚಯವಿದೆ. ದೀರ್ಘ ಪ್ರಕಾರವಾದ ಚಂಪುವಿನ ರಚನಾಕ್ರಮವನ್ನು ಹಾಗೂ ಅದರ ಇತಿಹಾಸವನ್ನು ಸಂಕ್ಷಿಪ್ತವಾಗಿ ಮೊದಲನೆಯ ಅಧ್ಯಾಯದಲ್ಲಿ ಪರಿಚಯಿಸಿದ್ದಾರೆ.

ಚಂಪೂ ಕವಿಗಳನ್ನು ಮತಧರ್ಮಕ್ಕನುಗುಣವಾಗಿ ಜೈನ ಚಂಪೂ ಕವಿಗಳು, ಬ್ರಾಹ್ಮಣ ಚಂಪೂ ಕವಿಗಳು, ವೀರಶೈವ ಚಂಪೂ ಕವಿಗಳು— ಎಂದು ಮೂರು ವಿಭಾಗದಲ್ಲಿ ವಿಂಗಡಿಸಿದ್ದಾರೆ. ಹೀಗೆ ಕವಿಗಳನ್ನು ಗುಂಪುಗಳಾಗಿ ವಿಭಜಿಸುವ ಬದಲು, ಕನ್ನಡ ಸಾಹಿತ್ಯವಾಹಿನಿ ಪ್ರವಹಿಸಿ ಬಂದಂತೆಯೇ ಕವಿ–ಕೃತಿಗಳನ್ನು ಕ್ರಮವಾಗಿ ಪರಿಚಯಿಸಿದ್ದರೆ ಸರಿಯೆನಿಸುತ್ತಿತ್ತು. ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ ಒದಗಿಸುವ ಈ ಯೋಜನೆಯಲ್ಲಿ ಮತೀಯ ವಿಭಜನೆಯನ್ನು ಕೈಬಿಡುವುದು ಒಂದು ದೃಷ್ಟಿಯಿಂದ ಹಿತವಾಗಬಹುದು. ಆದರೂ ಇದು ಕೈಬಿಡಲಾರದ ಅನಿವಾರ್ಯವೇನೋ.

ಈ ಮೂರು ವಿಭಾಗಗಳೂ ಕವಿ–ಕೃತಿಗಳ ಪರಿಚಯಕ್ಕೆ ಮೀಸಲಾಗಿವೆ. ಕವಿ ಹೇಳಿಕೊಂಡ ಸ್ವವಿಷಯದ ಮೇಲಿಂದ ಅವರ ಲಘುಚರಿತ್ರೆಯನ್ನು ನೀಡಿದ್ದಾರೆ. ರಸಮಯ ಸನ್ನಿವೇಶಗಳನ್ನೇ ಆಧರಿಸಿ, ಪ್ರತಿಯೊಂದೂ ಕಾವ್ಯದ ಪರಿಚಯವನ್ನು ಕಥನಾತ್ಮಕವಾಗಿ ಹೆಣೆದಿದ್ದಾರೆ; ಉದ್ಧರಣ ಪದ್ಯಗಳಿಗೆ ಸರಳ ಗದ್ಯಾನುವಾದವನ್ನು ಒದಗಿಸಿದ್ದಾರೆ; ವಿಮರ್ಶೆಯನ್ನು ಹೊರತುಪಡಿಸಿ (ಆದಷ್ಟು ಮಿತಪಡಿಸಿ) ಸಾಮಾನ್ಯರಿಗೆ ರಸಗ್ರಹಣವಷ್ಟೇ ಉಂಟಾಗುವಂತೆ ಮಾಡಿದ್ದಾರೆ; ಅಭಿವ್ಯಕ್ತವಾದ ಕವಿಭಾವ-ಮನೋಧರ್ಮವನ್ನು ಸೂಚಿಸಿದ್ದಾರೆ. ಅಲ್ಲಲ್ಲಿ ವಿದ್ವಾಂಸರ ಅಭಿಪ್ರಾಯಗಳಿಗೂ ಎಡೆ ದೊರೆತಿದೆ. ಇಲ್ಲಿ ಲೇಖಕರು, ಕವಿಯ ಬದುಕಿಗೂ ಕಾವ್ಯಕ್ಕೂ ಹಿನ್ನೆಲೆಯಾಗಿದ್ದ ಯುಗಧರ್ಮವನ್ನು ಸಂಕ್ಷಿಪ್ತವಾಗಿಯಾದರೂ ಹೇಳಿ, ಸಾಮಾನ್ಯನ ಆಸಕ್ತಿ–ಅಭಿರುಚಿಗಳನ್ನು ಇನ್ನೂ ಕುದುರಿಸಬಹುದಿತ್ತು.

ಕವಿಗಳ ಕಾವ್ಯೋದ್ದೇಶ, ಪ್ರತಿಭಾವಿಲಾಸಗಳಿಗೆ ಅನುಗುಣವಾಗಿ ಚಂಪೂ ಪ್ರಕಾರ ಪಂಪನನ್ನು ಮೊದಲು ಮಾಡಿಕೊಂಡು ಕಾಲಕಾಲಕ್ಕೆ ವಸ್ತು, ಭಾಷೆ, ನಿರೂಪಣೆಯಲ್ಲಿ ಪಡೆದುಕೊಂಡ ವ್ಯತ್ಯಾಸಗಳನ್ನು ಐದನೆಯ ಅಧ್ಯಾಯದಲ್ಲಿ ನೀಡಿದ್ದಾರೆ. ಪಂಪ, ರನ್ನರಂಥ ಪ್ರಮುಖ ಕವಿಗಳನ್ನು ಮಾದರಿಯಾಗಿಟ್ಟುಕೊಂಡು ವಸ್ತು, ಭಾಷೆ, ಶೈಲಿಯಿಂದ ಚಂಪೂ ಕವಿಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು, ಕೊನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಚಂಪೂ ಪ್ರಕಾರಕ್ಕೆ ಕನ್ನಡದಲ್ಲಿ ಜೈನ ಕವಿಗಳೇ ಆದ್ಯರು. ಅವರಿಂದ ಈ ಕ್ಷೇತ್ರದಲ್ಲಿ ನಡೆದ ಕೃಷಿ ಇನ್ನಿತರ ಕವಿಗಳಿಗಿಂತ ಅತ್ಯಧಿಕವಾದುದು, ಮಿಗಿಲಾಗಿ ವಿಶಿಷ್ಟವಾದುದು. ಇದಕ್ಕೆ ಜೈನ ಕವಿಗಳಿಗಿದ್ದ ಯುಗಧರ್ಮವೇ ಕಾರಣವಾಗಿದೆ ಎಂಬ ಅಂಶ ಇದರಿಂದ ವ್ಯಕ್ತವಾಗುತ್ತದೆ.

ಅನುಬಂಧದಲ್ಲಿ ಕೊಟ್ಟಂತೆ ೬೦ ಕ್ಕಿಂತ ಹೆಚ್ಚು ಚಂಪೂ ಕವಿಗಳು ಕನ್ನಡದಲ್ಲಿ ೮೦ ಕ್ಕೂ ಮಿಕ್ಕು ಚಂಪೂ ಕಾವ್ಯಗಳನ್ನು ರಚಿಸಿದ್ದಾರೆ. ಈ ಎಲ್ಲ ಕವಿ–ಕೃತಿಗಳ ಪರಿಚಯಗ್ರಂಥ ಇದಾಗಿಲ್ಲ. ಪಂಪ, ರನ್ನ, ನೇಮಿಚಂದ್ರ, ನಯಸೇನ, ನಾಗವರ್ಮ, ರುದ್ರಭಟ್ಟ, ಹರಿಹರರಂಥ ಪ್ರಾತಿನಿಧಿಕ ಕವಿಗಳ ಹಾಗೂ ಕೃತಿಗಳ ಪರಿಚಯ ಮಾತ್ರ

ಇಲ್ಲಿದೆ. ಇವರೇ ಅಲ್ಲದೆ ಇನ್ನಿತರ ಕವಿಗಳನ್ನೂ ಕೃತಿಗಳನ್ನೂ ವಿಶದವಾಗಿ ಅಲ್ಲದಿದ್ದರೂ ಸಂಕ್ಷಿಪ್ತವಾಗಿಯಾದರೂ ಲೇಖಕರು ನೀಡಬಹುದಾಗಿತ್ತು. ಆದರೂ ಪ್ರಾತಿನಿಧಿಕ ಕವಿ–ಕೃತಿಗಳ ಪರಿಚಯದಿಂದಲೇ ಸಾಮಾನ್ಯನು ಒಳ್ಳೆಯ ಪ್ರತಿಕ್ರಿಯೆ ತೋರಬಲ್ಲನಾದುದರಿಂದ, ಪಿ. ವಿ. ನಾರಾಯಣರ ಶ್ರಮವೂ, ಕೈಗೊಂಡ ಉದ್ದೇಶವೂ ಫಲಿಸಿದೆ ಎನ್ನಬಹುದು.

ಎಸ್. ವಿ. ಶಿವಕುಮಾರ

೫. ವಚನ ಸಾಹಿತ್ಯ : ಎಂ. ಚಿದಾನಂದಮೂರ್ತಿ. ಪುಟ : viii + ೨೬೬

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಯೋಜನೆಯ ಹತ್ತು ಸಂಪುಟಗಳಲ್ಲಿ ಇದು ಐಯದನೆಯದು. ಈವರೆಗೆ ವಚನ ಸಾಹಿತ್ಯವನ್ನು ಕುರಿತು ಸಾಮಾನ್ಯರ ಮತ್ತು ವಿದ್ವಾಂಸರ ಮಟ್ಟದಲ್ಲಿ ಆಗಾಗ ಲೇಖನ, ಪುಸ್ತಕ ರೂಪದ ಸಾಹಿತ್ಯ ಪ್ರಕಟವಾಗಿದ್ದು ಈ ಕೃತಿ, ಸಾಮಾನ್ಯನಿಗಾಗಿ ಎಂಬ ಶಿರೋನಾಮವನ್ನು ಹೊತ್ತು ಹೊರಬಂದಿದೆ.

'ವಚನ ಸಾಹಿತ್ಯದ ಉಗಮ' ಪ್ರಕರಣದಲ್ಲಿ ವಚನ ಪದದ ಅರ್ಥ ವಿವರಣೆ ಕೊಟ್ಟು, ಅದು ಕನ್ನಡದ ಒಂದು ವಿಶಿಷ್ಟ ಪ್ರಕಾರ ಹೇಗೆ ಎಂಬುದನ್ನು ವಚನಗಳ ಆಧಾರದಿಂದಲೇ ಸ್ಪಷ್ಟಪಡಿಸಿದ್ದಾರೆ. ಆಮೇಲಿನ 'ಹಿನ್ನೆಲೆ: ರಾಜಕೀಯ, ಸಾಮಾಜಿಕ, ಸಾಹಿತ್ಯಿಕ' ಕುರಿತು ಹೇಳುವ ವಿಷಯ; ಪ್ರೌಢಗ್ರಂಥವೊಂದರ ಸಂಗ್ರಹದಂತೆ ಕಾಣುತ್ತಿದ್ದು ಇದು ಸಾಮಾನ್ಯನ (ಸಂಪಾದಕರ ಅಭಿಪ್ರಾಯದಂತೆ) ವಿಚಾರದ ಮಟ್ಟಕ್ಕೆ ಬರುತ್ತದೆಂದು ಹೇಳುವುದು ಕಷ್ಟ. ಈ ವಿಷಯವನ್ನು ಇನ್ನೂ ಸರಳೀಕರಿಸಿ ಸ್ವಲ್ಪ ಹೆಚ್ಚು ವಿವರಗೊಳಿಸಬಹುದಿತ್ತು. 'ಪ್ರಮುಖ ವಚನಕಾರರು' ಭಾಗದಲ್ಲಿ ವಚನಕಾರರ ಸಂಕ್ಷಿಪ್ತ ಜೀವನಚರಿತ್ರೆ ಕೊಡುತ್ತ ನಿರೂಪಿಸಿದ ಅವರ ಕಾಯಕ ನಿಷ್ಠೆ, ಭಕ್ತಿ ಹಾಗೂ ಅವರ ವಚನಗಳ ವಿವರ ಇತ್ಯಾದಿ ಚೆನ್ನಾಗಿ ಬಂದಿವೆ. ಅಷ್ಟೇ ಅಲ್ಲ ಇಲ್ಲಿ ಸಾಮಾನ್ಯನಿಗೆಂದೇ ಸಾಹಿತ್ಯ ಚರಿತ್ರೆ ಬರೆಯುವುದರ ಉದ್ದೇಶ ಈಡೇರಿದೆ ಎನ್ನಬೇಕು. ಮುಂದೆ ಅದೇ ಜಾಡನ್ನು ಅನುಕರಿಸಿ 'ಇತರ ವಚನಕಾರರು, ವಚನಕಾರ್ತಿಯರು' ಭಾಗಗಳು ಮುಂದುವರಿದಿವೆ. ತರುವಾಯ ಇಡೀ 'ವಚನ ಸಾಹಿತ್ಯದ ಸಮೀಕ್ಷೆ' ಮಾಡುತ್ತ ಕೆಲವು ವಚನಗಳಲ್ಲಿ ಬಳಸಲಾದ ಪದಗಳ ಮತ್ತು ಆ ಪದಗಳ ಅರ್ಥಸ್ವರೂಪದ ಚರ್ಚೆ ಬಂದಿದೆ. ಉದಾ : 'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ....ಎಂಬಲ್ಲಿ, ಕೊನೆಯ 'ತುಂಬಿ' ಮಾತಿಗೆ ತುಂಬಿಕೊಂಡು ಎಂಬ ಅರ್ಥವೇನೋ ಸರಿ. ಚರಣಕಮಲದ ತುಂಬಿ (ದುಂಬಿ) ನಾನು ಎಂಬ ಇನ್ನೊಂದು ಅರ್ಥವೂ ಎಷ್ಟು ಆಕೃತಕವಾಗಿ ಧ್ವನಿತವಾಗುತ್ತದೆ (ಪು. ೧೭೩). ಎಂಬಂತಹ ವಿವರಗಳನ್ನು ನೋಡಬಹುದು.

ಮುಂದೆ ಬರುವುದು 'ಸಂಗೋಪನಯುಗ'. ಇಲ್ಲಿ ಕಲ್ಯಾಣದಲ್ಲಿ ನಡೆದ ಕ್ಷೋಭೆಯ ನಂತರ ವಚನಕಾರರೂ ಅವರ ಸಾಹಿತ್ಯಸಾಮಗ್ರಿಯೂ (ವಚನಗಳ ಕಟ್ಟುಗಳು) ಚದರಿದ ನಂತರ "ವಚನಕಾರರ ಸಾಮಾಜಿಕ ಆಂದೋಲನವು ಮತವಾಗಿ ಮುಂದುವರಿಯಿತೆಂದು ಹೇಳಲು ಆಧಾರಗಳನ್ನು ಕೊಡುವುದು ಕಷ್ಟವಾಗುವುದಿಲ್ಲ.'' (ಪು. ೧೭೯) ಎಂದು ಹೇಳಿ, ಇದೇ ಸಮಯಕ್ಕೇ ವಚನ ಪ್ರಕಾರವೂ ತನ್ನ ಸತ್ವವನ್ನು ಕಳೆದುಕೊಂಡಿತ್ತು. ಜೊತೆಗೆ ''ಜನರನ್ನು ಮತಾಂತರಗೊಳಿಸುವ ಕಾರ್ಯ ಇನ್ನೂ ಭರದಿಂದ ಸಾಗಿರಬಹುದು, ಆದರೆ ಅದು ಪ್ರತಿಭಟನಾತ್ಮಕವಾದ ಸಮಾಜ ದರ್ಶನದ ಅಂಶವನ್ನು ಕಳೆದುಕೊಂಡಿತ್ತು'' (ಪು. ೧೮೦). ಆದ್ದರಿಂದ ಹರಿಹರ, ರಾಘವಾಂಕರು ವಚನ ಬರೆಯದೆ ಕಾವ್ಯಗಳನ್ನು ಬರೆದರು. ಅದಕ್ಕೇ ''ಹನ್ನೆರಡನೆಯ ಶತಮಾನವು ವಚನ ಸೃಷ್ಟಿಯ ಯುಗವಾದರೆ, ಹದಿಮೂರನೆಯ ಶತಮಾನವು ವಚನಗಳ ದೃಷ್ಟಿಯಿಂದ ಮುಖ್ಯವಾಗಿ ಸಂಗೋಪನಯುಗವೆಂದು ಕರೆಯಿಸಿಕೊಳ್ಳುತ್ತದೆ. 'ಸಂಗೋಪನ' ಎಂದರೆ ಸಂರಕ್ಷಣೆ....'' (ಪು. ೧೯೧)

ಮುಂದಿನದು 'ಸಂಕಲನ ಯುಗ'. ಹದಿಮೂರನೆಯ ಶತಮಾನದ ಉತ್ತರಾರ್ಧ. ಈ ಸಮಯ ಒಂದುರೀತಿ ಭಾರತೀಯ ಸಂಸ್ಕೃತಿಗೆ ಮಹಾವಿಪತ್ತು ಒದಗಿದ ಕಾಲ (ಪು. ೧೯೪). ಕಾರಣ ಇಲ್ಲಿ ಐಕ್ಯತೆ ಅವಶ್ಯವಿತ್ತು. ಧಾರ್ಮಿಕ ಗ್ರಂಥಗಳನ್ನು ಕಲೆಹಾಕುವ, ಅವುಗಳಿಗೆ ವ್ಯಾಖ್ಯಾನ ಬರೆಯಿಸುವ ಕಾರ್ಯ ನಡೆಯಿತು. ಇವರಲ್ಲಿ ಮಹಾಲಿಂಗದೇವ(ಸು.ಕ್ರಿ.ಶ.೧೪೩೦) ಒಬ್ಬ ಗಣ್ಯ ಸಂಕಲನಕಾರ, ಅಂತೆಯೆ ವ್ಯಾಖ್ಯಾನಕಾರನೂ ಅಹುದು. ಒಂದು ವಿಶಿಷ್ಟರೀತಿಯ ಸಂಕಲನಗ್ರಂಥ, ಶೂನ್ಯಸಂಪಾದನೆ. ಪ್ರಮುಖ ಸಂಕಲನಕಾರರೆಂದರೆ ಗುಬ್ಬಿ ಮಲ್ಲಣ್ಣ, ಮಹಾಲಿಂಗದೇವ, ಕಲ್ಲುಮಠದ ಪ್ರಭುದೇವ ಮುಂತಾದವರು.

ಇದರ ಮುಂದಿನ ಭಾಗ 'ಮತ್ತೆ ವಚನಕಾರರು'. ಇಲ್ಲಿ ಆ ಕಾಲದ ಪ್ರಮುಖ ವಚನಕಾರರಾದ ತೋಂಟದ ಸಿದ್ಧಲಿಂಗಯತಿ, ಸ್ವತಂತ್ರ ಸಿದ್ಧಲಿಂಗೇಶ್ವರ, ಘನಲಿಂಗದೇವ, ಷಣ್ಮುಖಸ್ವಾಮಿ ಮುಂತಾದವರ ಹಾಗೂ ಅವರ ವಚನಗಳ ಪರಿಚಯವಿದೆ. ಕೊನೆಯಲ್ಲಿ 'ವಚನಕಾರರು ಮತ್ತು ಮುಂದಿನ ಕನ್ನಡ ಸಾಹಿತ್ಯ' ಪ್ರಮುಖವಾಗಿ ಸರ್ವಜ್ಞನ ತ್ರಿಪದಿ ಕುರಿತ ವಿವರ, ಹರಿದಾಸರ ಮೇಲೆ ವಚನಕಾರರ ಪ್ರಭಾವ, ಕೀರ್ತನೆ ಮುಂತಾದ ವಿಷಯಗಳ ಚರ್ಚೆ ಬರುವುದು. ಹಾಗೆಯೆ ಫ. ಗು. ಹಳಕಟ್ಟಿಯವರ ಶ್ರಮದಿಂದ ಅಚ್ಚಾಗಿ ಬಂದ ವಚನ ವಾಙ್ಮಯದ ಪರಿಚಯವಿದೆ. ಈ ಸಮಯದಲ್ಲಿಯೂ ವಚನರಚನೆ ಆದುದನ್ನು ಉಲ್ಲೇಖಿಸಲು ತೊಡಗಿ, ಡಾ. ಹಾ.ಮಾ. ನಾಯಕರು ಶ್ರೀ ಪರಮೇಶ್ವರಭಟ್ಟರ 'ಉಪ್ಪು-ಕಡಲು' ಕೃತಿಗೆ ಬರೆದ ಮುನ್ನುಡಿಯ ಭಾಗಗಳನ್ನು ಉದ್ಧರಿಸುವಲ್ಲಿ ತೃಪ್ತಿಹೊಂದಿದ್ದಾರೆ. ಡಾ. ಜ. ಚ. ನಿ. ಅವರ

ವಿಪುಲವಾದ ವಚನ ಸಾಹಿತ್ಯಸೃಷ್ಟಿ ಲೇಖಕರ ವಿಮರ್ಶೆ, ವಿವರಣೆಗೆ ಹೊರತಾದುದು ಸಮಂಜಸವೆನಿಸುವುದಿಲ್ಲ. ಒಟ್ಟಿನಲ್ಲಿ ಈ ಗ್ರಂಥವನ್ನು ಸ್ಥೂಲವಾಗಿ ಪರಿಶೀಲಿಸಿದರೆ ಲೇಖಕರ ವಿಷಯಜ್ಞಾನ, ವಿಷಯ ನಿರೂಪಣೆ, ಭಾಷೆಯ ಮೇಲಿನ ಪ್ರಭುತ್ವ ಮೆಚ್ಚು ವಂತಿವೆ. ಆದರೆ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಯೋಜನೆಗೆ ಈ ಸಂಪುಟ ಎಷ್ಟರ ಮಟ್ಟಿಗೆ ಸಮರ್ಥನೆ ನೀಡುತ್ತದೆ ಎಂಬುದು ವಿಚಾರಮಾಡಬೇಕಾದ ಅಂಶ.

ವೀರೇಶ ವಾಲಿ

೬. ಷಟ್ಪದಿ ಸಾಹಿತ್ಯ : ಕೆ. ಮರುಳಸಿದ್ದಪ್ಪ. ಪುಟ viii + ೧೯೮.

ಸಾಮಾನ್ಯನಿಗೆ ಸಾಹಿತ್ಯಚರಿತ್ರೆ ನಿರ್ಮಾಣದ ಸಮಷ್ಟಿಯೋಜನೆಯ ವ್ಯಷ್ಟಿರೂಪ, ಕೆ. ಮರುಳಸಿದ್ದಪ್ಪನವರ 'ಷಟ್ಪದಿ ಸಾಹಿತ್ಯ'. ಈ ಮಾಲೆಯ ಆರನೆಯ ಸಂಪುಟ ವಾದ ಇದರಲ್ಲಿ ಎಂಟು ಲೇಖನಗಳು ವಿಷಯದ ಹರವನ್ನು ತಿಳಿಸುತ್ತವೆ.

ಪ್ರಾರಂಭದಲ್ಲಿ ಷಟ್ಪದಿಯ ಸಾಮಾನ್ಯ ಲಕ್ಷಣವನ್ನು ಹೇಳುತ್ತ, ಅದು ಮೂಲ ಷಟ್ಪದಿಯಿಂದ ಹೇಗೆ ವಿಕಾಸ ಹೊಂದಿತು ಎಂಬ ವಿವರಣೆ ನೀಡಿ, ಜೊತೆಗೆ ಷಟ್ಪದಿ ಸಾಹಿತ್ಯದ ಸಾಮಾನ್ಯ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಡಲಾಗಿದೆ. ಷಟ್ಪದಿಯ ಲಕ್ಷಣವನ್ನು ಇನ್ನಷ್ಟು ವಿವರವಾಗಿ ಹೇಳಬೇಕಿತ್ತು ಎನಿಸುತ್ತದೆ.

ಕನ್ನಡದ ಶ್ರೇಷ್ಠ ಷಟ್ಪದಿಕಾವ್ಯಗಳ ಪದ-ಪಂಕ್ತಿಗಳನ್ನು, ಕಾವ್ಯಗುಣವನ್ನು ಮನದಂದು ಅವುಗಳ ಬಲದಿಂದ ಷಟ್ಪದಿಸಾಹಿತ್ಯವನ್ನು ಪರಿಚಯಿಸುವ ಪ್ರಯತ್ನ ಮುಂದಿನ ಕೆಲವು ಲೇಖನಗಳಲ್ಲಿ ಕಾಣುತ್ತದೆ.

ರಾಘವಾಂಕನ ಕಾವ್ಯಗಳಲ್ಲಿ ಕಂಡುಬರುವ ನಾಟಕೀಯತೆ ಹಾಗೂ ಪಾತ್ರಚಿತ್ರಣ ದಲ್ಲಿ ವ್ಯಕ್ತವಾದ ಜೀವಂತಿಕೆಯನ್ನು, ಚಾತುರ್ಯವನ್ನು ಚೆನ್ನಾಗಿ ನಿರೂಪಿಸಲಾಗಿದೆ. ರಾಘವಾಂಕನ ಸ್ತ್ರೀಪಾತ್ರಗಳು ಮರಗಳಾಶ್ರಯ ಹೊಂದಿ ಬೆಳೆದು ಬಳುಕುವ ಬಳ್ಳಿಯಲ್ಲ; ಆಶ್ರಯದಲ್ಲಿದ್ದೂ ತಮ್ಮ ಸುವಾಸನೆ, ಸೊಗಸುಗಳ ಶೋಭೆಯಿಂದ ಪರಿಸರವನ್ನು ಮನೋಹರವಾಗಿ ಮಾಡುವಂತಹವು. ಹೀಗಿದ್ದರೂ ಪದ್ಮಾವತಿ 'ಆದಯ್ಯನ ಸ್ವಾರ್ಥದ ಕೈಗೊಂಬೆ' ಎಂದು ಹೇಳಿದುದು ಗಮನಾರ್ಹವಾದುದು.

ರಾಘವಾಂಕ ಹಾಗೂ ಕುಮಾರವ್ಯಾಸರ ನಡುವೆ ಬರುವ ಕವಿಗಳು ಷಟ್ಪದಿಯ ಬೇರೆಬೇರೆ ಪ್ರಕಾರಗಳನ್ನು ಬಳಸಿರುವ ಕಾರಣದಿಂದ ಆ ಕಾಲವನ್ನು 'ಪ್ರಯೋಗಶೀಲ' ವೆಂದು ಕರೆದು, ಕೆಲವು ಮುಖ್ಯಕವಿಗಳ ಕೃತಿಪರಿಚಯವನ್ನಿಲ್ಲಿ ಮಾಡಿದ್ದಾರೆ. ಆದರೆ ಈ ಪ್ರಯೋಗಶೀಲಮನೋಭಾವ ರಾಘವಾಂಕನಿಂದಲೇ ಮೊದಲುಗೊಂಡಿತೆಂಬು ದನ್ನು ಮರೆಯುವಂತಿಲ್ಲ.

'ಕುಮಾರವ್ಯಾಸ' ಹಾಗೂ 'ಚಾಮರಸ'ರು ಷಟ್ಪದಿಸಾಹಿತ್ಯದಲ್ಲಿ ಎದ್ದುಕಾಣುವ ಎರಡು ಶಿಖರಗಳು. ಇವರಿಬ್ಬರ ಕೃತಿವಿಮರ್ಶೆಯನ್ನು ದೀರ್ಘವಾಗಿ ಮಾಡಿದ್ದಾರೆ. ಕುಮಾರವ್ಯಾಸನ ಕಾವ್ಯ, ಸುಂದರ ಕಥಾರಚನೆಗೆ ಒಂದು ಉದಾಹರಣೆ. ಪಾತ್ರಕಲ್ಪನೆ ಹಾಗೂ ಸನ್ನಿವೇಶನಿರ್ಮಾಣಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಅದು ಹೊಂದಿದೆ. ಇವೆಲ್ಲವನ್ನು ರಸವತ್ತಾದ ಪ್ರಸಂಗಗಳಿಂದ, ಉಚಿತೋಕ್ತಿಗಳಿಂದ ಮನದಟ್ಟಾಗಿಸಿದ್ದಾರೆ.

ಚಾಮರಸನ ಕವಿತಾಸಾಮರ್ಥ್ಯವು ಅದ್ವಿತೀಯವಾದುದು. ಆತನ ಕಥನರೀತಿಯಲ್ಲಿಯೂ ಒಂದು ನವೀನತೆಯಿದೆ. ಅಲ್ಲಮಪ್ರಭುವಿನ ಪಾವನಚರಿತ್ರೆಯಾದ 'ಪ್ರಭುಲಿಂಗಲೀಲೆ' ಒಂದು ಸಾಂಕೇತಿಕ ಕಾವ್ಯ. ಅದರಲ್ಲಿ ಬರುವ ಪಾತ್ರಗಳೆಲ್ಲವೂ ಒಂದೊಂದು ಸಂಕೇತ. ಈ ಎಲ್ಲ ದೃಷ್ಟಿಗಳಿಂದ ಚಾಮರಸನ ಕೃತಿಪರಿಚಯವನ್ನು ಮಾಡಿಕೊಟ್ಟಿರುವುದು ಪ್ರಶಂಸಾರ್ಹ.

'ಕೆಲವು ಷಟ್ಪದಿಕಾರರು' ಎಂಬ ಲೇಖನದಲ್ಲಿ ಚಾಮರಸನಿಂದ ಲಕ್ಷ್ಮೀಶನ ವರೆಗೆ ಬರುವ ಪ್ರಮುಖ ಕವಿಗಳ ಕೃತಿಪರಿಚಯ ಮಾಡಿಕೊಟ್ಟಿದ್ದಾರೆ. ಅವರಲ್ಲಿ ಕನಕದಾಸರ ಕೃತಿಗಳ ದೀರ್ಘ ಪರಿಚಯ ಮಾಡುತ್ತ, ಮುಪ್ಪಿನಷಡಕ್ಷರಿಯ ರಚನೆಯೆಂದು ಪ್ರಸಿದ್ಧವಾದ 'ತಿರುಕನ ಕನಸು' ಎಂಬ ಪದ್ಯವನ್ನು ('ಪರವ ಮರೆತು' ಎಂಬಲ್ಲಿ 'ಹರಿಯ ಮರೆದು' ಎಂಬ ಪಾಠದಿಂದ) ಕನಕದಾಸರ ಹೆಸರಿನಲ್ಲಿ ಹೇಳಿರುವುದು ವಿಚಾರಿಸಬೇಕಾದ ಅಂಶವಾಗಿದೆ.

ಲಕ್ಷ್ಮೀಶನ 'ಜೈಮಿನಿಭಾರತ' ಅನೇಕ ಕಥೆಗಳ ಸಂಕಲನ. ಅದರಲ್ಲಿ ಬರುವ ಅನೇಕ ಕಥೆಗಳು ಕವಿಯ ಕವಿತಾಚಾತುರ್ಯದಿಂದ ಒಂದೊಂದು ಸುಂದರ ಖಂಡಕಾವ್ಯಗಳಂತೆ ಕಾಣುತ್ತವೆ. ಲಕ್ಷ್ಮೀಶನ ಕಾವ್ಯ ಲಲಿತವಾಗಿಯೂ ಮೃದು–ಮಧುರ ಪದಪುಂಜ ರಂಜಿತವಾಗಿಯೂ ಇರುವುದನ್ನು ತೋರಿಸುವುದಕ್ಕೆ ಅನೇಕ ಪಂಕ್ತಿ–ಪದ್ಯಗಳನ್ನು ಕೊಟ್ಟು ಸ್ಪಷ್ಟಪಡಿಸಿದ್ದಾರೆ.

ಕೊನೆಯ ಲೇಖನ 'ಮುಕ್ತಾಯ'. ಇಲ್ಲಿ, ಷಟ್ಪದಿ ವೈಭವಶಿಖರದಿಂದ ಕೆಳಗಿಳಿದು, ಕುಂಟುತ್ತ ನಡೆದು ಕೊನೆಗೆ ಹೊಸರೂಪ ಪಡೆದು; ಹೊಸಗನ್ನಡ ಸಾಹಿತ್ಯದಲ್ಲಿ ವಿಲೀನವಾಯಿತು ಎಂದು ಹೇಳಿ ಷಟ್ಪದಿ ನಡೆದುಬಂದ ದಾರಿಯನ್ನು ಗುರುತಿಸಿದ್ದಾರೆ.

ಒಟ್ಟಿನಲ್ಲಿ 'ಷಟ್ಪದಿಸಾಹಿತ್ಯ'ಪ್ರಕಾರವನ್ನು ಜನಸಾಮಾನ್ಯನಿಗೆ ಪರಿಚಯ ಮಾಡಿಸಿಕೊಡುವ ಉದ್ದೇಶವನ್ನು ಶ್ರೀ ಕೆ. ಮರುಳಸಿದ್ದಪ್ಪನವರು ಈ ಕೃತಿಯ ಮೂಲಕ ಈಡೇರಿಸಿದ್ದಾರೆ.

ಸಿದ್ಧರಾಮೇಶ ಹಿರೇಮಠ

೭. **ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ :** ಕಾಳೇಗೌಡ ನಾಗವಾರ
ಪುಟ : viii + ೨೩೬

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲೆಯಲ್ಲಿ ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ' ಎಂಬುದು ಏಳನೆಯ ಸಂಪುಟ. ಕನ್ನಡ ಛಂದಸ್ಸಿನ 'ಗಾಯತ್ರಿ' ಎನಿಸಿಕೊಂಡ ತ್ರಿಪದಿಗೆ ಸುಮಾರು ಸಾವಿರದಾ ಮುನ್ನೂರು ವರ್ಷಗಳ ಪ್ರಾಚೀನತೆಯಿದ್ದು, ಅಂದಿನಿಂದಲೂ ಅದು ಕನ್ನಡ ಜನಮನದ ಅನುಭವ ಮತ್ತು ಸಂಸ್ಕೃತಿಗಳ ಅಭಿವ್ಯಕ್ತಿಯ ಮಾಧ್ಯಮವಾಗಿ ನಡೆದು ಬಂದಿದೆ. ಈ ಎಲ್ಲ ವಿಷಯವನ್ನು ಈ ಸಂಪುಟದ ಲೇಖಕರು ಗಮನಿಸಿದ್ದಾರೆ. ತ್ರಿಪದಿಯ ಸ್ವರೂಪ, ಲಕ್ಷಣ, ವಿಭಿನ್ನ ಹೆಸರುಗಳು, ತ್ರಿಪದಿಯನ್ನು ಹಾಡುವ ವಿಧಾನ ಮುಂತಾದವುಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಪ್ರಾಚೀನ ಶಾಸನಗಳಿಂದ ಮೊದಲುಗೊಂಡು ಜಯದೇವಿತಾಯಿ ಲಿಗಾಡೆಯವರ ಕೃತಿಯವರೆಗೆ ಬಿಡಿಯಾಗಿ, ಇಡಿಯಾಗಿ ತ್ರಿಪದಿ ಬಳಕೆಗೊಂಡುದರ ಸಮಗ್ರ ವಿವೇಚನೆ ಇಲ್ಲಿದೆ.

ತ್ರಿಪದಿಯ ರಚನೆಯಲ್ಲಿ ಸರ್ವಜ್ಞನ ಕೊಡುಗೆ ಮಹತ್ವದ್ದು. ಇದನ್ನರಿತ ಕಾಳೇಗೌಡ ನಾಗವಾರರು ಆತನ ತ್ರಿಪದಿಗಳನ್ನು ಆಸ್ಥೆಯಿಂದ ಅಭ್ಯಸಿಸಿ ಅವುಗಳ ಭಾಷೆ, ವ್ಯಂಜಕತೆ, ಕಟುಕಿ, ವಿನೋದ ಮುಂತಾದ ಗುಣಗಳನ್ನು ಎತ್ತಿತೋರಿಸಿ; ಆತನು ಸಮಾಜವೈದ್ಯನಾದ ಪರಿಯನ್ನು ವ್ಯಾಪಕವಾಗಿ ಚರ್ಚಿಸಿದ್ದಾರೆ. ತ್ರಿಪದಿ ವಿವೇಚನೆಯ ಒಟ್ಟು ವ್ಯಾಪ್ತಿಯಲ್ಲಿ ಆತನ ತ್ರಿಪದಿಗಳಿಗೆ ಕೊಟ್ಟ ಅವಕಾಶವು ತುಸು ಹೆಚ್ಚಾಯಿತು ಎನಿಸುತ್ತದೆ. ತ್ರಿಪದಿ, ಅಂಶಛಂದಸ್ಸಿನಿಂದ ಮಾತ್ರಾಛಂದಸ್ಸಿಗೆ ತಿರುಗಿದ ಬಗೆಯನ್ನು ಕುರಿತು ಒಂದು ಮಾತು ಹೇಳಿದ್ದರೆ ಇನ್ನೂ ಚೆನ್ನಾಗಿತ್ತು.

ರಗಳೆಯ ರಚನೆ, ಮೂಲ ಹಾಗೂ ಬೆಳವಣಿಗೆ ಮುಂತಾದವುಗಳನ್ನು ಕುರಿತು 'ರಗಳೆ' ಎಂಬ ಅಧ್ಯಾಯದಲ್ಲಿ ಅವಲೋಕಿಸಿ, ಅದರ ವಿವಿಧ ಹೆಸರುಗಳನ್ನು ಗಮನಿಸಿದ್ದಾರೆ. ಶಾಸನೋಕ್ತ ರಗಳೆಯ ಪ್ರಸ್ತಾಪ ಮಾಡಿ, ಅಲ್ಲಿ ಕಾವ್ಯಾಂಶ ಇಲ್ಲವೆಂದೂ ಪುರ, ರಾಜಸಭೆ, ನಾರಿ, ಉದ್ಯಾನವನ, ವಿವಾಹಮಂಟಪ, ಜೈನಮುನಿ, ಪೂಜೆ, ದೇವ, ವೇಶ್ಯೆ, ಶಿವಪೂಜೆ ಇವುಗಳ ವರ್ಣನೆಗಾಗಿ ರಗಳೆ ಸೀಮಿತವಾದುದನ್ನು ತೋರಿಸಿದುದು ಗಮನಾರ್ಹವಾಗಿದೆ. ನಾಗವರ್ಮ, ಬಂಧುವರ್ಮ, ತ್ರಿಭುವನತಾತ, ಭೀಮಕವಿ, ನಿಜಗುಣಶಿವಯೋಗಿ ಮತ್ತು ಶಂಕರದೇವ ಮೊದಲಾದವರ ರಗಳೆಗಳಲ್ಲಿ 'ಹರಿಹರನ ಮಟ್ಟದ ಕಾವ್ಯಪ್ರತಿಭೆ, ಹೋರಾಟ, ವಿಚಾರಗಳು' ಇಲ್ಲದಿರುವುದನ್ನು ಸೂಚಿಸಿದ್ದಾರೆ. ಅಲ್ಲಷ್ಟು-ಇಲ್ಲಷ್ಟು ಬಳಸಿದ ಪ್ರಾಚೀನರಿಗಿಂತ ಸಂಪೂರ್ಣವಾಗಿ ಬಳಸಿದ ಹರಿಹರನ ಮಾರ್ಗ ಮುಂದಿನ ಕವಿಗಳಿಗೆ ಮಾರ್ಗದರ್ಶಿಯಾದುದನ್ನೂ ಅವನು ಉತ್ಸಾಹ, ಮಂದಾನಿಲ, ಲಲಿತ ಈ ಮೂರನ್ನು ತನ್ನ ಕಾವ್ಯದಲ್ಲಿ ದುಡಿಸಿಕೊಂಡ ಪರಿಯನ್ನೂ ವಿವೇಚಿಸಿದ್ದಾರೆ.

ಕನ್ನಡಸಾಹಿತ್ಯಕ್ಷೇತ್ರಕ್ಕೆ ಹೊಸವಸ್ತುವನ್ನು ಗುರುತಿಸುವ ಕಣ್ಣನ್ನು ಹರಿಹರನು ದಯಪಾಲಿಸಿದ ಬಗೆ, ಅವನು ಮಾಡಿಕೊಂಡ ಮಾರ್ಪು–ನೇರ್ಪುಗಳು ಇಲ್ಲಿ ಚೆನ್ನಾಗಿ ಮೂಡಿವೆ. ಕೆಲವು ಆಧುನಿಕ ಕವಿಗಳು ಕೂಡ ರಗಳೆಯನ್ನು ಸಮರ್ಥ ರೀತಿಯಲ್ಲಿ ಬಳಸಿಕೊಂಡಿದ್ದಾರೆಂಬುದನ್ನು ಗುರುತಿಸಿದ ಅವರು 'ಪಾದದ ಮೊದಲ ಮತ್ತು ಕೊನೆಯ ಪ್ರಾಸವನ್ನು ಕಳೆದುಕೊಂಡು ರಗಳೆ, ಸರಳರಗಳೆಯಾಯಿತು ಎಂದು ಸರಳರಗಳೆಗೆ ವಿವರಣೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಸರಳರಗಳೆ ಮಹಾಛಂದಸ್ಸಿಗೆ ಹೇಗೆ ದಾರಿ ಮಾಡಿ ಕೊಟ್ಟಿತೆಂಬುದರ ಬಗ್ಗೆಯೂ ಚರ್ಚಿಸಿದ್ದರೆ ಒಳಿತಾಗುತ್ತಿತ್ತು.

ಈ ಸಂಪುಟದ ಸು. ೧೬೮ ಪುಟಗಳು ಜನಪದಸಾಹಿತ್ಯಕ್ಕೆ ಮೀಸಲಾಗಿರುವುದು ಒಂದು ಸಂತೋಷದ ಸಂಗತಿ. ಪಂಡಿತರು ಜನಪದಸಾಹಿತ್ಯದ ಬಗ್ಗೆ ಮೂಗು ಮುರಿಯುತ್ತಿದ್ದ ಕಾಲವೊಂದಿತ್ತು. ಈಗ ಆ ಸ್ಥಿತಿ ಮಾಯವಾಗಿ ಜನಪದಸಾಹಿತ್ಯಕ್ಕೆ ಹೆಚ್ಚಿನ ಪುರಸ್ಕಾರ ದೊರೆಯುತ್ತಿರುವುದು ಒಂದು ಉಲ್ಲೇಖನೀಯ ಅಂಶ.

ಕಾಳೇಗೌಡರು 'ಜಾನಪದ' ಮತ್ತು 'ಜನಪದ'ಗಳ ವ್ಯಾಪ್ತಿ, ವ್ಯಾಖ್ಯೆಗಳನ್ನು ಚರ್ಚಿಸಿದ್ದಾರೆ. ಜನಪದಸಾಹಿತ್ಯವನ್ನು ಕುರಿತು ಅವಲೋಕಿಸುವಾಗ ನಮ್ಮ ಸಂಸ್ಕೃತಿಯ ಕೆಲವು ಅನಿಷ್ಟ ಸಂಪ್ರದಾಯಗಳನ್ನು ಬೆದಕಿನೋಡುವ ಕಾರ್ಯವನ್ನು ಮಾಡಿದ್ದಾರೆ. ಉದಾ : "ಶಿಷ್ಟಸಂಸ್ಕೃತಿಯ ಉದ್ದೇಶಪೂರ್ವಕವಾದ ದಬ್ಬಾಳಿಕೆ ಮತ್ತು ತಮ್ಮಲ್ಲಿಯೇ ರೂಢಿಗತವಾಗಿದ್ದ ಅಸಂಖ್ಯ ಮೂಢನಂಬಿಕೆಗಳು ಜನತೆಯನ್ನು ಹೆಚ್ಚಿನ ಸುಲಿಗೆಗೆ ಒಳಪಡಿಸಿದ್ದನ್ನು ನಾವು ಮರೆಯುವಂತಿಲ್ಲ. ಯಾವುದೇ ಸಾಮಾಜಿಕ ಪದ್ಧತಿ ಬಹಳಕಾಲ ಚಲನೆಯಲ್ಲಿದ್ದಲ್ಲಿ ಅದು ಸೃಷ್ಟಿಯ ಆದಿಯಿಂದಲೂ ಇರುವುದು ಅಥವಾ ದೇವರು ನಿರ್ಮಾಣ ಮಾಡಿದುದು ಎಂದು ಜನತೆ ತಿಳಿಯುತ್ತದೆ".

ಮೂಢಸಂಪ್ರದಾಯ, ಕಂದಾಚಾರ, ಅಂಧಶ್ರದ್ಧೆ ಹುಲುಸಾಗಿ ಬೆಳೆಯುವುದಕ್ಕೆ ಅನಕ್ಷರತೆ ಮತ್ತು ಅಜ್ಞಾನವೇ ಮೂಲವೆಂದು ಅವರು ಹೇಳಿರುವ ಮಾತು ನಿಜ. ಈ ಸುದೀರ್ಘ ಪ್ರಬಂಧದಲ್ಲಿ ಜನಪದ ಹಾಡುಗಳ ವೈವಿಧ್ಯ, ವೈಶಿಷ್ಟ್ಯಗಳನ್ನು ಗುರುತಿಸುವ, ಸಾಂದರ್ಭಿಕವಾಗಿ ಸೂಕ್ತ ಉದಾಹರಣೆಗಳನ್ನು ಕೊಡುವ ಕಾರ್ಯವನ್ನು ಮಾಡಿದ್ದು, ಅವರ ವಿಮರ್ಶಾಪ್ರಜ್ಞೆ ಅಲ್ಲಲ್ಲಿಗೆ ಜಾಗೃತವಾಗಿ ಕಾರ್ಯನಿರ್ವಹಿಸಿದುದನ್ನು ಸೂಚಿಸುತ್ತದೆ. ಜನಪದಸಾಹಿತ್ಯದ ವಿವಿಧಮುಖಗಳನ್ನು ಸಿಂಹಾವಲೋಕನಕ್ರಮದಿಂದ ವಿವರಿಸುವ ಅವರ ಕೃತಿಯಲ್ಲಿ, ಚಿತ್ರಗಳನ್ನು ಅಳವಡಿಸಿರುವುದು ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಇಡೀ ಗ್ರಂಥವನ್ನು ಓದಿ ಮುಗಿಸಿದ ಮೇಲೆ ನಮ್ಮ ಸಾಹಿತ್ಯಚರಿತ್ರೆಯನ್ನು ಈ ದೃಷ್ಟಿಯಿಂದಲೂ ಅಧ್ಯಯನ ಮಾಡುವ ಅಗತ್ಯ ಎಷ್ಟಿದೆ ಎಂಬುದು ತಿಳಿದುಬರದಿರದು.

ಎಲ್ಲ ಆಧಾರಗಳನ್ನು, ವಿವರಗಳನ್ನು ಒಳಗೊಂಡು, ವಿಮರ್ಶನದೃಷ್ಟಿಯಿಂದ ಸಾಮಾನ್ಯನ ಬುದ್ಧಿಗೆ ನಿಲುಕುವಂತೆ ಬರೆಯುವ ಕಾರ್ಯ ತುಂಬಾ ಕಷ್ಟದ್ದು. ಅಂಥ ಒಂದು ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಇಲ್ಲಿ ಕಂಡುಬರುತ್ತದೆ.

ಶಿವಾನಂದ ಗಾಳಿ

೮. ಕೀರ್ತನಕಾರರು: ಎಚ್. ಎಸ್. ವೆಂಕಟೇಶಮೂರ್ತಿ. ಪುಟ : viii + ೧೩೪

ಸಾಮಾನ್ಯನಿಗೆ ಸಾಹಿತ್ಯಚರಿತ್ರೆ ಈ ಮಾಲೆಯಲ್ಲಿ ಎಂಟನೆಯ ಸಂಪುಟ, 'ಕೀರ್ತನಕಾರರು'. ಇದರ ಲೇಖಕರಾದ ಎಚ್. ಎಸ್. ವೆಂಕಟೇಶಮೂರ್ತಿಯವರು ಕೀರ್ತನ ಸಾಹಿತ್ಯದ ಆಳವನ್ನು ನಿರಾಳಭಾಷೆಯಲ್ಲಿ ನಿರೂಪಿಸಿದ್ದಾರೆ.

ಈ ಸಂಪುಟವನ್ನು ಐದು ಪ್ರಕರಣಗಳಲ್ಲಿ ವಿಂಗಡಿಸಿ ಕೀರ್ತನಸಾಹಿತ್ಯ, ದಾಸ ಕೂಟದ ಕಾಲದಲ್ಲಿ ಉನ್ನತಸ್ಥಿತಿಗೇರಿದರೂ ಅದರ ಮೂಲ ಪಾಡು, ಮೆಲ್ವಾಡು, ಬಾಜನೆಗಬ್ಬದಲ್ಲಿದೆಯೆಂದು ಮುಗಳಿಯವರ ಸಾಹಿತ್ಯಚರಿತ್ರೆಯ ಆಧಾರ ಹಿಡಿದು ಹೇಳುತ್ತಾರೆ. ಇದು ದೂರದ ಸಾದೃಶ್ಯವೆಂದು ಹೇಳದೆ ಗತಿಯಿಲ್ಲ. ಇನ್ನೊಂದು ವಿಷಯ "ಕೀರ್ತನೆಗಳೆಂದು ಹರಿದಾಸರ ಹಾಡುಗಳು ಪ್ರಸಿದ್ಧವಾಗಿದ್ದರೂ ಶರಣರು ಹಾಡಿದ ಪದಗಳು ಕನ್ನಡದ ಮೊದಲ ಕೀರ್ತನಗಳು" ಎಂಬ ಲೇಖಕರ ಈ ಮಾತು ಸತ್ಯವನ್ನೇ ಎತ್ತಿಹೇಳುತ್ತದೆ.

ಇಂಥ ವಿಮರ್ಶಾತ್ಮಕ, ಸಂಶೋಧಕ ವಿವರಣೆಗಳನ್ನು ಮೇಳವಿಸಿಕೊಂಡು ಈ ಕೃತಿ ಸ್ಥೂಲವಾಗಿ ಸಾಹಿತ್ಯಚರಿತ್ರೆಯನ್ನು, ಅದರ ಐತಿಹಾಸಿಕ ಏರು–ಪೇರುಗಳನ್ನು ತಿಳಿಸುತ್ತ ಮುಂದುವರಿಯುವ ರೀತಿ ತುಂಬ ಶ್ಲಾಘ್ಯವಾಗಿದೆ.

'ಪ್ರಮುಖ ಕೀರ್ತನಕಾರರು' ಈ ಪ್ರಕರಣದಲ್ಲಿ ಕೀರ್ತನಸಾಹಿತ್ಯದ ಆದಿ ಕೀರ್ತನಕಾರರ ಪರಿಚಯವನ್ನು ಮಾಡುತ್ತ, ಈ ಸಾಹಿತ್ಯದ ಗೇಯತೆಯ ಹೋಳು ೨೦ ನೆಯ ಶತಮಾನದ ಕವಿಗಳಲ್ಲೂ ಕಂಡುಬರುತ್ತದೆಯೆನ್ನುತ್ತ ಶ್ರೀಗಳಾದ ವಿ. ಸೀ., ಪು. ತಿ. ನ. ಅವರ ಪದ್ಯಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ.

ಇಲ್ಲಿಯೇ ಕೀರ್ತನಕಾರರನ್ನು ಪರಿಚಯಿಸುತ್ತ ಪ್ರಮುಖ ಕೀರ್ತನಕಾರರ ಕೀರ್ತನ ಭಾಗಗಳನ್ನು ಕೊಟ್ಟದ್ದು ಅವರ ಸಾಹಿತ್ಯಶಕ್ತಿಯನ್ನು ತೌಲನಿಕವಾಗಿ ವೇದ್ಯಗೊಳಿಸುತ್ತದೆ.

'ಕೀರ್ತನೆಗಳ ಸಾಹಿತ್ಯಿಕ ಮೌಲ್ಯ' ಈ ಪ್ರಕರಣದಲ್ಲಿ ಸುಂದರವಾದ ಕೀರ್ತನ

ಭಾಗಗಳನ್ನು ಉದಹರಿಸುತ್ತ ಹೋದುದು, ಸಾಮಾನ್ಯನನ್ನು ಓದಿಸಿಕೊಂಡುಹೋಗುತ್ತದೆ. ಕೀರ್ತನೆಗಳ ಸೊಗಸು, ಶೈಲಿ ಅವನ ಮೇಲೆ ದಟ್ಟಪರಿಣಾಮ ಬೀರುತ್ತದೆ.

ಈ ಕೃತಿಯ ಪ್ರಾರಂಭದಲ್ಲೇ ತಿಳಿಸಿದಂತೆ ಕೀರ್ತನವು ಸಂಗೀತ ಮತ್ತು ಸಾಹಿತ್ಯದ ಸಾಮರಸ್ಯವಾದುದರಿಂದ ಕೊನೆಯ "ಕರ್ನಾಟಕ ಸಂಗೀತಗಳು ಮತ್ತು ಕೀರ್ತನೆಗಳು'' ಎಂಬ ಭಾಗವಲ್ಲಿ ಕೀರ್ತನಸಂಗೀತವನ್ನು ವಿಶದಪಡಿಸುತ್ತಾರೆ. ಇಲ್ಲಿ ಕರ್ನಾಟಕಸಂಗೀತ ಹಾಗೂ ಹಿಂದುಸ್ತಾನಿಸಂಗೀತಗಳ ಬಗೆಗೆ ಸ್ಥೂಲ ವಿವರ ನೀಡಿ ಶಿವದಾಸರೂ, ಹರಿದಾಸರೂ ಸಂಗೀತಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ನಿರೂಪಿಸಿದುದು ಈ ಕೃತಿಯ ಉತ್ತಮಭಾಗವೆನಿಸಿದೆ.

ಒಟ್ಟಿನಲ್ಲಿ ಸಾಮಾನ್ಯರಿಗಾಗಿ ಬರೆದ ದಾಸಸಾಹಿತ್ಯದ ಚರಿತ್ರೆಯನ್ನು ಸಾಮಾನ್ಯರಿಗಾಗಿ ಬರೆಯುವ ಕಾರ್ಯದಲ್ಲಿ ಶ್ರೀ ಎಚ್. ಎಸ್. ವೆಂಕಟೇಶಮೂರ್ತಿಯವರು ಸಫಲರಾಗಿದ್ದಾರೆ. ಈ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ, ಸಾಧ್ಯವಾದಷ್ಟು ಉಪಲಬ್ಧ ಸಾಮಗ್ರಿಯನ್ನು ಸಂಗ್ರಹಿಸಿ, ಹೊಸದೃಷ್ಟಿಕೋನದಿಂದ ವಿವರಿಸಿ, ಈ ಕೃತಿಯ ಮಹತ್ವವನ್ನು ಹೆಚ್ಚಿಸಿದ್ದಾರೆ.

ಪ್ರೇಮಾ ಭತ್ತದ

೯. **ಸಾಂಗತ್ಯ ಕವಿಗಳು :** ಹಂ. ಪ. ನಾಗರಾಜಯ್ಯ. **ಪುಟ :** viii + ೨೨೮

"ಸಾಮಾನ್ಯನಿಗೆ ಸಾಹಿತ್ಯಚರಿತ್ರೆ" ಮಾಲೆಯ ಒಂಬತ್ತನೆಯ ಕೃತಿ "ಸಾಂಗತ್ಯ ಕವಿಗಳು". ಇದರಲ್ಲಿ ಸಾಂಗತ್ಯ ಕವಿ-ಕೃತಿಗಳ ವಿವೇಚನೆಯ ಜೊತೆಗೆ ಶತಕ, ಅಷ್ಟಕ-ಚೌಪದಗಳ ವಿವೇಚನೆಗೂ ಎಡೆದೊರೆತಿದ್ದರೂ ಸಾಂಗತ್ಯಕ್ಕೇ ಸಿಂಹಪಾಲು. ಈ ದೃಷ್ಟಿಯಿಂದ 'ಸಾಂಗತ್ಯಕವಿಗಳು' ಎಂಬ ಹೆಸರು ಇಲ್ಲಿ ಅರ್ಥಪಡೆದಿದೆ.

ಈ ಕೃತಿ ಹತ್ತು ಅಧ್ಯಾಯಗಳಲ್ಲಿ ಹರಡಿದ್ದು, ಮೊದಲಿನ ೬ ಅಧ್ಯಾಯ ಸಾಂಗತ್ಯಕ್ಕೆ, ೭-೮ ಶತಕಕ್ಕೆ, ೯ ಅಷ್ಟಕಕ್ಕೆ, ೧೦ ಜಾನಪದಕ್ಕೆ ಸಂಬಂಧಿಸಿವೆ.

'ಸಾಂಗತ್ಯ, ಹಾಡುವ ಮಟ್ಟು. ಅದು ಅಂಶಗಣಗಳಿಂದ ಕೂಡಿರುತ್ತದೆ. ವಿಷ್ಣುಗಣಕ್ಕೆ ಅದರಲ್ಲಿ ಪ್ರಾಧಾನ್ಯತೆ........' ಎಂದು ಮುಂತಾಗಿ ಅದರ ಸಾಮಾನ್ಯ ಲಕ್ಷಣಗಳನ್ನು ಹೇಳಿ, ಅದರ ಮೂಲದ ಬಗೆಗೆ ವಿದ್ವಾಂಸರು ಈ ವರೆಗೆ ಪಟ್ಟ ಅಭಿಪ್ರಾಯಗಳನ್ನು ಸೂಚಿಸಿ, ತ್ರಿಪದಿಯಿಂದ ಸಾಂಗತ್ಯ ರೂಪಗೊಂಡಿರಬಹುದು ಎಂಬ ಅಭಿಪ್ರಾಯದತ್ತ ತಮ್ಮ ಒಲವು ತೋರಿಸುತ್ತ, ಸಾಂಗತ್ಯದ ಪ್ರಾರಂಭದ ಕೃತಿಯಾದ 'ಶ್ರೇಣಿಕ

ಚರಿತೆ'ಯಲ್ಲಿ 'ಶರಕುಸುಮಂಗಳೆರಡು ಪಟ್ಟದಿಯಂ ಬೆರಸಿ ಪೇಳ್ದೆನೀ ಕೃತಿಯಾ' ಎಂಬ ಮಾತನ್ನು ಗ್ರಹಿಸಿ, ಇನ್ನೂ ಕೆಲವು ಸಾಂಗತ್ಯಕೃತಿಗಳಲ್ಲಿ ಬರುವ ಹೇಳಿಕೆಗಳನ್ನು ಅನುಲಕ್ಷಿಸಿ, ಸಾಂಗತ್ಯ ಮೂಲಅಂಶಪಟ್ಪದಿಯಿಂದ ಹುಟ್ಟಿದ ಮಟ್ಟಾಗಿರಬೇಕೆಂದು ಹೇಳಿದುದು ಗಮನಾರ್ಹ ಅಂಶವಾಗಿದೆ.

ಸಾಂಗತ್ಯದ ಉಗಮವನ್ನು ಹುಡುಕುತ್ತ ಹೊರಟು, ಅದು ತುಂಬಾ ತಡವಾಗಿ ಬಂದಿತು, ಶಾಸನಗಳಲ್ಲಿ, ಯಾವ ಹಿಂದಿನ ಕಾವ್ಯಗಳಲ್ಲಿ ಅದರ ಉಲ್ಲೇಖವಿಲ್ಲ; ದೇವರಾಜ ಅದರ ಜನಕ. ಹೀಗಿದ್ದರೂ ಜನಪದಸಾಹಿತ್ಯದಲ್ಲಿ ಮೊದಲಿನಿಂದಲೂ ನಡೆದು ಬಂದಿರಬೇಕೆಂದು ಹೇಳಿ, ೧೫ ರಿಂದ ೨೦ ನೆಯ ಶತಮಾನದ ವರೆಗೆ ಅದು ಬೆಳೆದು ಬಂದ ಬಗೆಯನ್ನು ವಿವರಿಸುತ್ತ, ೧೬-೧೭ ನೆಯ ಶತಮಾನಗಳು ಸಾಂಗತ್ಯದ ಸುಗ್ಗಿಯ ಕಾಲ. ತಡವಾಗಿ ಬಂದರೂ ಅದು ಬಹುಬೇಗ ಜನಪ್ರಿಯತೆ ಪಡೆದ ಬಂಧ, ಸು. ೧೮೦ ಕವಿಗಳಿಂದ ೨೫೦ ಕಾವ್ಯಗಳು ರಚನೆಗೊಂಡಿವೆ ಎಂದು ವಿವರಿಸಿ, ಅದರಲ್ಲಿ ಕಂಡುಬರುವ ವೈವಿಧ್ಯವನ್ನು ಗುರುತಿಸಿದ್ದಾರೆ.

ಮುಂದಿನ ನಾಲ್ಕು ಅಧ್ಯಾಯಗಳಲ್ಲಿ ಕವಿಗಳ ಜೀವನೇತಿಹಾಸ, ಕೃತಿಪರಿಚಯ, ವಿಮರ್ಶೆಗಳ ಸ್ಥೂಲ ವಿವರಣೆಯಿದೆ. ಇಲ್ಲಿ ಒಟ್ಟು ಸಾಂಗತ್ಯಕೃತಿಗಳನ್ನು ವಸ್ತುವಿನ ದೃಷ್ಟಿಯಿಂದ ಧಾರ್ಮಿಕ ಕಾವ್ಯಗಳು, ಇತಿಹಾಸಮಿಶ್ರ ಕಾವ್ಯಗಳು, ನೀತಿಪ್ರಧಾನ ಕಾವ್ಯಗಳು ಎಂದು ವಿಭಾಗಿಸಲಾಗಿದೆ.

ಆರಂಭದ ಕವಿಗಳ ಮಾಲೆಯಲ್ಲಿ ದೇಪರಾಜ, ಶಿಶುಮಾಯಣ, ಕಲ್ಯಾಣಕೀರ್ತಿ ಜಿನದೇವ, ಆದಿಯಪ್ಪ, ವಿಜಯಣ್ಣ, ತೆರಕಣಾಂಬಿ ಬೊಮ್ಮರಸ, ಮಲ್ಲಿಕಾರ್ಜುನ, ಚಿಕ್ಕಮಲ್ಲಣ್ಣ ಇವರನ್ನು ಪೋಣಿಸಿ ಪರಿಚಯಿಸಿದ್ದಾರೆ. ಆ ಆ ಅಧ್ಯಾಯಗಳಲ್ಲಿ ಪ್ರಮುಖ ಜೈನ, ವೀರಶೈವ ಕವಿಗಳನ್ನೂ ಇತರ ಕವಿಗಳು ಅಧ್ಯಾಯದಲ್ಲಿ ವೈಷ್ಣವ ಹಾಗೂ ಉಳಿದ ಮತದ ಕವಿಗಳನ್ನೂ ವಿವೇಚಿಸಿದ್ದಾರೆ. ಜೈನ ಕವಿ-ಕೃತಿಗಳಿಗೆ ದೊರೆತಷ್ಟು ವಿಶಾಲ ವಿವೇಚನೆ ಉಳಿದ ಕವಿಗಳಿಗೆ ದೊರೆತಿಲ್ಲ.

ಕೊನೆಯದಾಗಿ ಸಾಂಗತ್ಯಕಾವ್ಯಗಳ ವೈಶಿಷ್ಟ್ಯವನ್ನು ಗುರುತಿಸಲು ಪ್ರಯತ್ನಿಸಿ, 'ಬೇರೆ ಯಾವುದೇ ಪ್ರಕಾರದಲ್ಲಿ ರಚನೆಯಾಗಿರುವ ಕೃತಿಸಂಖ್ಯೆಗೆ ಸರಿತೂಗುವಷ್ಟು ಕೃತಿಗಳು ಇದರಲ್ಲಿಯೂ ರಚಿತವಾಗಿವೆ. ಸತ್ವ ಹಾಗೂ ಮಹತ್ವದ ದೃಷ್ಟಿಯಿಂದ ಕೆಲವು ಶ್ರೇಷ್ಠ ಕೃತಿಗಳು ಮಾತ್ರ ಬಂದಿವೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಾಂಗತ್ಯದ ಜನಪ್ರಿಯತೆಗೆ ಅದರ ನಿರರ್ಗಳತೆ, ಸುಭಗತೆ, ಗೇಯಗುಣಗಳು ಕಾರಣವಿರಬೇಕು. ಹೆಚ್ಚಾಗಿ ಸಾಂಗತ್ಯಕೃತಿಗಳಿಗೆ ಧರ್ಮ, ಪ್ರೇರಕಶಕ್ತಿಯಾಗಿ ನಿಂತಿರುವುದು ಕಂಡುಬರು

ತ್ತದೆ. ಹೆಚ್ಚಿನ ಕಾವ್ಯಗಳಲ್ಲಿ ಧರ್ಮ ಮುಂದಾಗಿ ಕಾವ್ಯ ಹಿಂದಾಗಿದೆ, ಕಥೆ ಮೇಲಾಗಿ ಕಾವ್ಯ ಕೆಳಗಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಶತಕಸಾಹಿತ್ಯ' ಎಂಬ ಅಧ್ಯಾಯದಲ್ಲಿ ಅದರ ಅರ್ಥವಿವರಣೆ ಮಾಡುತ್ತ, ಉಗಮ-ವಿಕಾಸಗಳನ್ನು ವಿವರಿಸಿ ವಸ್ತುವೈವಿಧ್ಯವನ್ನು ಎತ್ತಿತೋರಿಸಿದ್ದಾರೆ. ಶತಕಗಳ ವಸ್ತು ಹೆಚ್ಚಾಗಿ ಭಕ್ತಿ, ವೈರಾಗ್ಯ, ಜ್ಞಾನ ಹಾಗೂ ನೀತಿಪರವಾದದ್ದು. ಜೈನ, ವೀರ ಶೈವ ಕವಿಗಳು ಹೆಚ್ಚಾಗಿ ಶತಕವನ್ನು ರಚಿಸಿದ್ದಾರೆ. ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಛಂದಸ್ಸುಗಳಲ್ಲಿ ಶತಕಗಳು ರಚನೆಗೊಂಡಿವೆ ಎಂದು ಹೇಳಿ; ಹರಿಹರ, ರತ್ನಾಕರರ ಶತಕ ಗಳನ್ನು ವಿಮರ್ಶಿಸಿ, ಕೆಲವು ಮಹತ್ವದ ಶತಕಗಳ ವಿಷಯವನ್ನು ಅಲ್ಪಮಟ್ಟಿಗೆ ವಿಶದ ಪಡಿಸಿ ಉಳಿದವುಗಳ ಹೆಸರುಗಳನ್ನು ಸೂಚಿಸಿದ್ದಾರೆ.

ಅಷ್ಟಕ, ಸಂಸ್ಕೃತಸಾಹಿತ್ಯದಿಂದ ಎತ್ತಿತಂದ ಸ್ತೋತ್ರರೂಪವಾದ ಕಾವ್ಯಪ್ರಕಾರ. ಇದು ಕನ್ನಡದಲ್ಲಿ ಚಂಪೂಕಾವ್ಯಗಳು ಹುಟ್ಟುವುದಕ್ಕೆ ಮುನ್ನವೇ ಸೈಗೊಟ್ಟ ಶಿವಮಾರನಿಂದ ರಚನೆಗೊಂಡಿತು. ಭಕ್ತಿ, ಇವುಗಳ ಸ್ಥಾಯಿ. ಜೈನ, ವೀರಶೈವ ಕವಿಗಳು ಹೇರಳವಾಗಿ ಅಷ್ಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕಾವ್ಯಾಂಶ ಕಡಿಮೆ ಆದರೂ ಕೆಲವು ಅಷ್ಟಕ ಗಳು ಭಾವಗರ್ಭಿತವಾಗಿವೆ ಎಂದು ಅಷ್ಟಕಸಾಹಿತ್ಯದ ಸಮೀಕ್ಷೆಯನ್ನು ಸಂಕ್ಷಿಪ್ತವಾಗಿ ಕೆಲವು ಕೃತಿಗಳ ವಿವರಣೆಯೊಂದಿಗೆ ಮುಗಿಸಲಾಗಿದೆ.

ಹಾಡಿನ ರೂಪದಲ್ಲಿದ್ದ ದ್ವಿಪದಿಯೇ ನಾಲ್ಕು ಪಾದವಾಗಿ ಚೌಪದಿಯಾದಂತೆ ಕಂಡುಬರುತ್ತದೆ. ಇದು ಮಾತ್ರಾಗಣಘಟಿತ ಮಟ್ಟು. ಇದರ ಪ್ರತಿ ಪಾದದಲ್ಲಿ ಹೆಚ್ಚಾಗಿ ೧೮ ಮಾತ್ರೆ ಎಂದು ಚೌಪದಿಯ ಲಕ್ಷಣ ಹೇಳಿ, ಮಾನೋಮಿಪದಗಳು, ಗೋವಿನಹಾಡು, ದಾಸರ ಪದಗಳು, ವೀರಸಂಗಯ್ಯನ ಚೌಪದಿ, ಗಂಗೀಗೌರಿ ಸಂವಾದ ಚೌಪದಿಗಳು ಶ್ರೇಷ್ಠಕೃತಿಗಳಾಗಿವೆ. ಇವುಗಳ ವಸ್ತು ಪೌರಾಣಿಕ, ಐತಿಹಾಸಿಕ ಹಾಗೂ ಜಾನಪದವೆಂದು ಸಮಾರೋಪಿಸಿದ್ದಾರೆ.

ಅನುಬಂಧದಲ್ಲಿ ಈವರೆಗೆ ದೊರೆತ ಸಾಂಗತ್ಯ, ಶತಕ, ಅಷ್ಟಕ ಕೃತಿಗಳ ಪಟ್ಟಿ ಯಿದೆ.

ದೊರೆತ ಸಾಮಗ್ರಿಯ ಸಹಾಯದಿಂದ ಸರಳ ಶೈಲಿಯಲ್ಲಿ ಈ ನಾಲ್ಕು ಪ್ರಕಾರಗಳ ಪರಿಚಯವನ್ನು ಇಲ್ಲಿ ಮಾಡಿಕೊಟ್ಟಿದ್ದಾರೆ. ಇದು ಸಾಮಾನ್ಯನಿಗಾಗಿ ರಚಿತವಾದ ಸಾಹಿತ್ಯಚರಿತ್ರೆಯಾದುದರಿಂದ ಹೆಚ್ಚಿನ ಸಂಶೋಧನೆಯಾಗಲೀ ತರ್ಕೋಪತರ್ಕಕ್ಕಾಗಲೀ ಇಲ್ಲಿ ಸ್ಥಾನವಿಲ್ಲ. ಅದನ್ನು ಹುಡುಕುವುದೂ ತಪ್ಪು. ಆದರೂ ಕೆಲವು ಹೊಸ ವಿಚಾರಗಳನ್ನು ಹೇಳದೇ ಬಿಟ್ಟಿಲ್ಲ. ಸಾಮಾನ್ಯನಂತೆ ವಿಮರ್ಶಕನಿಗೂ, ಸಂಶೋಧಕ ನಿಗೂ ಇದು ಅಭ್ಯಾಸಯೋಗ್ಯವಾಗುವಂತೆ ಮಾಡಿದ್ದಾರೆ.

ಈ ಕೃತಿಯಲ್ಲಿ ಸಾಂಗತ್ಯಸಾಹಿತ್ಯಕ್ಕೆ ಸಲ್ಲಬೇಕಾದ ಸ್ಥಾನ ಸಂದಿದೆ. ಉಳಿದ ಪ್ರಕಾರಗಳಾದ ಶತಕ, ಅಷ್ಟಕ, ಚೌಪದಗಳಿಗೆ ಅವಕಾಶ ಸಾಲದಾಗಿದೆ. ಈ ಮೂರು ಪ್ರಕಾರಗಳಿಗೆ ಬೇರೊಂದು ಸಂಪುಟವನ್ನು ಮೀಸಲಾಗಿರಿಸಿದ್ದರೆ ಉತ್ತಮವಿತ್ತು.

ವೀರಣ್ಣ ರಾಜೂರ

೧೦. ಹೊಸಗನ್ನಡ ಸಾಹಿತ್ಯ: ಎಲ್. ಎಸ್ ಶೇಷಗಿರಿರಾವ್. ಪುಟ: viii+೩೨೮

ಸಾಮಾನ್ಯನಿಗೆ ಸಾಹಿತ್ಯಚರಿತ್ರೆಯ ಹತ್ತು ಸಂಪುಟಗಳನ್ನು ನೀಡುವ ಸಾಂಸ್ಥಿಕ ಪ್ರಯತ್ನದ ವೈಯಕ್ತಿಕ ಫಲ, ಎಲ್. ಎಸ್. ಶೇಷಗಿರಿರಾಯರ 'ಹೊಸಗನ್ನಡ ಸಾಹಿತ್ಯ'. ಇದು ಈ ಮಾಲೆಯಲ್ಲಿ ಹತ್ತನೆಯ ಹಾಗೂ ಕೊನೆಯ ಸಂಪುಟ. ಕನ್ನಡ ಸಾಹಿತ್ಯ ತನ್ನ ನಡೆದುಬಂದ ದಾರಿಯಲ್ಲಿ ಶ್ರೀಸಾಮಾನ್ಯರನ್ನು ಅನುಲಕ್ಷಿಸಿ ಅವರ ಗತಿ ಚಿತ್ರಗಳನ್ನೂ, ಜೀವನಾನುಭವಗಳನ್ನೂ ಎರಕಹೊಯ್ಯಲು ಎಷ್ಟರಮಟ್ಟಿಗೆ ಪ್ರಯತ್ನಿಸಿದೆ ಎಂದೂ, ಪ್ರಾಚೀನಸಾಹಿತ್ಯದಿಂದ ಆಧುನಿಕ ಕನ್ನಡಸಾಹಿತ್ಯವನ್ನು ಬಿಂಗಡಿಸಿ ಹೇಳುವುದು ಅಸಾಧ್ಯವಾದುದರಿಂದ, ಹೊಸಗನ್ನಡ ಸಾಹಿತ್ಯವನ್ನು ಸಾಮಾನ್ಯನಿಗೆ ಸಾಹಿತ್ಯಚರಿತ್ರೆಮಾಲಿಕೆಯಲ್ಲಿ ನೋಡಬೇಕಾಗುತ್ತದೆ. ಕಳೆದ ಅರ್ಧಶತಮಾನದಲ್ಲಿ ಸಾಗಿ ಬಂದ ಆಧುನಿಕ ಕನ್ನಡಸಾಹಿತ್ಯ ಇನ್ನೂ ಇತಿಹಾಸವಾಗುವಷ್ಟು ಪರಂಪರೆಯನ್ನು ಸ್ಥಾಪಿಸಿಲ್ಲವಾದರೂ ಸಾಹಿತ್ಯದಲ್ಲುಂಟಾದ ಅನೇಕ ವಿಚಾರಧಾರೆಗಳನ್ನೂ, ಆಲೋಚನ ತರಂಗಗಳನ್ನೂ ಅದು ಭಾರತೀಯ ಮತ್ತು ಜಾಗತಿಕ ಸಾಹಿತ್ಯದಿಂದ ಪಡೆದ ಪ್ರೇರಣೆ-ಪ್ರಭಾವಗಳನ್ನೂ ಗಮನಿಸಿದಾಗ, ಅದರ ಬೆಳವಣಿಗೆಯ ಕೆಲವು ಘಟ್ಟಗಳು ನಮ್ಮ ಗಮನಕ್ಕೆ ನಿಶ್ಚಿತವಾಗಿ ಕಂಡುಬರುತ್ತವೆ. ಇವನ್ನು ಲೇಖಕರು ಈ ಗ್ರಂಥದ ಆರು ಅಧ್ಯಾಯಗಳಲ್ಲಿ ಚರಿತ್ರೆಯ ಚೌಕಟ್ಟಿನಲ್ಲಿ ಸ್ಥೂಲವಾಗಿ ಪರಿಚಯಿಸಲು ಯತ್ನಿಸಿದ್ದಾರೆ.

"ಆಧುನಿಕ ಕನ್ನಡಸಾಹಿತ್ಯ ಎಂದು ನಾವು ಕರೆಯುವ ಸಾಹಿತ್ಯಸೃಷ್ಟಿ ಕಳೆದ ಸುಮಾರು ಅರುವತ್ತು ವರ್ಷಗಳದು" (ಪು. ೧) –ಎಂದು ಮೊದಲಭಾಗವನ್ನು ಆರಂಭಿಸುತ್ತ ಹೊಸಗನ್ನಡ ಸಾಹಿತ್ಯದ ಆರಂಭಕಾಲ ೧೯ ನೆಯ ಶತಮಾನದ ಉತ್ತರಾರ್ಧ (ಪು. ೩) ಎಂದು ಹೇಳಿ, ಲೇಖಕರು ಕನ್ನಡಸಾಹಿತ್ಯ ೨೦ ನೆಯ ಶತಮಾನದಲ್ಲಿ ಹೊಸ ತಿರುವನ್ನು ಪಡೆಯಲು ಬೇಕಾದ ಸಿದ್ಧತೆಗಳನ್ನೂ ಸಾಹಿತ್ಯದ ಸ್ಥಿತ್ಯಂತರಗಳಿಗೆ ಕಾರಣಗಳನ್ನೂ ಚರ್ಚಿಸಿದ್ದಾರೆ ಈ ಸಾಹಿತ್ಯದ ಆಸಕ್ತಿಯ ಕೇಂದ್ರ, ಮನುಷ್ಯನಾಗಿರುವದರಿಂದ ಆತನ ನೈಜವಾದ ಭಾವನೆಗಳು, ಕನಸುಗಳು, ಅವನ ಹಿನ್ನೆಲೆಯಾಗಿ ನಿಂತ ನಿಸರ್ಗ, ಮಾನವೀಯ ಸಂಬಂಧಗಳು ಮುಖ್ಯವಾಗಿದ್ದು ಯಾವುದೇ ಅಂತಸ್ಸನ್ನು ತನ್ನ ಜೀವನ ಮಾರ್ಗದಲ್ಲಿ ಅವನು ಯಾಚಿಸುವುದಿಲ್ಲ. ಹೀಗೆ ಮಾನವನು ಪೂರ್ಣವಾಗಿ, ವೈಯಕ್ತಿಕವಾಗಿ

ಜೀವನದೆಡೆಗೆ ತನ್ನ ಪ್ರತಿಕ್ರಿಯೆ ಸೂಚಿಸುತ್ತಾನೆ. "ಆರಂಭಕಾಲದಲ್ಲಿ ಪಾಶ್ಚಾತ್ಯ ಸಂಸ್ಕೃತಿ, ರೀತಿ-ನೀತಿಗಳು, ವಿಚಾರಲಹರಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಮಹತ್ವವನ್ನು ಕುರಿತ ಕಲ್ಪನೆಗಳು- ಇವುಗಳ ಪ್ರಭಾವ ಭಾರತೀಯರ ಮೇಲೆ ಸಹಜವಾಗಿ ಕನ್ನಡಿಗರ ಮೇಲೆ ಆದ ಕಾಲ" (ಪು. ೮) ಎಂಬ ಹೇಳಿಕೆಗಳನ್ನು ಕೆಲವು ಆಧಾರಗಳೊಂದಿಗೆ ನಿರವಿಸಲಾಗಿದೆ. ಸಾಮಾನ್ಯನಿಗೆ ಬೇಕಾದ ಪರಿಚಯಾತ್ಮಕಭಾಷೆ, ಕೃತಿಯ ಉದ್ದೇಶದಿಂದ ದೂರವಾಗಿಲ್ಲ.

ಹೊಸಗನ್ನಡ ಸಾಹಿತ್ಯಕ್ಕೆ ಪ್ರಬಲ ಪ್ರೇರಣೆ ದೊರೆತುದು, ಆಂಗ್ಲ ವಿದ್ಯಾಭ್ಯಾಸ ದಿಂದಲೇ ಎಂಬುದು ಸಮಂಜಸವಾದ ಸಂಗತಿ. "ಇಂಗ್ಲೀಷ ಭಾಷೆ ಯುರೋಪಿನ ಚಿಂತನೆ ಮತ್ತು ಸಾಹಿತ್ಯಗಳ ಕಣ್ಣುಕೋರೈಸುವ ಭಂಡಾರವನ್ನು ತೆರೆಯುವ ಬೀಗದ ಕೈ ಆಯಿತು" (ಪು. ೧೧) ಎಂದು ಪ್ರಪಂಚದ ಸಾಹಿತ್ಯಶಿಖರಗಳ ಸಾನಿಧ್ಯ, ಲೇಖಕರಿಗೆ ಹೊಸದಾದ ಬೃಹತ್ ದರ್ಶನ ಮಾಡಿಸಿದ ವಿಷಯವನ್ನು ವಿವೇಚಿಸಲಾಗಿದೆ. ಇಲ್ಲಿ ಹೊಸಗನ್ನಡ ಸಾಹಿತ್ಯದ ಅರುಣೋದಯದ ಪರಿಚಯ ಮಾಡಿಕೊಡುತ್ತ, ಉದಯ ಕಾಲದ ಪ್ರೇರಣೆಗಳನ್ನು ಗುರುತಿಸುವಲ್ಲಿ ಉತ್ತರಕರ್ನಾಟಕದಲ್ಲಿ ನಡೆದ ಭಾಷೆ, ಸಾಹಿತ್ಯಗಳ ಸಿದ್ಧತೆಯನ್ನು ವಾಚಕರ ಮುಂದೆ ಮರೆಯದೆ ಖಚಿತವಾಗಿ ತೋರಿಸಿಕೊಡು ವುದು ಅಗತ್ಯವಾಗಿತ್ತು [ಇತ್ತೀಚೆ ಪ್ರಕಟವಾದ ಡಾ. ಧಾರವಾಡಕರರ "ಹೊಸಗನ್ನಡ ಸಾಹಿತ್ಯದ ಉದಯಕಾಲ" ಎಂಬ ಮಹಾಪ್ರಬಂಧ (Thesis) ಹಾಗೂ ಡಾ. ಹಾವ ನೂರ ಮುಂತಾದ ವಿದ್ವಾಂಸರ ಗ್ರಂಥ-ಲೇಖನಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸ ಬಹುದಿತ್ತೇನೊ !].

ಗ್ರಂಥದ ಮೂರನೆಯ ಅಧ್ಯಾಯದಲ್ಲಿ ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟ ಗಳನ್ನು ತುಂಬಾ ಸಮರ್ಪಕವಾಗಿ ಗುರುತಿಸಲಾಗಿದೆ. ನವೋದಯ ಪೂರ್ವ (೧೮೭೦-೧೯೩೦), ನವೋದಯ (೧೯೩೦-೪೫), ಪ್ರಗತಿಶೀಲ (೧೯೪೫-೫೦), ನವ್ಯ (೧೯೫೦ ರ ನಂತರದವು)— ಎಂಬ ಘಟ್ಟಗಳಲ್ಲಿ ಸಾಗಿಬಂದ ಸಾಹಿತ್ಯರಾಶಿಯ ವೈವಿಧ್ಯ ಗಳು ವಿಮರ್ಶಾತ್ಮಕ ವಿಚಾರಗಳೊಂದಿಗೆ ನಿರ್ದೇಶಿಸಲ್ಪಟ್ಟಿವೆ. ಮೊದಲ ಹಂತದಲ್ಲಿ ಕನ್ನಡಭಾಷೆ, ನಿಧಾನವಾಗಿ ಸಾಹಿತ್ಯರಚನೆಯಲ್ಲಿ ಬೆಳೆದು ತಲೆಯೆತ್ತಿದ ರೀತಿ, ಈ ಹೊಸ ಸಾಹಿತ್ಯದಲ್ಲಿ ತೋರಿಬರುವ ಪ್ರಾಸತ್ಯಾಗ, ಆಡುಮಾತಿನ ಭಾಷಾಬಳಕೆ, ಜನ ಜೀವನಕ್ಕೆ ತೀರ ಹತ್ತಿರವಾಗುವಿಕೆ, ಅನುವಾದಿತ ರೂಪಗಳು ಇತ್ಯಾದಿ ವಿಷಯಗಳು ಹಾಗೂ ನವೋದಯಕಾವ್ಯದಲ್ಲಿ ಹೊಸಗೀತಪ್ರಕಾರಗಳು, ನೂತನ ಛಂದಸ್ಸು, ಶಬ್ದ ಸೃಷ್ಟಿ, ವಸ್ತುವೈವಿಧ್ಯ, ಕವಿಸೃಷ್ಟಿ ಇವೆಲ್ಲ ಓದುಗನ ಕುತೂಹಲವನ್ನು ಕೆರಳಿಸುತ್ತವೆ. ಅ. ನ. ಕೃ. ರ ನೇತೃತ್ವದಲ್ಲಿ ಸಾಹಿತ್ಯಲೋಕದಲ್ಲಿ ಹೊಸಗಾಳಿ ಎಬ್ಬಿಸಿದ ಪ್ರಗತಿಶೀಲ ಸಾಹಿತ್ಯ (ಪು. ೭೩-೮೯), ಜೀವನದ ಏರು-ಪೇರುಗಳ ಕಡೆಗೆ ಕೈಮಾಡಿ ಕಾದಂಬರಿ,

ಸಣ್ಣಕತೆಗಳಿಗೆ ಮಾತ್ರ ಸೀಮಿತವಾಗಿ ಒಂದು ಚಳುವಳಿಯಾಗಿ ಉಳಿಯಿತೇ ಹೊರತು ಪರಂಪರೆಯನ್ನು ನಿರ್ಮಿಸದಿರುವುದು ಆಶ್ಚರ್ಯಕರ ಘಟ್ಟ. ಎರಡು ಜಾಗತಿಕ ಮಹಾ ಯುದ್ಧಗಳ ಪರಿಣಾಮದಿಂದ ಜೀವನದಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಪೆಟ್ಟನ್ನು ತಿಂದು, ಬದುಕಿನಲ್ಲಿ ಮೌಲ್ಯಗಳನ್ನೂ ನಂಬಿಕೆಗಳನ್ನೂ ಕಳೆದುಕೊಂಡು ವಿಫಲತೆಯನ್ನು ಹೊಂದಿದೆ. ವಾಸ್ತವಜೀವನದ ಚಿತ್ರವನ್ನು ನವ್ಯಸಾಹಿತ್ಯ ತೋರಿಸಿದ್ದು ಸಾಹಿತ್ಯಕ್ಷೇತ್ರದಲ್ಲಿ ನೂತನ ಹುಯಿಲನ್ನು ಎಬ್ಬಿಸಿತು. ನವ್ಯಸಾಹಿತ್ಯದ ಹುಟ್ಟಿನ ಹಿನ್ನೆಲೆಯ ಕಾರಣ ಗಳನ್ನು ಚರ್ಚಿಸಿದ ಲೇಖನಭಾಗದಲ್ಲಿ ಅದರ ಚಾರಿತ್ರಿಕ ಅಂಶಗಳ ಬಗೆಗೆ ಸರಿಯಾದ ದಾಖಲೆಗಳನ್ನು ಕೊಡಬೇಕಾದುದು ಅವಶ್ಯವಾಗಿತ್ತು.

'ಹೊಸಗನ್ನಡ ಸಾಹಿತ್ಯದ ರೂಪಗಳು' (ಪು. ೧೧೪–೨೯೩) ಎಂಬ ದೀರ್ಘವಾದ ಭಾಗದಲ್ಲಿ (೧) ಕಾವ್ಯ (೨) ಕಾದಂಬರಿ (೩) ಸಣ್ಣಕಥೆ (೪) ನಾಟಕ (೫) ಸಾಹಿತ್ಯವಿಮರ್ಶೆ (೬) ಕನ್ನಡ ಗದ್ಯ ಎಂಬ ಬೇರೆಬೇರೆ ಪ್ರಕಾರಗಳ ಹುಟ್ಟು, ಬೆಳ ವಣಿಗೆ, ಸಾಧನೆ, ಸಿದ್ಧಿ, ಕೃತಿಸಂಪತ್ತು, ಪ್ರತಿಭಾತಪಸ್ಸು ಇವುಗಳ ಪರಿಚಯ ಸಾಮಾನ್ಯ ನಿಗೆ ವಿದಿತವಾಗುತ್ತದೆ. ಹೊಸಗನ್ನಡ ಸಾಹಿತ್ಯದ ಪ್ರಮುಖ ಕೃತಿಕಾರರಲ್ಲಿ ಬಿ. ಎಂ. ಶ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ, ದ. ರಾ. ಬೇಂದ್ರೆ, ಕುವೆಂಪು, ಪು. ತಿ. ನರಸಿಂಹಾಚಾರ್, ಶಿವರಾಮ ಕಾರಂತ, ಟಿ. ಪಿ ಕೈಲಾಸಂ, ಅ. ನ. ಕೃ., ಶ್ರೀರಂಗ, ಎಂ. ಗೋಪಾಲಕೃಷ್ಣ ಅಡಿಗರ ಜೀವನ ಮತ್ತು ಸಾಹಿತ್ಯಸೃಷ್ಟಿಯ ವೈವಿಧ್ಯ ಗಳನ್ನು ಬಿಚ್ಚುಮನಸ್ಸಿನಿಂದ ಪರಿಚಯಿಸಲಾಗಿದೆ. ಆದರೆ ಗ್ರಂಥಕಾರರು ಇವಕ್ಕೆ ಯಾವ ಮಾನದಂಡವನ್ನು ಇಟ್ಟುಕೊಂಡಿದ್ದಾರೆ ಎಂಬುದು ತಿಳಿಯುವುದಿಲ್ಲ. ಹೊತ್ತಿಗೆಯ ಕೊನೆಯಲ್ಲಿ "ಹೊಸಗನ್ನಡ ಸಾಹಿತ್ಯ– ಒಂದು ಸಮೀಕ್ಷೆ" ಎಂಬ ಅಧ್ಯಾಯ ಲೇಖಕರ ವಿಮರ್ಶನಪ್ರಜ್ಞೆಯನ್ನು, ಸಾರರೂಪವಾದ ವಿಚಾರಧಾರೆಯನ್ನು ಎತ್ತಿತೋರಿಸುತ್ತದೆ. ಗ್ರಂಥದ ಕೊನೆಯಲ್ಲಿ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಭಾರತೀಯ ನಾಟ್ಯರಂಗ ಪ್ರಶಸ್ತಿಪಡೆದ ಲೇಖಕ–ಕೃತಿಗಳ ಪಟ್ಟಿ ಇದೆ.

ಒಟ್ಟಿನಲ್ಲಿ ಈ ಹೊತ್ತಿಗೆಯ ಕುರಿತು ಕೆಲವು ವಿಚಾರಗಳನ್ನು ಹೇಳುವ ಅಗತ್ಯ ಇದೆ. ಸಾಮಾನ್ಯನಿಗೆ ಸಂಪೂರ್ಣವಾಗಿ ಕನ್ನಡ ಸಾಹಿತ್ಯವನ್ನು, ಅಲ್ಲಿಯ ಸಮಸ್ಯೆಗಳನ್ನು, ವಿದ್ವತ್ಪೂರ್ಣ ಚರ್ಚೆಗಳನ್ನು ಪರಿಚಯಿಸುವ ಸಾಧ್ಯತೆಯಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ದಿಶೆಯಲ್ಲಿ ಪರಿಮಿತದೃಷ್ಟಿಯನ್ನು ಹೊಂದಿದಾಗ್ಯೂ ಕೂಡ ಸಮೀಕ್ಷೆಯ ರೂಪದಲ್ಲಿ ಹೆಚ್ಚು ಅಧ್ಯಯನ ಮಾಡುವಂತೆ ದಾರಿ ಹಾಕಿಕೊಡುವುದು ಅಗತ್ಯವಾಗಿ ಮಾಡಬೇಕಾದ ಕಾರ್ಯ. ಈ ಗ್ರಂಥ ಹೊಸಗನ್ನಡ ಸಾಹಿತ್ಯದಂಥ ಬೃಹತ್‌ಸಾಹಿತ್ಯರಾಶಿಯನ್ನು ಸೀಮಿತವಾದ ಪರಿಧಿಯಲ್ಲಿ ಸಾಮಾನ್ಯನಿಗೆ ಪರಿಚಯಿಸುವ ದೊಡ್ಡ ಉದ್ದೇಶವನ್ನು ಹೊಂದಿದೆ. ಇದರಿಂದ ಪ್ರಮುಖ ಕೃತಿಕಾರರು, ಕೃತಿಗಳು, ಮುಖ್ಯ ಘಟ್ಟಗಳು ಇಷ್ಟೇ

ಓದುಗನಿಗೆ ಕಾಣುತ್ತವೆಯೇ ಹೊರತು ಹೆಚ್ಚು ಉಪಯುಕ್ತತೆಯನ್ನು ನೀಡಲಾರವು. ಇದಕ್ಕಿಂತ ಹೊಸಗನ್ನಡ ಸಾಹಿತ್ಯದ ಬೇರೆಬೇರೆ ಪ್ರಕಾರಗಳನ್ನು ಕುರಿತು ಪ್ರಾಚೀನ ಸಾಹಿತ್ಯದಂತೆ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದರೆ, ವ್ಯಾಸಂಗಿಗಳಿಗೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಇಲ್ಲದಿದ್ದರೆ ಕಾವ್ಯಭಾಗದಲ್ಲಿ ಬರಬೇಕಾದ ಧಾರವಾಡದಲ್ಲಿ ಹೊಸಗನ್ನಡ ಕಾವ್ಯಕ್ಕೆ ಪ್ರೇರಣೆ ನೀಡಿದ ಗೆಳೆಯರ ಗುಂಪಿನ ಚಟುವಟಿಕೆಗಳ ಬಗೆಗೂ, ಸಂಸ್ಕೃತಿ, ಭಾಷೆ, ಸಂಶೋಧನ ಕ್ಷೇತ್ರಗಳ ಬಗೆಗೂ ಬಿಟ್ಟುಹೋಗುವುದು ತಪ್ಪುತ್ತಿತ್ತು. ಇಂಥ ಕೆಲವು ಕೊರತೆಗಳಿದ್ದರೂ, 'ಹೊಸಗನ್ನಡ ಸಾಹಿತ್ಯ'ದಲ್ಲಿ ಲೇಖಕರ ಪರಿಶ್ರಮ, ಸ್ವೋಪಜ್ಞತೆ, ಅಧ್ಯಯನದ ಆಳ ನಿಶ್ಚಿತವಾಗಿ ಪರಿಚಿತವಾಗುತ್ತವೆ.

ಜಿ. ಎಂ. ಹೆಗಡೆ

■ ■

ಸಂಪಾದಕೀಯ

ಜಾನಪದ ಸಮ್ಮೇಲನ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ, ತೃತೀಯ ಅಖಿಲ ಕರ್ನಾಟಕ ಜಾನಪದ ಸಮ್ಮೇಲನವನ್ನು ದಿವಂಗತ ಡಾ. ಬಿ. ಎಸ್. ಗದ್ದಿಗಿಮಠ ಮಂಟಪ ದಲ್ಲಿ ಜನೆವರಿ ೧೪-೧೫ ರಂದು ವೈಭವದಿಂದ ಆಚರಿಸಿತು.

ವಿಶ್ವವಿದ್ಯಾಲಯದ ವಿದ್ವಜ್ಜನತಾ ವಾತಾವರಣದಲ್ಲಿ ಜನತಾ ಸಾಹಿತ್ಯಕಲೆಗಳಿಗೆ ಸಂದ ಗೌರವ, ವಿಶ್ವವಿದ್ಯಾಲಯ ಮತ್ತು ಶ್ರೀಸಾಮಾನ್ಯರ ಸಾಮೀಪ್ಯವನ್ನುಂಟುಮಾಡಲಿ ಯೆಂದು ಘೋಷಿಸುತ್ತ, ಕುಲಪತಿ ಡಾ. ಆರ್. ಸಿ. ಹಿರೇಮಠ ಅವರು ಸಮ್ಮೇಲನ ವನ್ನು ಉದ್ಘಾಟಿಸಿದರು.

'ಜಾನಪದ'ದ ವ್ಯಾಪ್ತಿ, ಲಕ್ಷಣ, ಅಧ್ಯಯನದ ಆವಶ್ಯಕತೆಗಳನ್ನು ಎತ್ತಿಹೇಳುತ್ತ, ಸಮ್ಮೇಲನಾಧ್ಯಕ್ಷರಾದ ಡಾ. ದೇ. ಜವರೇಗೌಡ ಅವರು ಜಾನಪದವು ಸಾಯುವುದಿಲ್ಲ, ಜಾನಪದಕ್ಕೆ ಸಾವೆಂಬುದೇ ಇಲ್ಲ; ಆದರೆ ಮರೆಯಾಗುವ ಮುನ್ನ ಈಗಿನ ಜಾನಪದ ವನ್ನು ಸಂಗ್ರಹಿಸಬೇಕು, ಸಂಶೋಧಿಸಬೇಕು, ಸಮಾಲೋಚಿಸಬೇಕು ಎಂದು ಸಾರಿದರು.

ಸಮ್ಮೇಲನದ ಅಂಗವಾಗಿ ಶ್ರೀ ಕೆ. ವ್ಹಿ. ಸುಬ್ಬಣ್ಣ, ಡಾ. ಆರ್. ವಾಯ್. ಧಾರವಾಡಕರ, ಡಾ. ಬೆಟಗೇರಿ ಕೃಷ್ಣಶರ್ಮ ಅವರ ಅಧ್ಯಕ್ಷತೆಯಲ್ಲಿ ಮೂರು ಜಾನಪದ ಗೋಷ್ಠಿಗಳು ಜರುಗಿದವು. ಪ್ರತಿದಿನ ರಾತ್ರಿ ಜರುಗಿದ ಜಾನಪದ ರಂಗಪ್ರದರ್ಶನ, ಸಮ್ಮೇಲನದ ವಿಶೇಷ ಆಕರ್ಷಣೆಯೆನಿಸಿದ್ದಿತು.

ಈ ಅಭೂತಪೂರ್ವ ಸಮಾರಂಭವನ್ನು ಯಶಸ್ಸಿನಿಂದ ಪೂರೈಸಿದ ಕನ್ನಡ ಅಧ್ಯಯನಪೀಠಕ್ಕೆ ಕರ್ನಾಟಕ ಭಾರತಿ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಕಂಬನಿ

ಡಾ. ಬಿ. ಶಿವಮೂರ್ತಿಶಾಸ್ತ್ರಿಗಳು, ನಮ್ಮ ನಾಡಿನ ಹಿರಿಯ ತಲೆಮಾರಿನ ವಿದ್ವಾಂಸರು. ಕರ್ನಾಟಕ ಏಕೀಕರಣದ ಧುರೀಣರಾಗಿ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಾಗಿ, ಸುಪ್ರಸಿದ್ಧ ಸಾಹಿತಿಗಳಾಗಿ, ಜನಪ್ರಿಯ ಕೀರ್ತನಕಾರರಾಗಿ, ಖ್ಯಾತ ಪತ್ರಕರ್ತ ರಾಗಿ ಅವರು ನಮ್ಮ ನಾಡಿಗೆ ಸಲ್ಲಿಸಿದ ಸೇವೆ ಅಪಾರವಾದುದು. ಈ ಸೇವೆಯನ್ನು

ಮನದಂದು ಕೇಂದ್ರಸರಕಾರ, ರಾಜ್ಯಸರಕಾರ, ವಿಶ್ವವಿದ್ಯಾಲಯ, ಅರಮನೆ–ಗುರುಮನೆಗಳು ಅವರಿಗೆ ಅನೇಕ ಪ್ರಶಸ್ತಿಗಳ ಗೌರವ ನೀಡಿದ್ದವು. ಇಂಥ ಅಪೂರ್ವ ವ್ಯಕ್ತಿತ್ವದ ಡಾ. ಶಾಸ್ತ್ರಿಗಳು ೧೫–೧–೧೯೭೬ ರಂದು ಲಿಂಗೈಕ್ಯರಾದುದು ನಮ್ಮ ನಾಡಿಗೆ ತುಂಬಲಾರದ ಹಾನಿಯೆನಿಸಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂದು ಭಾರತಿ ಹಾರೈಸುತ್ತದೆ.

ಶ್ರೀ ಮಿರ್ಜಿ ಅಣ್ಣಾರಾಯರು, ಒಬ್ಬ ಪ್ರಾಥಮಿಕ ಶಿಕ್ಷಕ ಏನನ್ನು ಸಾಧಿಸಬಲ್ಲನೆಂಬುದಕ್ಕೆ ನಿದರ್ಶನವೆನಿಸಿದವರು. ಕನ್ನಡ, ಮರಾಠಿ, ಪ್ರಾಕೃತ ಭಾಷೆಗಳ ಅಭ್ಯಾಸದಿಂದ ಪಕ್ವವಾಗಿದ ವ್ಯಕ್ತಿತ್ವವುಳ್ಳ ಅವರು, ಕನ್ನಡಕ್ಕೆ ಹಲವು ಉತ್ತಮೋತ್ತಮ ಕೃತಿಗಳನ್ನು ನೀಡಿದ್ದಾರೆ. ಕಾದಂಬರಿ, ಪ್ರಬಂಧ, ಧಾರ್ಮಿಕ ಸಾಹಿತ್ಯನಿರ್ಮಿತಿಯ ಮೂಲಕ ಅವರು ನಮ್ಮ ನಾಡಿಗೆ ಸಲ್ಲಿಸಿದ ಸೇವೆ ಅಮೂಲ್ಯವಾದುದು. ಶ್ರೀಯುತರು ೨೩–೧೨–೧೯೭೫ ರಂದು ದಿವಂಗತರಾಗುವಲ್ಲಿ ನಮ್ಮ ನಾಡು, ಒಬ್ಬ ಹಿರಿಯ ವ್ಯಕ್ತಿಯನ್ನು ಕಳೆದುಕೊಂಡಿತು. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿಯೆಂದು ಭಾರತಿ ಹಾರೈಸುತ್ತದೆ.

ಪದ್ಮಭೂಷಣ ಮಲ್ಲಿಕಾರ್ಜುನ ಮನ್ಸೂರ

ಸಣ್ಣಹಳ್ಳಿಯೊಂದರಲ್ಲಿ ಹುಟ್ಟಿ, ಒಕ್ಕಲಿಗನ ಮಗನಾಗಿ ಬೆಳೆದ ಮಲ್ಲಿಕಾರ್ಜುನ ಮನ್ಸೂರ ಅವರು ರಾಷ್ಟ್ರಮಟ್ಟದ ಈ ಪ್ರಶಸ್ತಿಯನ್ನು ಗಳಿಸಿದುದು ಒಂದು ಪವಾಡ. ಸಂಗೀತಕ್ಷೇತ್ರದಲ್ಲಿ ಅವರು ನಡೆದ ದಾರಿ, ಪಡೆದ ಫಲ ಅನುಪಮವಾದುವು. ಋಷಿಯಲ್ಲದವನು ಸಂಗೀತ ಕಲಾವಿದನಾಗಲಾರನೆಂಬ ಮಾತು, ಮನ್ಸೂರ ಅವರನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಶ್ರೀಯುತರ ಈ ಲೋಕೋತ್ತರಶಕ್ತಿಯನ್ನು ಗುರುತಿಸಿ, ಅವರಿಗೆ ನಮ್ಮ ಕೇಂದ್ರಸರಕಾರ 'ಪದ್ಮಭೂಷಣ' ಗೌರವ ಸಲ್ಲಿಸಿದೆ. ಈ ಪ್ರಸಂಗದಲ್ಲಿ ಡಾ. ಮನ್ಸೂರ ಅವರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತ, ಕರ್ನಾಟಕ ಭಾರತಿ ಅವರಿಗೆ ಇನ್ನೂ ಮಿಗಿಲಾದ ಪುರಸ್ಕಾರಗಳು ಲಭಿಸಲಿ ಎಂದು ಹಾರೈಸುತ್ತದೆ.

ಡಾ. ಎಚ್. ಟಿ. ಸಾಸನೂರ

ಹಿರಿಯ ತಲೆಮಾರಿನ ನಾಯಕವ್ಯಕ್ತಿಗಳಲ್ಲಿ ಒಬ್ಬರಾದ ಡಾ. ಎಚ್. ಟಿ. ಸಾಸನೂರ ಅವರು ಒಂದುಕಡೆ ಪ್ರಾಧ್ಯಾಪಕರಾಗಿ ಶಿಕ್ಷಣಲೋಕಕ್ಕೆ, ಇನ್ನೊಂದುಕಡೆ ಗೃಹರಕ್ಷಕ ದಳದ ಜಿಲ್ಲಾಧಿಕಾರಿಗಳಾಗಿ ಪ್ರಜಾರಕ್ಷಣಾಲೋಕಕ್ಕೆ ಸವ್ಯಸಾಚಿ ಸೇವೆ ಸಲ್ಲಿಸಿದ್ದಾರೆ. ವಿಜಾಪುರ ಜಿಲ್ಲೆಯಲ್ಲಿ ಗೃಹರಕ್ಷಕ ದಳವನ್ನು ಸಮರ್ಥವಾಗಿ ಮುನ್ನಡೆಸಿದ ಡಾ. ಸಾಸನೂರ ಅವರು ಈ ದಳದ ಅನುಷ್ಠಾನ, ಅಭ್ಯುದಯ ಕಾರ್ಯಗಳಲ್ಲಿ ನೂರು

ಸಾಹಸದಿಂದ ದುಡಿದಿದ್ದಾರೆ. ಇದನ್ನು ಗುರುತಿಸಿ, ನಮ್ಮ ಕೇಂದ್ರಸರಕಾರ "ಗೃಹ ರಕ್ಷಕದಳ ಮತ್ತು ನಾಗರಿಕರಕ್ಷಣೆ"ಯ ಗಣರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪ್ರಸಂಗದಲ್ಲಿ ಪಾ. ಸಾಸನೂರ ಅವರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತ ಕರ್ನಾಟಕ ಭಾರತಿ, ಅವರಿಗೆ ಇದಕ್ಕೂ ಮಿಗಿಲಾದ ನೂರು–ನೂರು ಪ್ರಶಸ್ತಿಗಳು ಲಭಿಸಲಿ ಯೆಂದು ಹಾರೈಸುತ್ತದೆ.

ರಾಜ್ಯ ಸಾಹಿತ್ಯಅಕಾಡೆಮಿ ಪುರಸ್ಕಾರ

ಕರ್ನಾಟಕರಾಜ್ಯ ಸಾಹಿತ್ಯಅಕಾಡೆಮಿ, ಪ್ರತಿವರ್ಷ ಕನ್ನಡದ ಶ್ರೇಷ್ಠ ಕೃತಿಗಳಿಗೆ ಬಹುಮಾನ ನೀಡುವ ಅಪೂರ್ವಸಂಪ್ರದಾಯವನ್ನು ಪಾಲಿಸುತ್ತಬಂದಿದೆ. ಕೃತಿಯನ್ನು, ಕೃತಿಯ ಮೂಲಕ ಕರ್ತೃವನ್ನು ಗೌರವಿಸುವ ಈ ಬಗೆ, ತುಂಬ ಸ್ತುತ್ಯವಾದುದು. ಈ ವರ್ಷ ಅಕಾಡೆಮಿಯಿಂದ ಪುರಸ್ಕೃತರಾದ ಸಾಹಿತಿಗಳಿಗೆ ಭಾರತಿ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಸಾದರ ಸ್ವೀಕಾರ

೧. **ಯುಗಪುರುಷ ಯೋಗಿಕುಮಾರ :**
ಶ್ರೀ ಮೂಜಗಂ ಪ್ರ : ಸಂಸ್ಕೃತಿ ಪ್ರಚಾರೋಪನ್ಯಾಸ ಪುಸ್ತಕ ಪ್ರಕಾಶನ, ಮೂರು ಸಾವಿರಮಠ ಹುಬ್ಬಳ್ಳಿ, ೧೯೭೫ ಬೆಲೆ : ರೂ. ೦–೫೦ ಪುಟ : ೬ + ೧೩೪

೨. **ಕಾಯಕಕ್ರಾಂತಿ :**
ಡಾ. ಜ. ಚ. ನಿ. ಪ್ರ : ಸಂಸ್ಕೃತಿ ಪ್ರಚಾರೋಪನ್ಯಾಸ ಪುಸ್ತಕ ಪ್ರಕಾಶನ, ಮೂರು ಸಾವಿರಮಠ ಹುಬ್ಬಳ್ಳಿ, ೧೯೭೫ ಬೆಲೆ : ರೂ. ೦–೫೦ ಪುಟ : ೭ + ೧೦೫

೩. **ವೀರಶೈವ ಸಂಸ್ಕೃತಿ :**
ಡಾ. ಎಚ್. ತಿಪ್ಪೇರುದ್ರಸ್ವಾಮಿ ಪ್ರ : ಸಂಸ್ಕೃತಿ ಪ್ರಚಾರೋಪನ್ಯಾಸ ಪುಸ್ತಕ ಪ್ರಕಾಶನ, ಮೂರುಸಾವಿರಮಠ ಹುಬ್ಬಳ್ಳಿ, ೧೯೭೫ ಬೆಲೆ : ರೂ. ೦–೫೦ ಪುಟ : ii + ೮೨

೪. **ನಿಚ್ಚಳ ನಿಲುವು :**
ಗೋಭಾನು ಪ್ರ : ನೇಸರ ಪ್ರಕಾಶನ ನೇಸರಗಿ, ಜಿಲ್ಲೆ : ಬೆಳಗಾವಿ ೧೯೭೫
ಬೆಲೆ : ೨–೦೦ ಪುಟ : xi + ೩೮

೫. **ಕೇಳತೀನಿ ಹೇಳ :**
ಸಂ. ಕಲಾವತಿ ಮಾಶೆಟ್ಟಿ, ಪುಣ್ಯವತಿ ಡೋಣಗಾಪುರೆ ಪ್ರ : ಕನ್ನಡ ಗೆಳೆಯರ ಬಳಗ, ಭಾಲ್ಕಿ, ಜಿಲ್ಲೆ : ಬೀದರ ೧೯೭೫ ಬೆಲೆ : ರೂ. ೧–೨೫ ಪುಟ : ೨೧

೬. **ಅಸ್ಪೃಶ್ಯತಾನಿವಾರಣಾ ಕಾನೂನು :**
ವೆಂಕಟೇಶ ಕುಲಕರ್ಣಿ, ಪ್ರ. : ಜಾಗೃತ ಭಾರತ, ಧಾರವಾಡ–೧, ೧೯೭೫
ಬೆಲೆ : ರೂ. ೧–೦೦ ಪುಟ : ೮ + ೩೬

೭. **ಕನ್ನಡ ಕಿರಣ :**
ನರಸಿಂಹಕುಮಾರ ಪ್ರ : ಸುಧಾ ಪರಿಮಳ ಪ್ರಕಾಶನ, ಜಿ. ನಾಗಲಾಪುರ ಪೋಸ್ಟ, ಹೊಸಪೇಟ ತಾಲೂಕು, ಬಳ್ಳಾರಿ ಜಿಲ್ಲೆ ೧೯೭೫ ಬೆಲೆ : ರೂ. ೧–೫೦ ಪುಟ : ೩೧

೮. **ಜೀವನ ಕಲೆ :**
ಮ.ಗೋ. ಹೆಗಡೆ ಪ್ರ : ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದ.ಕ.) ೧೯೭೫
ಬೆಲೆ : ರೂ. ೪–೦೦ ಪುಟ : ೭೨

೯. ಚೇತನ :

ಸಂ. ಸಾಹಿತ್ಯಾನಂದ, ಕೆ. ವಿರೂಪಾಕ್ಷಗೌಡ ಪ್ರ : ನಿವೇದಿತ ಪ್ರಕಾಶನ, ಸುಬ್ರಮಣ್ಯ ನಗರ, ಬೆಂಗಳೂರು–೨೧ ೧೯೭೫ ಬೆಲೆ : ರೂ. ೮–೦೦ ಪುಟ : ೧೧೭

೧೦. ಅಂಕುಶ :

ಟಿ. ಜಿ. ಪ್ರಭಾಶಂಕರ 'ಪ್ರೇಮಿ' ಪ್ರ : ಶರಣ ಪ್ರಕಾಶನ, ಬೆಂಗಳೂರು–೨೦
ಬೆಲೆ : ರೂ. ೨–೦೦ ಪುಟ : ೫೮

೧೧. ಏಕಾಂಕ ನಾಟಕಗಳು :

ವೀರಣ್ಣ ರಾಜೂರ ಪ್ರ : ಶ್ರೀ ಕುಮಾರೇಶ ಗ್ರಂಥಮಾಲೆ, ಧಾರವಾಡ, ೧೯೭೫
ಬೆಲೆ : ರೂ. ೨೦–೦೦ ಪುಟ : xviii + ೧೦೪

೧೨. ಸ್ಪಂದನ :

ಸಂ. : ಡಾ. ಬಿ. ಬಿ. ಹಿಂಗಮಿರೆ ಪ್ರ : ಕಮಲ ಮಂಡಲ ಪ್ರಕಾಶನ, ಕರ್ನಾಟಕ ಸಂಘ, ಕರ್ನಾಟಕ ಕಾಲೇಜು, ಧಾರವಾಡ ೧೯೭೬ ಬೆಲೆ : ರೂ. ೩–೦೦ ಪುಟ : x + ೪೪

ಪತ್ರಿಕೆಗಳು

ಕನ್ನಡ ನುಡಿ	ರಾಷ್ಟ್ರೋತ್ಥಾನ ವಾರ್ತಾ
ಸಾಹಿತ್ಯ ಪರಿಷತ್ಪತ್ರಿಕೆ	ಮತ್ಸ್ಯಲೋಕ
ಜೀವನವಿಕಾಸ	ಅಭಿರುಚಿ
ಪಂಚಾಚಾರ ಪ್ರಕಾಶ	ಹೇಮಕೂಟ
ಪರಂಜ್ಯೋತಿ	ಶೃಂಗಾರ
ಕೃಷಿ ವಿಜ್ಞಾನ	ತರಳಬಾಳು

ಈ ಸಂಚಿಕೆಯ ಲೇಖಕರು

೧. ಶ್ರೀ ಬಿ. ಎಂ. ರಮೇಶ್ :
ನಂ. ೭೧–ಸಿ, "ಶುಭವಾ", ಹೌಸಿಂಗ ಬೋರ್ಡ ಕಾಲೊನಿ, ಮಿಲ್ ರೋಡ. ಕಲಬುರ್ಗಿ

೨. ಶ್ರೀ ಮಹದೇವ ಕಣವಿ :
ಕನ್ನಡ ಅಧ್ಯಾಪಕರು, ಭಂಡಾರಿ ಕಲಾ ಮಹಾವಿದ್ಯಾಲಯ, ಗುಳೇದಗುಡ್ಡ

೩. ಶ್ರೀ ಮಹಿಮ :
ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಶ್ರೀ ವಿಲ್ಯಂ ಮಾಡ್ತ :
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಶ್ರೀ ದೊಡ್ಡರಂಗೇಗೌಡ :
ಕನ್ನಡ ಅಧ್ಯಾಪಕರು, ಎಸ್. ಎಲ್. ಎನ್. ಕಾಲೇಜು, ಕೋಟೆ, ಬೆಂಗಳೂರು–೫೬೦೦೦೨

೬. ಡಾ. ವಿ. ಶಿವಾನಂದ :
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

೭. ಶ್ರೀಮತಿ ಶಶಿಕಲಾ ವಸ್ತ್ರದ :
ಕನ್ನಡ ಅಧ್ಯಾಪಕಿ, ಅಕ್ಕಮಹಾದೇವಿ ಜ್ಯೂನಿಯರ ಕಾಲೇಜು, ಬೀದರ

೮. ಶ್ರೀ ಹೊ. ಮ. ಪಂಡಿತಾರಾಧ್ಯ :
ವಕೀಲರು, ೧೬೭, ಕೆಂಪೇಗೌಡನಗರ ಗವಿಪುರಂ ಮಾರ್ಗ, ಬೆಂಗಳೂರು–೧೯

೯. ಶ್ರೀ ಟಿ. ಎಂ. ರಮೇಶ್ :
ಕುಪ್ಪಳ್ಳಿ, ಅಂಚೆ : ಬಂಕನಾಳ, ತಾಲೂಕು : ಸಿರ್ಸಿ (ಉ. ಕ.)

೧೦. ಡಾ. ಆರ್. ಆನ್. ಗುರವ :
ಕೊಪ್ಪದ ಕೆರೆ, ಧಾರವಾಡ–೫೮೦೦೦೩

೧೧. ಶ್ರೀ ಲಿಂಗದೇವರು ಹಳೆಮನೆ :
ಭಾರತೀಯ ಭಾಷಾಸಂಸ್ಥಾನ, ಮಾನಸಗಂಗೋತ್ರಿ, ಮೈಸೂರು–೬

೧೨. ಶ್ರೀ ಎಂ. ಜಿ. ಈಶ್ವರಪ್ಪ :
ಕನ್ನಡ ಅಧ್ಯಾಪಕರು, ಡಿ. ಆರ್. ಎಂ. ವಿಜ್ಞಾನ ಕಾಲೇಜು, ದಾವಣಗೆರೆ–೪

೧೩. ಡಾ. ಅ. ಸುಂದರ :
ರೀಡರ್, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಶ್ರೀ ಕೆ. ವಿರೂಪಾಕ್ಷಗೌಡ :
ಬಾಚಿಗೊಂಡನಹಳ್ಳಿ, ಬಳ್ಳಾರಿ ಜಿಲ್ಲೆ

೧೫. ಡಾ. ಎಸ್. ಶೆಟ್ಟರ್ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೬. ಶ್ರೀ ಎಸ್. ರಾಜಶೇಖರ :
ಇತಿಹಾಸ ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೭. ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮. ಶ್ರೀ ಎಸ್. ಶಿವಣ್ಣ :
ಸಂಶೋಧನ ಸಹಾಯಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೯. ಶ್ರೀ ಎಸ್. ಎಸ್. ಭೂಸರಡ್ಡಿ :
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦. ಶ್ರೀ ಬಿ. ವ್ಹಿ. ಗುಂಜೆಟ್ಟಿ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ

೨೧. ಶ್ರೀ ಬಿ. ಆರ್. ಹಿರೇಮಠ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೨೨. ಶ್ರೀ ಎಸ್. ಪಿ. ಪಾಟೀಲ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೩. ಶ್ರೀ ಎಸ್. ವಿ. ಶಿವಕುಮಾರ :
ಸಂಶೋಧನ ಸಹಾಯಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೪. ಶ್ರೀ ವೀರೇಶ ವಾಲಿ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೫. ಶ್ರೀ ಸಿದ್ಧರಾಮೇಶ ಹಿರೇಮಠ :
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೬. ಶ್ರೀ ಶಿವಾನಂದ ಗಾಳಿ :
ಕನ್ನಡ ಅಧ್ಯಾಪಕರು, ಜೆ. ಎಸ್. ಎಸ್. ಕಾಲೇಜು, ಧಾರವಾಡ

೨೭. ಕುಮಾರಿ ಪ್ರೇಮಾ ಭತ್ತದ :
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೮. ಶ್ರೀ ವೀರಣ್ಣ ರಾಜೂರ :
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೯. ಶ್ರೀ ಜಿ. ಎಂ. ಹೆಗಡೆ :
ಕನ್ನಡ ಅಧ್ಯಾಪಕರು, ಕಿಟೆಲ್ ಕಾಲೇಜು, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗೂ ಪ್ರಕಟನವಿಭಾಗ

ಇತ್ತೀಚಿನ ಪ್ರಕಟನೆಗಳು

ಸಂಶೋಧನ ಗ್ರಂಥಮಾಲೆ

ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ —ಎಂ. ಎಸ್. ಲಕ್ಷ್ಮೆ ರೂ. ೨೩=೦೦

ಉಪನ್ಯಾಸಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ಹರಿಶ್ಚಂದ್ರ ಕಾವ್ಯದಲ್ಲಿಯ ರಸಸ್ಥಾನಗಳು —ಸಿ. ಎಲ್. ಹೆರಕಲ್

ಕಾರವಾರ ಜಿಲ್ಲೆಯ ಶಾಸನಗಳು —ಆರ್. ಎನ್. ಗುರವ

ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ —ವೀರಣ್ಣ ರಾಜೂರ

ಮಾನಸಿಕ ರೋಗಗಳು —ಎಂ. ಬಿ. ರೇಣುಕಾರ್ಯ

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ —ದು. ನಿಂ. ಬೆಳಗಲಿ

ಗರತಿಯರ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ —ದೇವೇಂದ್ರಕುಮಾರ ಹಕಾರಿ

ಮಾನವ ಮತ್ತು ಶಾಕಾಹಾರ —ಎ. ಎಸ್. ಧರಣೇಂದ್ರಯ್ಯ

ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ —ಎನ್. ಎ. ಪಾಟೀಲ

ಬಸವಣ್ಣನವರ ಧ್ಯೇಯಾದರ್ಶಗಳಿಗೆ ಸಮಕಾಲೀನರ ಕಾಣಿಕೆ —ಎಸ್. ಜಿ. ಹಂಡಿ

ಜನಪದ ಸಾಹಿತ್ಯ

ಗಂಗೀ–ಗೌರಿ ಸಂವಾದ —ಸಂ. : ಎಂ. ಎಸ್. ಸುಂಕಾಪುರ ರೂ. ೫=೦೦

ಹೋಳಿ ಹಾಡು —ಸಂ. : ಎಂ. ಎಸ್. ಸುಂಕಾಪುರ ರೂ. ೫=೦೦

ದುಂದುಮೆ ಪದಗಳು —ಸಂ. : ಎಂ. ಎಸ್. ಸುಂಕಾಪುರ ರೂ. ೫=೦೦

ಪ್ರಮೀಳೆ —ಸಂ. : ಎಂ. ಎಸ್. ಸುಂಕಾಪುರ ರೂ. ೫=೦೦

ಉತ್ತರ ಕನ್ನಡ ಜನಪದ ಕಥೆಗಳು —ಸಂ. : ಎಲ್. ಆರ್. ಹೆಗಡೆ ರೂ. ೧೦=೦೦

ಜನಪದ ಸಾಹಿತ್ಯ ದರ್ಶನ ಭಾಗ– ೨ (ಸಾದಾ) ರೂ. ೧೩=೦೦
—ಸಂ : ಎಂ. ಎಸ್. ಸುಂಕಾಪುರ (ಕೆಲಿಕೋ) ರೂ. ೧೫=೦೦

ವಿಶೇಷೋಪನ್ಯಾಸ ಗ್ರಂಥಮಾಲೆ

ಚಿತ್ರ, ಶಿಲ್ಪ, ವಾಸ್ತುಕಲೆಗಳು —ಶಿವರಾಮ ಕಾರಂತ		ರೂ. ೪=೦೦
ಪಾಶ್ಚಾತ್ಯ ವಿಮರ್ಶೆಯ ಮಧ್ಯಯುಗ —ವಿ. ಎಂ. ಇನಾಂದಾರ್		ರೂ. ೬=೦೦
ವೀರಶೈವಧರ್ಮ ವಿವೇಚನೆ —ಪಂ. ನಾಗಭೂಷಣಶಾಸ್ತ್ರಿ		ರೂ. ೪=೫೦
ಮಹಾಕಾವ್ಯ ಸ್ವರೂಪ —ಜಿ. ಎಸ್. ಶಿವರುದ್ರಪ್ಪ		ರೂ. ೭=೦೦

ಇತರ ಪ್ರಕಟನೆಗಳು

ಧಾರವಾಡ ಜಿಲ್ಲೆಯ ಶಾಸನಸೂಚಿ	(ಸಾದಾ)	ರೂ. ೨೦=೦೦
—ಸಂ : ಎಂ. ಎಂ. ಕಲಬುರ್ಗಿ	(ಕೆಲಿಕೋ)	ರೂ. ೩೦=೦೦
ಶಾಸನವ್ಯಾಸಂಗ– ೨	(ಸಾದಾ)	ರೂ. ೧೦=೦೦
—ಸಂ : ಎಂ. ಎಂ. ಕಲಬುರ್ಗಿ	(ಕೆಲಿಕೋ)	ರೂ. ೧೩=೦೦
ಬಿಜಾಪುರ ಜಿಲ್ಲೆಯ ಶಾಸನಸೂಚಿ	(ಅರ್ಧಕೆಲಿಕೋ)	ರೂ. ೩೦=೦೦
—ಸಂ : ಎಂ. ಎಂ. ಕಲಬುರ್ಗಿ	(ಪೂರ್ಣಕೆಲಿಕೋ)	ರೂ. ೪೦=೦೦

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಶೇ. ೩೩⅓ದಂತೆ ಕಮೀಶನ್ ಕೊಡಲಾಗುವುದು.

*

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ

ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪಠ್ಯಪುಸ್ತಕ ಹೊರತುಪಡಿಸಿ) ಖರೀದಿಗೆ ಶೇ. ೨೫ + ಶೇ. ೧೫.
- ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓ + ಶೇ. ೧೫

*

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ:

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩